ಯೂರೋಪಿನಿಂದ ಆಸ್ಟ್ರೇಲಿಯಾವರೆಗೆ

ವಿಶ್ವ ಪರ್ಯಟಕನ ದಿನಚರಿ



ಡಾ. ಟಿ.ಎ. ಗುರುಪ್ರಸಾದ್

ಯುರೋಪಿನಿಂದ ಆಸ್ಟ್ರೇಲಿಯಾವರೆಗೆ
ವಿಶ್ವಪರ್ಯಟಕನ ದಿನಚರಿ



ಯೂರೋಪಿನಿಂದ ಆಸ್ಟ್ರೇಲಿಯಾವರೆಗೆ - ವಿಶ್ವ ಪರ್ಯಟಕನ ದಿನಚರಿ

ಡಾ|| ಡಿ.ವಿ. ಗುರುಪ್ರಸಾದ್, ಐ.ಪಿ.ಎಸ್

ಸಪ್ನ ಬುಕ್ ಹೌಸ್
ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ,
ಬೆಂಗಳೂರು - 560 009, ದೂರವಾಣಿ : 2266088

EUROPININDA AUSTRALIYAVAREGE VISHWA PARYATAKANA DINACHARI : A book in Kannada on travelogue written by **Dr. D. V. Guruprasad**, I.P.S. and published by **Smt. Bhanumati S. Shah** on behalf of Sapna Book House, Gandhinagar, Bangalore-560 009, Tel. : 2266088.

ISBN : 81-280-0017-9

ಪುಟಗಳು : iv + 159 + xii

ಪ್ರಥಮ ಮುದ್ರಣ : ಡಿಸೆಂಬರ್ 2001

ಹಂಚಿಕೆದಾರರು :
ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್
ರೈಲ್ವೆ ಪ್ಯಾರಲಲ್ ರೋಡ್, ಕುಮಾರ ಪಾರ್ಕ್ ಈಸ್ಟ್
ಬೆಂಗಳೂರು - 560 001
ದೂರವಾಣಿ : 2262815

ಅಕ್ಷರ ಜೋಡಣೆ : ಸ್ಪಂದನ ಡಿಸೈನರ್ಸ್
ಬೆಂಗಳೂರು

ಮುದ್ರಣ : ಪ್ರಿಂಟೆಕ್ ಪ್ರಿಂಟರ್ಸ್
ಬೆಂಗಳೂರು.

1

ವರ್ಸೇಲ್ ಅರಮನೆ

ಬಹಳ ದಿನಗಳಿಂದ ಯೂರೋಪ್ ನೋಡಬೇಕು ಎನ್ನುವ ಬಯಕೆ ನನ್ನಲ್ಲಿತ್ತು. ಇತ್ತೀಚಿನ ದಿನಗಳಲ್ಲಂತೂ ಹಲವಾರು ಹಿಂದೀ ಚಿತ್ರಗಳಲ್ಲಿ ಯೂರೋಪಿನ ದೃಶ್ಯಗಳನ್ನು ನೋಡಿ ಎಂತಹ ಸುಂದರ ಊರುಗಳು ಇವನ್ನು ಒಮ್ಮೆ ನೋಡಲೇಬೇಕು ಎಂದು ನಿರ್ಧರಿಸಿ ಯೂರೋಪಿಗೆ ಹೋಗಲು ತಯಾರಾಗಿಯೇ ಬಿಟ್ಟೆ. ಈಗಾಗಲೇ ಯೂರೋಪ್ ನೋಡಿದ್ದ ಹಲಕೆಲವು ಮಿತ್ರರನ್ನು ಯೂರೋಪ್ ಬಗ್ಗೆ ಕೇಳಿದೆ. ನೀವು ತೊಂದರೆಯಿಲ್ಲದೆ ಯೂರೋಪ್ ನೋಡಬೇಕಾದರೆ "ಕಾಸ್ಮಾಸ್ ಬಸ್ಸಿನಲ್ಲಿ ಟಿಕೇಟ್ ಖರೀದಿಸಿ. ಈ ಕಂಪನಿಯವರು ಹಲವಾರು ದೇಶಗಳಿಗೆ ಬಸ್ಸಿನಲ್ಲಿ ನಿಮ್ಮನ್ನು ಕರೆದೊಯ್ಯುತ್ತಾರೆ. ಊಟ ವಸತಿ ವ್ಯವಸ್ಥೆ ಅವರೇ ಮಾಡ್ತಾರೆ. ಹೋಗುವ ಊರುಗಳಲ್ಲಿರುವ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದೊಯ್ಯುತ್ತಾರೆ. ಎಲ್ಲ ಜಾಗಗಳಿಗೂ ಗೈಡ್ ವ್ಯವಸ್ಥೆ ಇದೆ. ಒಮ್ಮೊಮ್ಮೆನಮಗೆ ಭಾರತೀಯ ಊಟ ಸಹಾ ಕೊಡ್ತಾರೆ. ಶುಲ್ಕ ಸ್ವಲ್ಪ ದುಬಾರಿ ಎನಿಸಿದರೂ ನಿರಾತಂಕವಾಗಿ ಯೂರೋಪ್ ನೋಡಬಹುದು" ಎಂದ ಒಬ್ಬ ಸ್ನೇಹಿತ.

ಇನ್ನೊಬ್ಬ ಹೇಳಿದ "ಗುರೂ, ಕಂಡಕ್ಟೆಡ್ ಟೂರ್‌ನಲ್ಲಿ ನಿರಾತಂಕವಾಗೇನೋ ಊರು ಸುತ್ತಬಹುದು. ಆದರೆ ಅವರು ತೋರಿಸಿದ ಊರು. ಸ್ಥಳಗಳನ್ನು ನಾವು ನೋಡ್ಬೇಕು. ಕುರಿಗಳ ತರಹ ಇನ್ನೊಬ್ಬರ ಹಿಂದೆ ಓಡಾಡಬೇಕು. ಒಂದು ಚೂರೂ ಸ್ವಾತಂತ್ರವೇ ಇರೋದಿಲ್ಲ. ಬೆಲೆನೂ ಜಾಸ್ತಿ. ಯಾವುದಾದರೂ ಊರಲ್ಲಿ ಇನ್ನೂ ಒಂದು ದಿನ ಇರಬೇಕು ಅಂತ ಮನಸ್ಸಾದರೂ ಇರೋ ಹಾಗಿಲ್ಲ. ಅದಕ್ಕೆ ನೀವುಗಳೇ ಯಾವ ಊರು ನೋಡಬೇಕೋ ಅದನ್ನು ಆರಿಸಿಕೊಂಡು ಅಲ್ಲಿಗೆ ಹೋಗಿ. ರೈಲಿನಲ್ಲಿ ಪ್ರಯಾಣ ಮಾಡಿ. ರಾತ್ರಿ ರೈಲು ಪ್ರಯಾಣ, ಬೆಳಿಗ್ಗೆ ಊರು ಸುತ್ತಿದರೆ ಖರ್ಚು ಕಡಿಮೆ. ಯೂರೋಪ್ ಪಾಸ್ ಅಂತ ಒಂದು ವಾರದ ಸೀಸನ್ ಟಿಕೇಟೋ ಇಲ್ಲಾ ಹತ್ತು ದಿನದ ಟಿಕೇಟನ್ನೋ ಇಲ್ಲೇ ಬೆಂಗಳೂರಲ್ಲೇ ಭಾರತೀಯ ಹಣ ಕೊಟ್ಟೇ ಕೊಳ್ಳಬಹುದು. ಈ ಥರಹ ಓಡಾಡಿದ್ರೆ ತುಂಬಾ ಮಜ ಬರುತ್ತೆ" ಎಂದು.

ಅವನ ಮಾತಿಗೆ ಒಪ್ಪಿದ ನಾವು ರೈಲಿನಲ್ಲಿ ಊರುಗಳನ್ನು ಸುತ್ತುವ ನಿರ್ಧಾರಕ್ಕೆ ಬಂದೆವು. ಫ್ರಾನ್ಸ್, ಆಸ್ಟ್ರಿಯಾ, ಇಟಲಿ, ಸ್ವಿಟ್ಸರ್ಲೆಂಡ್, ಜರ್ಮನಿ, ವ್ಯಾಟಿಕನ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಲಕ್ಸೆಂಬರ್ಗ್, ದೇಶಗಳನ್ನು ನೋಡಲು ತೀರ್ಮಾನಿಸಿ ಯಾವ ಯಾವ ಊರುಗಳಲ್ಲಿ ಹೋಟೆಲ್‌ನಲ್ಲಿ

ತಂಗಬೇಕೋ ಆ ಹೋಟೆಲ್‌ಗಳಲ್ಲಿ ರೂಮುಗಳನ್ನು ಕಾದಿರಿಸಿದೆವು. ಅಂದ ಹಾಗೆ ವಿಶ್ವದ ಯಾವುದೇ ಜಾಗದ ಹೋಟೆಲ್ಲಿನ ರೂಮುಗಳನ್ನು ಬೇಕಾದರೂ ಬೆಂಗಳೂರಿನಿಂದಲೇ ಕಾದಿರಿಸಬಹುದು. ಆದರೆ ಹಣ ಡಾಲರ್‌ಗಳಲ್ಲಿ ತೆರಬೇಕು ಅಷ್ಟೇ.

ಇಂದಿನ ದಿನಗಳಲ್ಲಿ ಯೂರೋಪ್ ಪ್ರವಾಸ ಮಾಡುವುದು ತುಂಬಾ ಸುಲಭ, ಏಕೆಂದರೆ ಯೂರೋಪ್‌ನ ಹಲವಾರು ದೇಶಗಳು ಕಲೆತು ಯೂರೋಪಿಯನ್ ಒಕ್ಕೂಟ ಎಂದು ಪ್ರಾರಂಭಿಸಿಕೊಂಡಿವೆ. ಆ ಒಕ್ಕೂಟಕ್ಕೆ ಒಂದೇ ರೀತಿಯ ಹಣಕಾಸಿನ ವ್ಯವಸ್ಥೆಯೂ ಬಂದಿದೆ. ಡಾಲರ್ ಹಾಗೂ ಪೌಂಡ್‌ನ ಮಾದರಿಯಲ್ಲಿ ಯೂರೋ ಕರೆನ್ಸಿ ಎನ್ನುವ ಕರೆನ್ಸಿ ಬಂದಿದೆ. ಯೂರೋಪ್‌ನಲ್ಲಿ ಎಲ್ಲಿ ಹೋಗಬೇಕಾದರೂ ಒಂದು ದೇಶದ ವೀಸಾ ಪಡೆದರೆ ಸಾಕು. ಅದರಲ್ಲೇ ಎಲ್ಲಾ ರಾಷ್ಟ್ರಗಳನ್ನು ನೋಡಬಹುದು. (ಸ್ವಿಡ್ಜರ್‌ಲ್ಯಾಂಡ್ ಮತ್ತಿತರ ಕೆಲವೇ ರಾಷ್ಟ್ರಗಳನ್ನು ಹೊರತುಪಡಿಸಿ) ಇದಕ್ಕೆ ಶೆಂಗೇನ್ ವೀಸಾ ಎಂದು ಕರೆಯುತ್ತಾರೆ. ಭಾರತದಿಂದ ಪ್ರಪ್ರಥಮವಾಗಿ ಯೂರೋಪ್‌ನ ಯಾವ ದೇಶದಲ್ಲಿ ಮೊದಲು ಇಳಿಯುತ್ತೇವೋ ಆ ದೇಶದ ವೀಸಾ ಪಡೆದರೆ ಸಾಕು.

ನಾವು ಮೊದಲಿಗೆ ಪ್ಯಾರಿಸ್‌ನಿಂದ ನಮ್ಮ ಪ್ರಯಾಣ ಪ್ರಾರಂಭ ಮಾಡುತ್ತಾ ಇದ್ದುದರಿಂದ ಫ್ರೆಂಚ್ ರಾಯಭಾರಿ ಕಛೇರಿಗೆ ಹೋಗಿ ವೀಸಾ ಪಡೆದೆವು.

ನಮ್ಮ ವಿಮಾನ ಪ್ಯಾರಿಸ್‌ನಲ್ಲಿ ಇಳಿದಾಗ ಬೆಳಿಗ್ಗೆ 9.00 ಗಂಟೆ. ಭಾರತದ ರಾಯಭಾರಿ ಕಛೇರಿಯಲ್ಲಿರುವ ನನ್ನ ಗೆಳೆಯ ಬಾಲಕೃಷ್ಣನಿಗೆ ನಾವು ಬರುವ ವಿಷಯ ಮೊದಲೇ ತಿಳಿಸಿದ್ದರಿಂದ ಆತ ವಿಮಾನ ನಿಲ್ದಾಣಕ್ಕೆ ಬಂದು ನಮ್ಮನ್ನು ಎದುರುಗೊಂಡ. ವಿಮಾನ ನಿಲ್ದಾಣದಿಂದ ನೇರವಾಗಿ ನಾವು ಅವನ ಮನೆಗೆ ಹೋಗಿ ಸ್ನಾನ ಮಾಡಿದ ಕೂಡಲೇ ಆತ "ನೀವು ಪ್ಯಾರಿಸ್‌ನಲ್ಲಿ ನೋಡಬೇಕಾದ್ದು ಬಹಳ ಜಾಗಗಳು ಇವೆ. ನಿಮ್ಮ ಪ್ರೋಗ್ರಾಮ್ ಏನು" ಎಂದ. ನಾವು ಇವತ್ತಿನ ರಾತ್ರಿ ರೈಲಿನಲ್ಲಿ ಸೌಂಡ್ ಆಫ್ ಮ್ಯೂಸಿಕ್ ಖ್ಯಾತಿಯ ಆಸ್ಟ್ರಿಯಾ ದೇಶಕ್ಕೆ ಹೋಗಲು ನಿರ್ಧಾರ ಮಾಡಿರುವುದರಿಂದ ಇವತ್ತಿನ ಸಂಜೆವರೆಗೆ ಪ್ಯಾರಿಸ್‌ನ ಯಾವುದಾದರೂ ಒಂದು ಮುಖ್ಯ ಜಾಗ ತೋರಿಸು, ನಾವು ಇತರ ದೇಶಗಳನ್ನು ನೋಡಿ ಪ್ಯಾರಿಸ್‌ಗೆ ವಾಪಸ್ ಬಂದಾಗ ನಿಮ್ಮ ನಗರದ ಉಳಿದ ಜಾಗಗಳನ್ನು ನೋಡುತ್ತೇವೆ ಎಂದೆ. ಹಾಗಾದರೆ ನಾವು ವರ್ಸೇಲ್ ಅರಮನೆ ನೋಡಿಕೊಂಡು ಬರೋಣ ಇಲ್ಲಿಂದ ಅಲ್ಲಿಗೆ ಹೋಗಲು ಸುಮಾರು ಮುಕ್ಕಾಲು ಗಂಟೆ ಬೇಕು ಎಂದ. ಸರಿ ಎಂದು ನಾವು ಅವನ ಕಾರ್‌ನಲ್ಲಿ ವರ್ಸೇಲ್‌ಗೆ ತೆರಳಿದೆವು.

ಹದಿನೇಳನೇ ಶತಮಾನದಲ್ಲಿ ನಿರ್ಮಾಣವಾದ ವರ್ಸೇಲ್ ಅರಮನೆ ವಿಶ್ವದ ಅತ್ಯಂತ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು ಎಂದರೆ ಅತಿಶಯೋಕ್ತಿ ಆಗಲಾರದು. ಫ್ರಾನ್ಸ್‌ನ ರಾಜ ಲೂಯಿ - 13 ಬೇಟೆಯಾಡಲು ಹೋಗುವಾಗ ವಿಶ್ರಾಂತಿಗೆಂದು ನಿರ್ಮಿಸಿದ ಈ ಮನೆಯನ್ನು ಅವನ ಮಗನಾದ ಲೂಯಿ - 14 ತನ್ನ ಅರಮನೆಯನ್ನಾಗಿ ಪರಿವರ್ತಿಸಿ ಅಲ್ಲೇ ಸರ್ಕಾರವನ್ನು ಪ್ರಾರಂಭಿಸಿದ. ಇದಾದ ನಂತರ ಫ್ರೆಂಚ್ ಕ್ರಾಂತಿ ಆಗುವವರೆಗೂ ಫ್ರಾನ್ಸ್‌ನ ರಾಜರು ಇದೇ ಅರಮನೆಯಲ್ಲಿ ವಾಸ ಮಾಡುತ್ತಿದ್ದರು. ಫ್ರೆಂಚ್ ಕ್ರಾಂತಿಯ ಸಮಯದಲ್ಲಿ 1789 ಅಕ್ಟೋಬರ್ 6 ರಂದು ಕ್ರಾಂತಿಕಾರರು ಅರಮನೆಗೆ ಮುತ್ತಿಗೆ ಹಾಕಿದಾಗ ಅರಸು ಮನೆತನ ಅಲ್ಲಿಂದ ನಿರ್ಗಮಿಸಬೇಕಾಯಿತು. ನಂತರ 1837 ರಲ್ಲಿ ಈ ಅರಮನೆಯನ್ನು ಮ್ಯೂಸಿಯಂ ಆಗಿ ಪರಿವರ್ತಿಸಿ ಫ್ರಾನ್ಸ್ ದೇಶದ ಚರಿತ್ರೆಯ

ಭವ್ಯತೆಯನ್ನು ಸಾರುವ ಪ್ರತೀಕವನ್ನಾಗಿ ಮಾಡಲಾಯಿತು. ಈ ಭವ್ಯ ಅರಮನೆ ಎರಡು ಮಹಡಿಯ ಬಹಳ ವಿಶಾಲವಾದ ಕಟ್ಟಡ.

ಈ ಕಟ್ಟಡದ ನೆಲ ಅಂತಸ್ತಿನ ಮಧ್ಯಭಾಗದಲ್ಲಿ ಲೂಯಿ - 15 ಮಹಾರಾಜನ ಹೆಣ್ಣು ಮಕ್ಕಳ ಕೊಠಡಿಗಳು, ಮಹಾರಾಣಿಯ ವಾಸದ ಕೊಠಡಿ ಇದ್ದು ಕಟ್ಟಡದ ಬಲ ಭಾಗದಲ್ಲಿ 17ನೇ ಶತಮಾನದ ಚಿತ್ರಗಳು ಇರುವ ಗ್ಯಾಲರಿಗಳು ಇವೆ. ಮೊದಲ ಮಹಡಿಯಲ್ಲಿ ಮಹಾರಾಜ ವಾಸಿಸುತ್ತಿದ್ದ ಕೊಠಡಿಗಳು, ಕನ್ನಡಿಗಳು ಇರುವ ಭವ್ಯವಾದ ಹಜಾರ ಒಂದು ಕಡೆ ಇದ್ದರೆ, ಇನ್ನೊಂದು ಕಡೆ ಹಾಲ್ಸ್ ಆಫ್ ಬ್ಯಾಟಲ್ಸ್ ಎನ್ನುವ ಹಜಾರ ಇದ್ದು, ಈ ಹಜಾರದಲ್ಲಿ ಯುದ್ಧಗಳ ದೃಶ್ಯಗಳು ಇರುವ ಚಿತ್ರಗಳಿವೆ. ಕಟ್ಟಡದ ಬಲ ಭಾಗದಲ್ಲಿ ಫ್ರಾನ್ಸ್ ದೇಶದ ಚರಿತ್ರೆಯ ಘಟನೆಗಳನ್ನು ಬಿಂಬಿಸುವ ಗ್ಯಾಲರಿಗಳು ಇವೆ.

ವರ್ಸೇಲ್ ಅರಮನೆಯ ಗೋಡೆ ಮೇಲೆ ಹಾಗೂ ತಾರಸಿಯ ಮೇಲೆ ಪೇಂಟ್ ಮಾಡಿರುವ ವಿಶೇಷ ಚಿತ್ರಗಳು ವಿಶ್ವವಿಖ್ಯಾತ ಚಿತ್ರಕಾರರಿಂದ ರಚಿಸಲ್ಪಟ್ಟಿದ್ದು, ನೋಡಲು ಅತ್ಯಂತ ರಮಣೀಯವಾಗಿವೆ. ಮಹಾರಾಜರು ಉಪಯೋಗಿಸುತ್ತಿದ್ದ ಭವ್ಯ ಮಂಚ ಪ್ರವಾಸಿಗರ ವಿಶೇಷ ಗಮನವನ್ನು ಸೆಳೆಯುತ್ತದೆ. ಮೇರಿ ಆಂಟೋನೆಟ್‌ಳ ಬೆಡ್‌ರೂಂ ಅನ್ನು ಹಲವಾರು ಪ್ರವಾಸಿಗರು ಆಸಕ್ತಿಯಿಂದ ನೋಡುತ್ತಾರೆ.

ವರ್ಸೇಲ್ ಅರಮನೆಯ ಹೊರಗಡೆ ಇರುವ ನಯನಮನೋಹರ ಉದ್ಯಾನವನ 1661 ರಿಂದ 1700ನೇ ಇಸವಿಯ ವರೆಗೆ ಕಟ್ಟಲಾಗಿದ್ದು ಅರಮನೆಯಷ್ಟೇ ಹೆಸರುವಾಸಿಯಾಗಿದೆ. ಈ ಉದ್ಯಾನದಲ್ಲಿ ಚೆನ್ನಾಗಿ ಕತ್ತರಿಸಿದ ಹುಲ್ಲು ಹಾಸು, ತರಹೇವಾರಿ ಹೂಗಿಡಗಳು ನಯನಮನೋಹರವಾದ ನೀರಿನ ಬುಗ್ಗೆಗಳು ಇವೆ. ಉದ್ಯಾನವನದ ಹಲವಾರು ಕಡೆಗಳಲ್ಲಿ ಅಮೃತ ಶಿಲೆ ಅಥವಾ ಕಂಚಿನಿಂದ ಮಾಡಿರುವಂತಹ ಉತ್ತಮ ಮೂರ್ತಿಗಳನ್ನು ನಿಲ್ಲಿಸಲಾಗಿದೆ.

ಪ್ಯಾರಿಸ್‌ಗೆ ವಾಪಸ್ ಆಗಿ ವಿಯನ್ನಾಗೆ ಹೋಗಲು ರೈಲು ಹಿಡಿಯಬೇಕಾದ ಅವಸರ ಇದ್ದುದರಿಂದ ನಾವು ವರ್ಸೇಲ್ ಅರಮನೆ ಹಾಗೂ ಅದರ ಹೊರಗಿನ ಉದ್ಯಾನವನ್ನು ಮನಃಪೂರ್ತಿ ನೋಡಲು ಆಗಲೇ ಇಲ್ಲ. ಪ್ಯಾರೀಸ್ ತಲುಪಿದ ನಂತರ ರಾತ್ರಿ ಊಟ ಮುಗಿಸಿಕೊಂಡು ರೈಲು ನಿಲ್ದಾಣಕ್ಕೆ ಬಂದೆವು. ಪ್ಯಾರೀಸ್‌ನಲ್ಲಿ ನಾಲ್ಕು ರೈಲು ನಿಲ್ದಾಣಗಳು ಇವೆ. ನಾವು ಯಾವ ದಿಕ್ಕಿನತ್ತ ಪ್ರಯಾಣ ಮಾಡಬೇಕೋ ಆ ದಿಕ್ಕಿನತ್ತ ಹೋಗುವ ರೈಲುಗಳು ಬೇರೆ ಬೇರೆ ನಿಲ್ದಾಣಗಳಿಂದ ಹೊರಡುತ್ತವೆ. ನಾವು ಪ್ಯಾರೀಸ್‌ನ ಪೂರ್ವ ರೈಲು ನಿಲ್ದಾಣವನ್ನು ತಲುಪುವಷ್ಟರಲ್ಲಿ ವಿಯನ್ನಾಗೆ ಹೋಗುವ ರೈಲು ಆಗಲೇ ಬಂದು ನಿಂತಿತ್ತು.

ನಿಲ್ದಾಣದಲ್ಲಿ ನಾವು ಬೆಂಗಳೂರಿನಲ್ಲಿ ಖರೀದಿಸಿದ್ದ ಸೀಜನ್ ಟಿಕೇಟ್ ತೋರಿಸಿ ಆ ದಿನದ ರೈಲಿಗೆ ರಿಸರ್ವೆಷನ್ ಮಾಡಿಸಿದೆವು. ನಮ್ಮಲ್ಲಿರುವಂತೆ ಯೂರೋಪಿನ ರೈಲು ನಿಲ್ದಾಣಗಳಲ್ಲಿ "ಕೂಲಿ" ಇರದೇ ಇದ್ದದ್ದರಿಂದ ಹತ್ತು ಫ್ರಾಂಕ್ ಕೊಟ್ಟು ಒಂದು ಟ್ರಾಲಿ ತೆಗೆದುಕೊಂಡು ಭಾರೀ ಸೂಟ್‌ಕೇಟ್ ಅದರ ಮೇಲಿರಿಸಿ ನಮ್ಮ ಡಬ್ಬಿಯತ್ತ ಹೋದೆವು. ರೈಲಿನಲ್ಲಿ ಮೂರು ದರ್ಜೆಯ ಬೋಗಿಗಳು - ಮೊದಲನೇ ದರ್ಜೆ, ಎರಡನೇ ದರ್ಜೆ, ಹಾಗೂ ಆರಾಮ ಕುರ್ಚಿಯಿರುವ ಬೋಗಿಗಳು ಇದ್ದವು. ನಾವು ಮೊದಲ ದರ್ಜೆ ಟಿಕೇಟ್ ಪಡೆದದ್ದರಿಂದ ನಾಲ್ಕು ಜನರು ಮಲಗುವಂತಹ (ನಮ್ಮಲ್ಲಿ ಇರುವಂತಹುದು) ಕ್ಯಾಬಿನ್ ಕೊಟ್ಟರು. ನಾವು ಸ್ವಲ್ಪ ವಿರಮಿಸಿದ

ಕೂಡಲೇ ಟಿ.ಟಿ. ಬಂದು ನಮ್ಮ ಪಾಸ್‌ಪೋರ್ಟ್ ಕೇಳಿದ. 'ಯಾಕೆ' ಎಂದೆ. 'ನೋಡಿ ನೀವು ಫ್ರಾನ್ಸ್‌ನಿಂದ ಆಸ್ಟ್ರಿಯಾ ದೇಶಕ್ಕೆ ಹೋಗುತ್ತಿದ್ದೀರಿ. ಈ ರೈಲು ಆ ದೇಶದ ಗಡಿ ತಲುಪಿದಾಗ ಅಲ್ಲಿಯ ಕಸ್ಟಂ ಅಧಿಕಾರಿಗಳು ಹಾಗೂ ಇಮಿಗ್ರೇಷನ್ ಅಧಿಕಾರಿಗಳಿಗೆ ನಿಮ್ಮ ಪಾಸ್‌ಪೋರ್ಟ್ ತೋರಿಸಿ ಅವರಿಂದ ಆಸ್ಟ್ರಿಯಾ ದೇಶದ ಪ್ರವೇಶ ಮಾಡುವ ಬಗ್ಗೆ ಸೀಲ್ ಹಾಕಿಸಿಕೊಳ್ಳಬೇಕು. ಅದಕ್ಕೆ ಎಂದ'. ಸರಿ ಎಂದು ಪಾಸ್‌ಪೋರ್ಟ್ ಕೊಟ್ಟೆ.

ಬಟ್ಟೆ ಬದಲಾಯಿಸಿ ಬಾತ್‌ರೂಮಿಗೆ ಹೋದೆ. ತುಂಬಾ ಸ್ವಚ್ಛವಾಗಿತ್ತು. ವಿಮಾನದಲ್ಲಾದರೂ ಬಾತ್‌ರೂಮುಗಳು ಕೊಳಕಾಗಿರುತ್ತವೆ. ಆದರೆ ಈ ರೈಲಿನಲ್ಲಿ ಶುಚಿಯಾಗಿತ್ತು. ಅಲ್ಲೇ ಕುಡಿಯುವ ನೀರು ಸೀಲ್ಡ್ ಬಾಟಲಿಗಳಲ್ಲಿ ಇಟ್ಟಿದ್ದರು. ಯಾರು ಬೇಕಾದರೂ ಅದನ್ನು ತೆಗೆದುಕೊಂಡು ಕುಡಿಯಬಹುದು ಎಂದರು. ನೀರಿನ ಒಂದು ಬಾಟಲ್ ತಂದೆ. ಶುಭ್ರವಾಗಿದ್ದ ಬಿಳಿ ಬೆಡ್‌ಷೀಟ್ ಹಾಗೂ ಉತ್ತಮ ರಗ್ ಇಟ್ಟಿದ್ದರು. ಹಾಸಿಗೆಗೆ ತಲೆ ಇಟ್ಟೊಡನೆ ನಿದ್ರೆ ಬಂತು.

2

ವಿಯನ್ನಾ

ಬೆಳಗ್ಗೆ ಎಚ್ಚರವಾಗಿ ಕಿಟಕಿಯ ಹೊರಗಡೆ ನೋಡಿದಾಗ ನಮ್ಮ ರೈಲು ವಿಯನ್ನಾ ತಲುಪಿತ್ತು. ವಿಯನ್ನಾ ಪೂರ್ವ ರೈಲು ನಿಲ್ದಾಣದಲ್ಲಿ ಇಳಿದ ಕೂಡಲೇ ನಮ್ಮ ರಾಯಭಾರಿ ಕಛೇರಿಯನ್ನು ಫೋನ್ ಮೂಲಕ ಸಂಪರ್ಕಿಸಿದೆ. ಆ ಕಚೇರಿಯಲ್ಲಿದ್ದ ಪರಿಚಯಸ್ಥರೊಬ್ಬರು ನಮಗೆ ಹೋಟೆಲ್‌ನಲ್ಲಿ ಕೋಣೆ ಕಾದಿರಿಸಿದ್ದರು. ರೈಲ್ವೇ ನಿಲ್ದಾಣದಿಂದ ಟ್ಯಾಕ್ಸಿ ಹಿಡಿದು ನೇರವಾಗಿ ಹೋಟೆಲ್‌ಗೆ ಹೋದೆವು. ಎರಡನೇ ಮತ್ತು ಮೂರನೇ ಮಹಡಿಗಳಿರುವ ದೊಡ್ಡ ಮನೆಯೇ ಹೋಟೆಲ್ ಆಗಿ ಪರಿವರ್ತನೆ ಆಗಿತ್ತು. ಆ ಹೋಟೆಲ್ ಮಾಲೀಕಳು "ನಿಮ್ಮ ಕೋಣೆ ಇನ್ನೂ ತಯಾರಾಗಿಲ್ಲ ಅಲ್ಲಿಯವರೆಗೆ ನೀವು ಬೆಳಗಿನ ಉಪಾಹಾರ ಮಾಡಿ" ಎಂದಳು.

ಯೂರೋಪ್‌ನಲ್ಲಿ ಬೆಳಗಿನ ಉಪಾಹಾರ ಎಂದರೆ ಬ್ರೆಡ್ ಅಥವಾ ಬನ್ನು, ಕಾಫಿ ಎಂದು ಯಾರೋ ಹೇಳಿದ್ದರು. ಆದರೆ ಅದೃಷ್ಟವಶಾತ್ ನಾವು ತಂಗಿದ್ದ ಹೋಟೆಲ್‌ನಲ್ಲಿ ಬ್ರೆಡ್, ಬನ್ನು ಅಲ್ಲದೆ ಕೋಳಿ ಮೊಟ್ಟೆ, ಕಾರ್ನ್ ಫ್ಲೇಕ್ಸ್, ಹಣ್ಣುಗಳು, ಇತ್ಯಾದಿ, ಕೊಟ್ಟರು. ಅಂದ ಹಾಗೆ ಯೂರೋಪ್‌ನ ಹೋಟೆಲ್‌ಗಳಲ್ಲಿ ಬೆಳಗಿನ ಉಪಾಹಾರಕ್ಕೆ ಬೇರೆ ಹಣ ಕೊಡಬೇಕಾದ್ದಿಲ್ಲ. ರೂಂ ಬಾಡಿಗೆಯಲ್ಲೇ ಉಪಾಹಾರದ ಖರ್ಚನ್ನೂ ಹೊಂದಿಸಿರುತ್ತಾರೆ.

ಉಪಾಹಾರ ಮಾಡುತ್ತಿರುವಾಗ ನಾನು ನನ್ನ ಹೆಂಡತಿಗೆ "ವಿಯನ್ನಾ ಯೂರೋಪಿಯನ್ ಸಂಗೀತದ ತವರು, ಪಾಶ್ಚಿಮಾತ್ಯ ಸಂಗೀತದಲ್ಲಿ ಹೆಸರು ಮಾಡಿರುವ ಮೋಜಾರ್ಟ್, ಬೀಥೋವೆನ್, ಬ್ರಾಮ್ಸ್ ಎಲ್ಲರೂ ಇದೇ ದೇಶದಿಂದ ಬಂದವರು" ಎಂದ ಕೂಡಲೇ ಆಕೆ "ಸೌಂಡ್ ಆಫ್ ಮ್ಯೂಸಿಕ್" ಚಿತ್ರವನ್ನು ನೆನಪಿಸಿ ಅದು ವಿಯನ್ನಾದಲ್ಲೇ ಶೂಟಿಂಗ್ ಆಗಿತ್ತು ಎಂದಳು.

ಆಸ್ಟ್ರೀಯಾ ಪೂರ್ವ ಆಲ್ಪ್ ಪರ್ವತಗಳ ತಪ್ಪಲಲ್ಲಿದ್ದು, ದೇಶದ ಮಧ್ಯದಲ್ಲೇ ಡಾನ್ಯೂಬ್ ನದಿ ಹರಿಯುತ್ತದೆ. ಈ ದೇಶದ ಜನರು ಪ್ರಕೃತಿ ಆರಾಧಕರು ಹಾಗೂ ಸಂಗೀತ ಪ್ರಿಯರು. ಹದಿಮೂರನೇ ಶತಮಾನದಲ್ಲಿ ಹಾಬ್ಸ್ ಬರ್ಗ್ ಮನೆತನದ ಅರಸರು ಆಸ್ಟ್ರಿಯಾ ದೇಶವನ್ನು ಆಳಲು ಆರಂಭಿಸಿದರು. ಹದಿನೆಂಟನೆಯ ಶತಮಾನದಲ್ಲಿ ಮೇರಿಯಾ ತೆರೆಸಾ ಮಹಾರಾಣಿ 40 ವರ್ಷ ಕಾಲ ಆಸ್ಟ್ರಿಯಾವನ್ನು ಆಳಿ ಆ ದೇಶಕ್ಕೆ ಯೂರೋಪ್‌ನಲ್ಲಿಯೇ ಒಂದು ಹಿರಿಯ ಸ್ಥಾನವನ್ನು ತಂದು ಕೊಟ್ಟಳು. 1914ರ ಜೂನ್ ತಿಂಗಳಲ್ಲಿ ಸರಯೇವೋನಲ್ಲಿ ಆಸ್ಟ್ರಿಯಾದ ಯುವರಾಜ

ಫ್ರಾನ್ಸಿಸ್ ಫರ್ಡಿನಾಂಡ್ ಕೊಲೆ ಆದದ್ದರಿಂದಲೆ ಮೊದಲನೇ ಮಹಾಯುದ್ಧ ಆರಂಭವಾಯಿತು. ದುರಾದೃಷ್ಟವಶಾತ್ ಮೊದಲನೇ ಮಹಾಯುದ್ಧದಲ್ಲಿ ಆಸ್ಟ್ರಿಯಾ ಸೋಲನ್ನು ಅನುಭವಿಸಿತು. ಈ ಸೋಲಿನ ನಂತರ ಆಸ್ಟ್ರಿಯಾ ಹಂಗರಿಗಳು ಬೇರ್ಪಟ್ಟವು. ಎರಡನೇ ವಿಶ್ವ ಮಹಾಯುದ್ಧದ ಸಮಯದಲ್ಲಿ ಈ ದೇಶ ಜರ್ಮನರ ಆಳ್ವಿಕೆಯಲ್ಲಿ ಬಂತು. 1945ರಲ್ಲಿ ರಷ್ಯಾದ ಸೈನಿಕರು ಆಸ್ಟ್ರಿಯಾವನ್ನು ಹಿಟ್ಲರನ ಕಪಿಮುಷ್ಟಿಯಿಂದ ಪಾರು ಮಾಡಿದರು. ಇಷ್ಟೆಲ್ಲಾ ತೊಂದರೆ ಆದರೂ 21ನೇ ಶತಮಾನದಲ್ಲಿ ಆಸ್ಟ್ರಿಯಾ ದೇಶ ಮತ್ತೆ ತನ್ನ ಹಿರಿಮೆಯನ್ನು ವಾಪಸ್ ಪಡೆಯುವಲ್ಲಿ ಸಾಕಷ್ಟು ಯಶಸ್ಸು ಗಳಿಸಿದೆ.

ನಾವು ಸ್ನಾನ ಮಾಡಿದ ಕೂಡಲೇ ಮತ್ತೆ ನಮ್ಮ ರಾಯಭಾರಿ ಕಛೇರಿಗೆ ದೂರವಾಣಿ ಮಾಡಿದಾಗ, ನನ್ನ ಗೆಳೆಯ, ನೀವು ವಿಯನ್ನಾ ನೋಡಬೇಕಾದರೆ ಅತ್ಯಂತ ಉತ್ತಮ ಮಾರ್ಗ ಬಸ್ ಪ್ರಯಾಣ, ನಗರದ ಮಧ್ಯಭಾಗದಿಂದ ಹಲವಾರು ಬಸ್‌ಗಳು ನಗರ ಪ್ರದಕ್ಷಿಣೆ ಮಾಡುತ್ತವೆ. ನಮಗೆ ಬೇಕಾದ ಜಾಗವನ್ನು ಬೇಕಾದಷ್ಟು ಸಮಯ ನೋಡಿ ಮುಂದೆ ಬರುವ ಬಸ್ ಹತ್ತಬಹುದು ಎಂದು ತಿಳಿಸಿದ. ಅವನು ಹೇಳಿದ ಹಾಗೆ ನಾವು ನಮ್ಮ ಹೋಟೆಲ್‌ನಿಂದ ನಡೆದುಕೊಂಡು ನಗರದ ಮಧ್ಯಭಾಗದಲ್ಲಿರುವ ಒಪೆರಾ ಹೌಸ್‌ಗೆ ಹೋದೆವು. ವಿಯನ್ನಾದ ಒಪೇರಾ ಹೌಸ್ 1861 ರಿಂದ 1869ರ ವರೆಗೆ ನಿರ್ಮಾಣಗೊಂಡಿತು. 1945ರಲ್ಲಿ ಈ ಕಟ್ಟಡಕ್ಕೆ ಬೆಂಕಿ ಬಿದ್ದು ಸಭಾಂಗಣ ನಾಶವಾದಾಗ 1955ರಲ್ಲಿ ಈ ಕಟ್ಟಡದ ಪುನರ್ ನಿರ್ಮಾಣ ಮಾಡಲಾಯಿತು. ಆಸ್ಟ್ರಿಯಾ ದೇಶದ ನಾಗರೀಕರು ಸಂಗೀತ ಪ್ರಿಯರಾಗಿರುವುದರಿಂದ ಈ ಸಭಾ ಮಂದಿರದಲ್ಲಿ ಪ್ರತಿ ದಿನವೂ ಒಂದಲ್ಲಾ ಒಂದು ಸಂಗೀತ ಕಾರ್ಯಕ್ರಮ ಇದ್ದೇ ಇರುತ್ತದೆ. ಒಪೆರಾ ಹೌಸ್ ನಗರದ ಕೇಂದ್ರ ಬಿಂದು. ಅಲ್ಲಿಂದ ನಾವು ಬಸ್ ಹತ್ತಿದ ಕೂಡಲೇ ಬಸ್‌ನಲ್ಲಿ ಇದ್ದ ಮಾರ್ಗದರ್ಶಿ ನಮಗೆ Guide Bookನ್ನು ಕೊಟ್ಟು ಈ ಬಸ್ 14 ಜಾಗಗಳಿಗೆ ನಿಮ್ಮನ್ನು ಕರೆದೊಯ್ಯುತ್ತದೆ ಎಂದ. ನಾವು ಮೊದಲು ಇಳಿದಿದ್ದು ನಾಯಕರ ಚೌಕ (Hero's Square). ವಿಯನ್ನಾ ದೇಶದ ಸರ್ಕಾರಿ ಕಛೇರಿಗಳು ಇತ್ಯಾದಿ ಇದೇ ಚೌಕದಲ್ಲಿ ಇವೆ. ವಿಯನ್ನಾ ನಗರದ ಎಲ್ಲಾ ಪ್ರಮುಖ ಕಟ್ಟಡಗಳು, ಟೌನ್ ಹಾಲ್, ಲಲಿತ ಕಲೆಗಳ ಮ್ಯೂಸಿಯಂ, ಪ್ರಾಕೃತಿಕ ಚರಿತ್ರೆ ಮ್ಯೂಸಿಯಂ, ವಿಶ್ವವಿದ್ಯಾಲಯ ಇತ್ಯಾದಿ ರಿಂಗ್ ಸ್ಟ್ರಾಸ್‌ನಲ್ಲೇ ಇವೆ. ಆಸ್ಟ್ರಿಯಾ ಅರಸರ ಹಳೆಯ ಅರಮನೆ ಹಾಫ್‌ಬರ್ಗ್ (13ನೇ ಶತಮಾನ) ಇಲ್ಲೇ ಇದೆ. ಇವೆಲ್ಲವನ್ನು ಸುಮಾರು ಒಂದು ಗಂಟೆ ಒಳಗೆ ನೋಡಬಹುದು. ಅಷ್ಟರಲ್ಲಿ ಮತ್ತೆ ಬಸ್ ಬಂದಾಗ ನಾವು ಬಸ್ ಏರಿ ಮುಂದೆ ಇಳಿದದ್ದು ಪ್ರಾಟರ್ ಎನ್ನುವ ವಿಯನ್ನಾದ ಅತಿ ದೊಡ್ಡ ಉದ್ಯಾನವನದಲ್ಲಿ. ಡಾನ್ಯೂಬ್ ನದಿ ಹಾಗೂ ಡಾನ್ಯೂಬ್ ಕಾಲುವೆಗಳು ಮಾಡಿರುವ ದ್ವೀಪದಲ್ಲಿರುವ ಈ ಉದ್ಯಾನ 18ನೇ ಶತಮಾನದಲ್ಲಿ ಕಟ್ಟಿದ್ದಂತೆ. ಇಲ್ಲಿರುವ ಮೃಗಾಲಯ ವಿಶ್ವದ ಅತಿ ಪ್ರಾಚೀನ ಮೃಗಾಲಯ ಅನ್ನುತ್ತಾರೆ. ಈ ಜಾಗದಲ್ಲಿ ಒಂದು ದೊಡ್ಡ ತಿರುಗು ಚಕ್ರ (Giant Wheel) ಇದೆ. ಇಡೀ ಯೂರೋಪಿನಲ್ಲಿಯೇ ಪ್ರಸಿದ್ಧಿ ಪಡೆದ ಫೆರಿಸ್ ವೀಲ್ ಎಂದು ಕರೆಯಲಾಗುವ ಪುರಾತವಾದ ಈ ತಿರುಗು ಚಕ್ರದಲ್ಲಿ ಕುಳಿತು ಎರಡು ಸುತ್ತು ಹಾಕಿದರೆ ವಿಯನ್ನಾ ನಗರದ ವಿಹಂಗಮ ನೋಟಗಳನ್ನು ನೋಡಬಹುದು. ಪ್ರಾಟರ್ ಉದ್ಯಾನವನ ಕೂಡ ಬಹಳ ಸುಂದರವಾಗಿದ್ದು ಅಲ್ಲಿ ತರಹೇವಾರಿ ಹೂವುಗಳನ್ನು ಬೆಳೆಸಿದ್ದಾರೆ.


ಪ್ರಾಟರ್ ಉದ್ಯಾನವನ ನೋಡಿದ ನಂತರ ನಾವು ನೋಡಿದ್ದು ವಿಶ್ವ ಸಂಸ್ಥೆಯ ಕಟ್ಟಡಗಳನ್ನು. ಅಣುಶಕ್ತಿಗೆ ಸಂಬಂಧಪಟ್ಟ ವಿಶ್ವ ಸಂಸ್ಥೆಯ ಹಲವಾರು ವಿಭಾಗಗಳು ವಿಯನ್ನಾ ನಗರದಲ್ಲಿ 1979ರಿಂದ ಕೇಂದ್ರೀಕೃತವಾಗಿವೆ. ನವೀನ ರೀತಿಯಲ್ಲಿ ಕಟ್ಟಲ್ಪಟ್ಟಿರುವ ಈ ಕಟ್ಟಡಗಳು ಆಕರ್ಷಕವಾಗಿವೆ.

ಅಲ್ಲಿಂದ ಸ್ವಲ್ಪ ಮುಂದೆ ಹೋದರೆ ಪ್ರಶಾಂತವಾದ ಡಾನ್ಯೂಬ್ ನದಿ ನೋಡಬಹುದು. ಈ ಡಾನ್ಯೂಬ್ ನದಿ ದಂಡೆಯ ಮೇಲೆಯೇ ಒಂದು ಎತ್ತರದ ಗೋಪುರವನ್ನು ನಿರ್ಮಿಸಲಾಗಿದ್ದು ಅದಕ್ಕೆ ಡಾನ್ಯೂಬ್ ಗೋಪುರ ಎಂದು ಕರೆಯುತ್ತಾರೆ.

ಇಷ್ಟೆಲ್ಲಾ ನೋಡುವ ವೇಳೆಗೆ ಸಂಜೆ 6.00 ಗಂಟೆಯಾಗಿತ್ತು. ನಾವು ಒಪೇರಾ ಹೌಸ್‌ಗೆ ವಾಪಸ್ ಬಂದು ಕಾಫೀ ಕುಡಿಯಲು ಒಂದು ರೆಸ್ಟೋರೆಂಟ್‌ಗೆ ಹೋದೆವು. ಆಸ್ಟ್ರಿಯಾದ ಜನ ಎಲ್ಲಾ ಕೆಲಸಗಳನ್ನು ನಿಧಾನವಾಗಿ ಮಾಡುತ್ತಾರೆ. ಸಾಯಂಕಾಲ 4.00 ಗಂಟೆಗೆ ಆಸ್ಟ್ರಿಯನ್ನರು ಕಾಫೀ ಕುಡಿಯಲೇಬೇಕು. ಯಾವುದಾದರೂ ಒಂದು ಹೋಟೆಲ್‌ಗೆ ಹೋಗಿ ಬಿಸಿ ಬಿಸಿ ಕಾಫಿಗೆ ಆರ್ಡರ್ ಮಾಡಿ ಕಾಫಿ ಜೊತೆ ಒಂದು ಕೇಕ್ ತುಂಡನ್ನು ಸವಿಯುತ್ತಾ ಯಾವುದಾದರೂ ಪತ್ರಿಕೆಯನ್ನು ಓದುವುದು ಅಲ್ಲಿಯ ಜನರ ಹವ್ಯಾಸ. ಈ ಊರಿನಲ್ಲಿ 15 ತರಹದ ಕಾಫಿ ದೊರೆಯುತ್ತದೆ. ನಾವು ಟರ್ಕಿ ಕಾಫಿ ಕುಡಿದೆವು. ನಮ್ಮ ಬೆಂಗಳೂರು ತರಹದ ಕಾಫಿ ಅಲ್ಲ ಎಂದು ನನ್ನ ಹೆಂಡತಿ ಮುಖ ಸಿಂಡರಿಸಿದಳು.

ರಾತ್ರಿಯಾದಂತೆ ವಿಯನ್ನಾ ನಗರ ಎಚ್ಚರಗೊಳ್ಳುತ್ತದೆ. ಅಲ್ಲಿಯ ಜನರಿಗೆ ಸಂಗೀತದಷ್ಟೇ ನೃತ್ಯದ ಮೇಲೂ ಪ್ರೀತಿ. ಸಂಗೀತದ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ. ಈ ದೇಶ ವೈನ್ ತಯಾರಿಕೆಗೂ, ಪ್ರಸಿದ್ಧಿ ಪಡೆದಿರುವುದರಿಂದ ರಾತ್ರಿಯಾಯಿತು ಎಂದರೆ ಸಂಗೀತ, ನೃತ್ಯ ಹಾಗೂ ವೈನ್‌ಗಳ ಸಂಗಮ ಜೋರಾಗಿ ನಡೆಯುತ್ತದೆ.

ಮಾರನೇ ದಿನ ನಾವು ಬೆಳಿಗ್ಗೆ ಎದ್ದು ಮತ್ತೆ ಒಪೆರಾ ಹೌಸ್ ಬಸ್ ಸ್ಟಾಂಡಿಗೆ ಹೋದೆವು. ಹಿಂದಿನ ದಿನ ಪಡೆದಿದ್ದ ಬಸ್ ಟಿಕೆಟ್ಟನ್ನು ಮರುದಿನವೂ ಉಪಯೋಗಿಸ ಬಹುದಾದ್ದರಿಂದ ನಾವು ಇನ್ನೂ ನೋಡಲು ಉಳಿದಿದ್ದ ವಿಖ್ಯಾತ ಜಾಗಗಳನ್ನು ನೋಡಲು ತೆರಳಿದೆವು. ನಾವು ಮೊದಲು ನೋಡಿದ್ದು ಮೊಜ಼ಾರ್ಟ್‌ನ ಪ್ರತಿಮೆ ಇದ್ದ ಉದ್ಯಾನವನ. ಸಣ್ಣಗೆ ಮಳೆ ಬರುತ್ತಾ ಇದ್ದರೂ ಹಲವಾರು ಜನರು ಆಗಲೇ ವಾಕಿಂಗ್ ಮಾಡುತ್ತಾ ಇದ್ದರು. ಉದ್ಯಾನವನವನ್ನು ನೋಡಿದ ತರುವಾಯ ನಮ್ಮ ಬಸ್ ನಮ್ಮನ್ನು ಶೋನ್ ಬ್ರುನ್ ಅರಮನೆಗೆ ಕರೆದೊಯ್ಯಿತು. ಈ ಅರಮನೆ ಆಸ್ಟ್ರಿಯಾದ ಮಹಾರಾಣಿ ಮೇರಿಯಾ ಟೆರೆಸಾಳ ಬೇಸಿಗೆ ಅರಮನೆ. ಯೂರೋಪ್‌ನಲ್ಲಿರುವ ಇತರ ಅರಮನೆಗಳಿಗಿಂತ ಭವ್ಯವಾಗಿದ್ದು ಅರಮನೆಯ ಸುತ್ತಲೂ ನಯನ ಮನೋಹರವಾದ ಉದ್ಯಾನವನ ಇದೆ. 1706 ರಿಂದ 1711ರ ಮಧ್ಯದಲ್ಲಿ ಕಟ್ಟಿದ ಈ ಅರಮನೆ 1917ರ ನಂತರ ಆಸ್ಟ್ರಿಯಾದ ಜಾನಪದ ಕಲೆಗಳ ಮ್ಯೂಸಿಯಂ ಆಗಿ ಪರಿವರ್ತನೆಯಾಯಿತು. ಅರಮನೆ ನೋಡಿದ ನಂತರ ನಾವು ಮತ್ತೆ ನಗರದ ಕೇಂದ್ರಕ್ಕೆ ಬಂದು ಅಲ್ಲಿಯೇ ಹತ್ತಿರವಿರುವ ಟೌನ್‌ಹಾಲ್ ಮತ್ತಿತರ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದೆವು. ಸೌಂಡ್ ಆಫ್ ಮ್ಯೂಸಿಕ್ ಶೂಟಿಂಗ್ ಮಾಡಿದ ಜಾಗ ನೋಡಬೇಕೆಂಬ ಆಸೆ ಇತ್ತು. ಆದರೆ ಆ ಜಾಗ ಸಾಲ್ಸ್ ಬರ್ಗ್ ಎನ್ನುವ ಊರಿನಲ್ಲಿದೆ ಹಾಗೂ ಅಲ್ಲಿಗೆ ಹೋಗಿ ಬರಲು ಒಂದು ದಿನ ಹಿಡಿಯುತ್ತದೆ ಎಂದಾಗ ನಾವು ಇನ್ನೊಂದು ಬಾರಿ ಬಂದಾಗ ಸಂಗೀತರಚನೆಕಾರ ಮೊಜ಼ಾರ್ಟ್ ಹುಟ್ಟಿದ ಸಾಲ್ಸ್‌ಬರ್ಗ್ ನೋಡಲು ನಿರ್ಧರಿಸಿ ಹೋಟೆಲ್‌ಗೆ ವಾಪಸ್ ಆಗಿ ರೂಂ ಖಾಲಿ ಮಾಡಿ ರೈಲ್ವೇ ಸ್ಟೇಷನ್‌ಗೆ ಬಂದೆವು. ರೈಲ್ವೇ ಸ್ಟೇಷನ್ ಹೊರಗಡೆ ಬಿಸಿ ಬಿಸಿಯಾದ ಮುಸುಕಿನ ಜೋಳವನ್ನು ಸುಟ್ಟು ಮಾರಾಟ ಮಾಡುತ್ತಿದ್ದರು. ರಾತ್ರಿ ಊಟಕ್ಕೆಂದು ಮುಸುಕಿನ ಜೋಳ ತಿಂದು ರೈಲನ್ನು ಏರಿದೆವು.



ವೆನಿಸ್

ಬೆಳಗಾದಾಗ ರೈಲಿನ ಟಿ.ಟಿ. ಒಂದು ಬನ್ ಹಾಗೂ ಒಂದು ಕಪ್ ಚಹಾ ಕೊಟ್ಟು ನಮ್ಮನ್ನೆಬ್ಬಿಸಿ, 'ಇನ್ನು ಒಂದು ಗಂಟೆಯಲ್ಲಿ ವೆನಿಸ್ ತಲುಪುತ್ತೇವೆ' ಎಂದ. ಕಿಟಕಿಯಿಂದ ಹೊರಗೆ ನೋಡಿದೆ. ಎಲ್ಲೆಲ್ಲೂ ನೀಲಿ ಬಣ್ಣದ ಸಮುದ್ರ ಕಂಡಿತು. ನಮ್ಮ ಎದುರಿನ ಬರ್ತಿನಲ್ಲಿದ್ದ ಅಮೇರಿಕನ್ ಯುವತಿ 'ಇದೇ ಮೊದಲ ಸಲವೇ ನೀವು ಇಲ್ಲಿಗೆ ಬರ್ತಾ ಇರುವುದು' ಎಂದು ಕೇಳಿದಳು. ಹೌದು ಎಂದು ತಲೆಯಲ್ಲಾಡಿಸಿದೆ. 'ನಾನು ಐದನೇ ಬಾರಿ ಇಲ್ಲಿಗೆ ಬರ್ತಾ ಇರೋದು ನನ್ನ ರಜಾ ದಿನಗಳಷ್ಟನ್ನೂ ಇದೇ ಊರಿನಲ್ಲೇ ಕಳೆಯುತ್ತೇನೆ' ಎಂದಳು.

'ಈ ಊರಿನಲ್ಲಿ ಅಂತಹ ಏನು ವಿಶೇಷ ನೋಡಿದೆಯಮ್ಮಾ ಇಷ್ಟು ಸಲ ಬರೋದಕ್ಕೆ' ಎಂದು ನಾನು ಆ ತರುಣಿಯನ್ನು ಕೇಳಿದಾಗ ನನ್ನ ಹೆಂಡತಿ. 'ಇದೇನ್ರೀ ಹೀಗಂತೀರಿ, ಎಪ್ಪತ್ತರ ದಶಕದ ಹಾಗೂ ಹಿಂದಿನ ಹಿಂದಿ ಸಿನಿಮಾ ನೋಡಿಲ್ಲವೇ, ಪ್ರತಿಯೊಂದು ಸಿನಿಮಾದಲ್ಲೂ ಈ ಊರಿನ ಗೋಂಡೋಲಾಗಳಲ್ಲಿ ಕುಳಿತು ಹೀರೋ ಹೀರೋಯಿನ್ ಹಾಡು ಹಾಡ್ತಾ ಇರ್ಲಿಲ್ವಾ' ಎಂದಳು. 'ನೀನು ಸ್ವಲ್ಪ ಸುಮ್ನೆ ಇರ್ತೀಯಾ' ಎಂದು ನಾನು ಆ ಯುವತಿಗೆ 'ಏನಮ್ಮಾ ಈ ಊರಿನ ವಿಶೇಷ' ಎಂದು ಮತ್ತೆ ಕೇಳಿದೆ.

'ನೋಡಿ, ಉತ್ತರ ಇಟಲಿಯ ವೆನೆಟೋ ಪ್ರಾಂತದ ವೆನಿಸ್ ನಗರ ಪೋ ಹಾಗೂ ಪಿಯಾವೇ ಎಂಬ ಎರಡು ನದಿಗಳು ಆಡ್ರಿಯಾಟಿಕ್ ಸಮುದ್ರ ಸೇರುವ ಪ್ರದೇಶದಲ್ಲಿದೆ. ಈ ಎರಡೂ ನದಿಗಳು ಉಂಟು ಮಾಡಿರುವ ಲಗೂನ್ ಪ್ರದೇಶದಲ್ಲಿರುವ 177 ಕಾಲುವೆಗಳಿಂದ ಇಲ್ಲಿ 120 ದ್ವೀಪಗಳಾಗಿವೆ. ವೆನಿಸ್ ನಗರದ ಈ 120 ದ್ವೀಪಗಳನ್ನು ಸುಮಾರು 400 ಸೇತುವೆಗಳ ಮೂಲಕ ಒಂದಕ್ಕೊಂದು ಸಂಪರ್ಕಿಸುವಂತೆ ಮಾಡಿದ್ದಾರೆ. ಅಂದ ಹಾಗೆ ಈ ನಗರದಲ್ಲಿ ಯಾವ ಮೋಟಾರ್ ವಾಹನವೂ ಓಡಾಡುವ ಹಾಗಿಲ್ಲ. ಎಲ್ಲಾದರೂ ಹೋಗಬೇಕಾದರೆ ಬೋಟ್‌ನಲ್ಲಿ ಅಥವಾ ಗೊಂಡೋಲಾದಲ್ಲಿ ಹೋಗಬೇಕು, ಇಲ್ಲಾ ಎಂದರೆ ನಡೆಯಬೇಕು. ಈ ವೆನಿಸ್ ನಗರವನ್ನು ಎರಡು ಮೈಲಿ ಉದ್ದದ ಗ್ರಾಂಡ್ ಕಾಲುವೆ ಎರಡು ಭಾಗವಾಗಿ ಮಾಡಿದೆ. ರಸ್ತೆಯ ಬದಲು ಕಾಲುವೆಯ ಉಪಯೋಗ ಮಾಡುವುದು ವಿಶ್ವದಲ್ಲೇ ಎಲ್ಲಿಯೂ ಇಲ್ಲ, ವೆನಿಸ್ ಬಿಟ್ಟರೆ' ಎಂದಳು.

ಅಷ್ಟರಲ್ಲಿ ವೆನಿಸ್ ರೈಲು ನಿಲ್ದಾಣ ಬಂದೇ ಬಿಟ್ಟಿತು. ನಾವು ರೈಲು ನಿಲ್ದಾಣದ ಹೊರಬಂದ ಕೂಡಲೇ ಎದುರಿಗೆ ಒಂದು ದೊಡ್ಡ ಕಾಲುವೆ ಕಂಡಿತು. ಅಲ್ಲಿ ಹಲವಾರು ಮೋಟಾರ್ ದೋಣಿಗಳು ನಿಂತಿದ್ದವು. 'ನಿಜವಾಗಲೂ ಹಿಂದಿ ಪಿಕ್ಚರ್ ಸೀನ್ ಇದ್ದಹಾಗೇ ಇದೇರೀ,' ಎಂದಳು ನನ್ನ ಪತ್ನಿ.

ರೈಲು ನಿಲ್ದಾಣದಿಂದ ಮುಂದೆ ಎಲ್ಲಿ ಹೋಗಬೇಕೆಂದು ನನಗೆ ಗೊತ್ತಿರಲಿಲ್ಲ. ಅಲ್ಲೇ ಇದ್ದ ಟೂರಿಸ್ಟ್ ಕಛೇರಿಯಲ್ಲಿ ವಿಚಾರಿಸಿದರೆ 'ವೆನಿಸ್‌ಗೆ ಬರುವವರೆಲ್ಲಾ ಹೋಗುವುದು ಒಂದೇ ಜಾಗಕ್ಕೆ - ಅದೇ ಸೇಂಟ್ ಮಾರ್ಕ್ಸ್ ಚೌಕ' ಎಂದರು. ನಾವು ಅಲ್ಲೇ ಇದ್ದ ಕೌಂಟರ್‌ನಲ್ಲಿ ಸೇಂಟ್ ಮಾರ್ಕ್ಸ್ ಚೌಕಕ್ಕೆ ಹೋಗಿಬರುವ ಟಿಕೆಟ್ ಪಡೆದು ಒಂದು ಮೋಟಾರ್ ಬೋಟ್ ಏರಿದೆವು. ಸಣ್ಣನೆ ಮಳೆ ಪ್ರಾರಂಭವಾಯಿತು.

ವೆನಿಸ್ ದೋಣಿಗಳೂ ಬಹಳ ಮಜವಾಗಿ ಚಲಿಸುತ್ತವೆ. ಮೊದಲ ನಿಲುಗಡೆ ಕಾಲುವೆಯ ಎಡದಂಡೆಯಾದರೆ ಎರಡನೇ ನಿಲುಗಡೆ ಬಲದಂಡೆ. ದೋಣಿ ನಿಲ್ಲುವ ಜಾಗದಲ್ಲಿ ಪ್ರವಾಸಿಗರ ಮಾಹಿತಿಗಾಗಿ ಅಲ್ಲಿ ಇಳಿದರೆ ಯಾವ ಯಾವ ಪ್ರೇಕ್ಷಣೀಯ ಸ್ಥಳ ನೋಡಬಹುದು ಎನ್ನುವ ಫಲಕಗಳನ್ನು ಹಾಕಿರುತ್ತಾರೆ. ನಾವು ಒಂದೇ ದಿನ ಮಾತ್ರ ವೆನಿಸ್‌ನಲ್ಲಿ ಉಳಿಯಲು ನಿರ್ಧರಿಸಿದ್ದರಿಂದ ಬಹು ಮುಖ್ಯ ಸ್ಥಳಗಳನ್ನು ಮಾತ್ರ ನೋಡಬೇಕೆಂದು ಮೊದಲೇ ತೀರ್ಮಾನಿಸಿದ್ದೆವು.

ಸೇಂಟ್ ಮಾರ್ಕ್ಸ್ ಚೌಕದ ನಿಲ್ದಾಣ ಬರುವ ವೇಳೆಗೆ ಮಳೆ ಜೋರಾಯಿತು. ನೆಲದ ಮೇಲೆ ಮೊಣಕಾಲುದ್ದ ನೀರು. ನಮ್ಮ ದೋಣಿಯಲ್ಲೇ ಬಂದಿದ್ದ ದೆಹಲಿಯ ವ್ಯಕ್ತಿ ಅವನ ಹೆಂಡತಿಗೆ ಹೇಳ್ತಾ ಇದ್ದ, 'ನೋಡು ಈ ವೆನಿಸ್‌ನ ದೊಡ್ಡ ತೊಂದರೆ ಎಂದರೆ ನೆರೆ ಹಾವಳಿ. ಬಿರುಗಾಳಿ ಎದ್ದಾಗ ಈ ಊರಿನ ಅರ್ಧದಷ್ಟು ಭಾಗ ಮುಳುಗಿ ಹೋಗುತ್ತದೆ. ಅದಕ್ಕೇ ಈ ಊರಿನ ಜನ ಬೇರೆ ಬೇರೆ ಜಾಗಗಳಿಗೆ ವಲಸೆ ಹೋಗಿ ಬಿಡ್ತಾರೆ. 1966ನೇ ಇಸವಿಯಲ್ಲಿ ಬಂದ ಭಾರೀ ಪ್ರವಾಹದಿಂದ ಅರ್ಧಕ್ಕರ್ಧ ಊರೇ ಹಾಳಾಗಿಬಿಟ್ಟಿತಂತೆ. ಆ ನಂತರ ಪ್ರವಾಹ ತಡೆಯಲು ಹಲವಾರು ಕ್ರಮಗಳನ್ನು ಕೈಗೊಂಡಿದ್ದಾರೆ' ಎಂದು. ಮಳೆ ಹನಿ ಜೋರಾಯಿತು. ವೆನಿಸ್‌ಗೆ ಬಂದವರೆಲ್ಲರೂ ಕೊಡೆಗಳನ್ನು ತಂದಿದ್ದರು. ನಮ್ಮನ್ನು ಹೊರತಾಗಿ. ಮುಂದಿನ ಬಾರಿ ಯೂರೋಪ್ ದರ್ಶನಕ್ಕೆ ಹೋದರೆ ಕೊಡೆಯಿಲ್ಲದೆ ಎಲ್ಲಿಗೂ ಹೋಗಬಾರದು ಎಂದು ನಿರ್ಧರಿಸಿದೆವು.

ವೆನಿಸ್ ನಗರದ ಮಧ್ಯಭಾಗ ಸೇಂಟ್ ಮಾರ್ಕ್ಸ್ ಚೌಕ. ಈ ಚೌಕದ ಪೂರ್ವಭಾಗದಲ್ಲಿ ಸೇಂಟ್ ಮಾರ್ಕ್ಸ್ ಕೆಥೆಡ್ರಲ್ (ಚರ್ಚ್) ಹಾಗೂ ಡೋಗೇ ರಾಜರ ಅರಮನೆ ಇದೆ. ವೆನಿಸ್‌ನ ಅತಿ ಪ್ರಾಮುಖ್ಯ ಕಟ್ಟಡಗಳು ಇವೆರಡೇ ಅಂತೆ. ಕೆಥೆಡ್ರಲ್ ಅನ್ನು 828ನೇ ಇಸವಿಯಲ್ಲಿ ಕಟ್ಟಿದ್ದರಂತೆ 976ನೇ ಇಸವಿಯಲ್ಲಿ ಬೆಂಕಿ ಅನಾಹುತದಿಂದ ಈ ಚರ್ಚ್ ಹಾಳಾಯಿತಂತೆ. ಹೀಗಾಗಿ 1047 ಹಾಗೂ 1071ರ ಮಧ್ಯದಲ್ಲಿ ಇದನ್ನು ಪುನರ್ ನಿರ್ಮಾಣ ಮಾಡಿದರಂತೆ ಬೈಜಾಂಟೈನ್ ವಿನ್ಯಾಸದ ಅತಿ ಮುಖ್ಯ ಉದಾಹರಣೆಗಳಲ್ಲಿ ಈ ಕೆಥೆಡ್ರಲ್ ಕೂಡಾ ಒಂದು ಅನ್ನುತ್ತಾರೆ.

ನಾವಿಬ್ಬರೂ ಈ ಚರ್ಚಿನೊಳಗೆ ಹೋಗಿ ವಾಪಸ್ ಬಂದೆವು. ನಮಗೇನೋ ಈ ಚರ್ಚಿನ ವಿಶೇಷತೆ ತಿಳಿಯಲಿಲ್ಲ. ಆದರೆ ಈ ಚರ್ಚ್ ಪಕ್ಕದಲ್ಲೇ ಇರುವ ಅರಮನೆ ನಿಜವಾಗಲೂ ಸುಂದರವಾಗಿದೆ. ಈ ಅರಮನೆ 814ನೇ ಇಸವಿಯಲ್ಲಿ ಮೊದಲಬಾರಿಗೆ ಕಟ್ಟಲಾಯಿತಂತೆ. ನಾಲ್ಕು ಬಾರಿ ಬೆಂಕಿ ಬಿದ್ದು ಅರಮನೆ ಹಾಳಾದಾಗ ಪುನಹ ಹೊಸದಾಗಿ ಕಟ್ಟಿದರಂತೆ. ಗೋಥಿಕ್ ವಿನ್ಯಾಸದಲ್ಲಿ ಈ ಅರಮನೆ ಕಟ್ಟಿದ್ದಾರೆ.

ಎಲ್ಲಾ ಅರಮನೆಗಳಂತೆಯೇ ಇಲ್ಲಿಯೂ ರಾಜ - ರಾಣಿಯರ ಕೋಣೆಗಳು, ರಾಜನ ದರ್ಬಾರ್ ಹಜಾರ, ಬೇರೆ ದೇಶದ ರಾಯಭಾರಿಗಳು ರಾಜನನ್ನು ವಂದಿಸುವ ಸ್ಥಳ ಇವೆ. ಆದರೆ ಈ ಅರಮನೆಯ ವಿಶೇಷತೆ ಏನೆಂದರೆ ಅರಮನೆಯ ಹಿಂದುಗಡೆಯೇ ಜೈಲು ಕೂಡಾ ಇದೆ. ಕೈದಿಗಳನ್ನು ಆಗಿನ ಕಾಲದಲ್ಲಿ ಕೂಡಿ ಇಡುತ್ತಿದ್ದ ಚಿಕ್ಕ ಚಿಕ್ಕ ಕತ್ತಲು ಕೋಣೆಗಳನ್ನು ನೋಡಿದಾಗ ಇದು ಅಂಡಮಾನಿನ ಸೆಲ್ಯುಲಾರ್ ಜೈಲಿಗಿಂತ ಕೆಟ್ಟದಾಗಿದೆಯಲ್ಲಾ ಎನ್ನಿಸಿತು. ಅರಮನೆಗೂ, ಜೈಲಿಗೂ ಮಧ್ಯೆ ಒಂದು ಸೇತುವೆ ಇದ್ದು ಇದಕ್ಕೆ ನಿಟ್ಟುಸಿರಿನ ಸೇತುವೆ ಎಂದು ಕರೀತಾರೆ.

ಅರಮನೆಯಿಂದ ಹೊರಬಂದ ಕೂಡಲೇ ಕಾಣುವುದು ಎದುರುಗಡೆ ಇರುವ ವಿಶಾಲವಾದ ಚೌಕ. ಈ ಚೌಕದಲ್ಲಿ ಎರಡು ದೊಡ್ಡ ಗ್ರಾನೈಟ್ ಸ್ತಂಬಗಳಿವೆ. ಒಂದರ ಮೇಲೆ ಸೇಂಟ್ ಮಾರ್ಕನ ವಾಹನವಾದ ರೆಕ್ಕೆಯಿರುವ ಸಿಂಹ ಇದೆ. ಇನ್ನೊಂದರ ಮೇಲೆ ಮೊಸಳೆಯಿದೆ. ಇವೆಲ್ಲಕ್ಕಿಂತ ಮುಖ್ಯವಾದದ್ದೆಂದರೆ ಗಂಟೆ ಗೋಪುರ. 300 ಅಡಿ ಎತ್ತರದ ಈ ಗೋಪುರವನ್ನು 874ರಲ್ಲಿ ಕಟ್ಟಿದರಂತೆ. ಅದು ಬಿದ್ದನಂತರ 1902ರಲ್ಲಿ ಮತ್ತೆ ಹೊಸದಾಗಿ ಕಟ್ಟಲಾಯಿತಂತೆ.

ಸೇಂಟ್ ಮಾರ್ಕ್ಸ್ ಚೌಕದ ಒಂದು ಭಾಗದಲ್ಲಿ ದೆಹಲಿಯ ಕಾನಾಟ್ ಪ್ಲೇಸ್ ತರಹ ಅಂಗಡಿಗಳ ಸಾಲೇ ಇವೆ. 1810ರಲ್ಲಿ ಕಟ್ಟಲಾದ ಈ ಅಂಗಡಿ ಸಾಲಿನಲ್ಲಿ ಇರುವ ಅಂಗಡಿಗಳಲ್ಲಿ ತರಹೇವಾರು ವಸ್ತುಗಳು ದೊರೆಯುತ್ತವೆ. ವೆನಿಸ್‌ನಲ್ಲಿ ಸಿಗುವ ಮುಖ್ಯ ವಸ್ತುಗಳಾದ ಗಾಜಿನ ವಸ್ತುಗಳು, ಕನ್ನಡಿಗಳು ಹಾಗೂ ಮಣಿಗಳನ್ನು ಪಕ್ಕದ ದ್ವೀಪವಾದ ಮುರಾನೋದಲ್ಲಿ ತಯಾರಿಸುತ್ತಾರೆ. ಬುರಾನೋ ದ್ವೀಪದಲ್ಲಿ ಲೇಸ್ (Lace) ತಯಾರು ಮಾಡುತ್ತಾ ಇದ್ದು, ವೆನಿಸ್ ಖ್ಯಾತಿಗೆ ಇದೂ ತನ್ನ ಕಾಣಿಕೆ ನೀಡಿದೆ. ನಾವು ಸಣ್ಣ ಪುಟ್ಟ ವಸ್ತುಗಳನ್ನು ಖರೀದಿಸಿ ಮಧ್ಯಾಹ್ನದ ಊಟ ಮುಗಿಸಿ ಮತ್ತೆ ದೋಣಿ ನಿಲ್ಲುವ ಜಾಗಕ್ಕೆ ವಾಪಸಾದೆವು.

ನನ್ನ ಶ್ರೀಮತಿ "ರೀ, ಗೊಂಡೋಲಾದಲ್ಲಿ ಹೋಗದಿದ್ದರೆ ಇಲ್ಲಿಗೆ ಬಂದು ಏನು ಪ್ರಯೋಜನ", ಎಂದಳು. ಸರಿ ಎಂದು ನಾನು ಒಂದು ಗೊಂಡೋಲಾ ಗೊತ್ತುಮಾಡಿದೆ. ಗೊಂಡೋಲಾ ಎಂದರೆ ಒಂದೇ ಒಂದು Oar (ಹುಟ್ಟು) ಇರುವ ತಟ್ಟೆಯಾಕಾರದ ದೋಣಿ. ನಮ್ಮಲ್ಲಿನ ತೆಪ್ಪದಂತೆ ಇರುವ ಈ ಗೊಂಡೋಲಾದಲ್ಲಿ ಗ್ರಾಂಡ್ ಕೆನಾಲ್‌ನಲ್ಲಿ ಒಂದು ಸುತ್ತು ಹಾಕಿದೆವು. ನಮ್ಮ ಬೋಟ್‌ಮನ್ ಗ್ರಾಂಡ್ ಕೆನಾಲ್‌ನ ಅಕ್ಕ ಪಕ್ಕದಲ್ಲಿರುವ ಕಾ-ಡಿ-ಓರೋ ಮ್ಯೂಸಿಯಂ, ಹಳೇ ಲೈಬ್ರರಿ ಇತ್ಯಾದಿ ಜಾಗಗಳನ್ನು ಬೊಟ್ಟು ಮಾಡಿ ತೋರಿಸಿದ.

ವೆನಿಸ್ ನಗರದ ಜನರ ಅತಿ ಮುಖ್ಯ ಕಸುಬು ಪರ್ಯಟನೆಗೆ ಸಂಬಂಧಪಟ್ಟಿದ್ದು. ವಿಶ್ವದಾದ್ಯಂತ ಪ್ರತಿ ದಿನವೂ ಸಾವಿರಾರು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಪ್ರತಿ ವರ್ಷವೂ ಇಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಆಗುತ್ತದೆ. ಐದನೇ ಶತಮಾನದ ಈ ನಗರದ ಮುಖ್ಯ ಆಕರ್ಷಣೆ ಇಲ್ಲಿಯ ಕಾಲುವೆಗಳು ಹಾಗೂ ಗೊಂಡೋಲಾಗಳು. ಈ ಊರಿನ ಆರ್ಥಿಕ ವ್ಯವಸ್ಥೆ ಪ್ರವಾಸಿಗರ ಮೇಲೆಯೇ ಅವಲಂಬಿತವಾಗಿದೆ ಎಂದರೆ ತಪ್ಪಾಗಲಾರದು.

ನಮ್ಮ ಗೊಂಡೋಲಾದ ಚಾಲಕ, "ಸ್ವಾಮಿ, ನಾವು ರೈಲ್ವೆ ನಿಲ್ದಾಣದತ್ತ ಬಂದಿದ್ದೇವೆ. ನಿಮ್ಮ ಮುಂದಿನ ಇರಾದೆ ಏನು", ಎಂದ. "ಇಲ್ಲೇ ಇಳಿಸು" ಎಂದೆ.

ರೈಲು ನಿಲ್ದಾಣಕ್ಕೆ ಬಂದು ಅಲ್ಲಿಯ ದೊಡ್ಡ ಕಂಪ್ಯೂಟರ್ ಚಾಲಿತ ಫಲಕ ನೋಡಿದೆ. ಇನ್ನು ಇಪ್ಪತ್ತು ನಿಮಿಷಕ್ಕೆ ರೋಮ್ ನಗರಕ್ಕೆ ಹೋಗಲು ಸೂಪರ್ ಫಾಸ್ಟ್ ರೈಲು ತಯಾರಾಗಿದೆ ಎಂದು ಬರೆದಿತ್ತು. ಪ್ಲಾಟ್‌ಫಾರ್ಮ್ ಎಂಟಕ್ಕೆ ಹೋಗಿ ರೈಲು ಏರಿದೆವು.

"ತುಂಬಾ ಚೆನ್ನಾಗಿತ್ತು ಈ ಊರು ಕಣ್ರೀ, ಒಂದು ದಿನ ಇಲ್ಲೇ ಕಳೆಯಬಹುದಾಗಿತ್ತಲ್ಲಾ" ಅಂದಳು ನನ್ನ ಹೆಂಡತಿ. "ಊರು ನಿಜವಾಗಲೂ ಸುಂದರ, ಆದರೆ ಈ ಹಾಳು ಮಳೆಯಿಂದ ನನ್ನ ಮೂಡ್ ಹಾಳಾಯಿತು" ಎಂದೆ. ಅಷ್ಟರಲ್ಲಿ ನಮ್ಮ ರೈಲು ನಿಧಾನವಾಗಿ ಚಲಿಸಲಾರಂಭಿಸಿತು.



ವ್ಯಾಟಿಕನ್

ವೆನಿಸ್ ನಗರವನ್ನು ಸುಮಾರು 4.00 ಗಂಟೆಗೆ ಬಿಟ್ಟು ನಮ್ಮ ಸೂಪರ್ ಫಾಸ್ಟ್ ರೈಲು ಫ್ಲೋರೆನ್ಸ್‌ನಲ್ಲಿ ಮಾತ್ರ ನಿಂತು ರೋಮ್‌ನತ್ತ ಧಾವಿಸಿತು. ರೋಮ್ ರೈಲ್ವೇ ಸ್ಟೇಷನ್‌ನಲ್ಲಿ ನಾವು ಬಂದು ಇಳಿದಾಗ ಗಂಟೆ ರಾತ್ರಿ ಹತ್ತಾಗಿತ್ತು. ರೈಲ್ವೇ ನಿಲ್ದಾಣದಲ್ಲಿ ನನ್ನ ಸ್ನೇಹಿತರಾದ ಅನಂತಕೃಷ್ಣ ಬಂದಿದ್ದಾರೇನೋ ಎಂದು ಹುಡುಕಿದೆ. ಅವರು ಎಲ್ಲೂ ಕಾಣಲಿಲ್ಲ. ಎದೆ ಡವ ಡವ ಎಂದು ಹೊಡೆದುಕೊಳ್ಳಲಾರಂಭಿಸಿತು. ಕಾರಣ ಇಷ್ಟೇ. ನಾವು ರೋಮ್ ನಗರದಲ್ಲಿ ಅನಂತ ಕೃಷ್ಣ ಅವರ ಮನೆಯಲ್ಲೇ ಇರಲು ನಿರ್ಧರಿಸಿದ್ದರಿಂದ ಯಾವುದೇ ಹೋಟೆಲ್‌ನಲ್ಲಿಯೂ ರೂಮ್ ರಿಸರ್ವ್ ಮಾಡಿರಲಿಲ್ಲ. ಸರಿರಾತ್ರಿಯಲ್ಲಿ ಊರೊಳಗೆ ಹೋಟೆಲ್ ಹುಡುಕಿಕೊಂಡು ಹೋಗುವುದು ನನಗೆ ಇಷ್ಟವಿರಲಿಲ್ಲ.

ರೋಮ್ ನಗರ ಕಳ್ಳರ ಊರು, ಒಂದು ನಿಮಿಷ ಎಚ್ಚರ ತಪ್ಪಿದರೂ ಸೂಟ್‌ಕೇಸ್ ಹೊಡೆದು ಬಿಡುತ್ತಾರೆ ಎಂದು ನನ್ನ ಹಲವಾರು ಮಿತ್ರರು ಹೇಳಿದ್ದರು. ರೋಮ್ ನಗರವನ್ನು ಭೇಟಿ ಮಾಡಿದ್ದಾರೆಂದು ತಿಳಿಸಿದ ಯಾರನ್ನೇ ಕೇಳಿದರೂ ಅವರು ತಮ್ಮ ಪರ್ಸ್ ಪಿಕ್ ಪಾಕೇಟ್ ಆದ ಬಗ್ಗೆಯೋ, ಅಥವಾ ಪಾಸ್‌ಪೋರ್ಟ್ ಕಳೆದ ಬಗ್ಗೆಯೋ, ಅಥವಾ ಸೂಟ್‌ಕೇಸ್ ಹಾರಿಸಿಕೊಂಡು ಹೋದ ಬಗ್ಗೆಯೋ ಹೇಳಿದ್ದರು. ನನ್ನ ಪರಿಚಯಸ್ತರು ರೋಮ್ ನಿಲ್ದಾಣದಲ್ಲಿ ಕೇವಲ ಅರ್ಧಗಂಟೆ ಕಳೆದಾಗ ಅವರ ಬ್ರೀಫ್ ಕೇಸ್‌ನ್ನೇ ಹೊಡೆದು ಬಿಟ್ಟರಂತೆ. ಅಲ್ಲಿಯ ಕಳ್ಳರು ತಂಡ ತಂಡವಾಗಿ ಕಾರ್ಯನಿರ್ವಹಿಸುತ್ತಾರಂತೆ. ಪರ್ಸ್ ಅಥವಾ ಸೂಟ್‌ಕೇಸ್ ಹೊಡೆದ ಕಳ್ಳ ಅದನ್ನು ಹತ್ತಿರದಲ್ಲೇ ಇರುವ ತಂಡದ ಇನ್ನೊಬ್ಬ ಸದಸ್ಯನಿಗೆ ಕೊಡುತ್ತಾನಂತೆ ಹಾಗೆ ಕ್ಷಣಾರ್ಧದಲ್ಲಿ ಕಳುವಿನ ಮಾಲು ದೂರ ಹೊರಟು ಹೋಗಿರುತ್ತದಂತೆ. ಪೋಲಿಸ್ ಅಧಿಕಾರಿಯಾದ ನಾನು ಕಳ್ಳತನಕ್ಕೆ ಬಲಿಯಾಗಬಾರದು ಎಂದುಕೊಂಡು ಭದ್ರವಾಗಿ ಸೂಟ್‌ಕೇಸ್ ಹಿಡಿದುಕೊಂಡೆ. ರೈಲ್ವೆ ನಿಲ್ದಾಣದ ಬಾಗಿಲಿಗೆ ಬಂದರೂ ಅನಂತಕೃಷ್ಣ ಕಾಣಲೇ ಇಲ್ಲ. ಅಷ್ಟರಲ್ಲಿ ಒಂದಿಬ್ಬರು ಟ್ಯಾಕ್ಸಿ ಡ್ರೈವರ್‌ಗಳು ಟ್ಯಾಕ್ಸಿ ಬೇಕೇ ಎಂದು ಮುಗಿಬಿದ್ದರು. ಅದೃಷ್ಟವಶಾತ್ ದೂರದಲ್ಲಿ ಭಾರತೀಯರೊಬ್ಬರನ್ನು ನೋಡಿದ ಹಾಗಾಯಿತು. ಅವರನ್ನು ಕೇಳೋಣ ಎಂದು ಹತ್ತಿರ ಹೋದರೆ, ಅವರೇ ಅನಂತಕೃಷ್ಣ ಆಗಿದ್ದರು.

ಅನಂತಕೃಷ್ಣ ನಮ್ಮಿಬ್ಬರನ್ನು ಅವರ ಮನೆಗೆ ಕರೆದೊಯ್ದರು. ರಾತ್ರಿ ಊಟ ಮಾಡುವಾಗ ಮರುದಿನ ಬೆಳಿಗ್ಗೆ ಏನೇನು ನೋಡಬೇಕು ಎಂದು ಪಟ್ಟಿ ಮಾಡಿದೆವು. ರೋಮ್ ಒಂದು ದಿನದಲ್ಲಿ ಕಟ್ಟಲಾಗಿಲ್ಲ, ಎಂದು ನಾಣ್ನುಡಿ ಇದೆ. ಆದರೆ ರೋಮ್ ನಗರವನ್ನು ಒಂದೇ ದಿನದಲ್ಲಿ ನೋಡಿ ಮುಗಿಸಬಹುದೆಂದು ಅನಂತ ಕೃಷ್ಣ ಅಂದರು.

ಮಾರನೇ ದಿನ ಬೆಳಿಗ್ಗೆ ತಿಂಡಿ ತಿಂದ ಕೂಡಲೇ ಅನಂತ ಕೃಷ್ಣರ ಪತ್ನಿ ಮಧ್ಯಾಹ್ನದ ಊಟಕ್ಕೆಂದು ಒಂದು ಡಬ್ಬಿಯಲ್ಲಿ ಪುಳಿಯೋಗರೆ, ಮೊಸರನ್ನ ಹಾಕಿ ಕೊಟ್ಟರು. ನಾವು ಬೇಡ ಬೇಡ ಎಂದರೂ, ಈಗಾಗಲೇ ನಿಮಗೆ ಯೂರೋಪಿಯನ್ ಊಟ ತಿಂದು ಸಾಕಷ್ಟು ಬೇಜಾರು ಆಗಿರಬೇಕು. ನಮ್ಮ ಕರ್ನಾಟಕದ ಊಟ ನಿಮಗೆ ಸಿಗಬೇಕಾದರೆ ಇನ್ನೂ ತುಂಬಾ ದಿನವಾಗುತ್ತೆ ಎಂದು ಬಲವಂತದಿಂದ ಊಟದ ಡಬ್ಬಿ ಕೈಗೆ ಕೊಟ್ಟರು. ಅನಂತಕೃಷ್ಣ ನಮ್ಮನ್ನು ನೇರವಾಗಿ ವ್ಯಾಟಿಕನ್ ನಗರಕ್ಕೆ ಕೊಂಡೊಯ್ದು ಅಲ್ಲಿ ವ್ಯಾಟಿಕನ್ ಮ್ಯೂಸಿಯಂ ಮುಂದೆ ಇಳಿಸಿ, ಮೊದಲು ಮ್ಯೂಸಿಯಂ ನೋಡಿ, ಆ ನಂತರ ವ್ಯಾಟಿಕನ್ ನಗರದ ಇತರ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಎಂದು ಹೇಳಿ ಗೈಡ್ ಬುಕ್ ಒಂದನ್ನು ಕೈಗೆ ಕೊಟ್ಟು ಹೊರಟು ಹೋದರು.

ರೋಮ್ ನಗರದ ಮಧ್ಯ ಭಾಗದಲ್ಲಿ ಇದ್ದರೂ ಕ್ಯಾಥೋಲಿಕ್ ಕ್ರಿಶ್ಚಿಯನ್ನರಿಗೆ ಧಾರ್ಮಿಕ ಕ್ಷೇತ್ರವಾಗಿರುವ ವ್ಯಾಟಿಕನ್ ನಗರ ಒಂದು ಸ್ವತಂತ್ರ ರಾಷ್ಟ್ರವೆಂದೇ ಪರಿಗಣಿಸಲ್ಪಡುತ್ತದೆ. ವ್ಯಾಟಿಕನ್ ನಗರದ ವಿಸ್ತೀರ್ಣ ಕೇವಲ 109 ಎಕರೆ ಹಾಗೂ ಅಲ್ಲಿಯ ಜನಸಂಖ್ಯೆ ಒಂದು ಸಾವಿರ ಮಾತ್ರ. ಇಟಲಿ ದೇಶದ ಸರ್ಕಾರ ಹಾಗೂ ಪೋಪ್‌ರ ನಡುವೆ ಆದ ಒಪ್ಪಂದದ ಮೇರೆಗೆ 1929ರಲ್ಲಿ ಈ ಸ್ವತಂತ್ರ ದೇಶ ಅಸ್ತಿತ್ವಕ್ಕೆ ಬಂತು. ವ್ಯಾಟಿಕನ್ ನಗರಕ್ಕೆ ರೋಮನ್ ಕ್ಯಾಥೊಲಿಕ್ ಚರ್ಚಿನ ಮುಖ್ಯಸ್ಥರಾದ ಪೋಪ್ ಪ್ರಮುಖರು.

ರೋಮ್ ನಗರದ ಉತ್ತರ ಭಾಗದಲ್ಲಿರುವ ಈ ನಗರ ವ್ಯಾಟಿಕನ್ ಹಿಲ್ ಎನ್ನುವ ಗುಡ್ಡದ ಮೇಲೆ ಕಟ್ಟಲಾಗಿದ್ದು ಟೈಬರ್ ನದಿಯ ದಂಡೆಯಲ್ಲಿದೆ. ಆರು ಪ್ರಮುಖ ಬಾಗಿಲುಗಳಿರುವ ಈ ನಗರದ ಮುಖ್ಯ ಕಟ್ಟಡಗಳನ್ನು ಕಟ್ಟಲು ಪೋಪರು ಆಗಿನ ಕಾಲದ ಹೆಸರಾಂತ ಶಿಲ್ಪಿಗಳನ್ನೇ ನೇಮಿಸಿಕೊಂಡಿದ್ದರು.

ವ್ಯಾಟಿಕನ್ ಮ್ಯೂಸಿಯಂ ಪೋಪರ ಅರಮನೆ ಇರುವ ಕಟ್ಟಡಗಳ ಸಮುಚ್ಚಯದಲ್ಲಿ ಇದೆ. ಈ ಕಟ್ಟಡ ಸಮುಚ್ಚಯದಲ್ಲೇ ಪೋಪರು ವಾಸಿಸುವ ಮನೆಯಲ್ಲದೆ ರೋಮನ್ ಕ್ಯಾಥೊಲಿಕ್ ಚರ್ಚಿಗೆ ಸಂಬಂಧಪಟ್ಟವರ ಮನೆಗಳು, ಪ್ರಾರ್ಥನಾ ಸ್ಥಳಗಳು ವ್ಯಾಟಿಕನ್ ದೇಶದ ಸರ್ಕಾರಿ ಕಛೇರಿಗಳೂ ಇವೆ.

ವ್ಯಾಟಿಕನ್ ಮ್ಯೂಸಿಯಂನ್ನು ಹಲವಾರು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ವಿಭಾಗದಲ್ಲಿ ಈಜಿಪ್ಟ್ ದೇಶದ ಕಲೆಗಳನ್ನು ಬಿಂಬಿಸುವ ಗ್ರೆಗೋರಿಯನ್ ಮ್ಯೂಸಿಯಂ ಇದೆ. ಎರಡನೇ ಭಾಗ ಎಟ್ರುಸ್ಕನ್ ಕಲೆ ಬಿಂಬಿಸುವ ಮ್ಯೂಸಿಯಂ ಆದರೆ ಮೂರನೇ ಭಾಗದಲ್ಲಿ ಕ್ಲೇಮೆಂಟಿನೋ ಮ್ಯೂಸಿಯಂ ಇದ್ದು ಈ ಮ್ಯೂಸಿಯಂ ನಲ್ಲಿ ಬಹಳ ಪುರಾತನ ವಸ್ತುಗಳು ಇವೆ. ವ್ಯಾಟಿಕನ್ ಮ್ಯೂಸಿಯಂನಲ್ಲಿ ಇಟಲಿಯ ಶ್ರೇಷ್ಠ ಕಲಾವಿದರ ಕಲಾಕೃತಿಗಳು ಇವೆ. ಈ ಮ್ಯೂಸಿಯಂನ ಅತ್ಯಂತ ಹೆಸರು ವಾಸಿಯಾದ ಜಾಗ ಎಂದರೆ ಸೀಸ್ಟೈನ್-ಛಾಪಲ್. ಹೆಸರಾಂತ ಚಿತ್ರಕಾರ

ಮೈಕೇಲ್ ಎಂಜೆಲೋ ಈ ಛಾಪಲ್‌ನ ತಾರಸಿಯ ಮೇಲೆ ಪೇಂಟ್ ಮಾಡಿರುವ ವರ್ಣ ಚಿತ್ರಗಳು ವಿಶ್ವವಿಖ್ಯಾತ. ಈ ಪೇಂಟಿಂಗ್ಸ್‌ಗಳನ್ನು ನೋಡಲೆಂದೇ ಲಕ್ಷ ಗಟ್ಟಲೆ ಜನರು ಇಲ್ಲಿಗೆ ಬರುತ್ತಾರೆ. ವ್ಯಾಟಿಕನ್ ಮ್ಯೂಸಿಯಂನಲ್ಲಿ ಮೈಕೇಲ್ ಎಂಜಲೋನ ಚಿತ್ರಗಳಲ್ಲದೆ ಇಟಲಿಯ ಪ್ರಸಿದ್ಧ ಚಿತ್ರಕಾರ ರ್‍ಯಾಫೆಲ್ ಬಿಡಿಸಿದ ಚಿತ್ರಗಳೂ ಇವೆ.

ಮ್ಯೂಸಿಯಂನಿಂದ ಹೊರಬಂದ ಮೇಲೆ ಪಕ್ಕದಲ್ಲೇ ಇರುವ ವಿಶ್ವ ವಿಖ್ಯಾತ ಸೇಂಟ್ ಪೀಟರ್ ಬ್ಯಾಸಿಲಿಕಾಗೆ ಹೋದೆವು. 15 ರಿಂದ 17ನೇ ಶತಮಾನಗಳ ಮಧ್ಯದಲ್ಲಿ ಕಟ್ಟಲಾದ ಈ ಬೃಹತ್ ದೇವಾಲಯ ಪ್ರಸಿದ್ಧ ಕಲಾವಿದರಾದ ಬ್ರಾಮಂಟೇ, ಮೈಕೇಲ್ ಎಂಜೆಲೋ ಮತ್ತು ಬರ್ನಿನಿ ಇವರಿಂದ ವಿನ್ಯಾಸಗೊಳಿಸಲ್ಪಟ್ಟಿದೆ. 1506ರಲ್ಲಿ ವಾಸ್ತು ಶಿಲ್ಪಿ ಡೊನಾಟೋ - ಬ್ರಾ ಮಂಟೆ ಈ ದೇವಾಲಯವನ್ನು ರೂಪಿಸಿದ. ಆದರೆ ಕಟ್ಟಡ ಪೂರ್ಣಗೊಳ್ಳುವ ಮುಂಚೆ ಆತ ನಿಧನ ಹೊಂದಿದ್ದರಿಂದ ಮೈಕೇಲ್ ಎಂಜೆಲೋ ನಿರ್ಮಾಣದ ಉಸ್ತುವಾರಿ ವಹಿಸಿಕೊಂಡ. ಮತ್ತೆ 1546ರಲ್ಲಿ ನಿರ್ಮಾಣಕಾರ್ಯ ಪುನರಾರಂಭವಾಯಿತು.

ರೋಮನ್ ಕ್ಯಾಥೋಲಿಕ್ ಕ್ರಿಶ್ಚಿಯನ್ನರಿಗೆ ಈ ದೇವಾಲಯ ಅತ್ಯಂತ ಪವಿತ್ರವಾದ ಸ್ಥಳ. ಬ್ಯಾಸಲಿಕಾ ಗ್ರೀಕ್ ಕ್ರಾಸ್ ಮಾದರಿಯಲ್ಲಿ ವಿನ್ಯಾಸಗೊಳಿಸಲಾಗಿದ್ದು ಈ ಕಟ್ಟಡದ ಗೋಳಾಕಾರದ ಗೋಪುರವನ್ನೇ ಹಲವಾರು ಚರ್ಚ್‌ಗಳ ವಿನ್ಯಾಸಕಾರರು ಅನುಸರಣೆ ಮಾಡಿದರು ಎಂದು ಹೇಳಲಾಗುತ್ತದೆ.

ಸೇಂಟ್ ಪೀಟರ್ ಬ್ಯಾಸಿಲಿಕಾ ಎದುರುಗಡೆ ಇರುವ ವಿಶಾಲವಾದ ಚೌಕಕ್ಕೆ ಸೇಂಟ್ ಪೀಟರ್ ಚೌಕ ಎಂದು ಕರೆಯುತ್ತಾರೆ. ಈ ಚೌಕವನ್ನು ಬರ್ನಿನಿ ವಿನ್ಯಾಸಗೊಳಿಸಿದ ಎಂದೂ ತಿಳಿಸುತ್ತಾರೆ. ಸೇಂಟ್ ಪೀಟರ್ಸ್ ಚೌಕವು ಬಹಳ ವಿಶಾಲವಾದ ಮೈದಾನದಂತಹ ಪ್ರದೇಶವಾಗಿದ್ದು. ಸಾವಿರಾರು ಜನರು ಒಮ್ಮೆಲೇ ಇಲ್ಲಿ ಸೇರಲು ಸಾಧ್ಯವಿದೆ. ಕ್ರಿಸ್‌ಮಸ್ ವೇಳೆಯಲ್ಲಿ ಪೋಪರು ತಮ್ಮ ಸಂದೇಶವನ್ನು ಕೊಡುವಾಗ ಇಲ್ಲಿ ಭಕ್ತಾದಿಗಳು ನೆರೆಯುತ್ತಾರೆ ಎಂದು ನಮಗೆ ತಿಳಿಸಿದರು.

ನಾವು ವ್ಯಾಟಿಕನ್‌ಗೆ ಹೋದಾಗ ಧರ್ಮ ಗುರುಗಳಾದ ಪೋಪ್ ಅವರ ದರ್ಶನ ಪಡೆಯಬೇಕೆಂದು ಆಕಾಂಕ್ಷೆ ಇದ್ದರೂ ಅದು ಸಫಲವಾಗಲಿಲ್ಲ.

ಬ್ಯಾಸಿಲಿಕಾ ಮತ್ತು ಮ್ಯೂಸಿಯಂ ನೋಡುವುದರಲ್ಲೇ ವೇಳೆ 12 ಗಂಟೆಯಾಗಿತ್ತು. ಸೆಂಟ್ ಪೀಟರ್ಸ್ ಚೌಕದ ಒಂದು ಮೆಟ್ಟಿಲ ಮೇಲೆ ಕುಳಿತು ನಾವು ತಂದಿದ್ದ ಪುಳಿಯೋಗರೆ ಮೊಸರನ್ನ ತಿಂದು ರೋಮ್‌ನ ಇತರ ಪ್ರೇಕ್ಷಣೀಯ ಸ್ಥಳ ನೋಡಲು ಸಿಟಿ ಬಸ್ ಹತ್ತಿದೆವು. ಈ ಊರಿನ ಸಿಟಿ ಬಸ್‌ನ ವಿಶೇಷವೆಂದರೆ ಒಂದು ಟಿಕೇಟ್ ಪಡೆದರೆ ಮುಂದಿನ ನಾಲ್ಕು ಗಂಟೆಗಳ ಕಾಲ ಯಾವ ಬಸ್‌ನಲ್ಲಿ ಎಲ್ಲಿ ಬೇಕಾದರೂ ಸಂಚರಿಸಬಹುದು. ನಮ್ಮ ಊರಿನ ಬಿಟಿಎಸ್ ಕೂಡ ಈ ರೀತಿ ಏಕೆ ಮಾಡುವುದಿಲ್ಲ ಎಂದು ಕೊಂಡು ಬಸ್‌ನಲ್ಲಿ ಆಸೀನರಾದೆವು.

5

ರೋಮ್

ರೋಮ್ ನಗರದಲ್ಲಿ ನಾವು ಮೊದಲು ನೋಡಬೇಕೆಂದು ಇಷ್ಟಪಟ್ಟಿದ್ದು ಅಲ್ಲಿಯ ಚರಿತ್ರಾರ್ಹ ಸ್ಥಳಗಳನ್ನು. ಈ ಎಲ್ಲಾ ಸ್ಥಳಗಳನ್ನು ಒಂದೇ ದಿನದಲ್ಲಿಯೇ ನೋಡಿ ಮುಗಿಸಬಹುದು. ಏಕೆ ಗೊತ್ತೇ, ಇವೆಲ್ಲವೂ ಸುಮಾರು ನಾಲ್ಕು ಕಿ.ಮೀ. ಚದರ ಪ್ರದೇಶದಲ್ಲೇ ಇದೆ. ಕಾರಣವೆಂದರೆ ರೋಮ್ ನಗರವನ್ನು ಕ್ರಿಸ್ತ ಪೂರ್ವ 753ರಲ್ಲಿ ಕಟ್ಟಲಾರಂಭಿಸಿದಾಗ ಎಲ್ಲಾ ಕಟ್ಟಡಗಳನ್ನು ಟೈಬರ್ ನದಿಯ ಎಡ ದಂಡೆಯಲ್ಲೇ, ಅದೂ ಏಳು ಬೆಟ್ಟಗಳ ಮೇಲೆ ಕಟ್ಟಿದರು. ಈ ಏಳು ಬೆಟ್ಟಗಳ ಸುತ್ತಲೂ ಒಂದು ಭಾರೀ ಗೋಡೆ ಕಟ್ಟಿದರು. ಇದರ ಹೆಸರು ಆರೇಲಿಯನ್ ಗೋಡೆ ಅಂತ. ಈ ಗೋಡೆಯ ಒಳಗಡೆ ಇರುವ ಪ್ರದೇಶದಲ್ಲೇ ಎಲ್ಲಾ ಮುಖ್ಯ ಪ್ರೇಕ್ಷಣೀಯ ಸ್ಥಳಗಳೂ ಇದೆ.

ವ್ಯಾಟಿಕನ್ ನಗರದಿಂದ ಪ್ಲಾಜಾನೆವೋನಾ ಎಂಬ ಜಾಗ ಬಂದ ಕೂಡಲೇ ಇಳಿದು ಬಿಡಿ. ಅಲ್ಲಿಂದ ಎಲ್ಲಾ ಚರಿತ್ರಾರ್ಹ ಸ್ಥಳಗಳನ್ನು ನಡೆದುಕೊಂಡೇ ನೋಡಬಹುದು ಎಂದಿದ್ದರು ಅನಂತಕೃಷ್ಣ. ಪ್ಲಾಜಾನೆವೋನಾ ಒಂದು ದೊಡ್ಡ ಚೌಕ. ಇಲ್ಲಿ ಮೂರು ಹೆಸರಾಂತ ನೀರಿನ ಕಾರಂಜಿಗಳಿವೆ. ಇದರಲ್ಲಿ ಮುಖ್ಯವಾದದ್ದು ನಾಲು ನದಿಗಳ ಕಾರಂಜಿ. ಇದನ್ನು ಇಟಲಿಯ ಹೆಸರಾಂತ ಶಿಲ್ಪಿ ಬರ್ಮಿನಿ ನಿರ್ಮಿಸಿದ್ದಾನೆ. ಎರಡನೆಯ ಕಾರಂಜಿಯ ಹೆಸರು ಟ್ರೆವಿ ಫೌಂಟನ್, ಹದಿನೆಂಟನೆಯ ಶತಮಾನದಲ್ಲಿ ಕಟ್ಟಲ್ಪಟ್ಟ ಈ ಕಾರಂಜಿಯು ಬಾರೋಕ್ ಶೈಲಿಯಲ್ಲಿದ್ದು ಇಲ್ಲಿ ಕುದುರೆಗಳ ಹಾಗೂ ದೇವತೆಗಳ ಮೂರ್ತಿಗಳು ಇದೆ. ಸಮುದ್ರ ದೇವತೆ ನೆಪ್ಚೂನ್ ಎರಡು ಕುದುರೆಗಳ ತನ್ನ ರಥವನ್ನು ನೀರಿನ ಮೇಲೆ ಚಲಿಸಲು ತಯಾರಾಗಿರುವಂತೆ ಕಲ್ಪಿಸಲಾಗಿದೆ. ಇಲ್ಲಿಯ ಸಂಪ್ರದಾಯದಂತೆ ಯಾರು ಈ ಕಾರಂಜಿಯಲ್ಲಿ ನಾಣ್ಯಗಳನ್ನು ಹಾಕುತ್ತಾರೋ ಅವರ ಇಚ್ಛೆ ಪೂರ್ಣವಾಗುತ್ತದಂತೆ ಮತ್ತೆ ಅವರು ಪುನಹ ರೋಮ್‌ಗೆ ಬರ್ತಾರಂತೆ.

ಪ್ಲಾಜಾನೆವೋನಾದಿಂದ ಸ್ವಲ್ಪ ಮುಂದೆ ಹೋದಕೂಡಲೇ ಪ್ಲಾಜಾ ಡಿ ಸ್ಪಾನ್ಯಾ ಅನ್ನುವ ಚೌಕವಿದೆ. ಈ ಚೌಕದಿಂದ ಸ್ವಲ್ಪ ದೂರದಲ್ಲಿ ಇರುವ ಗುಡ್ಡದ ಮೇಲೆ ಟ್ರನಿಟಾ ಡೈ ಮಾಂಟಿ ಹೆಸರಿನ ಹದಿನೈದನೇ ಶತಮಾನದ ಚರ್ಚ್ ಇದೆ. ಈ ಚರ್ಚ್‌ಗೆ ಹೋಗಲು 18ನೇ ಶತಮಾನದಲ್ಲಿ ಮೆಟ್ಟಿಲುಗಳನ್ನು ಕಟ್ಟಿದರಂತೆ. ಈ ಮೆಟ್ಟಿಲುಗಳಿಗೇ ಸ್ಪಾನಿಷ್ ಮೆಟ್ಟಿಲುಗಳು ಎಂದು ಕರೆಯುತ್ತಾರೆ. ಇದರಿಂದಲೇ ಈ ಜಾಗಕ್ಕೆ ಪ್ಲಾಜಾ ಡಿ ಸ್ಪಾನ್ಯಾ ಎಂದು ಹೆಸರು ಬಂತಂತೆ.

ಈ ಎರಡು ಪ್ಲಾಜಾಗಳು ಹಾಗೂ ಅವುಗಳ ಸುತ್ತಮುತ್ತಲಿನ ಕಟ್ಟಡಗಳು ಎರಡು ಶತಮಾನಗಳ ಹಿಂದಿನ ಶೈಲಿಯಲ್ಲೇ ಇವೆ. ರಸ್ತೆಗೆ ಕೂಡಾ ಕಲ್ಲುಗಳನ್ನು ಜೋಡಿಸಿದ್ದಾರೆಯೇ ಹೊರತು ಡಾಂಬರು ಅಥವಾ ಸಿಮೆಂಟ್ ರಸ್ತೆ ಮಾಡಿಲ್ಲ. ಇದಕ್ಕೆ ಕಾಬಲ್ಡ್ ರಸ್ತೆ (Cobbled Road) ಎನ್ನುತ್ತಾರೆ.

ಇಲ್ಲೇ ಹತ್ತಿರದಲ್ಲೇ ಇನ್ನೊಂದು ಚರಿತ್ರಾರ್ಹ ಕಟ್ಟಡವಿದೆ. ಇದಕ್ಕೆ ಪಾಂಥಿಯಾನ್ ಎನ್ನುತ್ತಾರೆ. ಕ್ರಿ.ಪೂ. 27ರಲ್ಲಿ ಕಟ್ಟಿದ ಈ ವೃತ್ತಾಕಾರದ ಕಟ್ಟಡವನ್ನು ಕ್ರಿ.ಶ. ಎರಡನೇ ಶತಮಾನದಲ್ಲಿ ಪುನರ್‌ನಿರ್ಮಾಣ ಮಾಡಿದರಂತೆ. ಇಲ್ಲಿ ಕೆಲವು ಪುರಾತನ ಗೋರಿಗಳೂ ಇವೆ. ಇಲ್ಲಿಯ ಸಂದರ್ಶಕರ ಪುಸ್ತಕದಲ್ಲಿ ನನ್ನ ಹೆಸರನ್ನು ಬರೆದು ಹೊರಬಂದೆ. ಇಲ್ಲಿಂದ ಸ್ವಲ್ಪ ದೂರ ಹೋದರೆ ಒಂದು ದೊಡ್ಡ ಕಟ್ಟಡವಿತ್ತು. ಕಟ್ಟಡದ ಮುಂದೆ ಹಲವಾರು ಶಸ್ತ್ರಸಜ್ಜಿತ ಪೊಲೀಸರು ಇದ್ದರು. ಇದೇನು ಕಟ್ಟಡ ಎಂದು ಪೊಲೀಸನೊಬ್ಬನನ್ನು ಕೇಳಿದೆ. ಇದೇ ನಮ್ಮ ಪ್ರಧಾನಮಂತ್ರಿಗಳ ಕಛೇರಿ ಎಂದ. ನಮ್ಮ ಭಾರತದಲ್ಲಿ ಪ್ರಧಾನಿಯ ಮನೆ ಹತ್ತಿರದಲ್ಲಿ ಸುಳಿಯಲೇ ಆಗೊಲ್ಲ, ನಿಮ್ಮಲ್ಲಿ ಇಷ್ಟು ಸಮೀಪ ಬರಲು ಬಿಡ್ತೀರೆಲ್ಲಾ ಅಂದೆ. ಆತ ನಕ್ಕ.

ಎರಡು ಫರ್ಲಾಂಗ್ ದೂರದಲ್ಲಿ ಪ್ಲಾಜಾ ವೆನಿಜಿಯಾ ಇದೆ. ಈ ಜಾಗವೇ ರೋಮ್‌ನಗರದ ಮಧ್ಯ ಭಾಗ. ಇಲ್ಲಿ ಸಂಯುಕ್ತ ಇಟಲಿಯ ಮೊದಲ ದೊರೆ ವಿಕ್ಟರ್ ಇಮ್ಯಾನುಯೆಲ್ - 2 ಈತನ ಮೂರ್ತಿಯನ್ನು ಸ್ಥಾಪಿಸಿದ್ದು ಇದನ್ನು 1895 ರಿಂದ 1911ರ ಒಳಗೆ ನಿರ್ಮಿಸಿದರಂತೆ. ಈ ಮೂರ್ತಿಯ ಹಿಂದುಗಡೆ ಇರುವ ಗುಡ್ಡದ ಮೇಲೆ ಡೀ ಫೋರಿ ಇಂಪಿರಿಯಾಲಿ ಎನ್ನುವ ಜಾಗವಿದೆ. ಇದೇ ಜಾಗದ ಬಳಿಯೇ ವಿಖ್ಯಾತ ಬೆನ್‌ಹರ್ ಚಿತ್ರದ ರಥಗಳ ರೇಸ್ ಚಿತ್ರೀಕರಣವಾಯಿತು ಅಂತ ಅಲ್ಲಿನ ಜನ ಹೇಳಿದರು.

ನಾವು ಅಲ್ಲಿಂದ ವಿಶ್ವವಿಖ್ಯಾತ ರೋಮನ್ ಫೋರಮ್ ನೋಡಲು ಹೋದಾಗ ಒಂದು ಘಟನೆ ನಡೆಯಿತು. ಒಬ್ಬ ತುಂಬು ಗರ್ಭಿಣಿ ಹಾಗೂ ಆಕೆಯ ಜತೆ ಇದ್ದ ಯುವತಿ ನನ್ನನ್ನು ತಡೆದು ಬಂದು ವೃತ್ತಪತ್ರಿಕೆ ತೋರಿಸಿ ಏನೋ ಹೇಳಲು ಹೊರಟರು. ನಾನು ಅವರೊಡನೆ ಮಾತನಾಡಲು ಹೊರಟಾಗ ಆ ಯುವತಿ ನನ್ನನ್ನು ಬಲವಾಗಿ ಹಿಡಿದುಕೊಂಡು ಬಿಟ್ಟಳು! ನಾನು ಕೈ ಕೊಡವಲು ಹೋದರೂ ಆಕೆ ನನ್ನನ್ನು ಬಿಡುತ್ತಲೇ ಇಲ್ಲ. ಅಕ್ಕಪಕ್ಕದ ಜನ ನಮ್ಮನ್ನೇ ನೋಡ್ತಿದ್ದಾರೆ ಎನಿಸಿತು. ಆ ಮೇಲೆ ನಾನು ಧೈರ್ಯವಾಗಿ ಆ ಯುವತಿಯನ್ನು ನೂಕಿ ಓಡಿ ಹೋದೆ. ಏಕೆ ಹೀಗಾಯಿತು ಎಂದು ಗೊತ್ತಾಗಲಿಲ್ಲ. ರಾತ್ರಿ ಅನಂತಕೃಷ್ಣಗೆ ವಿಷಯ ತಿಳಿಸಿದಾಗ ಅವರು ನಕ್ಕು "ನೀವು ತುಂಬಾ ಅದೃಷ್ಟವಂತರು. ನಿಮ್ಮನ್ನು ತಡೆದವರು ಜಿಪ್ಸಿಗಳು, ಅವರು ಯಾರಾನ್ನಾದರೂ ತಡೆದರೆ ಅವರ ಪರ್ಸ್, ಕ್ಯಾಮರಾ ಅಥವಾ ವಾಚ್ ಹೊಡೆಯದೇ ಬಿಡುವುದಿಲ್ಲ. ಅವರನ್ನು ತಳ್ಳಿ ಓಡಿ ಬಂದು ಒಳ್ಳೆ ಕೆಲಸ ಮಾಡಿದಿರಿ. ಬೇರೆ ಬೇರೆ ಪ್ರಾಂತಗಳಿಂದ ರೋಮಿಗೆ ವಲಸೆ ಬಂದಿರುವ ಈ ಅಲೆಮಾರಿ ಜನಾಂಗ ಪ್ರವಾಸಿಗರನ್ನು ದೋಚುವ ಕಸುಬೇ ಮಾಡಿಕೊಂಡಿದೆ" ಎಂದರು.

ರೋಮನ್ ಫೋರಮ್ ಎಂದರೆ ಉತ್ಖನನ (excavation) ಮಾಡಿದ ಹಂಪಿಯ ಅವಶೇಷಗಳಂತೆ ಕಂಡು ಬರುವ ಹಳೆಯ ಕಾಲದ ಕಟ್ಟಡಗಳು. ಶತಮಾನಗಳ ಹಿಂದೆ ರೋಮ್ ನಗರ ಹೇಗೆ ಇತ್ತು ಎಂದು ಇಲ್ಲಿ ನಾವು ನೋಡಬಹುದು. ಆ ಅವಶೇಷಗಳ ಮಧ್ಯೆ ನಾವು

ನಡೆಯುತ್ತಾ 'ಜ್ಯೂಲಿಯಸ್ ಸೀಸರ್ ಮುಂತಾದವರು ಓಡಾಡಿದ ಜಾಗಗಳಲ್ಲೇ ನಾವೂ ನಡೆದೆವಲ್ಲಾ ಎಂದು ಖುಷಿ ಪಟ್ಟೆವು.

ರೋಮನ್ ಫೋರಮ್ ಪಕ್ಕದಲ್ಲಿ ಇರುವುದೇ ವಿಶ್ವವಿಖ್ಯಾತ ಕೊಲೋಸಿಯಮ್. ಈ ವೃತ್ತಾಕಾರದ ಬೃಹತ್ ಕಟ್ಟಡ ವಿಶ್ವದ ಅತಿ ಖ್ಯಾತ ವಾಸ್ತುಶಿಲ್ಪಗಳಲ್ಲಿ ಒಂದು. ಕ್ರಿ.ಶ. 70 ರಿಂದ 82ರ ಮಧ್ಯದಲ್ಲಿ ಕಟ್ಟಲಾದ ಕೊಲೋಸಿಯಮ್‌ನ ಕೆಲಭಾಗಗಳು ಕುಸಿದಿವೆ. ಈ ಕಟ್ಟಡದ ಮೊದಲ ಹೆಸರು ಫ್ಲೇವಿಯನ್ (Flavian) ಆಂಫಿಥೀಯೇಟರ್. ಇಲ್ಲಿ ಹಲವಾರು ರೀತಿಯ ಪಂದ್ಯಗಳು, ಕುಸ್ತಿಗಳು ಇತ್ಯಾದಿ ನಡೆಸಲಾಗುತ್ತಿದ್ದು ಸುತ್ತಲೂ ಪ್ರೇಕ್ಷಕರು ಕುಳಿತುಕೊಳ್ಳುತ್ತಿದ್ದರಂತೆ. ಈ ಕಟ್ಟಡದ ಸನಿಹದಲ್ಲೇ ದೊರೆ ನೀರೋನ (ರೋಮ್ ಹತ್ತಿ ಉರಿದಾಗ ನೀರೋ ಪಿಟೀಲು ಬಾರಿಸುತ್ತಾ ಇದ್ದ ಎನ್ನುವ ನುಡಿ ಕೇಳಿದ್ದೀರಲ್ಲವೇ?) ಬೃಹದಾಕಾರದ ಮೂರ್ತಿ ಇತ್ತಂತೆ. ಈ ಬೃಹತ್ ಮೂರ್ತಿಯಿಂದಲೇ ಕಟ್ಟಡಕ್ಕೂ ಬೃಹತ್ ಕಟ್ಟಡ, ಕೊಲೋಸಿಯಮ್, ಎಂಬ ಹೆಸರು ಹುಟ್ಟಿತಂತೆ.

ರೋಮ್ ಅರಸರ ಕಾಲದಲ್ಲಿ ಕೊಲೋಸಿಯಮ್‌ನಲ್ಲಿ ಕತ್ತಿವರಸೆ ತುಂಬಾ ನಡೆಯುತ್ತಿತ್ತಂತೆ. ಇಂದಿಗೂ ಕೂಡಾ ಹಲವಾರು ಜನ ಗ್ಲೇಡಿಯೇಟರ್‌ಗಳಂತೆ ವೇಷ ಧರಿಸಿ ಕಬ್ಬಿಣದ ಶಿರಸ್ತ್ರಾಣ, ಕಾಲು ಕೈಗಳಿಗೆ ಕಬ್ಬಿಣದ ಕವಚ ಧರಿಸಿ ಕೈಯಲ್ಲಿ ಕತ್ತಿ ಹಿಡಿದುಕೊಂಡು ಪ್ರವಾಸಿಗರ ಜತೆ ಫೊಟೋ ತೆಗೆಸಿಕೊಳ್ಳುತ್ತಾರೆ. ಇವರ ಜತೆ ನಾವು ನಮ್ಮ ಕ್ಯಾಮರಾದಲ್ಲೇ ಫೋಟೋ ಕ್ಲಿಕ್ಕಿಸಿದರೆ ಅವರಿಗೆ ಐದು ಡಾಲರ್ (250ರೂ) ತೆರಬೇಕು.

ಕೊಲೋಸಿಯಮ್ ನೋಡುವ ವೇಳೆಗೆ ಸಂಜೆಯಾಗಿತ್ತು. ನಾವು ನೋಡಬೇಕಾದ ಸ್ಥಳಗಳ ಪಟ್ಟಿ ಇನ್ನೂ ಇತ್ತು. ನನ್ನ ಹೆಂಡತಿ "ನನಗೆ ನಡೆದೂ ನಡೆದೂ ಕಾಲು ನೋವು, ಇನ್ನು ಎಲ್ಲಿಗೂ ನಡೆದುಕೊಂಡು ಬರುವುದಿಲ್ಲ" ಎಂದು ಅಲ್ಲೇ ಕಲ್ಲು ಬೆಂಚಿನ ಮೇಲೆ ಕುಳಿತು ಸತ್ಯಾಗ್ರಹ ನಡೆಸಿದಳು. "ಇನ್ನು ಮೂರು ಪ್ರಮುಖ ಜಾಗಗಳಿವೆ. ಒಂದು ಇಟಲಿ ದೇಶದ ಅಧ್ಯಕ್ಷರು ವಾಸಿಸುವ ಅರಮನೆ ಕುರಿನಾಲ್ ; ಎರಡು ಕ್ಯಾಟಿಕೂಂಬ್, ಅಂದರೆ ಪೂರ್ವಕಾಲದ ಕ್ರೈಸ್ತರು ಇರುತ್ತಿದ್ದ ಸುರಂಗ ಮಾರ್ಗ - ಈಗ ಇವುಗಳಲ್ಲಿ ಗೋರಿಗಳು ಇದೆಯಂತೆ; ಹಾಗೂ ಮೂರು ಕ್ಯಾರಕಲ್ಲಾ ಸ್ನಾನಗೃಹ - 217ನೇ ಇಸವಿಯಲ್ಲಿ ಇದನ್ನು ಕಟ್ಟಿದರಂತೆ, ಈಗ ಇಲ್ಲಿ ಸಂಗೀತ ಕಾರ್ಯಕ್ರಮಗಳು ನಡೆಯುತ್ತವಂತೆ" ಎಂದೆ.

"ಕಳೆದ ಒಂದು ವಾರದಲ್ಲಿ ಸಾಕಷ್ಟು ಅರಮನೆ ನೋಡಿದ್ದೇನೆ, ವಿಯನ್ನಾದಲ್ಲಿ ಒಪೆರಾ ಹೌಸ್ ನೋಡಾಯಿತು ಹಾಗೂ ನನಗೆ ಗೋರಿಗಳಿರುವ ಸುರಂಗ ಮಾರ್ಗ ನೋಡಲು ಹೆದರಿಕೆ. ಬೆಳಿಗ್ಗೆ ಏಳೂವರೆ ಗಂಟೆಯಿಂದ ಇಲ್ಲಿಯವರೆಗೆ ಬರೀ ನಡೆಸುತ್ತಾ ಇದ್ದೀರಿ. ನಾನು ಎಲ್ಲಿಗೂ ಬರೋದಿಲ್ಲ" ಅಂದಳು. ನನಗೂ ಕಾಲು ತುಂಬಾ ನೋಯುತ್ತಿತ್ತು. ಅಲ್ಲೇ ಹತ್ತಿರದ ಟೆಲಿಫೋನ್ ಬೂತಿನಿಂದ ಅನಂತಕೃಷ್ಣಗೆ ಫೋನ್ ಮಾಡಿದೆ. ಹದಿನೈದು ನಿಮಿಷದಲ್ಲೇ ಅವರು ಕಾರಿನಲ್ಲಿ ಬಂದರು.

ಕಾರಲ್ಲಿ ಕೂತ ಕೂಡಲೇ 'ಏನೇನು ನೋಡಿದಿರಿ' ಅಂದರು. 'ನಿಮ್ಮ ಪಟ್ಟಿಯಲ್ಲಿನ ಮೂರು ಜಾಗ ನೋಡಲಿಲ್ಲ' ಎಂದೆ. 'ಪರವಾಗಿಲ್ಲ ಈಗ ನಾನು ಕಾರಿನಲ್ಲಿ ಕುರಿನಾಲ್ ಅರಮನೆ ಹೊರಗಿನಿಂದ ತೋರಿಸ್ತೀನಿ. ಮುಂದಿನ ಸಲ ಬಂದಾಗ ನೀವು ಉಳಿದ ಜಾಗ ನೋಡಿ. ನೀವು ಈ ಊರಿನ ಹೆಸರಾಂತ ಮ್ಯೂಸಿಯಂಗಳನ್ನು ನೋಡಲಿಲ್ಲ, 1960ರಲ್ಲಿ ಇಲ್ಲಿ ಒಲಂಪಿಕ್ ಕ್ರೀಡೆಗಳು ನಡೆದಾಗ

ಕಟ್ಟಿದ ಕಟ್ಟಡಗಳನ್ನು ನೋಡಿಲ್ಲ, ಸೇಂಟ್ ಪಾಲ್ ಬ್ಯಾಸಿಲಿಕಾ ನೋಡಿಲ್ಲ. ಮೋಸಸ್ ಎನ್ನುವ ವಿಖ್ಯಾತ ಶಿಲ್ಪಿ ಕೆತ್ತಿರುವ ಮೈಕೆಲ್ ಏಂಜಿಲೋ ಮೂರ್ತಿ ನೋಡಿಲ್ಲ. ವಿಶ್ವಸಂಸ್ಥೆಯ ಅಂಗ ಸಂಸ್ಥೆಯಾದ ಎಫ್.ಎ.ಓ. ಕಟ್ಟಡಗಳನ್ನು ನೋಡಿಲ್ಲ' ಎಂದರು.

"ಹೌದು ರೀ, ನಾನು ಟ್ರೆವಿ ಫೌಂಟನ್‌ನಲ್ಲಿ ಒಂದು ರೂಪಾಯಿ ನಾಣ್ಯ ಹಾಕಿದೀನಿ. ಮತ್ತೆ ಈ ಊರಿಗೆ ಬರಲೇ ಬೇಕು. ಆಗ ನೀವು ಈಗ ಹೇಳಿದ ಎಲ್ಲಾ ಜಾಗಗಳನ್ನೂ ನೋಡ್ತೀವಿ. ಅಂತೂ ನಾವು ಕಾಲ್ನಡಿಗೆಯಲ್ಲೇ ಒಂದೇ ದಿನ ರೋಮ್‌ನ ಬಹುತೇಕ ಸ್ಥಳಗಳನ್ನು ನೋಡಿ ವಿಶ್ವದಾಖಲೆ ಸ್ಥಾಪಿಸಿದ್ದೇವೆ" ಎಂದೆ.

ಹೊಟ್ಟೆ ತುಂಬಾ ನಕ್ಕ ಅನಂತಕೃಷ್ಣ ಕಾರನ್ನು ತಮ್ಮ ಮನೆಯತ್ತ ಓಡಿಸಿದರು.

6 ಫ್ಲಾರೆನ್ಸ್

ನಾವು ಫ್ಲಾರೆನ್ಸ್‌ಗೆ ಹೊರಡಲು ರೋಮ್ ರೈಲ್ವೇ ನಿಲ್ದಾಣಕ್ಕೆ ಬಂದಾಗ ರೈಲು ಆಗಲೇ ಬಂದು ನಿಂತಿತ್ತು. ರೋಮ್‌ನಿಂದ ಫ್ಲಾರೆನ್ಸ್‌ವರೆಗಿನ ಪ್ರಯಾಣ ಕೇವಲ ಎರಡು ಗಂಟೆಗಳಾದ್ದರಿಂದ ಈ ಎರಡು ನಗರಗಳ ಮಧ್ಯೆ ಪ್ರಯಾಣಕ್ಕೆ ಬೇರೆ ಟಿಕೇಟ್ ಖರೀದಿಸಲು ನಿರ್ಧರಿಸಿದೆ. ಈಗಾಗಲೇ ಹೇಳಿದಂತೆ ಯೂರೋ ರೈಲ್ವೇ ಪಾಸ್ ಏಳು ಅಥವಾ ಹತ್ತು ದಿನಗಳ ಸೀಸನ್ ಟಿಕೇಟ್. ಈ ಟಿಕೇಟ್‌ನ ಮೇಲೆ ಮಧ್ಯ ರಾತ್ರಿ 12 ಘಂಟೆಯಿಂದ ಮುಂದಿನ ಮಧ್ಯರಾತ್ರಿವರೆಗೂ ಎಲ್ಲಿಗೆ ಬೇಕಾದರೂ ಎಷ್ಟು ಸಲ ಬೇಕಾದರೂ ಓಡಾಡಬಹುದು. ಆಗ ಒಂದು ದಿನದ ಕಡಿತ ಆಗುತ್ತದೆ, ಒಂದು ವೇಳೆ ಒಂದು ದಿನ ಬರೀ ಒಂದು ಗಂಟೆ ಪ್ರಯಾಣ ಮಾಡಿ ಮಾರನೆಯ ದಿನದವರೆಗೂ ಪ್ರಯಾಣ ಮಾಡದಿದ್ದರೂ ಒಂದು ದಿನದ ಕಡಿತ. ನಾವು ರೋಮ್‌ನಿಂದ ಫ್ಲಾರೆನ್ಸ್‌ಗೆ ಪ್ರಯಾಣ ಮಾಡಲು ರೈಲ್ವೇ ಪಾಸ್ ಉಪಯೋಗ ಮಾಡಿದರೆ ಹತ್ತಿರದ ಪ್ರಯಾಣಕ್ಕೆ ಪಾಸ್ ನಷ್ಟ ಆಗುವುದಲ್ಲಾ ಎನ್ನುವ ಉದ್ದೇಶದಿಂದ ರೋಮ್ - ಫ್ಲಾರೆನ್ಸ್ ಪ್ರಯಾಣಕ್ಕೆ ಬೇರೆ ಟಿಕೇಟ್ ಖರೀದಿಸಿದೆ. ನಾವು ಟಿಕೇಟ್ ಖರೀದಿಸಿ ರೈಲು ಹತ್ತುವಷ್ಟರಲ್ಲಿ ಆ ರೈಲು ಚಲಿಸಲಾರಂಭಿಸಿತು. ಐದು ನಿಮಿಷದ ತರುವಾಯ ಟಿ.ಟಿ. ಬಂದು ಟಿಕೇಟ್ ಕೇಳಿದ. ನಾನು ಟಿಕೇಟ್ ತೋರಿಸಿದೆ. ಆತ ಈ ಟಿಕೇಟ್ ಅನ್ನು ಇಂದಿನ ಪ್ರಯಾಣಕ್ಕೆ ವ್ಯಾಲಿಡೇಟ್ ಮಾಡಿಲ್ಲ ಹೀಗಾಗಿ ಫೈನ್ ಕಟ್ಟಿ ಎಂದ. ನನಗೆ ಅರ್ಥವಾಗಲಿಲ್ಲ. ಆ ನಂತರ ಅವನು ವಿವರಿಸಿದ್ದೇನೆಂದರೆ, ರೈಲ್ವೇ ನಿಲ್ದಾಣದಲ್ಲಿ ಪಡೆದ ಟಿಕೇಟನ್ನು ಒಂದು ತಿಂಗಳವರೆಗೆ ಉಪಯೋಗ ಮಾಡಬಹುದಾದ್ದರಿಂದ ನಾವು ರೈಲು ಹತ್ತುವ ಪ್ಲಾಟ್ ಫಾರ್ಮ್‌ನಲ್ಲಿರುವ ಮಿಷಿನ್‌ಗೆ ಆ ಟಿಕೇಟನ್ನು ಹಾಕಿದರೆ ಅಂದಿನ ದಿನಾಂಕಕ್ಕೆ ಆ ಟಿಕೇಟ್ ಉಪಯೋಗ ಮಾಡಬಹುದೆಂದು ಮಿಷಿನ್ ಬರೆಯುತ್ತದಂತೆ. ಈ ರೀತಿ ವ್ಯಾಲಿಡೇಟ್ ಮಾಡಿಕೊಳ್ಳದಿದ್ದರೆ ಆ ಟಿಕೇಟನ್ನು ಮರು ಉಪಯೋಗಕ್ಕಾಗಿ ಬಳಸಲು ಉದ್ದೇಶಿಸಿದ್ದಾನೆ ಎನ್ನುವ ಅರ್ಥವಂತೆ. ಹೀಗಾಗಿ ಫೈನ್ ಕಟ್ಟಿ ಎಂದ. ನಾನು ಅವನಿಗೆ ನಾವು ಬೇರೆ ದೇಶದ ಜನರು ಇಲ್ಲಿಯ ಕಾನೂನು ಕಾಯ್ದೆ ನಮಗೆ ತಿಳಿದಿಲ್ಲ. ಈ ಬಾರಿ ಬಿಡಿ ಎಂದು ಎಷ್ಟು ಗೋಗರೆದರೂ ಒಪ್ಪದೆ ಕಡೆಗೆ ಹತ್ತು ಸಾವಿರ ಲಿರಾ ದಂಡದ ಬದಲು ಒಂದು ಸಾವಿರ ಲಿರಾ ದಂಡ ಪಡೆಯಲು ಒಪ್ಪಿದ. ಮರು ಮಾತನಾಡದೆ ದಂಡ ಕೊಡಬೇಕಾಯಿತು. ಅಂತೂ ಒಂದು ಪಾಠ ಕಲಿತ ಹಾಗಾಯಿತು ಅಂದುಕೊಂಡೆ. (ಸಾವಿರ ಲಿರಾ ಎಂದರೆ ಐದುನೂರು ರೂ!)

ಈಗ ಇಟಲಿ ದೇಶದ ಹೆಸರುವಾಸಿ ಊರಾಗಿರುವ ಫ್ಲಾರೆನ್ಸ್ ಹನ್ನೊಂದನೇ ಶತಮಾನದ ಉತ್ತರಾರ್ಧ ಭಾಗದವರೆಗೆ ಅಷ್ಟೇನೂ ಹೆಸರು ಗಳಿಸಿರಲಿಲ್ಲ. 1300ನೇ ಇಸವಿಯಲ್ಲಿ ಈ ಪ್ರದೇಶ ವಾಣಿಜ್ಯ ಉದ್ದಿಮೆಗಳಿಗೆ ಹೆಸರು ಪಡೆಯಿತು. ಆ ಕಾಲದಲ್ಲಿ ಈ ಊರಿನಲ್ಲಿ 200 ಮರದ ಸಾಮಾನುಗಳ ಅಂಗಡಿಗಳಿದ್ದು 30000 ಬಡಗಿಗಳು ಕಾರ್ಯಪ್ರವೃತ್ತರಾಗಿದ್ದರು. ಪಕ್ಕದ ಮಿಲಾನ್ ಪ್ರದೇಶದೊಂದಿಗೆ ಫ್ಲಾರೆನ್ಸ್ ಯುದ್ಧ ನಡೆಸಿ 1406ರಲ್ಲಿ ಪೀಸಾ ನಗರವನ್ನು ಆಕ್ರಮಿಸಿಕೊಂಡಿತು. ಇದರ ಫಲವಾಗಿ ಫ್ಲಾರೆನ್ಸ್‌ಗೆ ಸಮುದ್ರ ಬಂದರು ಲಭ್ಯವಾಗಿ ಹೊರದೇಶಗಳೊಡನೆ ವಾಣಿಜ್ಯ ನಡೆಸಲು ಅನುಕೂಲವಾಯಿತು. 15ನೇ ಶತಮಾನದಲ್ಲಿ ಈ ಊರು ಕಲೆ, ಸಂಸ್ಕೃತಿಗಳ ಆಗರವಾಯಿತು. 1865-71ರ ವರೆಗೆ ಫ್ಲಾರೆನ್ಸ್ ಇಟಲಿ ದೇಶದ ರಾಜಧಾನಿಯಾಗಿತ್ತು ಎಂದು ನನ್ನ ಹೆಂಡತಿಗೆ ಚರಿತ್ರೆ ಪಾಠ ಹೇಳಿದೆ.

ಫ್ಲಾರೆನ್ಸ್‌ನಲ್ಲಿ ನಮ್ಮ ರೈಲು ಬಂದು ಇಳಿದಾಗ ಪ್ಲಾಟ್ ಫಾರ್ಮ್‌ನಲ್ಲಿ ನನ್ನ ಸ್ನೇಹಿತ ಡೇವಿಡ್ ಕಾಯುತ್ತಾ ಇದ್ದ. ಅವನ ಕಾರಿನಲ್ಲಿ ನಾವು ಫ್ಲಾರೆನ್ಸ್ ನಗರದ ಮಧ್ಯ ಭಾಗಕ್ಕೆ ಹೊರಟೆವು. ದಾರಿಯಲ್ಲಿ ಹೋಗುತ್ತಾ ಡೇವಿಡ್ ಫ್ಲಾರೆನ್ಸ್ ತನ್ನ ಗೋಥಿಕ್ ಹಾಗೂ ರಿನೈಸಾನ್ಸ್ ಶೈಲಿಯ ಕಟ್ಟಡಗಳು, ಚಿತ್ರ ಕಲಾ ಗ್ಯಾಲರಿಗಳು ಹಾಗೂ ಮ್ಯೂಸಿಯಂಗಾಗಿ ವಿಶ್ವ ವಿಖ್ಯಾತವಾಗಿದೆ. ಅದೂ ಅಲ್ಲದೆ ಇತ್ತೀಚಿನ ದಿನಗಳಲ್ಲಿ ಈ ನಗರ ವೈನ್, ಆಲಿವ್ ಎಣ್ಣೆ ಹಾಗೂ ಹಣ್ಣುಗಳಿಗೂ ಹೆಸರುವಾಸಿಯಾಗಿದೆ ಎಂದ.

ಫ್ಲಾರೆನ್ಸ್ ನಗರದ ಮಧ್ಯ ಭಾಗದಲ್ಲಿರುವ ಸಾಂಟಾ ಮೇರಿಯಾ ಡೆಲ್ ಫಯೋರಿ ಕ್ಯಾಥೆಡ್ರಲ್ (Santa Mariya Del Fiore Cathedrel)ಗೆ ಮೊದಲು ಹೋದೆವು. ಈ ಕ್ಯಾಥೆಡ್ರಲ್ 1296ನೇ ಇಸವಿಯಲ್ಲಿ ಕಟ್ಟಲ್ಪಟ್ಟಿತು. ಇದರ ಗೋಪುರವನ್ನು 15ನೇ ಶತಮಾನದಲ್ಲಿ ಕಟ್ಟಲಾಯಿತಂತೆ. ಈ ಗೋಪುರ ಫ್ಲಾರೆನ್ಸ್ ನಗರದ ಯಾವ ಭಾಗದಿಂದಲಾದರೂ ಕಾಣಿಸುತ್ತದಂತೆ. ಈ ಕೆಥಿಡ್ರಲ್ ಕೆಂಪು ಹಸಿರು ಹಾಗೂ ಬಿಳಿ ಅಮೃತ ಶಿಲೆಯಿಂದ ಕಟ್ಟಲ್ಪಟ್ಟಿದ್ದು, ಈ ಕೆಥೆಡ್ರಲ್ ವ್ಯಾಟಿಕನ್ ನಗರದಲ್ಲಿ ನಾವು ನೋಡಿದ್ದ ಕೆಥೆಡ್ರಲ್‌ನಷ್ಟೇ ಭಾರಿಯಾಗಿತ್ತು. ಕೆಥೆಡ್ರಲ್ ಪಕ್ಕದಲ್ಲೇ ಗಂಟೆಗೋಪುರ ಎನ್ನುವ ಹೆಸರಾಂತ ಗೋಪುರ ಇದೆ. 14ನೇ ಶತಮಾನದಲ್ಲಿ ಕಟ್ಟಲಾಗಿರುವ 270 ಅಡಿ ಎತ್ತರವಿರುವ ಈ ಗೋಪುರ ಇಟಲಿ ದೇಶದಲ್ಲಿ ಅತಿ ಸುಂದರವಾದ ಗೋಪುರ ಎಂದು ಹೆಸರುವಾಸಿಯಾಗಿದೆ.

ಕೆಥೆಡ್ರಲ್ ಮುಂದುಗಡೆ ಸ್ಯಾನ್ ಗಿಯೋವಾನ್ನಿ ಬ್ಯಾಪ್ಟಿಸ್ಟೇರಿ ಎನ್ನುವ ಅಷ್ಟಕೋಣಾಕಾರದ ಕಟ್ಟಡ ಇದೆ. 11 ಹಾಗೂ 15ನೇ ಶತಮಾನದ ಮಧ್ಯೆ ಕಟ್ಟಿರುವ ಈ ಕಟ್ಟಡದ ವಿಶೇಷತೆ ಅದರ ಪೂರ್ವ ಭಾಗದ ಬಾಗಿಲು. "ಸ್ವರ್ಗದ್ವಾರ" ಎಂದು ಕರೆಯುವ ಈ ಬಾಗಿಲ ಮೇಲೆ ಚಿನ್ನದ ಹಾಳೆಯಲ್ಲಿ ಬೈಬಲ್‌ನ ಹಳೇ ಟೆಸ್ಟಮೆಂಟ್‌ಗೆ ಸಂಬಂಧಿಸಿದ ದೃಶ್ಯಗಳನ್ನು ಕೆತ್ತಲಾಗಿದೆ. ಇವನ್ನು ಗಿಬರ್ಟಿ ಎನ್ನುವ ಅಕ್ಕಸಾಲಿಗ ತಯಾರಿಸಿದನಂತೆ.

ಕೆಥೆಡ್ರಲ್‌ನಿಂದ ಸುಮಾರು 100 ಮೀಟರ್ ಮುಂದೆ ಹೋದರೆ ಬಾಗೆಲೋ ಎನ್ನುವ ಕಟ್ಟಡ ಇದ್ದು ಈ ಕಟ್ಟಡದಲ್ಲಿ ಇಟಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯ ಇದೆ. ಇಲ್ಲಿ ಡೊನಾಟೆಲ್ಲಾ ಎನ್ನುವ ಹೆಸರಾಂತ ಶಿಲ್ಪಿಯ ಕಲಾಕೃತಿಗಳು ಲಭ್ಯವಿದೆ.

ಇಲ್ಲಿಂದ ಸ್ವಲ್ಪವೇ ದೂರದಲ್ಲಿ ಪ್ಲಾಜಾ ಡೆಲ್ಲಾ ಸಿಗ್ನೋರಿಯಾ ಎನ್ನುವ ಜಾಗ ಇದ್ದು ಇಲ್ಲಿನ ನೆಪ್ಚೂನ್ ಎಂಬ ನೀರಿನ ಕಾರಂಜಿ ಹೆಸರು ವಾಸಿ. ಈ ಜಾಗದಲ್ಲಿಯೂ 308 ಅಡಿ ಎತ್ತರದ

ಒಂದು ಗಂಟೆ ಗೋಪುರ ಇದೆ. ಈ ಜಾಗದ ಹತ್ತಿರವೇ ಇರುವ ಚೌಕದಲ್ಲಿ ಹಲವಾರು ಶಿಲ್ಪ ಕೃತಿಗಳನ್ನು ಇಟ್ಟಿದ್ದಾರೆ. 1554ರಲ್ಲಿ ಸೆಲಿನಿಯಿಂದ ಕೆತ್ತಲ್ಪಟ್ಟ ಪರ್ಶಿಯಸ್ ಹಾಗೂ 1579ರಲ್ಲಿ ಗ್ಯಾಮ್ ಬೊಲೋನಾ ಎಂಬ ಶಿಲ್ಪಿ ತಯಾರಿಸಿದ "ಸಬೀನೇ ಮಹಿಳೆಯರ ಮೇಲೆ ಅತ್ಯಾಚಾರ" ಎನ್ನುವ ಕಲಾಕೃತಿಗಳು ಬಹಳ ಹೆಸರುವಾಸಿ.

ಫ್ಲಾರೆನ್ಸ್‌ನಲ್ಲಿ ನೋಡಬೇಕಾದ ಇನ್ನೊಂದು ಸ್ಥಳ ಎಂದರೆ ಪ್ಯಾಲೆಸೋ ಡೆಗ್ಲಿ ಉಫೀಜೀ. 16ನೇ ಶತಮಾನದಲ್ಲಿ ಕಟ್ಟಲಾದ ಈ ಕಟ್ಟಡದಲ್ಲಿ ಸರ್ಕಾರಿ ಕಛೇರಿಗಳು ಹಾಗೂ ನ್ಯಾಯಾಲಯಗಳು ಇವೆ. ಈ ಕಟ್ಟಡದಲ್ಲಿರುವ ಚಿತ್ರಕಲಾ ಗ್ಯಾಲರಿ ಯೂರೋಪಿನಲ್ಲಿ ಅತ್ಯಂತ ಹೆಸರು ವಾಸಿ.

ಇಷ್ಟೆಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ ನಂತರ ನಾವು ಹತ್ತಿರದ ರೆಸ್ಟೋರೆಂಟ್‌ಗೆ ಹೋಗಿ ಇಟಾಲಿಯನ್ ಪೀಜಾ ತಿಂದೆವು. ಆ ನಂತರ ಡೇವಿಡ್ ನಮಗೆ ಒಂದು ಸೇತುವೆಯೊಂದರ ಬಳಿಗೆ ಕರೆದೊಯ್ದು. "ಈ ಸೇತುವೆ ಆರ್ನೋ ಎನ್ನುವ ನದಿಯ ಮೇಲೆ ಕಟ್ಟಲಾಗಿದೆ. ಇದು ಎರಡನೇ ಮಹಾಯುದ್ಧದಲ್ಲಿ ಈ ಊರಿನಲ್ಲಿ ಹಾಳಾಗದೆ ಉಳಿದ ಏಕೈಕ ಸೇತುವೆ" ಎಂದ. ಈ ಸೇತುವೆಯ ಹತ್ತಿರದಲ್ಲಿ ಪಾಂಟೆ ವೆಚ್ಚಿಯೋ ಎನ್ನುವ ಜಾಗ ಇದೆ. ಈ ಜಾಗದ ರಸ್ತೆಯ ಎರಡೂ ಬದಿಯಲ್ಲಿ ಆಭರಣಗಳ ಅಂಗಡಿಗಳು ತುಂಬಿವೆ. ಚಿನ್ನದ ಒಡವೆಗಳನ್ನು ನೋಡಿದ ಕೂಡಲೇ ನನ್ನ ಹೆಂಡತಿ ಈ ದೇಶದ ಒಡವೆಗಳು ಹೇಗಿರುತ್ತವೆ ನೋಡೋಣ ಎಂದು ನೋಡಲು ಆರಂಭಿಸಿದಳು. ಡೇವಿಡ್ "ಇಟಾಲಿಯನ್ ಹವಳಗಳು ವಿಶ್ವದಲ್ಲೇ ಅತಿ ಪ್ರಸಿದ್ಧಿಯಾಗಿದ್ದು ಈ ಹವಳಗಳನ್ನು ಬಹಳ ಜನ ಖರೀದಿಸುತ್ತಾರೆ" ಎಂದ. ಕಡಿಮೆ ಬೆಲೆಯ ಮೂರು ಹವಳಗಳನ್ನು ನಾವು ಖರೀದಿಸಿದೆವು. ಈ ಊರು ಬೆಳ್ಳಿಯ ಆಭರಣಗಳು ಹಾಗೂ ಚರ್ಮದ ವಸ್ತುಗಳಿಗೂ ಹೆಸರು ವಾಸಿಯಾಗಿದೆ ಎಂದು ತಿಳಿಸಿದ ಡೇವಿಡ್.

ಸೇತುವೆ ದಾಟಿ ಆರ್ನೋ ನದಿಯ ಬಲ ಭಾಗಕ್ಕೆ ಹೋದರೆ ಹಲವಾರು ಚರ್ಚ್‌ಗಳು ಇವೆ ಎಂದು ಡೇವಿಡ್ ಹೇಳಿದ. ನಾವು ಈಗಾಗಲೇ ಸಾಕಷ್ಟು ಚರ್ಚ್‌ಗಳನ್ನು ಹಾಗೂ ಮ್ಯೂಸಿಯಂಗಳನ್ನು ನೋಡಿದ್ದೇವೆ. ಹೆಚ್ಚಿನ ವಿಶೇಷತೆ ಇಲ್ಲದಿದ್ದರೆ ನಾವು ಬೇರೆ ಜಾಗಗಳನ್ನು ನೋಡೋಣ ಎಂದು ತಿಳಿಸಿದೆವು. ಇಲ್ಲಿಯ ಅಕಾಡಮಿ ಆಫ್ ಫೈನ್ ಆರ್ಟ್ಸ್‌ನಲ್ಲಿ ಮೈಕೆಲ್ ಎಂಜಲೋ ಕೆತ್ತಿದ ಹೆಸರಾಂತ "ಡೇವಿಡ್" ಮೂರ್ತಿ ಇದೆ ಹಾಗೂ ಸಾಂಟಾ ಕ್ರೋಸ್ ಚರ್ಚಿನಲ್ಲಿ ಮೈಕೆಲ್ ಎಂಜಲೋ ಗೋರಿ ಇದೆ ನೋಡುತ್ತೀರಾ ಎಂದ ಡೇವಿಡ್.

ಮುಂದಿನ ಸಾರಿ ಬಂದಾಗ ಉಳಿದ ಜಾಗಗಳನ್ನು ನೋಡೋಣ ಎಂದು ಉತ್ತರಿಸಿದೆವು. ನಿಮಗೆ ಪೀಸಾ ತೋರಿಸುತ್ತೇನೆ ಬನ್ನಿ ಎಂದ ಡೇವಿಡ್. ಪೀಸಾದ ವಾಲುಗೋಪುರ ವಿಶ್ವದ ವಿಸ್ಮಯಗಳಲ್ಲೊಂದು ಅದನ್ನು ನೋಡಲೇಬೇಕು ಎಂದು ಕಾರನ್ನು ಏರಿದೆವು.



ಪೀಸಾ ಮತ್ತು ಮಿಲಾನೋ

ಫ್ಲಾರೆನ್ಸ್‌ನಿಂದ ಸುಮಾರು ಒಂದು ಗಂಟೆಯ ರಸ್ತೆ ಪ್ರಯಾಣದ ತರುವಾಯ ಪೀಸಾ ಮುಟ್ಟಿದೆವು. ಪೀಸಾ ಪಟ್ಟಣವು ಆರ್ನೋ ನದಿಯ ದಡದಲ್ಲಿ ಇದ್ದು ಟಸ್ಕನಿ (Tuscany) ಪ್ರಾಂತದಲ್ಲಿದೆ. ಈ ಪಟ್ಟಣ ಸಮುದ್ರಕ್ಕೆ ಹತ್ತಿರವಿರುವುದರಿಂದ ಇಲ್ಲಿ ಹಲವಾರು ಕೈಗಾರಿಕೆಗಳು ಸ್ಥಾಪಿತವಾಗಿವೆ. ಲಲಿತ ಕಲೆಗಳಿಗೂ ಪೀಸಾ ಪಟ್ಟಣವು ವಿಶೇಷ ಕೇಂದ್ರ ಎಂದು ಹೆಸರಾಗಿದ್ದು 1343ರಲ್ಲೇ ಇಲ್ಲಿ ವಿಶ್ವವಿದ್ಯಾಲಯವೊಂದು ಸ್ಥಾಪಿತವಾಯಿತು. ಸದ್ಯ ಈ ಪಟ್ಟಣದಲ್ಲಿ ಎಂಜಿನಿಯರಿಂಗ್ ಕಾಲೇಜು, ವ್ಯವಸಾಯ ಕಾಲೇಜು ಹಾಗೂ ಪಶುಸಂಗೋಪನಾ ಕಾಲೇಜುಗಳು ಇವೆ.

ಪೀಸಾದಲ್ಲಿ ನೋಡಬೇಕಾದ ಎಲ್ಲ ಸ್ಥಳಗಳೂ ಒಂದೇ ಜಾಗದಲ್ಲಿ ಕೇಂದ್ರೀಕೃತವಾಗಿವೆ. ಕೇಥೆಡ್ರೆಲ್ ಚೌಕದಲ್ಲಿ ಒಂದರ ಮುಂದೆ ಒಂದರಂತೆ ಮೂರು ಕಟ್ಟಡಗಳು ಇವೆ. ಬಿಳಿ ಅಮೃತ ಶಿಲೆಯಲ್ಲಿ ರೋಮನ್ ಶೈಲಿಯಲ್ಲಿ 1063ನೇ ಇಸವಿಯಲ್ಲಿ ಕಟ್ಟಲ್ಪಟ್ಟ ಕ್ಯಾಥೆಡ್ರಲ್ ಇವುಗಳಲ್ಲಿ ಮುಖ್ಯ ಕಟ್ಟಡ. 12ನೇ ಶತಮಾನದಲ್ಲಿ ಈ ಕಟ್ಟಡದ ಮುಂಭಾಗದಲ್ಲಿ ಹೊಸ ವಿನ್ಯಾಸವನ್ನು ಮಾಡಲಾಯಿತು. ಕ್ಯಾಥೆಡ್ರಲ್‌ನ ಒಳಭಾಗದಲ್ಲಿ ಹಲವಾರು ಕಂಚಿನ ಕಲಾಕೃತಿಗಳು ಹಾಗೂ ಗೋಡೆಗಳ ಮೇಲೆ ಉತ್ತಮ ಪೇಂಟಿಂಗ್‌ಗಳು ಇವೆ. ಬೈಬಲ್‌ಗೆ ಸಂಬಂಧಪಟ್ಟ ಹಲವಾರು ಚಿತ್ರಗಳನ್ನು ಇಲ್ಲಿ ನೋಡಬಹುದು. ಗಾಜಿನ ಮೇಲಿನ ರಂಗುರಂಗಾದ ಚಿತ್ತಾರಗಳೂ ಇಲ್ಲಿ ನೋಡಲು ಲಭ್ಯ.

ಕ್ಯಾಥೆಡ್ರಲ್ ಮುಂದುಗಡೆ ಗೋಳಾಕಾರವಾಗಿರುವ ಕಟ್ಟಡಕ್ಕೆ ಬ್ಯಾಪಿಸ್ಟೆರಿ ಎಂದು ಕರೆಯುತ್ತಾರೆ. 1153ರಲ್ಲಿ ಕಟ್ಟಲಾದ ಈ ಕಟ್ಟಡದ ಗೋಪುರ ಹೆಸರುವಾಸಿ. ಇದರ ಮುಂದುಗಡೆ ಇರುವುದೇ ವಿಶ್ವ ವಿಖ್ಯಾತಿಯ ಪೀಸಾದ ಓಲು ಗೋಪುರ. 1174ರಲ್ಲಿ ಕಟ್ಟಲಾದ ಈ ಓಲು ಗೋಪುರ ಎಲ್ಲ ಕೆಥೆಡ್ರೆಲ್‌ಗಳ ಮುಂದೆಯೂ ಇರುವಂತಹ ಗಂಟೆಯನ್ನು ಇಡುವ ಗೋಪುರವಾಗಿ ಕಟ್ಟಲ್ಪಟ್ಟಿತಂತೆ. ಗೋಪುರವನ್ನು ಕಟ್ಟಲು ಆರಂಭಿಸಿದಾಗ ಈ ಗೋಪುರ ಕಟ್ಟುತ್ತಿರುವ ನೆಲದ ಮಣ್ಣು ಮೃದು ಎಂದು ತಿಳಿದು ಬಂತಂತೆ. ಆದರೂ ನಿರ್ಮಾಣ ಮುಂದುವರೆಸಿ 14ನೇ ಶತಮಾನದಲ್ಲಿ ಗೋಪುರ ಕಟ್ಟಿ ಮುಗಿಸಲಾಯಿತಂತೆ. ಎಂಟು ಮಹಡಿಗಳನ್ನು ಹೊಂದಿರುವ ಈ ಗೋಪುರ 13 ಅಡಿಯಷ್ಟು ವಾಲಿದೆ. ಇನ್ನೂ ಹೆಚ್ಚು ವಾಲಿ ಕಟ್ಟಡವೇ ಬೀಳಬಾರದು ಎನ್ನುವ ಉದ್ದೇಶದಿಂದ ಇದಕ್ಕೆ ಹಲವಾರು

ಕಬ್ಬಿಣದ ತಂತಿಗಳನ್ನು ಬಿಗಿದು ಇದ್ದ ಜಾಗದಲ್ಲೇ ನಿಲ್ಲಿಸಿದ್ದಾರೆ. 1990ನೇ ಇಸವಿಯಿಂದ ಈ ಗೋಪುರವನ್ನು ಹತ್ತಲು ಪರ್ಯಟಕರಿಗೆ ಬಿಡುತ್ತಿಲ್ಲ.

ಈ ಮೂರು ಕಟ್ಟಡಗಳನ್ನು ಬಿಟ್ಟರೆ ಪೀಸಾದಲ್ಲಿ ನೋಡುವುದು ಇನ್ನೇನೂ ಇಲ್ಲ. ಈ ನಗರದ ಒಂದು ಸಣ್ಣ ಪ್ರದಕ್ಷಿಣೆ ಹಾಕಿದೆವು. ಹಳೆಯ ಕಾಲದ ಕಟ್ಟಡಗಳೇ ಜಾಸ್ತಿ ಇರುವ ಈ ನಗರ ತನ್ನ ಆಕರ್ಷಣೆ ಇನ್ನೂ ಉಳಿಸಿಕೊಂಡಿದೆ.

ಪೀಸಾ ನೋಡಿ ಮುಗಿಸಿದಾಗ ಗಂಟೆ 5.00 ಆಗಿತ್ತು. ಫ್ಲಾರೆನ್ಸ್‌ಗೆ ವಾಪಸ್ಸಾಗಿ ಹೋಗಿ ಹೋಟೆಲ್‌ನಲ್ಲಿ ತಂಗೋಣ ಎಂದುಕೊಂಡೆವು. ಡೇವಿಡ್ ನೀವು ಫ್ಲಾರೆನ್ಸ್‌ಗೆ ಹೋಗುವ ಬದಲು ನಮ್ಮ ಊರಾದ ಕರಾರಾಗೆ ಬಂದು, ಇಂದು ರಾತ್ರಿ ಇದ್ದು ನಾಳೆ ರೈಲಿನಲ್ಲಿ ಮಿಲಾನೋಗೆ ಹೋಗಿ ಅಂದ. ಸರಿ ಎಂದು ಮತ್ತೆ ಕಾರ್‌ನಲ್ಲಿ ಕುಳಿತೆವು.

ವಿಶಾಲವಾದ ಹೆದ್ದಾರಿಯಲ್ಲಿ ಬಹಳ ವೇಗವಾಗಿ ಡೇವಿಡ್ ಕಾರನ್ನು ಚಲಿಸುತ್ತಿದ್ದ. ನಾನು ಅಮೇರಿಕಾದಲ್ಲಿ ನೋಡಿದ ಹೆದ್ದಾರಿಗಳಿಗಿಂತ ಈ ಊರಿನ ಹೆದ್ದಾರಿ ಚೆನ್ನಾಗಿತ್ತು. ಒಂದು ಗಂಟೆ ಪ್ರಯಾಣದ ನಂತರ ನಾವು ಕರಾರಾಗೆ ತಲುಪಿದೆವು. ಕರಾರಾ ತನ್ನ ಅಮೃತ ಶಿಲೆಗೆ ವಿಶ್ವದಲ್ಲೇ ಪ್ರಸಿದ್ಧಿ ಪಡೆದಿರುವ ಊರು. ಇಟಲಿಯೇ ಅಮೃತ ಶಿಲೆಗೆ ಹೆಸರುವಾಸಿ, ಅದರಲ್ಲೂ ಕರಾರಾದಲ್ಲಿರುವ ಅಮೃತ ಶಿಲೆ ಇನ್ನೂ ಹೆಸರುವಾಸಿಯಂತೆ. ನಮ್ಮಲ್ಲಿ ಗ್ರಾನೈಟ್ ಹೇಗೆ ತೆಗೆಯುತ್ತಾರೋ ಅದೇ ರೀತಿ ಅಮೃತ ಶಿಲೆಯನ್ನು ತೆಗೆಯುತ್ತಾರಂತೆ. ಅಮೃತ ಶಿಲೆ ಇರುವ ಗಣಿಗಳ ಬಳಿ, ಗಣಿಗಾರಿಕೆಯಿಂದ ಉಂಟಾದ ಪುಡಿಯನ್ನು ಬಿಸಾಕಿರುತ್ತಾರೆ. ಈ ಪುಡಿಯಿಂದ ಉಂಟಾದ ಬೆಟ್ಟಗಳು ಎಲ್ಲೆಡೆಯಲ್ಲೂ ಕಾಣುತ್ತವೆ. ದೂರದಿಂದ ಇವು ಹಿಮದಿಂದ ಆವೃತ್ತವಾದ ಪರ್ವತಗಳಂತೆ ಕಾಣುತ್ತವೆ.

ಕರಾರಾದಲ್ಲಿ ಆ ರಾತ್ರಿ ಡೇವಿಡ್ ದಂಪತಿಗಳೊಂದಿಗೆ ಹೋಟೆಲ್‌ನಲ್ಲಿ ಭೋಜನ ಮಾಡಿದೆವು. ಇಟಲಿಯಲ್ಲಿ ತರಹೇವಾರಿ ಪೀಜಾ ಮಾಡುತ್ತಾರೆ. ನಾವು ಬೆಂಗಳೂರಿನಲ್ಲಿ ತಿನ್ನುವ ಪೀಜಾಗಳಿಗಿಂತ ಇವು ರುಚಿಯಲ್ಲಿ ಭಿನ್ನ. ನಾವು ಇಟಲಿಯಲ್ಲಿ ತಿಂದಂತಹ ಪೀಜಾ ನಮ್ಮೂರಿನ ಅಕ್ಕಿ ರೊಟ್ಟಿಯಂತೆಯೇ ಇತ್ತು. ಶಾಖಾಹಾರಿಗಳಿಗೆ ಇಲ್ಲಿ ಊಟ ದೊರೆಯುವುದು ಕಷ್ಟ. ಪೀಜಾ ಜೊತೆ ನಾವು ಸಾಲಾಡ್‌ಗಳನ್ನು ಅಂದರೆ ಸೊಪ್ಪು ಹಾಗೂ ತರಕಾರಿಗಳನ್ನು ತಿನ್ನಬೇಕಾಯಿತು. ಆದರೆ ಸಲಾಡ್‌ಗಳಿಗೆ ಆಲಿವ್ ಎಣ್ಣೆಯನ್ನು ಹಾಕುವುದರಿಂದ ಅವು ತುಂಬಾ ರುಚಿಯಾಗಿರುತ್ತದೆ ಹೊಟ್ಟೆಯೂ ತುಂಬುತ್ತದೆ.

ಮಾರನೇ ದಿನ ಕರಾರಾದಿಂದ ರೈಲಿನಲ್ಲಿ ಮಿಲಾನೋಗೆ ಹೊರಟೆವು. ಈ ರೈಲು ಮಾರ್ಗ ಅತ್ಯಂತ ರಮಣೀಯ ಪ್ರದೇಶಗಳಲ್ಲಿ ಹಾದು ಹೋಗುತ್ತದೆ. ರೈಲು ಮಾರ್ಗದ ಪಕ್ಕದಲ್ಲಿ ನೀಲಿ ಬಣ್ಣದ ಸಾಗರವಿದ್ದು ಈ ಸಾಗರಕ್ಕೆ Ligurian ಸಮುದ್ರ ಎಂದು ಕರೆಯುತ್ತಾರೆ. ಪೀಸಾದಿಂದ ಒಂದು ಗಂಟೆ ಪಯಣಿಸಿದ ನಂತರ ಜಿನೋವಾ ಎನ್ನುವ ಹೆಸರಾಂತ ಬಂದರು ಸಿಗುತ್ತದೆ. ಫ್ರಾನ್ಸ್ ದೇಶದ ಮಾರ್ಸೆಲ್‌ಗೆ ಬಹಳ ಹತ್ತಿರ ಇರುವ ಜಿನೋವಾ ಅತ್ಯಂತ ಸುಂದರವಾದ ಪಟ್ಟಣಗಳಲ್ಲಿ ಒಂದು. ಈ ಪಟ್ಟಣವು ಹೆಸರಾಂತ ಕೈಗಾರಿಕಾ ಹಾಗೂ ವಾಣಿಜ್ಯ ಪ್ರದೇಶ. ದಟ್ಟ ನೀಲಿ ಸಮುದ್ರ, ಶುಭ್ರ ಬಿಳುಪು ಮರಳಿನ ಬೀಚುಗಳು, ಬೀಚುಗಳ ಪಕ್ಕ ಗಾಳಿಯ ಜತೆ ತೂರಾಡುತ್ತಾ ಇದ್ದ ಪಾಮ್ ಮರಗಳು, ಸಮುದ್ರದ ಮೇಲೆ ಸಣ್ಣ ಸಣ್ಣ ದೋಣಿಗಳು. ಇವೆಲ್ಲವನ್ನೂ ರೈಲಿನ

ಕಿಟಕಿಯಿಂದ ನೋಡಿ ಅಲ್ಲೇ ಇಳಿದುಬಿಡೋಣ, ಒಂದು ದಿನ ಅಲ್ಲೇ ಇದ್ದು ಆ ನಂತರ ಮಿಲಾನೋಗೆ ಹೋಗುವ ಮನಸ್ಸಾಯಿತು. ಆದರೆ ಸಮಯದ ಅಭಾವದಿಂದ ಮುಂದಿನ ಪಯಣದಲ್ಲಿ ಐದು ದಿನ ಜಿನೋವಾ ನೋಡಲು ನಿರ್ಧರಿಸಿದೆವು.

ಮಿಲಾನೋ ರೈಲ್ವೇ ನಿಲ್ದಾಣ ಸಮೀಪಿಸಿದಂತೆ ನಾವು ಒಂದು ದೊಡ್ಡ ಪಟ್ಟಣಕ್ಕೆ ಬರುತ್ತಿದ್ದೇವೆ ಎನ್ನುವ ಭಾವನೆ ನಮಗಾಯಿತು. ಮಿಲಾನೋ ನಮ್ಮಲ್ಲಿರುವ ಮುಂಬೈಯಂತೆ, ಇಟಲಿ ದೇಶದ ವಾಣಿಜ್ಯ ಹಾಗೂ ಆರ್ಥಿಕ ರಾಜಧಾನಿ. ಈ ಊರು ಕೈಗಾರಿಕೆಗೆ ಹೆಸರಾಗಿದ್ದರೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹಾಗೂ ಫ್ಯಾಷನ್‌ಗೂ ಹೆಸರಾಗಿದೆ.

ರೈಲಿನಿಂದ ಇಳಿದು ಟ್ಯಾಕ್ಸಿ ಮಾಡಿಕೊಂಡು, ನಾವು ತಂಗಬೇಕಾದ ಹೋಟೆಲ್‌ಗೆ ಹೋಗಿ ನಮ್ಮ ಸೂಟ್‌ಕೇಸ್ ಇಟ್ಟು ಮಿಲಾನೋ ಸುತ್ತಲು ಹೊರಟೆವು. ಹೋಟೆಲ್‌ನ ಮ್ಯಾನೇಜರ್ ಪ್ರಕಾರ ಮಿಲಾನೋದಲ್ಲಿ ನೋಡಬೇಕಾದ ಅತಿ ಪ್ರಾಮುಖ್ಯವಾದ ಜಾಗ ಎಂದರೆ ಅಲ್ಲಿನ ಕ್ಯಾಥೆಡ್ರಲ್ ಚೌಕ. ಈ ಊರಿನಲ್ಲಿ ಓಡಾಡಬೇಕಾದರೆ ಸುರಂಗದಲ್ಲಿ ಚಲಿಸುವ ರೈಲಿನಲ್ಲಿ ಹೋಗಿ ಎಂದು ಹೇಳಿದ.

1964ರಲ್ಲಿ ಮಿಲಾನೋದಲ್ಲಿ ಸುರಂಗ ರೈಲು ಪ್ರಾರಂಭವಾಯಿತಂತೆ, ನಮ್ಮ ಹೋಟೆಲ್‌ನ ಬಾಗಿಲಿನ ಕೆಳಗೇ ಇದ್ದ ರೈಲು ನಿಲ್ದಾಣದಿಂದ ನೇರವಾಗಿ ಕ್ಯಾಥೆಡ್ರಲ್ ಚೌಕಕ್ಕೆ ಬಂದೆವು. ಫ್ಲಾರೆನ್ಸ್‌ನಲ್ಲಿ ನೋಡಿದಂತಹದೇ ದೊಡ್ಡ ಕ್ಯಾಥೆಡ್ರೆಲ್ ಇದ್ದು ಇದರ ಮುಂದುಗಡೆ ಎರಡು ಫುಟ್‌ಬಾಲ್ ಮೈದಾನದಷ್ಟು ವಿಶಾಲವಾದ ಚೌಕ ಇದೆ. ಈ ಚೌಕದ ಅಲ್ಲಲ್ಲಿ ಹಲ ಕೆಲವು ಮೂರ್ತಿಗಳನ್ನು ಇಡಲಾಗಿದೆ. 1386ರಲ್ಲಿ ಕಟ್ಟಲು ಪ್ರಾರಂಭಿಸಿ 1965 ರವರೆಗೆ ಕಟ್ಟಿ ಮುಗಿಸಿದ ಈ ಕ್ಯಾಥೆಡ್ರಲ್ ಬಿಳಿ ಅಮೃತ ಶಿಲೆಯಿಂದ ಕಟ್ಟಲಾಗಿದೆ. ಅದರ ದಕ್ಷಿಣ ಭಾಗದಲ್ಲಿ ಆಮ್ರೇಜಿಯೋ ಬ್ಯಾಸಲಿಕಾ ಇದೆ.

ಇಲ್ಲಿಂದ ಸ್ವಲ್ಪ ದೂರದಲ್ಲಿ ಇರುವ ವಿಟ್ಟೋರಿಯೋ ಇಮ್ಯಾನುಯಲ್ ಗ್ಯಾಲರಿ ನಿಜವಾಗಿಯೂ ಕಣ್ಮನ ಸೆಳೆಯುವಂತಹುದು. 1878ರಲ್ಲಿ ಕಟ್ಟಿ ಮುಗಿಸಿದ ಈ ಚೌಕ ಇಟಲಿಯ ಅತಿ ದೊಡ್ಡ ಶಾಪಿಂಗ್ ಕಾಂಪ್ಲೆಕ್ಸ್, ಮೂರು ಮಹಡಿ ಎತ್ತರದ ಕಟ್ಟಡಗಳ ಸಾಲು ಇರುವ ಈ ಜಾಗದಲ್ಲಿ ಒಂದು ಕಟ್ಟಡಕ್ಕೂ ಇನ್ನೊಂದು ಕಟ್ಟಡಕ್ಕೂ ನಡುವೆ ಅರ್ಧ ಚಂದ್ರಾಕಾರದ ಗಾಜಿನ ತಾರಸಿ ಹಾಕಿರುವುದರಿಂದ ವ್ಯಾಪಾರ ಮಾಡುವವರು ಮಳೆ ಗಾಳಿಗೆ ಹೆದರಬೇಕಾದ್ದಿಲ್ಲ. ಈಗಾಗಲೇ ಹೇಳಿದಂತೆ ಮಿಲಾನೋ ವಿಶ್ವದ ಅತಿದೊಡ್ಡ ಫ್ಯಾಷನ್ ಕೇಂದ್ರಗಳಲ್ಲಿ ಒಂದಾದ್ದರಿಂದ ಇಲ್ಲಿಯ ಅಂಗಡಿಯ ಶೋ ಕೇಸ್‌ಗಳಲ್ಲಿ ತರಹೇವಾರಿ ಬಟ್ಟೆಗಳು, ಚರ್ಮದ ವಸ್ತುಗಳನ್ನು ನೋಡುವ ಅವಕಾಶ ದೊರೆಯಿತು.

ಇಟಲಿಯ ಎಲ್ಲಾ ಪ್ರಮುಖ ಸ್ಥಳಗಳಲ್ಲೂ ದೊಡ್ಡ ದೊಡ್ಡ ಕೆಥೆಡ್ರಲ್‌ಗಳು, ಅವುಗಳ ಮುಂದಿರುವ ವಿಶಾಲ ಚೌಕಗಳು, ಅವುಗಳ ಪಕ್ಕದ ಗಂಟೆ ಗೋಪುರಗಳು ಸರ್ವೆಸಾಮಾನ್ಯವಾಗಿ ಇದ್ದೇ ಇದ್ದರೂ ಒಂದಕ್ಕಿಂತ ಒಂದು ಭಿನ್ನ ಎಂದು ಅನಿಸಿತು. ಈ ದೇಶದಲ್ಲಿ ನಮಗೆ ಕಂಡ ಇನ್ನೊಂದು ಅಂಶವೆಂದರೆ ಈ ಜನ ಸೌಂದರ್ಯದ ಆರಾಧಕರು, ಬೇರೆ ಬೇರೆ ದೇಶಗಳಿಗೆ ವಲಸೆ ಹೋಗಿ ಉತ್ತಮ ಬಿಸಿನೆಸ್ ಸ್ಥಾಪಿಸಿದವರು, ಇತ್ಯಾದಿ. ಅಂದ ಹಾಗೆ ಇಟಲಿ ದೇಶದಲ್ಲಿ ಎಲ್ಲರ

ಕೈಯಲ್ಲೂ ಒಂದು ಮೊಬೈಲ್ ಫೋನ್ ಕಾಣಬಹುದು. ಜನಸಂಖ್ಯೆಯ ಆಧಾರದ ಮೇಲೆ ಪರಿಗಣಿಸಿದರೆ ಇಟಲಿಯಲ್ಲೇ ವಿಶ್ವದ ಅತಿ ಹೆಚ್ಚು ಮೊಬೈಲ್ ಫೋನ್ ಸಂಪರ್ಕ ಇದೆ ಎಂದು ತಿಳಿಯಿತು. ಇದಕ್ಕೆ ಕಾರಣ ಇಲ್ಲದೇ ಇಲ್ಲ. ಇಟಾಲಿಯನ್ನರು ಜಗತ್ತಿನ ವಿವಿಧ ಜಾಗಗಳನ್ನು ಅರಸ ಹೊರಟವರು. ಮಾರ್ಕೊ ಪೊಲೋ ಆಗಿರಲಿ ಕೊಲಂಬಸ್‌ನೇ ಆಗಿರಲಿ ರೋಮನ್ನರೇ ತಾನೇ ಎಲ್ಲೇ ಹೋದರೂ ಸಂಪರ್ಕ ಸಾಧಿಸುವುದರಲ್ಲಿ ಅತ್ಯಾಸಕ್ತರು. ಇನ್ನೊಂದು ವಿಶೇಷ ಎಂದರೆ ಮದ್ಯಾಹ್ನ 12 ರಿಂದ 3ರ ವರೆಗೆ ಈ ದೇಶದಲ್ಲಿ ಎಲ್ಲಾ ಅಂಗಡಿಗಳ ಬಾಗಿಲು ಹಾಕಿ ಬಿಡುತ್ತಾರೆ. ಏಕೆಂದರೆ ಇಟಾಲಿಯನ್ನರು ಮದ್ಯಾಹ್ನದ ಊಟವಾದ ಮೇಲೆ ಪವಡಿಸಲೇ ಬೇಕು. ಏನೇ ಆದರೂ. ಇಲ್ಲಿಯ ಜನ ತುಂಬಾ ಸ್ನೇಹಮಯಿಗಳು ಹಾಗೂ ಭಾವ ಜೀವಿಗಳು.

ಮಿಲಾನೋ ನೋಡುವುದರೊಂದಿಗೆ ನಮ್ಮ ಇಟಲಿ ಪ್ರವಾಸ ಮುಗಿದು ಮರುದಿನ ಹೋಗಬೇಕಾದ ಸ್ವಿಟ್ಸರ್ಲೆಂಡ್ ಬಗ್ಗೆ ಯೋಚಿಸತೊಡಗಿದೆವು.

8

ಲೂಸರ್ನ್

ಮಿಲಾನೋದಿಂದ ಹೊರಟ ನಮ್ಮ ರೈಲು ಸ್ವಿಡ್ಸರ್‌ಲ್ಯಾಂಡ್ ದೇಶದ ಗಡಿ ಭಾಗದ ರೈಲ್ವೇ ನಿಲ್ದಾಣ ತಲುಪಿದಾಗ ಹಲವಾರು ಮಂದಿ ಪೊಲೀಸ್ ಹಾಗೂ ಕಸ್ಟಮ್ಸ್ ಅಧಿಕಾರಿಗಳು ನಮ್ಮ ರೈಲನ್ನು ಏರಿ ನಮ್ಮ ನಮ್ಮ ಪಾಸ್‌ಪೋರ್ಟ್‌ಗಳನ್ನು ಕೇಳಿದರು. ಸ್ವಿಡ್ಸರ್ ಲ್ಯಾಂಡ್‌ಗೆ ಹೋಗಲು ಪ್ರತ್ಯೇಕ ವೀಸಾದ ಅವಶ್ಯಕತೆ ಇತ್ತು. ಇತರ ಯೂರೋಪಿಯನ್ ಒಕ್ಕೂಟದ ದೇಶಗಳು ಮಾನ್ಯ ಮಾಡುವ ಶೆಂಗೆನ್ ವೀಸಾ ಸ್ವಿಡ್ಸರ್‌ಲ್ಯಾಂಡ್‌ನಲ್ಲಿ ಮಾನ್ಯ ಮಾಡುವುದಿಲ್ಲ.

ಈ ಸಂದರ್ಭದಲ್ಲಿ ಒಂದು ಮಾತು ಹೇಳಲೇ ಬೇಕು. ನಾವುಗಳು ಭಾರತದಿಂದ ಹೊರಟಾಗ ಕೇವಲ ಶೆಂಗೆನ್ ವೀಸಾ ಪಡೆದಿದ್ದೆವೇ ಹೊರತು ಸ್ವಿಸ್ ವೀಸಾ ಪಡೆದಿರಲಿಲ್ಲ. ಪ್ಯಾರಿಸ್‌ನಲ್ಲಿ ಬಂದು ಇಳಿದಾಗ ನಾವು ಸ್ವಿಡ್ಸರ್‌ಲ್ಯಾಂಡ್ ನೋಡಬೇಕೆಂದು ತೀರ್ಮಾನಿಸಿದೆವು. ಇದಕ್ಕೆ ಬೇರೆ ವೀಸಾ ಬೇಕು ಎಂದು ತಿಳಿದಾಗ ನಾವು ವಿಯನ್ನಾದಲ್ಲಿ ಎರಡು ದಿನ ಇರುವುದರಿಂದ ಅಲ್ಲಿನ ಸ್ವಿಸ್ ರಾಯಭಾರಿ ಕಛೇರಿಗೆ ಹೋಗಿ ವೀಸಾ ಪಡೆಯೋಣವೆಂದು ಲೆಕ್ಕ ಹಾಕಿದೆವು. ನಾನು ಹಿರಿಯ ಅಧಿಕಾರಿಯಾದ್ದರಿಂದ ಸಾಮಾನ್ಯವಾಗಿ ವೀಸಾ ಸಿಗಲು ತೊಂದರೆ ಆಗುವುದಿಲ್ಲ. ನನಗೆ ವೀಸಾ ಕೊಡಬಹುದೆಂದು ಭಾರತ ರಾಯಭಾರಿ ಕಛೇರಿ ಶಿಫಾರಸ್ಸು ಪತ್ರ ಕೊಟ್ಟರೆ ಬೇರೆ ರಾಯಭಾರಿ ಕಛೇರಿಯವರು ಕೂಡಲೇ ವೀಸಾ ಕೊಡುತ್ತಾರೆ. ಈ ಒಂದು ಧೈರ್ಯದಿಂದ ನಾನು ವಿಯನ್ನಾದಲ್ಲಿ ಭಾರತೀಯ ರಾಯಭಾರಿ ಕಛೇರಿಗೆ ಹೋಗಿ ಸ್ವಿಸ್ ವೀಸಾಕ್ಕೋಸ್ಕರ ನನಗೆ ಪತ್ರ ಕೊಡಲು ಹೇಳಿದೆ. ಅಲ್ಲಿಯ ಅಧಿಕಾರಿಗಳು ನಿಮಗೆ ಖಂಡಿತಾ ಸ್ವಿಸ್ ವೀಸಾ ಸಿಗುವುದಿಲ್ಲ. ಏಕೆಂದರೆ, ಈ ದೇಶದವರು ಬಹಳ ಕಠಿಣ ಕಾನೂನನ್ನು ಅನುಸರಿಸುತ್ತಾರೆ. ಒಬ್ಬ ಭಾರತೀಯ ವ್ಯಕ್ತಿ ಭಾರತದಲ್ಲೇ ವೀಸಾ ಪಡೆಯಬೇಕು ಎನ್ನುವುದು ಅವರ ಕಾನೂನು. ನೀವು ಭಾರತದಲ್ಲಿ ವೀಸಾ ಪಡೆಯದೆ ವಿಯನ್ನಾಗೆ ಬಂದು ವೀಸಾ ಕೇಳುತ್ತಿದ್ದೀರಿ. ಈಗ ಕೆಲವೇ ವಾರಗಳ ಹಿಂದೆ ನಮ್ಮ ಕೇಂದ್ರ ಸರ್ಕಾರದ ಹಿರಿಯ ಕಾರ್ಯದರ್ಶಿಗೆ ಸ್ವಿಸ್ ಅಧಿಕಾರಿ ವೀಸಾ ನಿರಾಕರಿಸಿರುತ್ತಾರೆ. ನಿಮಗಂತೂ ಖಂಡಿತಾ ಸಿಗುವುದಿಲ್ಲ ಎಂದರು. ಪರವಾಗಿಲ್ಲ ನಾನೂ ಒಂದು ಕೈ ನೋಡುತ್ತೇನೆ, ನೀವು ಪತ್ರ ಕೊಡಿ ಎಂದು ನಮ್ಮ ಅಧಿಕಾರಿಗಳನ್ನು ಪೀಡಿಸಿದೆ.

ಅವರಿಂದ ಪತ್ರ ಪಡೆದು ನಾನು ನನ್ನ ಹೆಂಡತಿ ವಿಯನ್ನಾದಲ್ಲಿರುವ ಸ್ವಿಸ್ ರಾಯಭಾರಿ ಕಛೇರಿಗೆ ಹೋದೆವು. ಅಲ್ಲಿ ಕೌಂಟರ್‌ನಲ್ಲಿದ್ದ ವ್ಯಕ್ತಿ ನಮ್ಮ ಪಾಸ್‌ಪೋರ್ಟ್ ನೋಡಿ ವೀಸಾ ಹಣ ತುಂಬಿಸಿಕೊಂಡು ಅರ್ಧ ಗಂಟೆ ನಂತರ ಮತ್ತೆ ಬನ್ನಿ ಎಂದ. ನಾನು ಅರ್ಧ ಗಂಟೆಯ ನಂತರ ವಾಪಸ್ ಆದಾಗ ನಿಮಗೆ ವೀಸಾ ಕೊಡಲು ಬರುವುದಿಲ್ಲ ಎಂದ. ನಾನು ಅವನೊಡನೆ ತಗಾದೆ ಮಾಡಿದಾಗ ತನ್ನ ಹಿರಿಯ ಅಧಿಕಾರಿಯನ್ನು ಕರೆತಂದ. ಆತನಿಗೆ ನಾನು ನನ್ನ ಪರಿಚಯ ಹೇಳಿಕೊಂಡು, ಮೊದಲಿಗೆ ನೀವು ನಮಗೆ ವೀಸಾ ಕೊಡುತ್ತೇವೆಂದು ಹಣ ಕಟ್ಟಿಸಿಕೊಂಡು ಈಗ ಇಲ್ಲ ಎಂದರೆ ಹೇಗೆ? ಎಂದು ಕೇಳಿದೆ. ಕಡೆಗೆ ಅವನು ನನಗೆ ಹಲವಾರು ಪ್ರಶ್ನೆಗಳನ್ನು ಕೇಳಿದ. ಎಲ್ಲಕ್ಕೂ ನಾನು ಸಮರ್ಪಕ ಉತ್ತರ ಕೊಟ್ಟೆ. ಕೊನೆಯಲ್ಲಿ ಆತ ನಿಮಗೆ ಕೇವಲ ಮೂರು ದಿನಗಳವರೆಗೆ ಮಾತ್ರ ಸ್ವಿಟ್ಜರ್ಲೆಂಡ್ ನೋಡಲು ವೀಸಾ ಕೊಡುತ್ತೇವೆ ಆಗಬಹುದೇ? ಎಂದ. ನಾವುಗಳು ಕೇವಲ ಮೂರು ದಿನಗಳು ಮಾತ್ರ ಸ್ವಿಡ್ಸರ್‌ಲ್ಯಾಂಡ್‌ನಲ್ಲಿ ಇರಲು ಯೋಜಿಸಿದ್ದರಿಂದ ಒಪ್ಪಿದೆವು. ಕಡೆಗೂ ವೀಸಾ ಸಿಕ್ಕಿತು. ಈ ವಿಷಯವನ್ನು ವಿಯನ್ನಾದ ನಮ್ಮ ರಾಯಭಾರಿಗೆ ತಿಳಿಸಿದಾಗ, ಅವರು ನೀವೇ ಪುಣ್ಯವಂತರು ಎಂದು ಆಶ್ಚರ್ಯ ಪಟ್ಟರು. ಈ ವಿಷಯ ಪ್ರಸ್ತಾಪಿಸಿದ ಉದ್ದೇಶವೆಂದರೆ ಸ್ವಿಡ್ಸರ್‌ಲ್ಯಾಂಡ್‌ಗೆ ಹೋಗಲು ಇಚ್ಛಿಸುವ ಭಾರತೀಯರು, ಭಾರತದಲ್ಲಿ ಸ್ವಿಡ್ಸರ್‌ಲ್ಯಾಂಡ್ ವೀಸಾ ಪಡೆಯುವುದು ಸೂಕ್ತ. ಇಲ್ಲವಾದರೆ ತೊಂದರೆ ಅನುಭವಿಸಬೇಕು.

ನಮ್ಮ ರೈಲಿನಲ್ಲಿ ಬಂದ ಸ್ವಿಸ್ ಅಧಿಕಾರಿಗಳು ನಮ್ಮ ವೀಸಾ ತಪಾಸಣೆ ಮಾಡಿದ ನಂತರ ರೈಲು ಮುಂದೆ ಹೊರಟಿತು.

ರೈಲಿನ ಕಿಟಕಿಯಿಂದ ಕಂಡು ಬರುತ್ತಿದ್ದ ದೃಶ್ಯಗಳನ್ನು ನೋಡಲು ಎರಡು ಕಣ್ಣುಗಳು ಸಾಲದು ಅನ್ನಿಸಿತು. ಸ್ವಿಡ್ಸರ್‌ಲ್ಯಾಂಡ್ ಕಣ್ಮನ ತಣಿಸುವ ಅತ್ಯಂತ ಸುಂದರವಾದ ದೇಶ. ಒಂದು ಮೂಲೆಯಲ್ಲಿ ಹಿಮಚ್ಛಾದಿತ ಆಲ್ಪ್ ಪರ್ವತ ಶ್ರೇಣಿ ಕಂಡು ಬರುತ್ತಿದ್ದರೆ, ರೈಲಿನ ಹಳಿಗಳ ಎರಡೂ ಕಡೆಗಳಲ್ಲಿ ಹಸಿರು ಹುಲ್ಲಿನಿಂದ ಕಂಗೊಳಿಸುತ್ತಿದ್ದ ಹುಲ್ಲುಗಾವಲು, ಅಲ್ಲೊಮ್ಮೆ ಇಲ್ಲೊಮ್ಮೆ ಕಂಡು ಬರುತ್ತಿದ್ದ ಸ್ವಿಸ್ ಹಸುಗಳು ಕಂಡುಬಂದವು. ಅಂದ ಹಾಗೆ ಸ್ವಿಡ್ಸರ್‌ಲ್ಯಾಂಡ್ ದೇಶ ಹಾಲಿನ ಉತ್ಪಾದನೆಗೆ ಮತ್ತು ಇದೇ ಕಾರಣಕ್ಕಾಗಿ ಚಾಕೊಲೇಟ್ ಉತ್ಪಾದನೆಗೆ ಹೆಸರುವಾಸಿ. ವಿಶ್ವದಲ್ಲಿ ಸ್ವಿಸ್ ಚಾಕೊಲೇಟ್ ಎಂದರೆ ಬಹಳ ಪ್ರಸಿದ್ಧಿ.

ಪಿಕ್ಚರ್ ಪೋಸ್ಟ್ ಕಾರ್ಡೇ ಜೀವಂತವಾಗಿ ಬಂದ ಹಾಗೆ ಸಣ್ಣಪುಟ್ಟ ಗುಡ್ಡಗಳು ವಿಶಾಲವಾದ ಹೊಲಗಳು, ಅವುಗಳ ಮಧ್ಯ ಸಣ್ಣ ಸಣ್ಣ ಮನೆಗಳು, ಹಳ್ಳ-ಕೊಳ್ಳಗಳು, ಭರದಿಂದ ಹರಿಯುತ್ತಿರುವ ಪುಟ್ಟ ಪುಟ್ಟ ಝರಿಗಳನ್ನು ನೋಡುತ್ತಾ ಹೊತ್ತು ಹೋದದ್ದೇ ತಿಳಿಯಲಿಲ್ಲ. ಲೂಸರ್ನ್ ರೈಲು ನಿಲ್ದಾಣ ತಲುಪುವವರೆಗೆ ನಾವು ಹೊರಗಿನ ಪ್ರಕೃತಿ ಸೌಂದರ್ಯದ ಸಂಪೂರ್ಣ ಆಸ್ವಾದನೆ ಮಾಡಿ, ಆ ದೇಶದ ವೀಸಾ ಪಡೆಯಲು ಪಟ್ಟ ಕಷ್ಟ ನಿಜಕ್ಕೂ ಸಾರ್ಥಕ ಎಂದುಕೊಂಡೆವು.

ನಮ್ಮ ರೈಲು ಲೂಸರ್ನ್ ನಿಲ್ದಾಣದಲ್ಲಿ ಬಂದು ನಿಂತಾಗ, ಮನಸ್ಸು ಸಾಕಷ್ಟು ಪುಳಕಿತಗೊಂಡಿತ್ತು. ಲೂಸರ್ನ್ ನಗರ ನೋಡಲು ಒಂದು ದಿನ ಸಾಕು ಎಂದು ಹೇಳಿದ್ದರಿಂದ ನಾವು ಅಲ್ಲಿ ಯಾವ ಹೋಟೆಲ್‌ನಲ್ಲೂ ಉಳಿಯುವ ವ್ಯವಸ್ಥೆ ಮಾಡಿಕೊಂಡಿರಲಿಲ್ಲ. ರೈಲ್ವೆ ನಿಲ್ದಾಣದ ನೆಲಮಾಳಿಗೆಯಲ್ಲಿ ಇರುವ ಲಾಕರ್‌ನಲ್ಲಿ ಸ್ವಿಸ್ ನಾಣ್ಯ ಹಾಕಿ ನಮ್ಮ ಸೂಟ್‌ಕೇಸ್‌ಗಳನ್ನು ಲಾಕರ್‌ನಲ್ಲಿ

ಇಟ್ಟು ಹೊರಬಂದೆವು. ಈ ರೈಲು ನಿಲ್ದಾಣದ ನೆಲಮಾಳಿಗೆಯ ವಿಶೇಷತೆ ಏನೆಂದರೆ ಅಲ್ಲಿ ಬಹು ದೊಡ್ಡ ಶಾಪಿಂಗ್ ಮಾಲ್ ಕಟ್ಟಲಾಗಿದೆ. ತರಹೇವಾರಿ ವಸ್ತುಗಳನ್ನು ಅಲ್ಲಿ ಖರೀದಿಸಬಹುದು.

ರೈಲು ನಿಲ್ದಾಣದಿಂದ ಹೊರಗಡೆ ಬರುತ್ತಿದ್ದಂತೆಯೇ ಎದುರುಗಡೆ ಕಾಣಸಿದ್ದು ವಿಶ್ವ ವಿಖ್ಯಾತ ಲೂಸರ್ನ್ ಸರೋವರ. ಸ್ವಿಟ್ಸರ್‌ಲ್ಯಾಂಡ್ ದೇಶ ಹಲವಾರು ಸರೋವರಗಳಿಗೆ ಪ್ರಖ್ಯಾತಿಯಾಗಿದ್ದು ಲೂಸರ್ನ್ ಸರೋವರ ಈ ದೇಶದ ಖ್ಯಾತಿವೆತ್ತ ಸರೋವರ. ನಾವು ಸರೋವರದ ಮುಂದೆ ಇರುವ ಕೌಂಟರ್ ಒಂದಕ್ಕೆ ಹೋಗಿ ಅಲ್ಲಿದ್ದ ಮಹಿಳೆಯ ಬಳಿ ಈ ಸರೋವರದಲ್ಲಿ ಬೋಟಿಂಗ್ ಮಾಡಬಹುದೇ ಎಂದು ಕೇಳಿದೆ. ಆಕೆ ಬಹಳ ಸಿಡುಕಿನಿಂದಲೇ ಇಲ್ಲ ಎಂದಳು. ನಾವು ಬೇರೆ ದೇಶದವರು, ನಮಗೆ ಇಲ್ಲಿಯ ವಿಷಯ ಗೊತ್ತಿಲ್ಲ. ಏಕೆ ಸಿಡುಕುತ್ತಾ ಉತ್ತರ ಕೊಡುತ್ತೀರಿ ಎಂದು ಕೇಳಿದಾಗ, ಆಕೆ ಹೇಳಿದ ಮಾತು ಇನ್ನೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ನಾವು ಯೂರೋಪಿಯನ್ನರು ನಿಮ್ಮ ದೇಶಕ್ಕೆ ಬರುವ ಮೊದಲು ನಿಮ್ಮ ದೇಶದ ಬಗ್ಗೆ ಎಲ್ಲಾ ವಿಷಯಗಳನ್ನೂ ತಿಳಿದುಕೊಂಡು ನಿಮ್ಮ ದೇಶ ಸುತ್ತುತ್ತೇವೆ. ನೀವು ಈ ಊರಿನ ವಿಷಯ ಏನೂ ತಿಳಿಯದೆ ನಮಗೆ ತೊಂದರೆ ಕೊಡುತ್ತೀರಿ, ಬೇಕಾದರೆ ಒಂದು ಗೈಡ್ ಬುಕ್ ಖರೀದಿಸಿ ಅದನ್ನು ಓದಿ. ಇಲ್ಲದಿದ್ದರೆ ಈ ಮೂಲೆಯಲ್ಲಿಟ್ಟಿರುವ ಮಡಿಕೆ ಪತ್ರ (Brochure) ಓದಿ ಎಂದಳು.

ಮರು ಮಾತನಾಡದೆ ಲೂಸರ್ನ್ ನಗರದ ಬಗ್ಗೆ ಮಾಹಿತಿಯಿದ್ದ ಪುಟ್ಟ ಪುಸ್ತಕವನ್ನು ತೆಗೆದುಕೊಂಡು ಸರೋವರದ ಪಕ್ಕದಲ್ಲಿರುವ ಕಲ್ಲು ಬೆಂಚಿನ ಮೇಲೆ ನಾನು ನನ್ನ ಹೆಂಡತಿ ಕುಳಿತು ಆ ಊರಿನಲ್ಲಿ ಏನೇನು ನೋಡಬಹುದು ಎಂದು ವಿಚಾರ ಮಾಡತೊಡಗಿದೆವು.

ಹತ್ತನೇ ಶತಮಾನದ ಪೂರ್ವಭಾಗದಲ್ಲಿ ಲೂಸರ್ನ್ ಸರೋವರದ ಒಂದು ಮೂಲೆಯಲ್ಲಿ ಕಟ್ಟಲ್ಪಟ್ಟ ಈ ನಗರ ಪ್ರವಾಸಿ ತಾಣ ಎಂದೇ ಪ್ರಸಿದ್ಧಿಯಾಗಿದೆ. ರೈಲ್ವೇ ಸ್ಟೇಷನ್‌ನ ಹೊರಗಡೆ ಸರೋವರದ ಮೇಲೆ ಎರಡು ಸೇತುವೆಗಳು ಇವೆ. ಮೊದಲ ಸೇತುವೆ ಕಾಂಕ್ರೀಟ್‌ನಿಂದ ಕಟ್ಟಲ್ಪಟ್ಟಿದ್ದರೆ ಇನ್ನೊಂದು ಸೇತುವೆಯನ್ನು ಮರದಿಂದ ಮಾಡಲಾಗಿದೆ. ಮರದ ಸೇತುವೆಗೆ ಛಾಪೆಲ್ ಬ್ರಿಡ್ಜ್ ಎಂದು ಕರೆಯುತ್ತಾರೆ. ಏಕೆಂದರೆ ಇದರ ಪಕ್ಕದಲ್ಲಿ ಒಂದು ಸಣ್ಣ ಛಾಪೆಲ್ ಇದ್ದು ಈ ಛಾಪೆಲ್‌ನ ಒಳಗಡೆ ಹಲವಾರು ಉತ್ತಮ ಪೇಂಟಿಂಗ್‌ಗಳು ಇವೆ.

ಇದರ ಹತ್ತಿರದಲ್ಲೇ ಸುಮಾರು 115 ಅಡಿ ಎತ್ತರದ ವಾಟರ್ ಟವರ್ ಇದೆ. 1300ನೇ ಇಸವಿಯಲ್ಲಿ ಕಟ್ಟಲ್ಪಟ್ಟ ಈ ಗೋಪುರವನ್ನು ನೋಡಿದ ಕೂಡಲೇ ನನ್ನ ಹೆಂಡತಿ ಹಲವಾರು ಹಿಂದಿ ಚಿತ್ರಗಳಲ್ಲಿ ಈ ನೀರಿನ ಗೋಪುರದ ದೃಶ್ಯಗಳನ್ನು ಚಿತ್ರೀಕರಿಸಿದ್ದಾರೆಂದು ನನಗೆ ಜ್ಞಾಪಿಸಿದಳು.

ಅಂದ ಹಾಗೆ ಲೂಸರ್ನ್ ಪಟ್ಟಣದಲ್ಲಿ ಇತ್ತೀಚೆಗೆ ಹಲವಾರು ಹಿಂದಿ ಚಿತ್ರಗಳನ್ನು ಚಿತ್ರೀಕರಿಸಿರುವುದರಿಂದ ಅಲ್ಲಿಯ ಕಟ್ಟಡಗಳು ಹಾಗೂ ದೃಶ್ಯಗಳನ್ನು ನೋಡಿದರೆ ಹಿಂದಿ ಚಿತ್ರಗಳೇ ನೆನಪಾಗುತ್ತದೆ. ಅಲ್ಲಿಂದ ಮುಂದೆ ನಾವು ಲೂಸರ್ನ್ ಪಟ್ಟಣದ ಹಳೆಯ ಭಾಗಕ್ಕೆ ಹೋದೆವು. ಆ ಭಾಗದಲ್ಲಿ ಐದು ಶತಮಾನಗಳಿಗೂ ಪ್ರಾಚೀನವಾದ ಹಲವಾರು ಕಟ್ಟಡಗಳು ಇವೆ. ರಸ್ತೆಗೆ ಡಾಂಬರ್ ಹಾಕದೆ ಕಲ್ಲಿನ ಇಟ್ಟಿಗೆಗಳನ್ನು ಜೋಡಿಸಿ ರಸ್ತೆ ಮಾಡಿದ್ದಾರೆ. ಇದಕ್ಕೆ ಕಾಬಲ್ಸ್ ಸ್ಟ್ರೀಟ್ ಎಂದು ಕರೆಯುತ್ತಾರೆ. ಈ ನಗರದ ಚರ್ಚ್‌ಗಳು ಹಾಗೂ ಅಂಗಡಿಗಳನ್ನು ನೋಡಿದ ನಾವು ಆ ನಗರದ ಅತಿ ಪ್ರಸಿದ್ಧ ಪ್ರವಾಸಿ ತಾಣ ಯಾವುದು ಎಂದು ಕೇಳಿದಾಗ, ಅಲ್ಲಿಯ ಜನ ನೀವು ಲಯನ್ ಮಾನ್ಯುಮೆಂಟ್ ನೋಡಿ ಎಂದರು. ಅಷ್ಟರಲ್ಲಿ ಸಣ್ಣಗೆ ಮಳೆ ಬರಲು ಪ್ರಾರಂಭವಾಯಿತು.

ಆದರೂ ನಾವು ಹತ್ತಿರದಲ್ಲಿ ಇದ್ದ ಒಂದು ಸಣ್ಣ ಉದ್ಯಾನ ವನಕ್ಕೆ ಹೋದೆವು. ಆ ಉದ್ಯಾನ ವನದಿಂದ ಸ್ವಲ್ಪ ಮೇಲ್ಭಾಗದಲ್ಲಿ ಒಂದು ದೊಡ್ಡ ಬಂಡೆಯ ಮೇಲೆ ಸಿಂಹವೊಂದರ ಚಿತ್ರವನ್ನು ಕೆತ್ತಲಾಗಿದೆ. ಮಲಗಿರುವ ಈ ಸಿಂಹಕ್ಕೆ ಒಂದು ಬಾಣ ನೆಟ್ಟಿದ್ದು ಸಿಂಹದ ಕಣ್ಣಿನಿಂದ ನೀರು ಬರುತ್ತಾ ಇರುವಂತೆ ಕೆತ್ತಲಾಗಿದೆ. 1792ರಲ್ಲಿ ಹಲವಾರು ಸ್ವಿಸ್ ಸೈನಿಕರು ಫ್ರೆಂಚರ ಜೊತೆ ಕಾಳಗದಲ್ಲಿ ಮಡಿದಾಗ ಮೃತ ಸೈನಿಕರ ಸ್ಮರಣಾರ್ಥ ಈ ಸ್ಮಾರಕವನ್ನು ಕಟ್ಟಲಾಯಿತಂತೆ. ಈ ಸ್ಮಾರಕವನ್ನು ನೋಡಿದ ಅಮೇರಿಕನ್ ಲೇಖಕ ಮಾರ್ಕ್‌ಟ್ವೇನ್ "ಈ ಸ್ಮಾರಕ ವಿಶ್ವದಲ್ಲೇ ಅತಿ ದುಃಖ ಮೂಡಿಸುವ ಬಂಡೆಕಲ್ಲು" ಎಂದು ಬಣ್ಣಿಸಿದ್ದಾನೆ. ಈ ಸ್ಮಾರಕವನ್ನು ನೋಡಿದ ನಾವು ನಗರ ಮಧ್ಯ ಭಾಗಕ್ಕೆ ಬಂದೆವು. ಅಲ್ಲಿ ಅಂಗಡಿಗಳಲ್ಲಿ ಪಿಕ್ಚರ್ ಪೋಸ್ಟ್‌ಕಾರ್ಡುಗಳು, ಕೀಚೈನುಗಳು ಮತ್ತಿತರ ಸೊವೆನೀರುಗಳನ್ನು ಮಾರುತ್ತಾ ಇದ್ದರು. ನನ್ನ ಶ್ರೀಮತಿ ಅಲ್ಲೇ ಇದ್ದ ಒಂದು Cow Bell (ಹಸುವಿನ ಕುತ್ತಿಗೆಗೆ ಹಾಕುವ ಗಂಟೆ)ನೋಡಿ, ದಿಲ್ವಾಲೇ ದುಲ್ಹಾನಿಯಾ ಚಿತ್ರದಲ್ಲಿ ಅದೇ ರೀತಿ ಗಂಟೆಯನ್ನು ಕಾಜೋಲ್ ಇಟ್ಟುಕೊಂಡಿದ್ದಳು ಎಂದು ಹೇಳಿ ಆ ಘಂಟೆಯನ್ನು ಖರೀದಿಸಿದಳು.

ನಾವು ಅಲ್ಲಿಂದ ರೈಲು ನಿಲ್ದಾಣಕ್ಕೆ ಬಂದು ನಮ್ಮ ಸೂಟ್‌ಕೇಸ್‌ಗಳನ್ನು ಪಡೆದು ಜೂರಿಕ್‌ಗೆ ಹೋಗುವ ರೈಲು ಹಿಡಿದೆವು.



ಜೂರಿಕ್

ಲೂಸರ್ನ್ ನಿಂದ ರೈಲಿನಲ್ಲಿ ಒಂದು ಗಂಟೆ ಪ್ರಯಾಣ ಮಾಡಿದ ನಂತರ ಜೂರಿಕ್ ನಗರ ತಲುಪಿದೆವು. ಸ್ವಿಸ್ ದೇಶದಲ್ಲಿ ಇರುವುದು ಎರಡೇ ಪ್ರಮುಖ ನಗರಗಳು - ಜಿನೇವಾ ಹಾಗೂ ಜೂರಿಕ್. ಜಿನೇವಾನಗರ ದೇಶದ ರಾಜಧಾನಿ ಆಗಿದ್ದರೂ ನಮ್ಮಲ್ಲಿನ ಮುಂಬೈಯಂತೆ ಜೂರಿಕ್‌ನಗರ ಈ ದೇಶದ ವಾಣಿಜ್ಯ ರಾಜಧಾನಿ ಆಗಿರುವುದೂ ಅಲ್ಲದೆ ಸ್ವಿಸ್ ದೇಶದ ಅತಿದೊಡ್ಡ ನಗರವಾಗಿದೆ. ಎರಡು ನದಿಗಳು ಹಾಗೂ ಒಂದು ದೊಡ್ಡ ಸರೋವರದ ಅಕ್ಕಪಕ್ಕದಲ್ಲಿ ನಿರ್ಮಾಣವಾಗಿರುವ ಈ ನಗರ ಯೂರೋಪ್ ಖಂಡದ ಚಿನ್ನದ ವಹಿವಾಟಿನ ಕೇಂದ್ರ ಸ್ಥಾನ. ಹಲವಾರು ಇಂಜಿನಿಯರಿಂಗ್ ಉದ್ಯಮಗಳ ತವರಾದ ಜೂರಿಕ್ ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ ವಸ್ತುಗಳಿಗೂ ಹೆಸರುವಾಸಿ.

ಜೂರಿಕ್‌ನಲ್ಲಿ ಇಳಿದುಕೊಳ್ಳಲು ಮೊದಲಿಗೇ ಹೋಟೆಲ್ ರೂಂ ಕಾಯ್ದಿರಿಸಿದ್ದರಿಂದ ನಾವು ರೈಲು ನಿಲ್ದಾಣದಿಂದ ಹೊರಬಂದು ಟ್ಯಾಕ್ಸಿಯಲ್ಲಿ ಕುಳಿತು ಹೋಟೆಲ್ ಹತ್ತಿರ ಹೋದೆವು. ಕೇವಲ ಐದು ನಿಮಿಷಗಳಲ್ಲಿ ನಮ್ಮ ಹೋಟೆಲ್ ಸಿಕ್ಕಿತು. ರೈಲು ನಿಲ್ದಾಣಕ್ಕೆ ಅಷ್ಟು ಹತ್ತಿರದಲ್ಲಿ ಹೋಟೆಲ್ ಇದೆ ಎಂದು ತಿಳಿದಿದ್ದರೆ ನಾವು ನಡೆದೇ ಬರಬಹುದಾಗಿತಲ್ಲ ಎಂದಳು ನನ್ನ ಶ್ರೀಮತಿ. ಹೋಟೆಲ್‌ನ ರಿಸೆಪ್ಷನ್‌ನಲ್ಲಿ ಜೂರಿಕ್‌ನಲ್ಲಿ ನೋಡಬೇಕಾದ ಜಾಗಗಳು, ಆ ನಗರ ಸುತ್ತಾಡುವ ವ್ಯವಸ್ಥೆ ಇವುಗಳ ಬಗ್ಗೆ ಮಾಹಿತಿ ಕೇಳಿದೆ. ಹಲವಾರು ಪುಸ್ತಕಗಳನ್ನು ಓದಲು ಕೊಟ್ಟರು. ರೂಮಿಗೆ ಹೋದೊಡನೆ ನಾಳೆ ಬೆಳಿಗ್ಗೆ ನೋಡಬೇಕಾದ ಸ್ಥಳಗಳ ಪಟ್ಟಿ ಮಾಡತೊಡಗಿದೆವು.

ಅಷ್ಟರಲ್ಲಿ ಹೋಟೆಲ್ ಮ್ಯಾನೇಜರ್ ಫೋನ್ ಮಾಡಿ, ನೀವು ನಗರ ಪ್ರದಕ್ಷಿಣೆ ಮಾಡಬೇಕಾದರೆ ಬಸ್ಸಿನಲ್ಲಿ ಕರೆದುಕೊಂಡು ಹೋಗುವ Guided Tour ಮಾಡಿ, ಬಹಳ ಖರ್ಚು ಬರುವುದಿಲ್ಲ ಎಂದ. ಅವನೇ ಟೂರ್‌ಗೆ ಟಿಕೇಟ್ ಕೊಡುತ್ತೇನೆ ಎಂದ. ಸರಿ ಎಂದು ಅವನಲ್ಲಿ ಟಿಕೇಟ್ ಕಾಯ್ದಿರಿಸಿ ಮಲಗಿದೆವು.

ಬೆಳಗ್ಗೆ ಎದ್ದ ಕೂಡಲೇ ಭರ್ಜರಿ ಉಪಾಹಾರ ನಮಗಾಗಿ ಕಾದಿತ್ತು. ತರಹೇವಾರಿ ಖಾದ್ಯಗಳು ತಯಾರಿದ್ದವು. ಯೂರೋಪ್ ದೇಶದಲ್ಲಿ ಪ್ರವಾಸ ಮಾಡುವ ಶಾಖಾಹಾರಿಗಳಿಗೆ ಊಟತಿಂಡಿ ದೊರೆಯುವುದೇ ಇಲ್ಲ. ಭಾರತೀಯ ಊಟ ಪಡೆಯಲು ಬಹಳ ಪ್ರಯಾಸಪಟ್ಟು ಉಪಾಹಾರ ಗೃಹ ಹುಡುಕಬೇಕು. ಓೀಗಾಗಿ ಇಳಿದುಕೊಳ್ಳುವ ಹೋಟೆಲ್‌ಗಳಲ್ಲಿ ಬೆಳಿಗ್ಗೆ ಮುಫತ್ತಾಗಿ ಕೊಡುವ

ಉಪಾಹಾರವನ್ನು ಸಂಕೋಚವಿಲ್ಲದೆ ಹೊಟ್ಟೆ ತುಂಬ ಸೇವಿಸಬೇಕು ಎನ್ನುವ ವಿಚಾರ ನಮಗಾಗಲೇ ವೇದ್ಯವಾಗಿತ್ತು. ಸಾಮಾನ್ಯವಾಗಿ ಯೂರೋಪ್ ನೋಡಲು ಬರುವ ಪ್ರವಾಸಿಗರು ಬೆಳಗಿನ ಉಪಾಹಾರದ ನಂತರ ಮಧ್ಯಾಹ್ನದ ಊಟವನ್ನು ಮರೆಯಬೇಕಾಗುತ್ತದೆ. ಏಕೆಂದರೆ ಸರಿಯಾದ ಶಾಖಾಹಾರಿ ಊಟ ದೊರೆಯುವುದಿಲ್ಲ. ಒಂದು ವೇಳೆ ದೊರೆತರೂ ಅದು ತುಂಬಾ ದುಬಾರಿ. ಮೆಕ್ ಡೊನಾಲ್ಡ್ ನಂತಹ ರೆಸ್ಟೋರೆಂಟ್‌ಗಳಿಗೆ ಹೋಗಿ ಆಲೂಗಡ್ಡೆ ಚಿಪ್ಸ್ ಮತ್ತು ಕಾಫಿ ಸೇವಿಸಿದರೆ ಕಡಿಮೆ ಎಂದರೆ 200ರೂ. ಹಣ ಕೊಡಬೇಕು. ಹೀಗಾಗಿ ಆರ್ಥಿಕ ಮಿತಿಯಲ್ಲಿ ಯೂರೋಪ್ ಪ್ರವಾಸ ಮಾಡುವವರು ಮಧ್ಯಾಹ್ನದ ಊಟ ಬಿಡಬೇಕಾಗುತ್ತದೆ.

ಬೆಳಗಿನ ಉಪಾಹಾರ ಮುಗಿಸಿದ ನಂತರ ನಮ್ಮ ಹೋಟೆಲ್ ಬದಿಗೇ ಬಂದ ಒಂದು ಸುಸಜ್ಜಿತ ಲಕ್ಷುರಿ ಬಸ್ ಜೂರಿಕ್ ನಗರ ಪ್ರದಕ್ಷಿಣೆಗೆ ನಮ್ಮನ್ನು ಕರೆದೊಯ್ದಿತು. ನಗರದ ಮಧ್ಯ ಭಾಗದಿಂದ ಹೊರಟ ನಮ್ಮ ಬಸ್ ಜೂರಿಕ್ ಸರೋವರದ ಮುಂದುಗಡೆ ಹಾಯ್ದು ಹಳೆಯ ಜೂರಿಕ್ ತಲುಪಿ ಅಲ್ಲಿಂದ ನೇರವಾಗಿ Adliswil ಎನ್ನುವ ಪ್ರದೇಶಕ್ಕೆ ಕರೆದೊಯ್ದಿತು. ನಮ್ಮ ಗೈಡ್ ನಮ್ಮನ್ನು ಬಸ್‌ನಿಂದ ಇಳಿಸಿ ಹತ್ತಿರದಲ್ಲೇ ಇದ್ದ ಒಂದು ಬೂತಿನಿಂದ ಟಿಕೇಟ್ ನಮಗಾಗಿ ಖರೀದಿಸಿ "ನಾವು ಈಗ ಕೇಬಲ್ ಕಾರ್ ಮೂಲಕ ಒಂದು ದೊಡ್ಡ ಬೆಟ್ಟ ಹತ್ತಲಿದ್ದೇವೆ. ಈ ಬೆಟ್ಟದ ಮೇಲಿಂದ ಜೂರಿಕ್ ನಗರದ ವಿಹಂಗಮ ನೋಟವನ್ನು ನಾವು ನೋಡಬಹುದು" ಎಂದ. ನಾವು ಕೇಬಲ್ ಕಾರ್ ಏರಿದೆವು. ಸುಮಾರು 15 ನಿಮಿಷದ ಪ್ರಯಾಣದ ನಂತರ ಕೇಬಲ್ ಕಾರ್ Felsenegg ಎನ್ನುವ ಬೆಟ್ಟದ ತುದಿಗೆ ಕರೆದೊಯ್ದಿತು. 100 ಮೀ ನಡೆದ ಕೂಡಲೇ ವ್ಯೂ ಪಾಯಿಂಟ್ ಸಿಕ್ಕಿತು. ಅಲ್ಲಿಂದ ನಮ್ಮ ಎದುರುಗಡೆ ಜೂರಿಕ್ ನಗರದ ಅತಿ ವಿಹಂಗಮ ನೋಟ ಲಭ್ಯವಾಯಿತು. ಜೂರಿಕ್ ನಗರದಲ್ಲಿ ಹರಿಯುವ Limmath ಹಾಗೂ Sil ನದಿಗಳನ್ನು ನೋಡಿದ್ದಲ್ಲದೆ ಜೂರಿಕ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕೂಡಾ ನೋಡಿದೆವು. ದೂರದಲ್ಲಿ ಹಿಮಛ್ಛಾದಿತ ಆಲ್ಪ್ ಪರ್ವತವು ಕಾಣುತ್ತಿತ್ತು. ಬೆಟ್ಟದ ಮೇಲೆ "ರೊಯ್" ಎಂದು ತಣ್ಣಗಿನ ಗಾಳಿ ಬೀಸುತ್ತಿತ್ತು. ಇಲ್ಲಿ ವಾಕಿಂಗ್ ಹಾಗೂ ಜಾಗಿಂಗ್ ಮಾಡಲು ತುಂಬಾ ಚೆನ್ನ ಎಂದು Guide ಹೇಳಿ ನಮ್ಮನ್ನು ಬೆಟ್ಟದ ಮೇಲ್ಭಾಗದಲ್ಲಿ ವಾಕ್ ಮಾಡಲು ಕಳುಹಿಸಿದ. ಆ ಬೆಟ್ಟದ ಮೇಲೆ ವಾಕ್ ಮಾಡಿದೆವು. ನಮ್ಮ ಸುತ್ತಮುತ್ತಲಿನ ಪ್ರದೇಶ ಹಚ್ಚ ಹಸಿರು ಹುಲ್ಲುಹಾಸು ಎತ್ತರದ ವೃಕ್ಷಗಳು ಹಾಗೂ ಹೂವಿನ ಗಿಡಗಳಿಂದ ಕಂಗೊಳಿಸುತ್ತಿತ್ತು. ವಾಕಿಂಗ್ ಮುಗಿಸಿ ಅಲ್ಲೇ ಇದ್ದ ಸಣ್ಣ ಅಂಗಡಿಯಲ್ಲಿ ಟೀ ಸೇವಿಸಿ, ಮತ್ತೆ ಕೇಬಲ್ ಕಾರ್ ಮೂಲಕ ಕೆಳಕ್ಕೆ ಇಳಿದೆವು. ನಮ್ಮ ಬಸ್ ನಿಲ್ಲಿಸಿದ್ದ ಜಾಗದ ಹತ್ತಿರ ಒಂದು ದೊಡ್ಡ ಪೋಸ್ಟರ್ ಹಾಕಿದ್ದರು. ಅದರ ಮೇಲೆ ರವಿಶಂಕರ್ ಗುರೂಜಿ ಅವರ ಚಿತ್ರ ಇತ್ತು. ನಮ್ಮ ಬೆಂಗಳೂರು ವ್ಯಕ್ತಿ ವಿಕಾಸ್ ಫೌಂಡೇಷನ್‌ನ ಗುರೂಜಿ ಇಲ್ಲಿ ಬಂದಿದ್ದಾರೆ ಎಂದು ನನ್ನ ಸಹ ಪ್ರಯಾಣಿಕರಿಗೆ ತೋರಿಸಿದೆ. ಅಲ್ಲಿಂದ ಬಸ್ ಹೊರಟು ಒಂದು ಚಾಕೊಲೇಟ್ ಫ್ಯಾಕ್ಟರಿ ಮುಂದೆ ನಿಂತಿತು. ಈ ದೇಶ ಚಾಕೊಲೇಟ್‌ಗಳಿಗೆ ಪ್ರಸಿದ್ಧಿಯಾಗಿರುವುದರಿಂದ ನಮಗೆ ಚಾಕೊಲೇಟ್ ಹೇಗೆ ಮಾಡುತ್ತಾರೆಂದು ತೋರಿಸುತ್ತೇನೆ ಎಂದ ನಮ್ಮ ಗೈಡ್. ಸುಮಾರು ಒಂದು ಗಂಟೆಯ ಕಾಲ ಚಾಕೊಲೇಟ್ ಪರಿಮಳ ಆಸ್ವಾದಿಸಿದೆವು. ಚಾಕೊಲೇಟ್ ಫ್ಯಾಕ್ಟರಿಯವರು ನಮಗೆ ಒಂದೊಂದು ಪ್ಯಾಕೇಟ್ ಚಾಕೊಲೇಟ್ ಬಳುವಳಿಯಾಗಿ ಕೊಟ್ಟರು. ಬಸ್ ಸ್ವಲ್ಪ ದೂರ ಹೋದ ಕೂಡಲೇ ಒಂದು ಸರೋವರದ ದಡಕ್ಕೆ ಬಂದು ಸರೋವರದಲ್ಲಿ ಲಂಗರು ಹಾಕಿದ್ದ ಒಂದು ಬೃಹತ್ ಫೆರ್ರಿಯ ಮೇಲೆ ಹೋಗಿ ನಿಂತಿತು. ಆ ಫೆರ್ರಿ

ನಮ್ಮನ್ನು ಹಾಗೂ ನಮ್ಮ ಬಸ್ಸನ್ನು ಜೊತೆಗೇ ಕರೆದುಕೊಂಡು ಪ್ರಶಾಂತವಾದ ಸರೋವರದ ಒಂದು ಪ್ರದಕ್ಷಿಣೆ ಮಾಡಿ ಸರೋವರದ ಆಚೆ ದಡಕ್ಕೆ ತಂದು ಮುಟ್ಟಿಸಿತು.

ಅಲ್ಲಿಂದ ನಾವು ಜೂರಿಕ್‌ನ ಹಲವಾರು ಪ್ರವಾಸೀ ಆಕರ್ಷಣೆಗಳನ್ನು ನೋಡಲು ಹೋದೆವು. ಮೊದಲಿಗೆ ನಮ್ಮನ್ನು ಹನ್ನೊಂದನೇ ಶತಮಾನದ Romanesk Grass Munster Churchಗೆ ಕರೆದೊಯ್ದರು. ಆ Protestant Church 13ನೇ ಶತಮಾನದಲ್ಲಿ ಕಟ್ಟಲಾಯಿತಂತೆ. ಈ ಚರ್ಚನ್ನು ನೋಡಿದ ನಂತರ ನಾವು Town Hall ನೋಡಿಕೊಂಡು ಸ್ವಿಸ್ ರಾಷ್ಟ್ರೀಯ ಸಂಗ್ರಹಾಲಯಕ್ಕೆ ಹೋದೆವು.

ಕ್ರಿ.ಪೂ. 58ರಲ್ಲಿ ಜೂರಿಕ್ ನಗರಕ್ಕೆ ರೋಮನ್ನರು ದಾಳಿ ಮಾಡಿದರು ಎಂದು ನಮ್ಮ ಗೈಡ್ ಹೇಳಿದ. 13ನೇ ಶತಮಾನದಲ್ಲಿ ಈ ನಗರವು ಹೋಲಿ ರೋಮನ್ ಎಂಪೈರ್‌ನ ಭಾಗವಾಗಿತ್ತು. ಈ ನಗರದಲ್ಲಿ ಹೆಸರಾಂತ ಮನೋವಿಜ್ಞಾನಿ ಹಾಗೂ ಕಾದಂಬರಿಕಾರ ಜೇಮ್ಸ್ ಜಾಯ್ಸ್ ಸತ್ತಿದ್ದು ಎಂದು ಅವನು ತಿಳಿಸಿದ. ಇಷ್ಟೆಲ್ಲಾ ನೋಡುವುದರಲ್ಲಿ ಸಂಜೆ ಆಗಿದ್ದರಿಂದ ನಾವು ನಗರಕ್ಕೆ ವಾಪಸ್ಸಾಗಿ ನಮ್ಮ ಹೋಟೆಲ್ ಸೇರಿದೆವು. ಮಾರನೇ ದಿನವೂ ಮಧ್ಯಾಹ್ನದ ವರೆಗೆ ನಾವು ಜೂರಿಕ್‌ನಲ್ಲಿ ಉಳಿಯಬೇಕಾದ್ದರಿಂದ ಕಾಲು ನಡಿಗೆಯಲ್ಲೇ ಜೂರಿಕ್ ನಗರ ನೋಡಬೇಕೆಂದು ನಿಶ್ಚಯಿಸಿ ನಾವಿಬ್ಬರೂ ಹೋಟೆಲ್‌ನಿಂದ ನಡೆದುಕೊಂಡೇ ಜೂರಿಕ್‌ನ ಹಲವಾರು ಪುರಾತನ ಕಟ್ಟಡಗಳು, ಚರ್ಚ್‌ಗಳು, ಉದ್ಯಾನವನಗಳನ್ನು ನೋಡಿದೆವು. ಆ ನಂತರ ಜೂರಿಕ್ ನಗರದ ಮಧ್ಯ ಭಾಗಕ್ಕೆ ಬಂದೆವು. ಜೂರಿಕ್‌ನ ಮಧ್ಯ ಭಾಗದಲ್ಲಿ ನಮ್ಮ ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಂತೆ ಬಾನ್ ಹಾಸ್ ಸ್ಟ್ರಾಫ್ ಎನ್ನುವ ದೊಡ್ಡ ರಸ್ತೆ ಇದೆ. ರಸ್ತೆಯ ಇಕ್ಕೆಲಗಳಲ್ಲೂ ಭಾರಿ ಅಂಗಡಿಗಳು ಇವೆ. ಜೂರಿಕ್ ನಗರ ಫ್ಯಾಷನ್‌ಗೆ ಹೆಸರಾದ್ದರಿಂದ ಅಲ್ಲಿನ ಬಟ್ಟೆಗಳು, ಚರ್ಮದ ವಸ್ತುಗಳು ಜಗದ್ವಿಖ್ಯಾತ. ಸ್ವಿಸ್ ದೇಶದ ಗಡಿಯಾರಗಳು ಹೆಸರುವಾಸಿಯಾದ್ದರಿಂದ ಹಲವಾರು ಗಡಿಯಾರದ ಅಂಗಡಿಗಳು ಇಲ್ಲಿವೆ. ಆದರೆ ಎಲ್ಲದರ ಬೆಲೆ ಮಧ್ಯಮವರ್ಗದವರ ಕೈಗೆ ಎಟಕುವಂತಿಲ್ಲದ್ದರಿಂದ ಶೋ ಕೇಸ್‌ನ ಕಿಟಕಿಯಿಂದಲೇ ಅವನ್ನು ನೋಡಿ ನಾವು ತೃಪ್ತಿಪಟ್ಟುಕೊಳ್ಳಬೇಕಾಯಿತು. ಮಧ್ಯಾಹ್ನದ ಊಟದ ವೇಳಗೆ ನಮ್ಮ ಜೂರಿಕ್ ಪ್ರವಾಸ ಸರಿಸುಮಾರು ಮುಗಿದಿತ್ತು. ಸ್ವಿಸ್ ದೇಶದಲ್ಲಿ ನೋಡಬೇಕಾದ್ದು ಇನ್ನೂ ಇತ್ತು. ಆದರೆ ನಾವು ಕೇವಲ ಮೂರು ದಿನಗಳು ಇರಲು ವೀಸಾ ಪಡೆದಿದ್ದರಿಂದ ನೋಡಬೇಕಾದ ಎಲ್ಲಾ ಸ್ಥಳಗಳನ್ನು ನೋಡಲಾಗಲಿಲ್ಲ. ಮತ್ತೊಮ್ಮೆ ಈ ದೇಶಕ್ಕೆ ಬಂದು ಆಲ್ಪ್ ಪರ್ವತ ಶ್ರೇಣಿಗಳಲ್ಲಿ ಬರ್ಫ್ ಗಡ್ಡೆಗಳ ಮೇಲೆ ಜಾರೋಣ ಎಂದುಕೊಂಡು ರೈಲ್ವೇ ನಿಲ್ದಾಣಕ್ಕೆ ನಡೆದುಕೊಂಡೇ ಬಂದೆವು.

10

ಫ್ರಾಂಕ್‌ಫರ್ಟ್

ಜೂರಿಕ್ ನಗರ ಸುತ್ತಾಡಿ ಮಧ್ಯಾಹ್ನ ನಾವು ರೈಲು ನಿಲ್ದಾಣದಲ್ಲಿ ರೈಲೇರಿದಾಗ ನನ್ನ ಶ್ರೀಮತಿ 'ನೋಡ್ರೀ ಈ ಗಾಡಿಯ ಡಬ್ಬ ಎಷ್ಟು ಚೆನ್ನಾಗಿದೆ' ಎಂದು ಉದ್ಗರಿಸಿದಳು. ನಾವು ಏರಿದ್ದ ಫಸ್ಟ್ ಕ್ಲಾಸ್ ಡಬ್ಬಿಯ ಸೀಟುಗಳು ವಿಮಾನದ ಸೀಟುಗಳಿಗಿಂತ ವಿಶಾಲವಾಗಿದ್ದು ಸೀಟಿನ ಮುಂದುಗಡೆ ನಾವು ಓದಲೆಂದು ವೃತ್ತ ಪತ್ರಿಕೆಗಳು ಹಾಗೂ ಮ್ಯಾಗಝೈನ್‌ಗಳನ್ನು ಇಟ್ಟಿದ್ದರು. ಸೂಟ್‌ಕೇಸುಗಳನ್ನು ಇಡಲು ವಿಶಾಲವಾದ ಜಾಗ ಮಾಡಿದ್ದರು. ನಾವು ಇಲ್ಲಿಯವರೆವಿಗೂ ಪ್ರಯಾಣಿಸಿದ್ದ ಫ್ರೆಂಚ್ ಇಟಾಲಿಯನ್ ಅಥವಾ ಸ್ವಿಸ್ ರೈಲುಗಳಿಗಿಂತ ಈ ರೈಲು ಚೆನ್ನಾಗಿತ್ತು. ಎಷ್ಟಾದರೂ ಜರ್ಮನರು ಇಂಜನಿಯರಿಂಗ್ ಉದ್ಯಮದಲ್ಲಿ ಎತ್ತಿದ ಕೈ ಅಲ್ಲವೇ ಅದಕ್ಕೇ ಮರ್ಸಿಡಿಸ್ ಕಾರ್‌ನಂತೆ ಈ ರೈಲು ಮಾಡಿದ್ದಾರೆ ಎಂದು ನಾನು ಶ್ರೀಮತಿಗೆ ಹೇಳಿದೆ.

ಸೀಟಿನ ಮುಂದೆ ಒಂದು ವೇಳಾಪತ್ರಿಕೆ ಇಟ್ಟಿದ್ದರು. ನಮ್ಮ ರೈಲು ಜೂರಿಕ್ ಬಿಡುವ ಸಮಯ 2 : 37 ಎಂದು ಬರೆದಿದ್ದರು. ಯೂರೋಪಿನ ಈ ಎಲ್ಲಾ ದೇಶಗಳಲ್ಲೂ ರೈಲುಗಳು ಆಗಮಿಸುವ ಹಾಗೂ ನಿರ್ಗಮಿಸುವ ಸಮಯವನ್ನು ಕರಾರುವಾಕ್ಕಾಗಿಯೇ ಬರೆಯುತ್ತಾರೆ. ಎರಡು ಗಂಟೆ ಹತ್ತು ನಿಮಿಷಕ್ಕೆ ನಿರ್ಗಮಿಸಬೇಕಾದ ರೈಲು ಪ್ಲಾಟ್‌ಫಾರ್ಮಿಗೆ ಎರಡು ಗಂಟೆ ಏಳು ನಿಮಿಷಕ್ಕೆ ಅಥವಾ ಎಂಟು ನಿಮಿಷಕ್ಕೆ ಬರುತ್ತದೆ. ಎರಡು ಮೂರು ನಿಮಿಷಗಳ ಒಳಗಡೆಯೇ ಇಳಿಯುವವರು ಇಳೀತಾರೆ. ಹತ್ತುವವರು ಹತ್ತುತ್ತಾರೆ. ಕೂಲಿಗಳು ಇಲ್ಲದೇ ಇರೋದರಿಂದ ಯಾರೂ ಭಾರೀ ಸೂಟ್‌ಕೇಸ್‌ಗಳನ್ನು ತರುವುದಿಲ್ಲ. ದೊಡ್ಡ ಸೂಟ್‌ಕೇಸ್ ತಂದರೆ ನಾವು ಕೂಡುವ ಡಬ್ಬಿಯ ಹೊರಭಾಗ. ಅಂದರೆ ಶೌಚಾಲಯದ ಪಕ್ಕ ಇರುವ ಜಾಗದಲ್ಲೇ ಇಡಬೇಕು. ಸಣ್ಣ ಸೂಟ್‌ಕೇಸ್, ಕಿಟ್‌ಬ್ಯಾಗ್ ನಾವು ಕೊಡುವ ಜಾಗಕ್ಕೆ ಒಯ್ಯಬಹುದು.

ಸರಿಯಾಗಿ 2 : 37ಕ್ಕೆ ಬಿಟ್ಟ ರೈಲು ಜರ್ಮನಿ ದೇಶದ ಗಡಿ ತಲುಪಿದಾಗ ಸಂಜೆ ಐದಾಗಿತ್ತು ಜರ್ಮನಿ ದೇಶದ ಒಳಗೆ ಹೋಗುವಾಗಲೇ ರೈಲಿನ ಕಿಟಕಿಯಿಂದ ಅರಣ್ಯಭಾಗ ಗೋಚರಿಸಿತು. ಬ್ಲಾಕ್ ಫಾರೆಸ್ಟ್ ಎಂದು ಕರೆಯಲಾಗುವ ಈ ಅರಣ್ಯ ಜರ್ಮನೀ ದೇಶದ ಅತಿ ಸುಂದರ ಪ್ರದೇಶಗಳಲ್ಲಿ ಒಂದಂತೆ. ಈ ಅರಣ್ಯಗಳನ್ನು ನೋಡಲೆಂದೇ ಊರೂರುಗಳಿಂದ ಪ್ರವಾಸಿಗರು ಬರ್‍ತಾರಂತೆ. ಅರಣ್ಯ ದಾಟಿ ರೈಲು ಮುಂದೆ ಸಾಗಿದಾಗ ಸಣ್ಣ ಸಣ್ಣ ಊರುಗಳು ಕಾಣಿಸಿದವು. ಈ

ಎಲ್ಲಾ ಊರುಗಳಲ್ಲೂ ನಾವು ಹಲವಾರು ಕಾರ್ಖಾನೆಗಳು ಇರುವುದನ್ನು ಗಮನಿಸಿದೆವು. ಜರ್ಮನಿ ಕೈಗಾರಿಕೆಗಳಿಗೆ ಬಹಳ ಪ್ರಸಿದ್ಧಿ ಅಲ್ಲವೇ ಎಂದುಕೊಂಡೆ.

ರಾತ್ರಿ ಎಂಟು ಗಂಟೆಗೆ ನಮ್ಮ ರೈಲು ಫ್ರಾಂಕ್‌ಫರ್ಟ್ - ಆಮ್ - ಮೇನ್ ನಿಲ್ದಾಣ ತಲುಪಿತು. ನಾವು ಇದುವರೆವಿಗೂ ನೋಡಿದ್ದಕ್ಕಿಂತ ಭಾರೀ ರೈಲು ನಿಲ್ದಾಣ. ರೈಲಿನಿಂದ ಇಳಿದು ವೇಟಿಂಗ್ ರೂಮಿಗೆ ಬಂದೆವು. ನಮ್ಮ ದೇಶದ ರಾಯಭಾರಿ ಕಛೇರಿಯಲ್ಲಿ ಕೆಲಸಮಾಡುತ್ತಿದ್ದ ನನ್ನ ಬ್ಯಾಚ್‌ಮೇಟ್ (ಅಂದರೆ ನನ್ನ ಜತೆಯೇ ಐ.ಪಿ.ಎಸ್.ಗೆ ಸೇರಿದ್ದ ಅಧಿಕಾರಿ) ಆಶಾ ನಮ್ಮನ್ನು ಎದುರುಗೊಳ್ಳಬೇಕಾಗಿತ್ತು. ನಾವಿಬ್ಬರೂ ಆಕೆಯ ಮನೆಯಲ್ಲೇ ವಾಸ್ತವ್ಯವಿರಬೇಕೆಂದು ತೀರ್ಮಾನಿಸಿದ್ದೆವು. ಹತ್ತು, ಹದಿನೈದು ನಿಮಿಷಗಳಾದರೂ ಆಕೆ ಬರಲಿಲ್ಲ. ನಾನು ಆಷ್ಟರಲ್ಲಿ ಗಾಭರಿಯಾಗಿ ಆಕೆಯ ಮನೆಗೆ ಫೋನಾಯಿಸಿದೆ. ನಮ್ಮನ್ನು ಎದುರುಗೊಳ್ಳಲು ಹೊರಟಿದ್ದಾಳೆ ಎಂದು ತಿಳಿಯಿತು. ನನ್ನ ಹೆಂಡತಿ ಎದುರಿಗೇ ಇದ್ದ ಅತಿ ದೊಡ್ಡ ವಿಡಿಯೋ ಸ್ಕ್ರೀನ್ ಮೇಲೆ ಬರುತ್ತಿದ್ದ ಚಿತ್ರ ನೋಡ್ತಿದ್ದಳು.

ಸ್ವಲ್ಪ ಕಾಲದ ತರುವಾಯ ಮೂರು ಛತ್ರಿಗಳನ್ನು ಹಿಡಿದು ಆಶಾ ಬಂದಳು. ಹೊರಗಡೆ ಭಾರೀ ಮಳೆ ಬರ್ತಿದೆ. ರೈಲು ನಿಲ್ದಾಣದಲ್ಲಿ ಕಾರ್ ಪಾರ್ಕ್ ಮಾಡುವುದು ಕಷ್ಟವಾಯಿತು ಎಂದು ನಿಮ್ಮಿಬ್ಬರಿಗೂ ಒಂದೊಂದು ಛತ್ರಿ ಕೊಟ್ಟು ಕರೆದೊಯ್ದಳು. ನನ್ನ ಮನೆ ಈ ಊರಿನ ಹೊರವಲಯದಲ್ಲಿದೆ. ಅಲ್ಲಿಗೆ ಹೋಗಲು ನಲವತ್ತು ನಿಮಿಷ ಬೇಕು ಎಂದಳು. ಊರಲ್ಲಿ ಯಾಕೆ ಮನೆ ಮಾಡಿಲ್ಲ ಎಂದು ಕೇಳಿದರೆ ಈ ಊರಿನಲ್ಲಿ ಬಾಡಿಗೆ ತುಂಬಾ ಜಾಸ್ತಿ. ಅದಕ್ಕೇ ಎಂದಳು.

ಕಾರಿನಲ್ಲಿ ಹೋಗುವಾಗ ಆಶಾ ಫ್ರಾಂಕ್‌ಪರ್ಟ್ ಪಶ್ಚಿಮ ಜರ್ಮನಿಯಲ್ಲಿದ್ದು (ಸುಮಾರು ಒಂದು ದಶಕದ ಹಿಂದೆ ಬರ್ಲಿನ್ ಗೋಡೆ ಒಡೆಯಲಾಯಿತು. ಈಗ ಪೂರ್ವ ಹಾಗೂ ಪಶ್ಚಿಮ ಜರ್ಮನಿಗಳು ಒಂದಾಗಿವೆ) ದೇಶದ ಅತಿ ದೊಡ್ಡ ನಗರವಲ್ಲದೆ ಎಲ್ಲ ವಿಧದಲ್ಲೂ ರಾಜಧಾನಿಯಾಗಿದೆ. ಮೇನ್ ನದಿಯ ದಡದಲ್ಲಿರುವ ಈ ನಗರ ಕೊಳ್ಳವೊಂದರಲ್ಲಿ ಇದ್ದು ಮಶೀನರಿ, ಔಷಧಿಗಳು, ಮೋಟಾರು ವಾಹನಗಳ ತಯಾರಿಕೆಗೆ ಹೆಸರುವಾಸಿ. ಅಲ್ಲದೆ ನಮ್ಮಲ್ಲಿನ ಮುಂಬೈನಂತೆ ವ್ಯಾಪಾರೀ ನಗರವಾಗಿದ್ದು ಹನ್ನೆರಡನೇ ಶತಮಾನದಲ್ಲಿಯೇ ಉದಯಿಸಿತು. ಹಾಗೂ ಹಳೆಯ ನಗರದ ಅವಶೇಷಗಳನ್ನು ಇನ್ನೂ ನೋಡಬಹುದು ಎಂದು ತಿಳಿಸಿದಳು.

ಅಷ್ಟರಲ್ಲಿ ಅವಳ ಮನೆ ಬಂತು. ಆಕೆ ಮನೆಯಲ್ಲಿ ಇದ್ದ ಭಾರತೀಯ ಅಡುಗೆಯವಳು ಬಿಸಿ ಬಿಸಿ ಪರೋಟಾ, ಪನ್ನೀರ್ ಮಸಾಲಾ ಮಾಡಿದ್ದಳು. ಎಲ್ಲರೂ ಒಟ್ಟಿಗೆ ಊಟ ಮಾಡಿದೆವು. ಆಶಾ ಮಧ್ಯಪ್ರದೇಶದ ಚಂಬಲ್ ಕಣಿವೆ ಡಕಾಯಿತರನ್ನು ಬಂಧಿಸಿ ರಾಷ್ಟ್ರಪತಿಗಳಿಂದ ಶೌರ್ಯಕ್ಕೆ ಪ್ರಶಸ್ತಿ ಪಡೆದಿದ್ದಾಳೆ. ಕಿರಣ್ ಬೇಡಿಯಷ್ಟೇ ಉತ್ತಮ ಕಾರ್ಯ ಮಾಡಿ ಮಹಿಳಾ ಐ.ಪಿ.ಎಸ್. ಅಧಿಕಾರಿಗಳಲ್ಲಿ ಬಹಳ ಹೆಸರು ಮಾಡಿದ್ದಾಳೆ. ನಾನು ನಾಳೆ ದಿನ ಕಛೇರಿಗೆ ಹೋಗುವುದಿಲ್ಲ. ನನ್ನ ಮಗಳನ್ನು ಶಾಲೆಗೆ ಬಿಟ್ಟು ನಿಮ್ಮಿಬ್ಬರಿಗೂ ಊರು ಸುತ್ತಿಸುತ್ತೇನೆ ಎಂದಳು. ಅಂದ ಹಾಗೆ ನೀನು ಸಾಹಿತ್ಯದ ವಿದ್ಯಾರ್ಥಿ ಗುರುಪ್ರಸಾದ್. ಈ ಊರಿನಲ್ಲೇ ಜರ್ಮನ್ ಕವಿ 'ಗಯಟೆ' ಹುಟ್ಟಿದ್ದು ಎಂದಳು.

ಮಾರನೆಯ ದಿನ ಮುಂಜಾನೆ ಎಲ್ಲರೂ ಫ್ರಾಂಕ್‌ಪರ್ಟ್ ನಗರದ ಮಧ್ಯ ಭಾಗಕ್ಕೆ ಹೋದೆವು. ಮೇನ್ ನದಿ ಈ ನಗರವನ್ನು ಎರಡು ಹೋಳು ಮಾಡಿದೆ. ಹಳೇ ಫ್ರಾಂಕ್‌ಫರ್ಟ್ ನದಿಯ ಪಕ್ಕ

ಮಧ್ಯ ಜಾಗದಲ್ಲಿ ಇದೆ. ಇಲ್ಲಿ ಇನ್ನೂ ಹಳೇ ಕಾಲದ ಕಟ್ಟಡಗಳು ಇವೆ. ಇವುಗಳಲ್ಲಿ ಪ್ರಾಮುಖ್ಯವಾದ್ದು ಸೇಂಟ್ ಬಾರ್ಥಲೋಮಿಯೋ ಚರ್ಚ್. 13ನೇ ಶತಮಾನದಲ್ಲಿ ಕಟ್ಟಲಾದ ಈ ಚರ್ಚ್‌ನಲ್ಲಿ ರಾಜರುಗಳ ಪಟ್ಟಾಭಿಷೇಕ ನಡೆಯುತ್ತಾ ಇತ್ತಂತೆ. ಅಲ್ಲಿಂದ ಸ್ವಲ್ಪ ದೂರದಲ್ಲೇ ಹದಿನೆಂಟನೇ ಶತಮಾನದ ಸೇಂಟ್ ಪಾಲ್ ಚರ್ಚ್ ಇದೆ. 1848ರಲ್ಲಿ ಈ ಚರ್ಚಿನಲ್ಲಿ ಜರ್ಮನಿಯ ಮೊದಲ ಪಾರ್ಲಿಮೆಂಟ್ ಅಧಿವೇಶನ ನಡೆಯಿತಂತೆ.

ಫ್ರಾಂಕ್‌ಫರ್ಟ್ ನಗರಕ್ಕೆ ಬರುವ ಎಲ್ಲ ಪ್ರವಾಸಿಗರೂ ನೋಡುವ ಜಾಗ ರೋಮರ್ ಎಂದು ಕರೆಯಲಾಗುವ ಕಟ್ಟಡಗಳ ಸಮುಚ್ಚಯ. ಗೋಥಿಕ್ ಶೈಲಿನಲ್ಲಿ ಕಟ್ಟಲಾಗಿರುವ ಈ ಸಮುಚ್ಚಯದ ಮುಖ್ಯ ಕಟ್ಟಡ ಐದುನೂರು ವರ್ಷಗಳವರೆಗೆ ಉಪಯೋಗಿಸಿದ ಟೌನ್ ಹಾಲ್. ಹಲವಾರು ಹಳೆಯ ಕಾಲದ ಮನೆಗಳೂ ಇಲ್ಲಿವೆ. ಹದಿನಾಲ್ಕನೇ ಶತಮಾನದ ಲೀನ್‌ವ್ಯಾಂಡ್ - ಹೌಸ್ ಅಂದರೆ ಲಿನನ್ ತಯಾರಕರ ಹಜಾರವೂ ಸಾಕಷ್ಟು ಹೆಸರುವಾಸಿ. ಎರಡನೇ ಮಹಾಯುದ್ಧದ ಸಮಯದಲ್ಲಿ ಇಲ್ಲಿನ ಹಲವಾರು ಕಟ್ಟಡಗಳು ನೆಲಸಮವಾದವು.

ರೋಮರ್ ನೋಡಿದ ನಂತರ ನಾವೆಲ್ಲಾ ನದಿ ನೋಡಲು ಹೋದೆವು. ನದಿಯ ದಡದಲ್ಲಿ ಜನರು ವಾಕ್ ಮಾಡಲೆಂದು ಕಾಲ್ದಾರಿ ಕಟ್ಟಿದ್ದಾರೆ. ಹಲವಾರು ಮರಗಿಡಗಳನ್ನು ನೆಟ್ಟಿದ್ದಾರೆ. ಸಿಮೆಂಟ್ ಬೆಂಚುಗಳನ್ನು ಹಾಕಿದ್ದಾರೆ . ನಾವೂ ಸುಮಾರು ಎರಡು ಮೂರು ಕಿ.ಮೀ. ನಿಧಾನವಾಗಿ ಆ ಕಾಲ್ದಾರಿಯಲ್ಲಿ ನಡೆಯುತ್ತಾ ನದಿಯ ಮೇಲೆ ಸಂಚರಿಸುವ ದೋಣಿಗಳು ಹಾಗೂ ಫೆರಿಗಳನ್ನು ನೋಡುತ್ತಾ ಪಾಪ್‌ಕಾರ್ನ್ ತಿಂದೆವು. ಆ ಮೇಲೆ ಎದುರಿಗೆ ಕಂಡಸೇತುವೆ ಏರಿ ನದಿಯ ಆಚೆ ದಂಡೆಗೆ ಹೋದೆವು. ನದಿಯ ಇನ್ನೊಂದು ದಂಡೆಯಲ್ಲಿ ಹಲವಾರು ಮ್ಯೂಸಿಯಂಗಳ ಸಮುಚ್ಚಯ ಇದೆ. ಒಟ್ಟು ಏಳು ಪ್ರಮುಖ ವಸ್ತು ಸಂಗ್ರಹಾಲಯಗಳು, ಅಂದರೆ ಲಲಿತಕಲೆಗಳ ಮ್ಯೂಸಿಯಂ ಪೋಸ್ಟಲ್ ಮ್ಯೂಸಿಯಂ ಇತ್ಯಾದಿಗಳಿವೆ. ಇಲ್ಲಿಯ ಜ್ಯೂಯಿಷ್ ಮ್ಯೂಸಿಯಂ ಕೂಡಾ ಹೆಸರುವಾಸಿ. ಜರ್ಮನಿ ದೇಶದಲ್ಲಿ ಹಿಟ್ಲರನು ಯಹೂದಿಗಳಿಗೆ ಯಾವ ರೀತಿ ತೊಂದರೆ ನೀಡಿದ ಎನ್ನುವುದನ್ನು ಈ ಮ್ಯೂಸಿಯಂಗೆ ಹೋದರೆ ತಿಳಿಯಬಹುದು.

ಎರಡು ಮೂರು ಮ್ಯೂಸಿಯಂ ನೋಡಿ ಕಾರಿನಲ್ಲಿ ನಗರ ಪ್ರದಕ್ಷಿಣೆ ಹಾಕಿದೆವು. ಎಲ್ಲೆಲ್ಲಿ ನೋಡಿದರೂ ಗಾಜು ಹಾಗೂ ಸ್ಟೀಲ್‌ನ ಪ್ರಭಾವದಿಂದ ಮಿರಮಿರನೆ ಮಿಂಚುವ ಎತ್ತರದ ಕಟ್ಟಡಗಳು, ವಿಶಾಲವಾದ ರಸ್ತೆಗಳು ಕಂಡವು. 'ನಮ್ಮ ಊರಿನ ಪ್ರಾಣಿ ಸಂಗ್ರಹಾಲಯ ಬಹಳ ಹೆಸರುವಾಸಿ' ನೋಡ್ತೀರಾ ಎಂದಳು ಆಶಾ. 'ಬೇಡಾ, ಏನಾದರೂ ಖರೀದಿ ಮಾಡೋಣ ಅಂತ ಆಸೆ' ಎಂದೆ. ಆಕೆ ನಮ್ಮನ್ನು ನಗರದ ಮಧ್ಯಭಾಗಕ್ಕೆ ಕರೆದೊಯ್ದು ಒಂದು ದೊಡ್ಡ ಡಿಪಾರ್ಟ್‌ಮೆಂಟಲ್ ಅಂಗಡಿ ತೋರಿಸಿದಳು. ಏಳು ಮಹಡಿ ಇರುವ ಈ ಅಂಗಡಿಯಲ್ಲಿ ಸಿಗದಿರುವ ವಸ್ತುವೇ ಇಲ್ಲ. ಹಲವಾರು ಸಣ್ಣ ಪುಟ್ಟ ವಸ್ತುಗಳನ್ನು ಖರೀದಿಸಿದೆವು.

ನಮ್ಮ ಪಕ್ಕದಲ್ಲಿದ್ದ ಇಬ್ಬರು ಮಹಿಳೆಯರು ಹಿಂದಿಯಲ್ಲಿ ಮಾತನಾಡುತ್ತಾ ಇದ್ದರು. ನೀವು ಪ್ರವಾಸಿಗಳೇ, ನಿಮ್ಮದು ಯಾವು ಊರು ಎಂದು ನನ್ನ ಹೆಂಡತಿ ಅವರನ್ನು ಮಾತಾನಾಡಿಸಿದಳು. 'ಇಲ್ಲ' ನಮ್ಮದು ಇದೇ ಊರು, ಭಾರತ ಬಿಟ್ಟು ಬಂದು ಹದಿನೈದು ವರ್ಷಗಳಾಯಿತು. ಈ ಊರಿನಲ್ಲಿ ನೂರಾರು ಭಾರತೀಯ ಕುಟುಂಬಗಳಿವೆ. ಈ ಅಂಗಡಿಯಲ್ಲಿ ಡ್ರೆಸ್ ಮೆಟೀರಿಯಲ್

ಖರೀದಿಸಿ. ತುಂಬಾ ಕಡಿಮೆ ಬೆಲೆ. ಆ ಮೇಲೆ ಹತ್ತಿರದಲ್ಲೇ ಇರುವ ಭಾರತೀಯ ರೆಸ್ಟೋರೆಂಟ್‌ನಲ್ಲಿ ಊಟ ಮಾಡಿ ಎಂದರು.

ಅವರು ಹೇಳಿದಂತೆಯೇ ನಮ್ಮ ಮಗಳಿಗೆ ಸಲ್ವಾರ್ ಸೂಟ್‌ಗೆಂದು ಬಟ್ಟೆ ಖರೀದಿಸಿ ಆಶಾ ಜತೆ ಭಾರತೀಯ ರೆಸ್ಟೋರೆಂಟ್‌ಗೆ ಹೋದೆವು. ಅದರ ಮಾಲೀಕ ಒಬ್ಬ ಸರ್‌ದಾರ್‌ಜೀ. ವೆಜಿಟಬಲ್ ಪಲಾವ್ ಹಾಗೂ ಬೈಂಗನ್ ಭರ್ತಾ ನೀಡಿದ. ದೆಹಲಿಯ ಊಟಕ್ಕಿಂತ ರುಚಿಯಾಗಿತ್ತು. ಏನು ಇಷ್ಟು ರುಚಿ ಎಂದೆ. ಇಲ್ಲಿಯ ಬದನೇಕಾಯಿ ತುಂಬಾ ಚೆನ್ನಾಗಿರುತ್ತೆ - ಅದಕ್ಕೆ ಎಂದು ಹೇಳಿ ನಮಗೆ ಶೇಕಡಾ 40 ಡಿಸ್‌ಕೌಂಟ್ ಕೂಡಾ ನೀಡಿದ.

ಊಟವಾದ ನಂತರ ಆಶಾ ನಮ್ಮನ್ನು ರೈಲ್ವೆ ಸ್ಟೇಷನ್‌ಗೆ ಕರೆದೊಯ್ದುಳು. ನಾವು ಆಮ್‌ಸ್ಟರ್‌ಡ್ಯಾಂ ನಗರಕ್ಕೆ ಹೋಗಲು ಸಿದ್ಧವಾಗಿದ್ದ ಗಾಡಿ ಏರಿ ಆಶಾಗೆ ವಿದಾಯ ಹೇಳುವಷ್ಟರಲ್ಲಿ ರೈಲು ಹೊರಟಿತು. ಒಂದೇ ದಿನದ ಪ್ರವಾಸವಾದರೂ ಜರ್ಮನಿ ನೋಡಲು ಚೆನ್ನಾಗಿತ್ತು ಅಲ್ಲವೇ, ಎಂದೆ. ಅದಕ್ಕೇ ಅಲ್ಲವೇ ಇತ್ತೀಚೆಗೆ ಬೆಂಗಳೂರಿನ ನೂರಾರು ಕಂಪ್ಯೂಟರ್ ಎಂಜನೀಯರ್‌ಗಳು ಜರ್ಮನಿಗೆ ವಲಸೆ ಬರಲು ಸಿದ್ಧರಾಗಿರುವುದು ಎಂದಳು ನನ್ನ ಹೆಂಡತಿ. ಹೌದು ಎಂದು ತಲೆದೂಗಿದೆ.

11

ಆಮ್‌ಸ್ಟರ್ ಡ್ಯಾಂ

ಫ್ರಾಂಕ್‌ಫರ್ಟ್‌ನಲ್ಲಿ ನಾವು ರಾತ್ರಿ ಏರಿದ ರೈಲು ಬೆಳಗಿನ ಜಾವವೇ ಆಮ್‌ಸ್ಟರ್‌ಡ್ಯಾಂ ರೈಲು ನಿಲ್ದಾಣಕ್ಕೆ ಬಂತು. ಈ ನಿಲ್ದಾಣ ಭಾರೀ ದೊಡ್ಡ ನಿಲ್ದಾಣ. ನಗರದ ಮಧ್ಯಭಾಗದಲ್ಲೇ ಇದೆ. ನಾವು ರೈಲು ಇಳಿದು ಹೊರಗೆ ಬರುವಷ್ಟರಲ್ಲೇ ಗೆಳೆಯ ಶರ್ಮಾ ನಮ್ಮನ್ನು ಎದುರುಗೊಂಡು ತನ್ನ ಕಾರಿನಲ್ಲಿ ನಮ್ಮನ್ನು ಕೂರಿಸಿ ನಮ್ಮ ಸೂಟ್‌ಕೇಸುಗಳನ್ನು ಕಾರಿನ ಡಿಕ್ಕಿಗೆ ಹಾಕಿದ. ಪಕ್ಕದಲ್ಲೇ ಇರುವ ಬೆಲ್ಜಿಯಂ ದೇಶದಲ್ಲಿ ಕೆಲಸ ಮಾಡುತ್ತಿದ್ದ ಈತ ನನ್ನ ಹಳೆಯ ಗೆಳೆಯನಾಗಿದ್ದು ನಮ್ಮಿಬ್ಬರಿಗೂ ನೆದರ್‌ಲ್ಯಾಂಡ್, ಲಕ್ಸೆಂಬರ್ಗ್ ಹಾಗೂ ಬೆಲ್ಜಿಯಂ ದೇಶಗಳನ್ನು ಸುತ್ತಿಸುವ ಹೊಣೆ ಹೊತ್ತಿದ್ದ.

ರೈಲು ನಿಲ್ದಾಣದಿಂದ ಮುಖ್ಯರಸ್ತೆಗೆ ಬರುವ ಮೊದಲೇ ನಮಗೆ ಕಂಡ ದೃಶ್ಯವೆಂದರೆ ನಿಲ್ದಾಣದಲ್ಲಿ ಇದ್ದ ದೊಡ್ಡ ಸೈಕಲ್ ಸ್ಟಾಂಡ್. 'ಇದೇನು ಈ ಊರಿನಲ್ಲಿ ಇಷ್ಟು ಸೈಕಲ್‌ಗಳಿವೆಯಲ್ಲಾ' ಎಂದು ನನ್ನ ಶ್ರೀಮತಿ ಉದ್ಗರಿಸಿದಾಗ ಶರ್ಮ ಹೇಳಿದ 'ಭಾಬೀ ಈ ಊರಿನ ಪ್ರತಿಯೊಬ್ಬರೂ ಸೈಕಲ್ ಇಟ್ಟುಕೊಂಡಿದ್ದಾರೆ. ಇಲ್ಲಿ ನೋಡಿ ರಸ್ತೆಯಲ್ಲಿ ಸೈಕಲ್ ಸವಾರರಿಗೆಂದೇ ವಿಶೇಷ ಲೇನ್ ಮಾಡಿದ್ದಾರೆ. ಇಲ್ಲಿ ಕಾರುಗಳು ಕೂಡಾ ಸೈಕಲ್ ಸವಾರರಿಗೇ ಮೊದಲ ಆದ್ಯತೆ ಕೊಡಬೇಕು ಗೊತ್ತಾ' ಎಂದು ಅವನು ಅನ್ನುತ್ತಿದ್ದಂತೆ ಪಕ್ಕದ ರಸ್ತೆಯಿಂದ ಸೈಕಲ್ ಸವಾರನೊಬ್ಬ ನಮ್ಮ ಮುಂದೆ ರಸ್ತೆ ದಾಟಲು ಬಂದ. ತಟ್ಟನೆ ಬ್ರೇಕ್ ಹಾಕಿದ ಶರ್ಮಾ ಆತನು ರಸ್ತೆ ದಾಟಲು ದಾರಿ ಬಿಟ್ಟ. ನಾವು ಕಂಡ ಇನ್ನೊಂದು ದೃಶ್ಯವೆಂದರೆ ಇಲ್ಲಿ ರಸ್ತೆಗಳ ಪಕ್ಕದಲ್ಲಿ ಸೈಕಲ್‌ಗಳನ್ನು ನಿಲ್ಲಿಸಲೆಂದೇ ಕಂಬಗಳನ್ನು ನೆಟ್ಟಿದ್ದಾರೆ. ಸೈಕಲ್ ತುಳಿದು ಸುಸ್ತಾಗಿಯೋ ಇಲ್ಲಾ ಅಂಗಡಿಗೆ ಹೋಗಬೇಕಾಗಿಯೋ ಬಂದಾಗ ಆ ಸವಾರ ತನ್ನ ಸೈಕಲ್ಲನ್ನು ಆ ಕಂಬಕ್ಕೆ ಕಟ್ಟಿ ಬೀಗ ಹಾಕಿಕೊಂಡು ಹೊರಟುಹೋಗ್ತಾನೆ.

ಆಮ್‌ಸ್ಟರ್ ಡ್ಯಾಂನ ಇನ್ನೊಂದು ವಿಶೇಷ ಇದು ಕಾಲುವೆಗಳ ಊರು. ಆದರೆ ವೆನಿಸ್‌ನಂತೆ ರಸ್ತೆಗಳ ಬದಲಾಗಿ ಕಾಲುವೆಗಳು ಇಲ್ಲಿಲ್ಲ. ರಸ್ತೆಗಳೂ ಇವೆ, ಕಾಲುವೆಗಳೂ ಇವೆ. ಆಮ್‌ಸ್ಟರ್ ಡ್ಯಾಂ ನೆದರ್‌ಲ್ಯಾಂಡ್ ದೇಶದ ರಾಜಧಾನಿ. ನೆದರ್‌ಲ್ಯಾಂಡ್ ದೇಶ ಸಮುದ್ರ ಮಟ್ಟಕ್ಕಿಂತ ಕೆಳಗಡೆ ಇರುವುದರಿಂದಲೇ ಇದಕ್ಕೆ ಈ ಹೆಸರು (ನೆದರ್ ಎಂದರೆ ಕೆಳಗೆ ಎಂದರ್ಥ). ನೆದರ್‌ಲ್ಯಾಂಡಿನಲ್ಲಿ ಪದೇ ಪದೇ ಪ್ರವಾಹಗಳು ಬರುವುದರಿಂದ, ಹಾಗೂ ಇಲ್ಲಿ ನದಿಗಳೂ ಸಮುದ್ರ ಸೇರುವುದರಿಂದ ನೆಲಕ್ಕೆ ನೀರು ನುಗ್ಗಿ ಪ್ರವಾಹ ಆಗದಂತೆ ಕಾಲುವೆಗಳು, ಗೋಡೆಗಳು ಹಾಗೂ ವಿಂಡ್‌ಮಿಲ್‌ಗಳ ಬಳಕೆ ಮಾಡಲಾಗಿದೆ.

ನದಿ ಹಾಗೂ ಸಮುದ್ರ ನೀರನ್ನು ತಡೆಯಲು ಡೈಕ್ ಎಂದು ಕರೆಯುವ ಗೋಡೆಗಳನ್ನು ಕಟ್ಟುತ್ತಾರೆ - ಡೈಕ್‌ನಲ್ಲಿ ಬಿರುಕು ಬಿಟ್ಟಾಗ ಊರನ್ನು ರಕ್ಷಿಸಲು ಹಾನ್ಸ್ ಎಂಬ ಬಾಲಕ ತನ್ನ ದೇಹವನ್ನೇ ಆ ಬಿರುಕಿಗೆ ಅಡ್ಡ ಇಟ್ಟ ಶಾಲೆಯಲ್ಲಿ ಓದಿದ ಕಥೆ ನೆನಪಾಗುತ್ತದೆ. ಈ ರೀತಿ ಗೋಡೆಗಳ ಬದಿಯಲ್ಲೇ ಪ್ರವಾಹದಿಂದ ಬಂದ ನೀರನ್ನು ಎತ್ತಲು ಬಳಕೆಯಾಗುವ ವಿಂಡ್ ಮಿಲ್‌ಗಳು ಕಂಡು ಬರುತ್ತವೆ. ಈಚೀಚೆಗೆ ಇವುಗಳಿಂದ ವಿದ್ಯುತ್ ಉತ್ಪಾದನೆಯೂ ಆಗುತ್ತದೆ. ಕಾಲುವೆಗಳಂತೂ ಪ್ರವಾಹದ ನೀರನ್ನು ಸುಗಮವಾಗಿ ಹರಿಬಿಡಲು ಉಪಕಾರಿ. ಆಮ್‌ಸ್ಟರ್ ಡ್ಯಾಂನಲ್ಲಿ ಕಾಲುವೆಗಳನ್ನು ದಾಟಲು ನಾಲ್ಕು ನೂರು ಸೇತುವೆಗಳಿವೆಯಂತೆ. ಹಲವಾರು ಜನರು ವೆನಿಸ್‌ನಂತೆ ಇಲ್ಲಿಯೂ ದಿನದ ಓಡಾಟಕ್ಕೆ ದೋಣಿಗಳ ಉಪಯೋಗ ಮಾಡ್ತಾರಂತೆ.

ಶರ್ಮಾನ ಬಾಯಿಂದ ಇಷ್ಟೆಲ್ಲಾ ವಿಷಯ ಕೇಳಿ ತಿಳಿಯುವಷ್ಟರಲ್ಲಿ ನಾವು ಉಳಿಯಬೇಕಾದ ಹೋಟೆಲ್ ತಲುಪಿದೆವು. ರೂಮುಗಳನ್ನು ಪಡೆದು ಸ್ನಾನ ಮುಗಿಸಿ ಕೆಳಗಿದ್ದ ರೆಸ್ಟೋರೆಂಟ್‌ಗೆ ಬಂದು ಬೆಳಗಿನ ಉಪಾಹಾರ, ಅಂದರೆ ಬನ್ ಹಾಗೂ ಟೀ ಸೇವಿಸಿದೆವು. ಊರು ಸುತ್ತಲೆಂದು ಹೊರಗಡೆ ಬಂದು ನಮ್ಮ ಕಾರಿನ ಬಳಿ ಹೋದೆವು. ಕಾರಿನ ಬಾಗಿಲು ತೆರೆಯುತ್ತಿದ್ದಂತೆಯೇ ಶರ್ಮಾ "ನಮ್ಮ ಕಾರಿನ ಸ್ಟೀರಿಯೋ ಕಳವಾಗಿದೆ" ಎಂದ. ಯಾರೋ ಕಳ್ಳರು ಡೂಪ್ಲಿಕೇಟ್ ಚಾವಿ ಉಪಯೋಗಿಸಿ ಕಾರನ್ನು ಹೊಕ್ಕು ಒಳಗಿದ್ದ ಸ್ಟೀರಿಯೋ, ಕ್ಯಾಸೆಟ್‌ಗಳು, ಶರ್ಮಾನ ಕ್ಯಾಮೆರಾ ಹಾಗೂ ಡ್ಯಾಷ್‌ಬೋರ್ಡ್ ಮೇಲೆ ಇಟ್ಟಿದ್ದ ಚಿಲ್ಲರೆ ನಾಣ್ಯಗಳನ್ನು ಅಪಹರಿಸಿದ್ದರು. ನಾವು ಸ್ನಾನ ಮಾಡಿ ಉಪಹಾರ ಮುಗಿಸಲು ತೆಗೆದುಕೊಂಡ ಸಮಯ ಕೇವಲ ಎರಡು ಗಂಟೆ. ಅಷ್ಟರಲ್ಲೇ ಈ ಅನಾಹುತ ಆಗಿತ್ತು. "ಪೋಲೀಸ್ ಠಾಣೆಗೆ ಹೋಗೋಣ" ಎಂದೆ. 'ನಿನಗೆ ಗೊತ್ತಿಲ್ಲಾ ಗುರೂ, ಈ ಊರಿಗೆ ಜಗತ್ತಿನ ನಾನಾ ಕಡೆಗಳಿಂದ ಜನ ಬರ್‍ತಾರೆ. ಡ್ರಗ್ಸ್ ಸೇವಿಸಲು ದುಡ್ಡಿಲ್ಲದ ಜನ ಈ ರೀತಿ ಸಣ್ಣ ಪುಟ್ಟ ಕಳ್ಳತನ ಮಾಡಿ ತಮ್ಮ ಚಟ ತೀರಿಸ್ಕೋತ್ತಾರೆ. ಕಂಪ್ಲೇಂಟ್ ನೀಡಿ ಏನೂ ಪ್ರಯೋಜನವಿಲ್ಲ' ಎಂದ.

ಬೇಜಾರಿನ ಮನದಿಂದಲೇ ಊರು ಸುತ್ತಲು ಕಾರಲ್ಲಿ ಕುಳಿತೆವು. ಶರ್ಮ ಮತ್ತೆ ತನ್ನ ಭಾಷಣ ಪ್ರಾರಂಭಿಸಿದ ಈ ಊರಿನ ಜನರಿಗೆ ಡಚ್ಚರು ಎಂದು ಕರೀತಾರೆ. ಇವರು ಒಂದು ಕಾಲದಲ್ಲಿ ಸಾಕಷ್ಟು ಬಲಿಷ್ಠರಾಗಿದ್ದು ನಮ್ಮ ಭಾರತದಲ್ಲಿಯೂ ತಮ್ಮ ಸಾಮ್ರಾಜ್ಯ ಸ್ಥಾಪಿಸಿದ್ದರು. ಬಂಗಾಳ ಹಾಗೂ ಮದ್ರಾಸ್‌ಗಳಲ್ಲಿ ಇವರ ಪ್ರಭಾವ ಇತ್ತು. ಈ ದೇಶದ ರಾಟರ್‌ಡ್ಯಾಂ ಬಹಳ ದೊಡ್ಡ ಬಂದರು ಎಂದು ಹೇಳಿ ಎದುರುಗಡೆ ಇದ್ದ ದೊಡ್ಡ ಕಟ್ಟಡ ತೋರಿಸಿ, 'ನೋಡು ಗುರೂ ಇದೇ ಈ ದೇಶದ ವಿಶ್ವವಿಖ್ಯಾತ ಬಿಯರ್ ಹೇನ್‌ಕೆನ್ ತಯಾರಿಸುವ ಫ್ಯಾಕ್ಟರಿ, ಎಂದ. 'ಅಲ್ಲಿಗೆ ನಾವು ಹೋಗಬಹುದೇ' ಎಂದೆ, 'ಖಂಡಿತಾ, ಹೋದವರಿಗೆಲ್ಲಾ ಬಿಯರ್ ಮುಫತ್ತಾಗಿ ಕೊಡ್ತಾರೆ' ಅಂದ. ಸರಿ, ಹೋಗೋಣ ಅಂದಾಗ ನನ್ನ ಶ್ರೀಮತಿ ಬೇಡವೇ ಬೇಡ ಎಂದಳು. ಹಾಗಾದರೆ ಕಲಾಶಾಲೆಗೆ ಹೋಗೋಣ ಎಂದ ಶರ್ಮ.

ನೆದರ್‌ಲ್ಯಾಂಡ್ (ಹಿಂದಿನ ಹೆಸರು ಹಾಲೆಂಡ್ - ವಿಶ್ವ ವಿಖ್ಯಾತ ಫಿಲಿಪ್ಸ್ ಕಂಪನಿ ಇದೇ ಊರಿನದು) ದೇಶದ ಹೆಸರಾಂತ ಚಿತ್ರಕಾರ ವ್ಯಾನ್‌ಗೋ. ಅವನಷ್ಟೇ ಹೆಸರುವಾಸಿಯಾದ ಇನ್ನೊಬ್ಬ ಕಲಾಕಾರ ರೆಂಬ್ರಾಂಟ್. ವ್ಯಾನ್‌ಗೋ ಚಿತ್ರಗಳಿಗೇ ಬೇರೆ ಮ್ಯೂಸಿಯಂ ಇದೆ. ರೆಂಬ್ರಾಂಟ್‌ನ ಕಲಾಕೃತಿಗಳನ್ನು ರಿಜ್ಕ್ ಮ್ಯೂಸಿಯಂನಲ್ಲಿ ಇಡಲಾಗಿದೆ. ಈ ಎರಡೂ ಸಂಗ್ರಹಾಲಯಗಳನ್ನು

ನೋಡಿದ ನಂತರ ಪಟ್ಟಣದ ಮಧ್ಯಭಾಗಕ್ಕೆ ಬಂದೆವು. ಅಲ್ಲಿ ಹದಿನೇಳನೇ ಶತಮಾನದಲ್ಲಿ ಕಟ್ಟಲಾದ ವೈಭವದ ಅರಮನೆ ಇದೆ. ಹೊರಗಿನಿಂದಲೇ ಅರಮನೆ ನೋಡಿದೆವು.

'ಭಾಬಿ, ನಿಮಗೆ ಟ್ಯೂಲಿಪೋಮೇನಿಯಾ ಎಂದರೇನು ಗೊತ್ತಾ?' ಎಂದ ಶರ್ಮಾ. ಇಲ್ಲ ಎಂದು ಇಬ್ಬರೂ ತಲೆ ಅಲ್ಲಾಡಿಸಿದೆವು. ಈ ದೇಶ ಟ್ಯೂಲಿಪ್ ಹೂವುಗಳಿಗೆ ವಿಶ್ವಕ್ಕೇ ಹೆಸರಾಗಿದೆ. ಒಂದಾನೊಂದು ಕಾಲದಲ್ಲಿ ಏಷ್ಯಾ ಖಂಡದಿಂದ ಇಲ್ಲಿಗೆ ತಂದ ಈ ಹೂವನ್ನು ಬೆಳೆಸಲು ಸಾಕಷ್ಟು ಜನ ತಮ್ಮನ್ನು ತೊಡಗಿಸಿಕೊಂಡು ಮಾರುಕಟ್ಟೆಯಲ್ಲಿ ಬೆಲೆ ಕುಸಿದಾಗ ಆಘಾತಪಟ್ಟಿದ್ದರು. ಜನರು ಟ್ಯೂಲಿಪ್ ಹೂವು ಬೆಳೆಸುವ 'ರೋಗ'ಕ್ಕೆ ಈ ಹೆಸರು ಎಂದು ನಕ್ಕ. ಆತ ಟ್ಯೂಲಿಪ್ ಹೂವುಗಳು ಬೆಳೆಸುವ ತೋಟವೊಂದಕ್ಕೆ ಕರೆದೊಯ್ದ. ಅದನ್ನು ನೋಡಿದ ಕೂಡಲೇ ನಾವು 'ಓಹ್, ಈ ರೀತಿ ಹೂವಿನ ತೋಟಗಳನ್ನು ನಾವು ಹಲವಾರು ಹಿಂದಿ ಪಿಕ್ಚರ್‌ಗಳಲ್ಲಿ ನೋಡಿದ್ದೀವಿ' ಎಂದೆವು. ನಿಜವಾಗಲೂ ಈ ತೋಟದ ದರ್ಶನ ತುಂಬಾ ಆಹ್ಲಾದಕರವಾಗಿತ್ತು.

ತೋಟ ನೋಡಿಕೊಂಡು ಮತ್ತೆ ನಗರಕ್ಕೆ ಬಂದೆವು. ಆಮ್‌ಸ್ಟರ್‌ಡ್ಯಾಂನ ಎರಡು ಪ್ರಮುಖ ಚರ್ಚುಗಳು, ಅಂದರೆ 1300ರಲ್ಲಿ ಕಟ್ಟಿದ ಹಳೇ ಚರ್ಚ್ ಹಾಗೂ ಹದಿನೈದನೇ ಶತಮಾನದಲ್ಲಿ ನಿರ್ಮಿಸಿದ "ಹೊಸಾ" ಚರ್ಚ್ ನೋಡಿದೆವು. ಇಷ್ಟೆಲ್ಲಾ ನೋಡುವಷ್ಟರಲ್ಲಿ ರಾತ್ರಿಯಾಗಿತ್ತು. ಶರ್ಮಾ ನಮ್ಮನ್ನು ಒಂದು ಭಾರತೀಯ ರೆಸ್ಟಾರೆಂಟ್‌ಗೆ ಕರೆದೊಯ್ದು ಅಪ್ಪಟ ಶಾಖಾಹಾರಿ ಉತ್ತರ ಭಾರತೀಯ ಊಟ ಕೊಡಿಸಿದ ನಂತರ ಹೋಟೆಲಿಗೆ ವಾಪಸ್ಸಾದೆವು.

ಮಾರನೆಯ ದಿನ ಬೆಳಿಗ್ಗೆ ಉಪಹಾರದ ಮುಗಿಸಿ ಹೋಟೆಲ್ ಖಾಲಿ ಮಾಡಿ ಆಮ್‌ಸ್ಟರ್ ಡ್ಯಾಂ ನಗರದ ಇತರ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೊರಟೆವು. ಈ ಊರಿನಲ್ಲಿ ವಜ್ರಗಳನ್ನು ಕತ್ತರಿಸಿ ಅವಕ್ಕೆ ಉತ್ತಮ ರೂಪ ಕೊಡುವ ಉದ್ಯಮ ಇದೆ. ವಜ್ರದ ಗಣಿಗಳಿಂದ ದೊಡ್ಡ ದೊಡ್ಡ ಕಲ್ಲುಗಳನ್ನು ತಂದು ಅವನ್ನು ಆಭರಣಗಳಿಗೋಸ್ಕರ ಕತ್ತರಿಸಿ ಪಾಲಿಷ್ ಮಾಡ್ತಾರೆ. ಬೆಲ್ಜಿಯಂ ದೇಶದ ಆ್ಯಂಟವರ್ಪ ಈ ಉದ್ಯಮಕ್ಕೆ ಹೆಸರು ವಾಸಿಯಾಗಿದ್ದರೂ ಆಮ್‌ಸ್ಟರ್ ಡ್ಯಾಂನಲ್ಲೂ ಹಲ ಕೆಲವು ಇಂತಹ ಫ್ಯಾಕ್ಟರಿಗಳಿವೆ. ಒಂದು ಫ್ಯಾಕ್ಟರಿಗೆ ಭೇಟಿ ನೀಡಿ ಕಣ್ಣು ಕೋರೈಸುವ ವಜ್ರಗಳನ್ನು ನೋಡಿದೆವು. ವಿಶೇಷವೆಂದರೆ ಈ ಪಾಲಿಷಿಂಗ್ ಉದ್ಯಮ ಭಾರತೀಯರ ಕೈಯಲ್ಲೇ ಹೆಚ್ಚಾಗಿ ಇರುವುದು.

ಈ ದೇಶದಲ್ಲಿ ಸಾಕಷ್ಟು ಭಾರತೀಯರು ವಲಸೆ ಬಂದಿರುವುದರಿಂದ ನಮಗೆ ನೆದರ್‌ಲ್ಯಾಂಡ್‌ನಲ್ಲಿ ಮುಜುಗರವೇ ಉಂಟಾಗಲಿಲ್ಲ.

ಹಾಲೆಂಡ್ ದೇಶ ಗಿಣ್ಣು (ಚೀಸ್)ಗೂ ಹೆಸರುವಾಸಿಯಾದ್ದರಿಂದ ಗಿಣ್ಣು ತಯಾರಿಸುವ ಒಂದು ಘಟಕಕ್ಕೂ ಭೇಟಿ ನೀಡಿದೆವು. ಇದಾದ ನಂತರ ಒಂದು ವಿಂಡ್‌ಮಿಲ್ ನೋಡಿ ಅದರ ಮುಂದೆ ನಿಂತು ಫೋಟೋ ತೆಗೆಸಿಕೊಂಡೆವು.

12 ಲಕ್ಸೆಂಬರ್ಗ್

ಆಮ್‌ಸ್ಟರ್ ಡ್ಯಾಂ ನಗರದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ ನಂತರ ನಾವು ಮುಂದಿನ ಊರಾದ ಲಂಕ್ಸೆಂಬರ್ಗ್‌ಗೆ ಹೋಗಲು ನಿರ್ಧರಿಸಿ ಕಾರಲ್ಲಿ ಹೊರಟಾಗ ನಾನು ಶರ್ಮನಿಗೆ "ಸಾಮಾನ್ಯವಾಗಿ ಯೂರೋಪಿನ ದೇಶಗಳು ವಿಸ್ತೀರ್ಣದಲ್ಲಿ ಸಾಕಷ್ಟು ಚಿಕ್ಕದಾಗಿವೆ. ನಮ್ಮ ಕರ್ನಾಟಕ ರಾಜ್ಯ ಇರುವ ವಿಸ್ತೀರ್ಣದಲ್ಲಿ ಮೂರು ಯೂರೋಪಿಯನ್ ರಾಷ್ಟ್ರಗಳನ್ನು ಕೂಡಿಸಬಹುದು" ಎಂದು ಹೇಳಿದೆ "ಹೌದು" ಎಂದು ಉತ್ತರಿಸಿದ ಆತ ನಾವು ಹೋಗುತ್ತಿರುವ "ದಿ ಗ್ರಾಂಡ್ ಡಚಿ ಆಫ್ ಲಕ್ಸೆಂಬರ್ಗ್ ಎಂದು ಕರೆಯಲ್ಪಡುವ ರಾಷ್ಟ್ರ ಕೇವಲ 1000ಚ ಮೈಲಿಯಷ್ಟು ವಿಸ್ತೀರ್ಣ ಹೊಂದಿದ್ದು ಇದರ ಜನಸಂಖ್ಯೆ ನಾಲ್ಕು ಲಕ್ಷ ಮಾತ್ರ. ಈ ದೇಶ ತನ್ನ ಪಕ್ಕದ ದೇಶಗಳಾದ ಬೆಲ್ಜಿಯಂ ಹಾಗೂ ನೆದರ್‌ಲ್ಯಾಂಡ್ ಜೊತೆ ಸೇರಿಕೊಂಡು ಬೆನೆಲಕ್ಸ್ ದೇಶ ಎಂದು ಕರೆಯಲ್ಪಡುತ್ತಿತ್ತು" ಎಂದೂ ತಿಳಿಸಿದೆ.

ಹಾಲೆಂಡ್ ದೇಶದಿಂದ ಹೊರಟ ನಮ್ಮ ವಾಹನ ಶೀಘ್ರದಲ್ಲೇ ಲಕ್ಸೆಂಬರ್ಗ್ ದೇಶದ ಗಡಿಯನ್ನು ಮುಟ್ಟಿತು. ಪ್ರತಿಯೊಂದು ದೇಶದ ಗಡಿಯಲ್ಲಿಯೂ ಒಂದು Check post ಇರುತ್ತದೆ. ಹಲವಾರು ಯೂರೋಪ್ ರಾಷ್ಟ್ರಗಳು ಒಂದಾಗಿ ಯೂರೋಪಿಯನ್ ಒಕ್ಕೂಟ ಮಾಡಿಕೊಂಡಿರುವುದರಿಂದ ಯೂರೋಪಿನಲ್ಲಿ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗುವಾಗ ಗಡಿ ಪ್ರದೇಶದಲ್ಲಿ ವಾಹನಗಳನ್ನು ಸಾಮಾನ್ಯವಾಗಿ ತಡೆಯುವುದಿಲ್ಲ. ಅನುಮಾನ ಬಂದರೆ ಮಾತ್ರ ಕಾರನ್ನು ನಿಲ್ಲಿಸುತ್ತಾರೆ. ನಾವು ಕುಳಿತಿದ್ದ ಶರ್ಮನ ಕಾರು ಬೆಲ್ಜಿಯಂ ದೇಶದ ನಂಬರ್ ಪ್ಲೇಟ್ ಹೊಂದಿದ್ದರಿಂದ ನಮ್ಮ ಕಾರನ್ನು ತಡೆಯದೆ ಲಕ್ಸೆಂಬರ್ಗ್ ದೇಶದ ಒಳಗೆ ಹೋಗಲು ಬಿಟ್ಟರು. ಯೂರೋಪಿಯನ್ ಒಕ್ಕೂಟಕ್ಕೆ ಸೇರಿಲ್ಲದ ದೇಶಗಳನ್ನು ಪ್ರವೇಶಿಸುವಾಗ ಈ ರೀತಿ ಮುಕ್ತ ದಾರಿ ಇರುವುದಿಲ್ಲ.

ಲಕ್ಸೆಂಬರ್ಗ್ ದೇಶದ ರಾಜಧಾನಿಯ ಹೆಸರೂ ಲಕ್ಸೆಂಬರ್ಗ್ ಎಂದೇ. ಈ ನಗರವನ್ನು ಲುಟ್‌ಜಿಲ್‌ಬರ್ಗ್ ಎಂದೂ ಕರೆಯುತ್ತಾರೆ. ಆಲ್‌ಜಿಟ್ ಹಾಗೂ ಪೆಟ್ರೋಸ್ ನದಿಗಳು ಕೂಡುವ ಪ್ರದೇಶದಲ್ಲಿ ಕಟ್ಟಲಾದ ಈ ನಗರ ಯೂರೋಪಿಯನ್ ಒಕ್ಕೂಟದ ಸರ್ವೋಚ್ಚ ನ್ಯಾಯಾಲಯ ಇರುವಂತಹ ಊರು ಎಂದು ಶರ್ಮ ಹೇಳಿದ. ಅರೆರೇ, ಅಂತರಾಷ್ಟ್ರೀಯ ಕೋರ್ಟ್ ಆಫ್

ಜಸ್ಟೀಸ್ (ಅಂತರಾಷ್ಟ್ರೀಯ ನ್ಯಾಯಾಲಯ) ನೋಡಲು ಮರೆತು ಬಿಟ್ಟೆವಲ್ಲಾ ಎಂದು ನಾನು ಉದ್ಗರಿಸಿದೆ. ಹೌದು ಈ ನ್ಯಾಯಾಲಯ ಇರುವಂತಹ ದಿ ಹೇಗ್ ನಗರ ಆಮ್ಸ್ಟರ್ ಡ್ಯಾಂಗೆ ಬಹಳ ಹತ್ತಿರದಲ್ಲೇ ಇತ್ತು. ಮೊನ್ನೆಯೇ ಹೇಳಿದ್ದರೆ ಖಂಡಿತಾ ಅಲ್ಲಿಗೆ ಹೋಗಬಹುದಾಗಿತ್ತು ಎಂದ ಶರ್ಮ. ಅಷ್ಟರಲ್ಲಿ ನಾವು ಲಕ್ಸೆಂಬರ್ಗ್ ನಗರ ತಲುಪಿದ್ದೆವು.

ನಾವು ನಗರದ ಹೊರವಲಯದಲ್ಲಿ ಇರುವ ಕಾರ್ ಪಾರ್ಕಿಂಗ್ ಜಾಗದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿದೆವು. ಈ ಊರು ಚಿಕ್ಕದಾಗಿರುವುದರಿಂದ ನಡೆದುಕೊಂಡೇ ಎಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನೂ ನೋಡಬಹುದೆಂದು ಶರ್ಮ ಹೇಳಿದ. ಯೂರೋಪ್‌ನ ಹಲವಾರು ನಗರಗಳಲ್ಲಿ ಹಾಗೂ ಅಮೇರಿಕಾದಲ್ಲೂ ಕಾರ್ ಪಾರ್ಕಿಂಗ್ ಸಂಕೀರ್ಣಗಳು ಇರುತ್ತವೆ. ನಾವು ಕಾರುಗಳನ್ನು ನಿಲ್ಲಿಸುವ ಅವಧಿಯ ಮೇಲೆ ಪಾರ್ಕಿಂಗ್ ಶುಲ್ಕವನ್ನು ವಸೂಲು ಮಾಡಲಾಗುತ್ತದೆ. ಇಂತಹ ಪಾರ್ಕಿಂಗ್ ಪ್ರದೇಶಗಳಲ್ಲಿ ಸಾಧಾರಣವಾಗಿ ನಾಲ್ಕರಿಂದ ಎಂಟು ಮಹಡಿಗಳಿರುತ್ತವೆ. ಒಂದೊಂದು ಹಂತಕ್ಕೂ ಲೆವಲ್ ಎಂದು ಕರೆಯುತ್ತಾರೆ. ಕಾರು ಒಳಗೆ ಹೋಗುವಾಗ ಒಂದು ಟಿಕೇಟ್ ಕೊಡ್ತಾರೆ. ಹೊರಬರುವಾಗ ಆ ಟಿಕೇಟನ್ನು ಕಾವಲುಗಾರನಿಗೆ ಕೊಟ್ಟರೆ ಆತ ಎಷ್ಟು ವೇಳೆ ಕಾರನ್ನು ಪಾರ್ಕಿಂಗ್‌ನಲ್ಲಿ ನಿಲ್ಲಿಸಲಾಗಿತ್ತು ಎಂದು ನೋಡಿ ಅದರ ಪ್ರಕಾರ ಶುಲ್ಕ ವಸೂಲು ಮಾಡುತ್ತಾನೆ.

ನಾವು ಕಾಲ್ನಡಿಗೆಯಲ್ಲೇ ಲಕ್ಸೆಂಬರ್ಗ್‌ನ ಮಹಾರಾಜನ ಅರಮನೆಯ ಮುಂದೆ ಬಂದೆವು. 1572ನೇ ಇಸವಿಯಲ್ಲಿ ಈ ಅರಮನೆ ಕಟ್ಟಲಾಯಿತಂತೆ. ಈಗಾಗಲೇ ನಮ್ಮ ಯೂರೋಪ್ ಪ್ರವಾಸದಲ್ಲಿ ಸಾಕಷ್ಟು ಅರಮನೆಗಳನ್ನು ನೋಡಿದ್ದರಿಂದ ಈ ಊರಿನಲ್ಲಿಯೂ ಅರಮನೆಗಳನ್ನು ನೋಡುವುದು ಬೇಡ ಎಂದು ಅಂದುಕೊಂಡು ನಗರ ಮಧ್ಯ ಭಾಗದತ್ತ ಕಾಲು ಹಾಕಿದೆವು. ಪಾಶ್ಚಾತ್ಯ ದೇಶಗಳಲ್ಲಿ ನಗರ ಮಧ್ಯಭಾಗ, ಅಂದರೆ ಸಿಟಿ ಸೆಂಟರ್, ವಾಣಿಜ್ಯದ ಕೇಂದ್ರ ಬಿಂದು.

ನಗರದ ಮಧ್ಯ ಭಾಗವು ಅಷ್ಟೇನೂ ದೊಡ್ಡದಾಗಿರದೆ ರಸ್ತೆಯ ಎರಡೂ ಪಕ್ಕಗಳಲ್ಲಿ ಅಂಗಡಿಗಳ ಸಾಲು ಇವೆ. ಒಂದು ಮೂಲೆಯಲ್ಲಿ ಕೇಂದ್ರ ಗ್ರಂಥಾಲಯದ ಕಟ್ಟಡ ಇದೆ. ಹಲಕೆಲವು ಅಂಗಡಿಗಳು ಹಾಗೂ ಹೋಟೆಲುಗಳೂ ಇವೆ. ರಸ್ತೆಯಲ್ಲಿ ವಾಹನ ಓಡಾಟಕ್ಕೆ ನಿರ್ಬಂಧ ಇರುವುದರಿಂದ ಅಂಗಡಿಗಳಿಗೆ ಹಾಗೂ ಹೋಟೆಲ್‌ಗಳಿಗೆ ಬರುವ ಜನರು ನಿರಾತಂಕವಾಗಿ ಓಡಾಡಬಹುದು. ಅಲ್ಲೇ ಒಂದು ಹೋಟೆಲ್ ಮಂದೆ 5-6 ಜನ ನಿಂತುಕೊಂಡು ಬ್ಯಾಂಡ್ ಬಾರಿಸುತ್ತಿದ್ದರು. ಅವರ ತಾಳಕ್ಕೆ ತಕ್ಕಂತೆ ಒಂದು ಜೋಡಿ ನೃತ್ಯ ಮಾಡುತ್ತಿತ್ತು. ರಸ್ತೆಯ ಮಧ್ಯದಲ್ಲಿ ಅವರು ಏನು ಮಾಡುತ್ತಿದ್ದಾರೆ ಎಂದು ಶರ್ಮನನ್ನು ಕೇಳಿದೆ. ಆತ ಹೇಳಿದ. ನಮ್ಮ ಊರಿನಲ್ಲಿ ಹೇಗೆ ದೊಂಬರಾಟ ನಡೆಯುತ್ತದೆಯೋ ಅದೇ ರೀತಿ ಇಲ್ಲಿ ರಸ್ತೆಯ ಮಧ್ಯದಲ್ಲಿ ಕೆಲ ಜನರು ಈ ರೀತಿ ಕಾರ್ಯಕ್ರಮ ಕೊಡುತ್ತಾರೆ. ನಾವು ನಿಲ್ಲುವುದು ಬೇಡ ಎಂದ. ಸಂಗೀತ ಹಾಗೂ ನೃತ್ಯ ಎರಡೂ ಚೆನ್ನಾಗಿ ಇದ್ದುದರಿಂದ ನಾನು ಅಲ್ಲೇ ನಿಂತೆ. ಸಂಗೀತ ಮುಗಿದ ಕೂಡಲೇ ಇಬ್ಬರು ಹ್ಯಾಟ್ ಹಿಡಿದುಕೊಂಡು ಜನರ ಮುಂದೆ ಬಂದರು. ವೀಕ್ಷಕರು ತಮ್ಮ ಶಕ್ತಿಗೆ ಅನುಸಾರವಾಗಿ ಚಿಲ್ಲರೆ ನಾಣ್ಯವನ್ನು ಹ್ಯಾಟ್‌ನಲ್ಲಿ ಹಾಕಿದರು. ಇದೂ ಒಂದು ರೀತಿಯಲ್ಲಿ ಭಿಕ್ಷಾಟನೆಯೇ ಎಂದುಕೊಂಡು ನಾವು ಮುಂದೆ ನಡೆದೆವು. ಯೂರೋಪಿನಲ್ಲಿ ಈ ರೀತಿಯ ದೃಶ್ಯಗಳು ಮುಂದೆ ಹಲವಾರು ಬಾರಿ ಎದುರಾದವು. "ಉದರ ನಿಮಿತ್ತಂ ಬಹುಕೃತ ವೇಷಂ" ಎಂದು ಹೇಳಿಲ್ಲವೇ?

ನಗರದ ಮಧ್ಯ ಭಾಗದಿಂದ ಸ್ವಲ್ಪ ಮುಂದೆ ಹೋದಾಗ ಒಂದು ದೊಡ್ಡ ಸ್ಮಾರಕ ಕಂಡಿತು. ಇದನ್ನು ನೋಡಿದಾಗ ಒಂದು ಕಾಲದಲ್ಲಿ ಬೆಂಗಳೂರಿನಲ್ಲಿ ಇದ್ದ ಸೆನೋಟಾಪ್ ಸ್ಮಾರಕ ನನಗೆ ನೆನಪಾಯಿತು. ಈ ಸ್ಮಾರಕದ ಮೇಲೆ ವಿಶ್ವ ಮಹಾ ಯುದ್ಧದಲ್ಲಿ ಮಡಿದಂತಹ ಆ ದೇಶದ ಯೋಧರ ಹೆಸರುಗಳನ್ನು ಕೆತ್ತಿದ್ದರು. ಅಂದ ಹಾಗೆ ಎರಡೂ ಮಹಾ ಯುದ್ಧಗಳಲ್ಲಿ ಲಕ್ಸೆಂಬರ್ಗ್ ನಗರವನ್ನು ಜರ್ಮನರು ಆಕ್ರಮಿಸಿಕೊಂಡರು. ಸಧ್ಯಕ್ಕೆ ಲಕ್ಸಂಬರ್ಗ್ ದೇಶವು ಸ್ವಿಡ್ಸರ್‌ಲ್ಯಾಂಡ್ ದೇಶದಂತೆಯೇ ಅಲಿಪ್ತ ದೇಶವಾಗಿವೆ.

ಲಕ್ಸೆಂಬರ್ಗ್ ದೇಶ ಉಕ್ಕಿನ ಕೈಗಾರಿಕೆಗೆ ಜಗತ್ತಿನಲ್ಲಿ ಹೆಸರು ವಾಸಿ ಎಂದು ಶರ್ಮ ಹೇಳಿದ. ಈ ದೇಶ ಮುಖ್ಯವಾಗಿ ವ್ಯವಸಾಯವನ್ನೇ ಅವಲಂಬಿಸಿದ್ದರೂ ಇಲ್ಲಿ ಸಾಕಷ್ಟು ಕೈಗಾರಿಕೆಗಳು ಇವೆ. ಈ ದೇಶದ ಜನಸಂಖ್ಯೆ ತುಂಬಾ ಕಡಿಮೆಯಾದ್ದರಿಂದ ಈ ದೇಶದ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಪಕ್ಕದ ದೇಶಗಳಾದ ಜರ್ಮನಿ ಹಾಗೂ ಫ್ರಾನ್ಸ್‌ಗಳಿಂದ ಕಾರ್ಮಿಕರು ಪ್ರತಿ ದಿನವೂ ಬಂದು ಹೋಗುತ್ತಾರಂತೆ.

ಹಳೇ ಕಾಲದ ಲಕ್ಸೆಂಬರ್ಗ್ ನೋಡಲು ತೆರಳಿದೆವು. ಲಕ್ಸೆಂಬರ್ಗ್ ನಗರದ ಪುರಾತನ ಭಾಗ ಎರಡೂ ನದಿಗಳ ಮಧ್ಯ ಭಾಗದಲ್ಲಿ ಕಟ್ಟಲ್ಪಟ್ಟಿದ್ದು ಇಂದಿಗೂ ಸಹ ಶತಮಾನಗಳ ಹಿಂದಿನ ಮನೆಗಳನ್ನು ನೋಡಬಹುದು. ಕಲ್ಲು ಅಥವಾ ಇಟ್ಟಿಗೆಗಳಿಂದ ಕಟ್ಟಲ್ಪಟ್ಟ ಈ ಮನೆಗಳಿಗೆ ತಗಡಿನ ಶೀಟ್‌ಗಳ ಮೇಲ್ಹಾವಣಿ ಇಲ್ಲವೇ ಹಂಚುಗಳ ಮೇಲ್ಹಾವಣೆಯನ್ನು ಹೊದಿಸಲಾಗಿದೆ.

ಅಲ್ಲಿಂದ ವಾಪಸ್ ಆಗುವಾಗ ದಾರಿಯಲ್ಲಿ ಒಂದು ಝರಿಯ ಪಕ್ಕದಲ್ಲಿ ಇದ್ದ ಉದ್ಯಾನಕ್ಕೆ ಹೋದೆವು. ನೆಲದ ಮಟ್ಟಕ್ಕಿಂತ ಸುಮಾರು 60-70 ಅಡಿ ಕೆಳಮಟ್ಟದಲ್ಲಿ ಇರುವ ಈ ಉದ್ಯಾನವು ನಿಜವಾಗಿಯೂ ಪ್ರಶಾಂತವಾಗಿದ್ದು ನಯನಮನೋಹರವಾಗಿದೆ. ಉದ್ಯಾನದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿದ ನಂತರ ಮೆಟ್ಟಿಲುಗಳನ್ನು ಹತ್ತಿಕೊಂಡು ನಗರದ ಮಧ್ಯಭಾಗಕ್ಕೆ ಮತ್ತೆ ಬಂದೆವು.

ಈ ನಗರದ 17ನೇ ಶತಮಾನದ ನೋಟ್ರದಾಮ್ (Notre Dame) ಕೆಥೆಡ್ರಲ್ ಪ್ರಮುಖ ಪ್ರವಾಸಿ ತಾಣ. ಈಗಾಗಲೇ ಹಲವಾರು ಕೆಥೆಡ್ರಿಲ್‌ಗಳನ್ನು ನಾವು ನೋಡಿದ್ದರಿಂದ ಈ ಕೆಥಡ್ರಿಲ್‌ನಲ್ಲಿ ವಿಶೇಷತೆಯೇನೂ ಕಂಡು ಬರಲಿಲ್ಲ. ಅದನ್ನು ನೋಡಿದ ಬಳಿಕ 19ನೇ ಶತಮಾನದಲ್ಲಿ ಕಟ್ಟಿದ ಟೌನ್ ಹಾಲ್ ಕಟ್ಟಡವನ್ನು ನೋಡಿ ಚಹಾ ಕುಡಿಯಲು ಮ್ಯಾಕ್ ಡೊನಾಲ್ಡ್ ಉಪಹಾರ ಗೃಹಕ್ಕೆ ಹೋಗಿ ಚಹಾ ಸೇವಿಸಿದೆವು.

ಚೈನ್ ರೆಸ್ಟೋರೆಂಟ್ ಎಂದು ಕರೆಯುವ ಮ್ಯಾಕ್‌ಡೊನಾಲ್ಡ್ ಉಪಾಹಾರ ಗೃಹ ಹಲವಾರು ಊರುಗಳಲ್ಲಿ ಇರುವುದರಿಂದ ಪರ್ಯಟಕರಿಗೆ ಸಾಕಷ್ಟು ಅನುಕೂಲವಾಗಿದೆ. ನಮ್ಮ ರಾಜ್ಯದ ಕಾಮತ್ ಹೋಟೆಲ್‌ಗಳಂತೆ ಪ್ರಪಂಚದ ಯಾವುದೇ ಮ್ಯಾಕ್‌ಡೊನಾಲ್ಡ್ ಉಪಹಾರ ಗೃಹದಲ್ಲಿ ಉಪಹಾರ ಸೇವಿಸಿದರೂ ಅದರ ಶುಚಿ-ರುಚಿ ಒಂದೇ ರೀತಿಯಾಗಿರುತ್ತದೆ. ಜನರು ಸಾಕಷ್ಟು ಶೀಘ್ರದಲ್ಲಿ ತಿನ್ನುವಂತಹ ತಿನಿಸುಗಳನ್ನು ಇಲ್ಲಿ ತಯಾರು ಮಾಡುವುದರಿಂದ ಯಾವಾಗಲೂ ಇಲ್ಲಿ ನೂಕು ನುಗ್ಗಲು. ನಮ್ಮ ಬೆಂಗಳೂರಿನ ದರ್ಶಿನಿ ಉಪಾಹಾರಗೃಹಗಳಂತೆ ಇಲ್ಲೂ ಫಾಸ್ಟ್ ಸರ್ವಿಸ್ ಶುಚಿ-ರುಚಿಗೆ ಮಹತ್ವವನ್ನು ಈ ಉಪಾಹಾರ ಗೃಹಗಳು ನೀಡುವುದರಿಂದ ಪರ್ಯಟಕ ಯಾವುದೇ ರೀತಿಯ ಹೆದರಿಕೆ ಇಲ್ಲದೆ ಇಲ್ಲಿ ಉಪಹಾರ ಮಾಡಬಹುದು. ವಿಶ್ವದ ಎಲ್ಲ ಪ್ರಾಮುಖ್ಯ

ನಗರಗಳಲ್ಲೂ ಅದರಲ್ಲೂ ವಿಶೇಷವಾಗಿ ಹಲವಾರು ಜನ ಪರ್ಯಟಕರು ಸೇರುವ ಪ್ರವಾಸೀ ಸ್ಥಳಗಳಲ್ಲಿ ಮ್ಯಾಕ್‌ಡೊನಾಲ್ಡ್ ಶಾಖೆಗಳು ಇದೆ. ಇದೀಗ ದೆಹಲಿ ಹಾಗೂ ಮುಂಬೈಗಳಲ್ಲೂ ಮ್ಯಾಕ್‌ಡೋನಾಲ್ಡ್ ಶಾಖೆಗಳು ಆರಂಭವಾಗಿವೆ. ಮ್ಯಾಕ್‌ಡೊನಾಲ್ಡ್ ಅಲ್ಲದೆಯೇ ಇತರ ವಿಖ್ಯಾತ ಉಪಹಾರ ಗೃಹಗಳಾದ ಪೀಜಾ ಹಟ್ ಬರ್ಗರ್‌ಕಿಂಗ್ ಇತ್ಯಾದಿ ಚೈನ್ ರೆಸ್ಟೋರೆಂಟ್‌ಗಳೂ ಮ್ಯಾಕ್‌ಡೊನಾಡ್ಡ್ ಜೊತೆ ಸ್ಪರ್ಧೆಗೆ ಇಳಿದಿವೆ. ಈ ಉಪಹಾರ ಗೃಹಗಳಲ್ಲಿ ಸಿಗುವ ಫ್ರೆಂಚ್‌ಫ್ರೆ (Finger Chips) ಅಂದರೆ ಬೆರಳುಗಳ ಆಕಾರದಲ್ಲಿರುವ ಹುರಿದ ಆಲೂಗಡ್ಡೆ ತುಂಬಾ ಜನಪ್ರಿಯವಾಗಿದ್ದು, ನನ್ನಂತಹ ಶಾಖಾಹಾರೀ ಪರ್ಯಟಕರಿಗೆ ದಿನನಿತ್ಯದ ಭೋಜನ ಆಗುತ್ತದೆ.

ಉಪಾಹಾರ ಮುಗಿಸಿದ ಬಳಿಕ ಪುಟ್ಟ ಊರಾದ ಲಕ್ಸೆಂಬರ್ಗ್‌ನಲ್ಲಿ ಇನ್ನು ನೋಡುವುದು ಏನು ಉಳಿದಿಲ್ಲವೆಂದುಕೊಂಡು ಬ್ರಸೆಲ್ಸ್ ನಗರಕ್ಕೆ ಹೊರಟೆವು.

13 ಬ್ರಸೆಲ್ಸ್

ನಾವು ಬ್ರಸೆಲ್ಸ್ ತಲುಪಿದಾಗ ರಾತ್ರಿ ಒಂಬತ್ತು ಗಂಟೆಯಾಗಿತ್ತು. ಹೀಗಾಗಿ ಊರು ನೋಡದೇ ನೇರವಾಗಿ ಶರ್ಮನ ಮನೆಗೇ ಹೋದೆವು. ಮಿಸೆಸ್ ಶರ್ಮಾ ಬಾಗಿಲಲ್ಲೇ ನಮ್ಮನ್ನು ಸ್ವಾಗತಿಸಿ ಊಟದ ಕೋಣೆಗೆ ಕರೆದೊಯ್ದು ಬಿಸಿ ಬಿಸಿ ಗುಜರಾತಿ ಅಡಿಗೆ ಬಡಿಸಿದರು. "ನಿಮ್ಮ ಊರಿನಲ್ಲಿ ಏನು ವಿಶೇಷ" ಎಂದು ನನ್ನ ಪತ್ನಿ ಆಕೆಯನ್ನು ಕೇಳಿದಾಗ "ನೋಡಿ, ಮಿಸೆಸ್ ಗುರುಪ್ರಸಾದ್, ಬ್ರಸೆಲ್ಸ್ ನಿಮಗೆ ತಿಳಿದ ಹಾಗೆ ಬೆಲ್ಜಿಯಂ ದೇಶದ ರಾಜಧಾನಿ, ಹಾಗೂ ದೇಶದ ಅತಿ ದೊಡ್ಡ ಪಟ್ಟಣ. ಇದು ನೇಟೋ (ನಾರ್ತ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೇಷನ್) ರಾಜಧಾನಿ. ಇತ್ತೀಚೆಗೆ ಯೂರೋಪಿಯನ್ ಕಮ್ಯೂನಿಟಿಯ ಕೇಂದ್ರ ಬಿಂದು" ಎಂದರು. "ಈ ಊರು ನೋಡುವುದಕ್ಕೆ ತುಂಬಾ ಚೆಂದ, ಇಲ್ಲಿಯ ರಸ್ತೆಗಳು ವಿಶಾಲವಾಗಿದ್ದು ರಸ್ತೆಗಳ ಪಕ್ಕದಲ್ಲಿ ಸಾಲು ಮರಗಳು ಇದ್ದು ನಮ್ಮ ದೆಹಲಿಯ ತರಹ ಇದೆ. ಈಗ ರಾತ್ರಿಯಾದ್ದರಿಂದ ನೀವು ಈ ಊರಿನ ಸೌಂದರ್ಯ ಸವಿಯಲಾಗಲಿಲ್ಲ. ನಾಳೆ ನೋಡುವಿರಂತೆ. ಅಂದ ಹಾಗೆ ಈ ಊರು ಲೇಸ್ (Lace) ಗಾಗಿ ವಿಶ್ವ ಪ್ರಸಿದ್ಧ. ನೋಡಿ ಈ ಡೈನಿಂಗ್ ಟೇಬಲ್ ಮೇಲೆ ಹಾಸಿರುವ ಚಾದರ ಹಾಗೂ ಟೇಬಲ್ ಮ್ಯಾಟ್ ಎಷ್ಟು ಸುಂದರವಾಗಿ ಮಾಡಿದ್ದಾರೆ. ನೀವು ಕೂಡಾ ಈ ರೀತಿ ಐಟಂ ಖರೀದಿಸಿ ಮನೆಗೆ ಒಯ್ಯಿರಿ" ಎಂದರು.

ಅಷ್ಟರಲ್ಲೇ ಮಧ್ಯೆ ಮಾತನಾಡಿದ ಶರ್ಮ "ನೋಡಿ, ಭಾಬಿ ಈ ಊರು ಯೂರೋಪಿಯನ್ ಸಮುದಾಯದ ರಾಜಧಾನಿ. ಯೂರೋಪಿನ ಹನ್ನೆರಡು ದೇಶಗಳು, ಅಂದರೆ ಸ್ಪೇನ್, ಪೋರ್ತುಗಲ್, ಗ್ರೀಸ್, ಡೆನ್ಮಾರ್ಕ್, ಐರ್ಲಂಡ್, ಫ್ರಾನ್ಸ್, ಇಟಲಿ, ಲಕ್ಸೆಂಬರ್ಗ್, ನೆದರ್‌ಲ್ಯಾಂಡ್ಸ್ ಜರ್ಮನಿ, ಗ್ರೇಟ್ ಬ್ರಿಟನ್, ಹಾಗೂ ಬೆಲ್ಜಿಯಂ ದೇಶಗಳು ಒಂದಾಗಿ ಮಾಡಿಕೊಂಡಿರುವ ಒಕ್ಕೂಟವೇ ಯೂರೋಪಿಯನ್ ಸಮುದಾಯ. ಬೆಲ್ಜಿಯಂ ದೇಶದಲ್ಲಿಯೇ ನೆಪೋಲಿಯನ್ ತನ್ನ ಸೋಲನ್ನು ಅನುಭವಿಸಿದ ವಾಟರ್‌ಲೂ ಇರುವುದು. ಅಂದ ಹಾಗೆ ನಮ್ಮ ಗುರುಪ್ರಸಾದ್‌ಗೆ ಈ ದೇಶ ಪಿಸ್ತೂಲು ತಯಾರಿಕೆ ಹಾಗೂ ಇತರ ಮಾರಕಾಸ್ತ್ರಗಳ ತಯಾರಿಕೆಗೂ ಪ್ರಸಿದ್ಧ ಎಂದು ಗೊತ್ತಿರಲೇ ಬೇಕು" ಎಂದು "ಈಗ ತುಂಬಾ ರಾತ್ರಿಯಾಯಿತು. ನೀವು ವಿಶ್ರಮಿಸಿ. ನಾಳೆ ಪೂರ್ತಿ ನಿಮ್ಮನ್ನು ಈ ಊರು ಸುತ್ತಿಸುತ್ತೇನೆ. ಗುಡ್ ನೈಟ್" ಎಂದ. ನಾವೂ ನಮ್ಮ ಕೋಣೆಗೆ ಹೋಗಿ ನಿದ್ರಾಧೀನರಾದೆವು.

ಮಾರನೆಯ ದಿನ ಬೆಳಿಗ್ಗೆ ಉಪಹಾರವಾದ ಕೂಡಲೇ ಶರ್ಮ ನಮ್ಮನ್ನು ಊರ ಮಧ್ಯದಲ್ಲಿ ಇರುವ ಎಸ್.ಎಸ್. ಮೈಕೇಲ್ ಮತ್ತು ಗುಡುಲೆ ಚರ್ಚ್‌ಗೆ ಕರೆದೊಯ್ದ. ಹದಿಮೂರನೆಯ ಶತಮಾನದಲ್ಲಿ ಕಟ್ಟಲಾದ ಈ ಚರ್ಚ್ ತನ್ನ ಚಿತ್ತಾಕರ್ಷಕ ಗಾಜಿನ ಕಿಟಕಿಗಳಿಗೆ ಪ್ರಸಿದ್ಧಿಯಾಗಿದೆಯಂತೆ. ಚರ್ಚ್ ನೋಡಿದ ನಂತರ ನಾವು ನಗರ ಮಧ್ಯದ ಚೌಕಕ್ಕೆ ಬಂದೆವು. ಗ್ರೇಟ್ ಸ್ಕ್ವೇರ್ ಎಂದು ಕರೆಯಲಾಗುವ ಈ ಚೌಕದ ನಾಲ್ಕು ಕಡೆಯೂ ಎತ್ತರದ ಪುರಾತನ ಕಟ್ಟಡಗಳಿವೆ. ಈ ಚೌಕದಲ್ಲಿಯೇ ಇರುವ ಟೌನ್‌ಹಾಲ್ ಕೂಡಾ ಬಹಳ ಹಳೆಯದಾದ ಕಟ್ಟಡ. ಈ ಚೌಕದ ಪಕ್ಕದಲ್ಲಿ ಇರುವ ರಸ್ತೆಯೊಂದರಲ್ಲಿ ತರಹೇವಾರು ಅಂಗಡಿಗಳು ಇದ್ದು, ಗಾಜಿನ ಕಟ್‌ಗ್ಲಾಸ್ ಐಟಂಗಳು, ಲೇಸು, ರತ್ನ ಕಂಬಳಿಗಳು ಇತ್ಯಾದಿಗಳನ್ನು ಮಾರುತ್ತಾರೆ. ಇವೆಲ್ಲವನ್ನೂ ನೋಡಿದ ನಂತರ ಶರ್ಮ ತನ್ನ ಕಾರನ್ನು ದೊಡ್ಡ ಕಟ್ಟಡವೊಂದರ ಮುಂದೆ ನಿಲ್ಲಿಸಿ 'ಇದೇ ಈ ದೇಶದ ಮಹಾರಾಜನ ಅರಮನೆ. ಒಳಗಡೆ ಪ್ರವಾಸಿಗರನ್ನು ಬಿಡುವುದಿಲ್ಲ. ಬೇಕಾದರೆ ಹೊರಗಿನಿಂದಲೇ ಫೋಟೋ ತೆಗೆದುಕೋ' ಎಂದ. ನಾನು ಬೇಗನೇ ಕಾರಿನಿಂದಿಳಿದು ಅರಮನೆಯ ಫೋಟೋ ಕ್ಲಿಕ್ಕಿಸಿದೆ.

ಅಲ್ಲಿಂದ ಮುಂದೆ ಎರಡು ಸಣ್ಣ ರಸ್ತೆಗಳು ಸೇರುವ ಒಂದು ಜಾಗಕ್ಕೆ ಕರೆದೊಯ್ದ ಶರ್ಮ "ಗುರೂ ಬ್ರಸೆಲ್ಸ್‌ಗೆ ಬರುವ ಎಲ್ಲ ಪ್ರವಾಸಿಗರೂ ತಪ್ಪದೆ ನೋಡುವ ತಾಣ ಇದು" ಎಂದ. ಇದರ ವಿಶೇಷ ಏನು ಎಂದು ನೋಡಿದರೆ ಎದುರುಗಡೆ ಒಂದು ನೀರಿನ ಕಾರಂಜಿ ಇತ್ತು. ಆದರೆ ಕಾರಂಜಿಯ ನೀರು ಹೇಗೆ ಹೊರಬರುತ್ತದೆ ಎಂದರೆ ಒಬ್ಬಹುಡುಗ ಮೂತ್ರ ವಿಸರ್ಜನೆ ಮಾಡುತ್ತಿರುವಂತೆ ಬರುತ್ತದೆ. ಶರ್ಮ ಹೇಳಿದ "ಈ ಕಾರಂಜಿಗೆ ಮ್ಯಾನೆಕಿನ್ ಪಿಸ್ ಎನ್ನುತ್ತಾರೆ - "ಮ್ಯಾನೆಕಿನ್" ಎಂದರೆ ಬೊಂಬೆ, "ಪಿಸ್" ಎಂದರೆ ಮೂತ್ರ. ಮೂತ್ರ ಮಾಡುತ್ತಿರುವಂತೆ ಕೆತ್ತಿರುವ ಈ ಪ್ರತಿಮೆಯನ್ನು 1619ರಲ್ಲಿ ಸ್ಥಾಪಿಸಲಾಯಿತು. ಪ್ರತಿಯೊಬ್ಬ ಬೆಲ್ಜಿಯನ್ ಈ ಪ್ರತಿಮೆಯನ್ನು ನಮ್ಮ ದೇಶದ ಅತಿ ಪುರಾತನ ನಾಗರಿಕ ಎಂದು ಕರೆಯುತ್ತಾರೆ ಎಂದ. ಈ ದೇಶದ ಜನತೆ ಯಾವುದೇ ಸಿದ್ಧಾಂತಕ್ಕೆ ಬದ್ಧವಾಗಿಲ್ಲ ಎಂದು ಈ ಕಾರಂಜಿ ನಿರೂಪಣೆ ಮಾಡುತ್ತದೆ ಎಂದು ಇಲ್ಲಿಯ ಜನ ಹೇಳುತ್ತಾರೆ. ಅದೂ ನಿಜವಿರಬಹುದೇನೋ ಎಂದು ಸುಮ್ಮನಾದ. ರೋಮ್‌ನಲ್ಲಿ ತರಹೇವಾರಿ ಕಾರಂಜಿಗಳನ್ನು ನೋಡಿದ್ದ ನಮಗೆ ಮ್ಯಾನೆಕಿನ್ ಪಿಸ್ ಕಾರಂಜಿ ನೋಡಿ ತುಂಬಾ ಆಶ್ಚರ್ಯವಾಯಿತು.

ಮೂತ್ರ ಮಾಡುತ್ತಿರುವ ಬೊಂಬೆಯನ್ನು ನೋಡಿದ ನಂತರ ಶರ್ಮ ನಮ್ಮನ್ನು ಕರೆದೊಯ್ದು ಮುಂದಿನ ಜಾಗ "ಮಿನಿ ಯೂರೋಪ್". ಬ್ರಸೆಲ್ಸ್ ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಅತಿ ಪ್ರಸಿದ್ಧವಾಗಿರುವ ಈ ಉದ್ಯಾನವನ ಯೂರೋಪಿಯನ್ ಸಮುದಾಯದ ಎಲ್ಲ ದೇಶಗಳ ಇತಿಹಾಸ, ಸಂಪ್ರದಾಯ, ಜನಜೀವನ ಹಾಗೂ ಕಲೆಗಳನ್ನು ಪರಿಚಯಿಸುವ ಪ್ರಯತ್ನ. 1987ರಲ್ಲಿ ಸಮುದಾಯದ ಹನ್ನೆರಡೂ ದೇಶಗಳ ವೈವಿಧ್ಯತೆಯನ್ನು ಯಾವ ರೀತಿಯಲ್ಲಿ ವಿಶ್ವಕ್ಕೆ ಪರಿಚಯಿಸಬೇಕು ಎಂಬ ಜಿಜ್ಞಾಸೆ ಉಂಟಾದಾಗ ಈ ಎಲ್ಲ ದೇಶಗಳ ಮುಖ್ಯ ಕಟ್ಟಡಗಳು ಅಥವಾ ಜನಜೀವನ ಬಿಂಬಿಸುವ ಪುಟಾಣಿ ಮಾಡೆಲ್‌ಗಳನ್ನು ಮಾಡಿ ಉದ್ಯಾನದಲ್ಲಿ ಸ್ಥಾಪಿಸಬೇಕು ಎಂದು ತೀರ್ಮಾನವಾಯಿತಂತೆ. ಉದ್ಯಾನದಲ್ಲಿ ಇಡಲಾಗುವ ಪ್ರತಿ ಮಾದರಿಯೂ ಯಾವುದಾಗಬೇಕು ಎಂದು ತೀರ್ಮಾನವಾಯಿತಂತೆ. ಉದ್ಯಾನದಲ್ಲಿ ಇಡಲಾಗುವ ಪ್ರತಿ ಮಾದರಿಯೂ ತನ್ನ ಮೂಲ ಆಕಾರದ 1/25 ಭಾಗ ಇರಬೇಕು ಹಾಗೂ ಥೇಟ್ ಮೂಲ ಕಟ್ಟಡದಂತೆಯೇ ಇರಬೇಕು ಎಂದು ಮಾದರಿ

ತಯಾರಿಕರಿಗೆ ತಿಳಿಸಿದರಂತೆ. ಏಳು ದೇಶಗಳ ವಿಖ್ಯಾತ ಕಲಾವಿದರು ಈ ಮಾದರಿಗಳನ್ನು ತಯಾರಿಸಿದ ನಂತರ ಉದ್ಯಾನವನದ ಲೇಔಟ್ ಹೇಗಿರಬೇಕು ಎಂದು ಚರ್ಚೆ ಮಾಡಿ ಕಡೆಗೆ ಯೂರೋಪಿಯನ್ ಸಮುದಾಯದ ಭೂಪಟವನ್ನೇ ಹೋಲಲಿ ಎಂದು ತೀರ್ಮಾನಿಸಿ ಅದೇ ರೀತಿ ಉದ್ಯಾನ ರೂಪಿಸಿದ್ದಾರೆ.

ಈ ಉದ್ಯಾನವನದಲ್ಲಿ ನಡೆದಾಡುವುದೇ ಒಂದು ಮೋಜಿನ ಅನುಭವ. ಮೂರ್‍ನಾಲ್ಕು ಅಡಿ ಎತ್ತರದ ಪೀಸಾದ ಓಲು ಗೋಪುರ, ಪ್ಯಾರಿಸ್‌ನ ಆರ್ಕ್-ಡೀ-ಟ್ರಿಯಂಫ್, ನೆದರ್‌ಲ್ಯಾಂಡಿನ ವಿಂಡ್ ಮಿಲ್ಲುಗಳು ಇತ್ಯಾದಿ. ಮಾದರಿಗಳ ನಡುವೆ ಓಡಾಡುತ್ತಾ ಇದ್ದರೆ ತುಂಬಾ ಚೆನ್ನಾಗಿರುತ್ತದೆ. ಕೈಯಲ್ಲಿ ಇವುಗಳನ್ನು ಮುಟ್ಟಿಬಿಡಬೇಕು ಎನ್ನಿಸುತ್ತದೆ. ಮುಟ್ಟಿದರೂ ಏನೂ ಆಗುವುದಿಲ್ಲವಂತೆ ಏಕೆಂದರೆ ಮಳೆಗಾಳಿಗೆ ಹಾಳಾಗಬಾರದು ಎಂದು ಪಾಲಿಯೆಸ್ಟರ್ ಎರಕದಲ್ಲಿ ಈ ಮಾದರಿಗಳನ್ನು ತಯಾರಿಸಲಾಗಿದೆ ಈ ಉದ್ಯಾನವನ ನೋಡಿದರೆ ಯೂರೋಪಿನ ಹಲವಾರು ದೇಶಗಳ ಬಗ್ಗೆ ನಿಜವಾಗಿಯೂ ಹೆಚ್ಚಿನ ಜ್ಞಾನ ಉಂಟಾಗುತ್ತದೆ.

ಮಿನಿ ಯೂರೋಪ್ ಉದ್ಯಾನವನದ ಪಕ್ಕದಲ್ಲಿಯೇ ಒಂದು ವಿಜ್ಞಾನ ಮ್ಯೂಸಿಯಂ ಇದೆ. ಅದನ್ನೂ ನೋಡುವಷ್ಟರಲ್ಲಿ ಸಂಜೆಯಾಯಿತು. "ಇವತ್ತು ಬ್ರಸೆಲ್ಸ್ ನಗರದ ಎಲ್ಲಾ ಪ್ರಾಮುಖ್ಯ ಸ್ಥಳಗಳನ್ನು ನಿಮಗೆ ತೋರಿಸಿದ್ದೇವೆ. ನಾಳೆ ಆ್ಯಂಟವರ್ಪ್‌ಗೆ ಬೇಕಾದರೆ ಹೋಗೋಣ" ಎಂದ ಶರ್ಮ. "ಆ ಊರಿನಲ್ಲೇನಿದೆ" ಎಂದು ನನ್ನ ಶ್ರೀಮತಿ ಕೇಳಿದಾಗ "ಭಾಬಿ, ಬೆಲ್ಜಿಯಂ ದೇಶದ ಎರಡನೇ ಮುಖ್ಯ ನಗರ ಆ್ಯಂಟವರ್ಪ್. ಈ ದೇಶ ವಿಶ್ವದ ವಜ್ರ ವ್ಯಾಪಾರದ ಕೇಂದ್ರ. ದಕ್ಷಿಣ ಆಫ್ರಿಕೆಯೇ ಆಗಲಿ, ಬೇರಾವುದೇ ದೇಶವಾಗಲೀ, ಅಲ್ಲಿಯ ವಜ್ರಗಳು ಇಲ್ಲಿಗೇ ಬಂದು ಕತ್ತರಿಸಲ್ಪಟ್ಟು, ಪಾಲಿಷ್ ಹೊಂದಿ ವ್ಯಾಪಾರವಾಗುವುದು. ಅರ್ಧದಷ್ಟು ವಜ್ರ-ವ್ಯಾಪಾರ ವಹಿವಾಟು ನಮ್ಮ ಭಾರತೀಯರ ಕೈಯಲ್ಲಿಯೇ ಇರುವುದು ಒಂದು ವಿಶೇಷ" ಎಂದ.

ನನ್ನ ಪತ್ನಿಗೆ ವಜ್ರ ನೋಡುವ ಆಸೆ. ಆದರೆ ನಾನು ಮಾರನೆಯ ದಿವಸ ಪ್ಯಾರಿಸ್ಸಿಗೆಂದು ರೈಲು ಟಿಕೆಟ್ ರಿಸರ್ವ್ ಮಾಡಿದ್ದರಿಂದ "ಮುಂದೆ ಎಂದಾದರೂ ಇತ್ತ ಬಂದಾಗ ಆ್ಯಂಟವರ್ಪ್‌ಗೆ ಹೋಗಿ ವಜ್ರ ವ್ಯಾಪಾರದ ಬಗ್ಗೆ ಮಾಹಿತಿ ಪಡೆಯುತ್ತೀವಿ" ಎಂದು ಶರ್ಮನಿಗೆ ಹೇಳುವಷ್ಟರಲ್ಲೇ ಅವನ ಮನೆ ತಲುಪಿದೆವು. ನೆಪೋಲಿಯನ್ ಯುದ್ಧದಲ್ಲಿ ಸೋತ ವಾಟರ್ಲೂದರ್ಶನವನ್ನೂ ಮುಂದಿನ ಪ್ರವಾಸಕ್ಕೆ ಎಂದು ಮೀಸಲಿಟ್ಟೆವು.



ಪ್ಯಾರಿಸ್ ವಿಶೇಷತೆಗಳು

ಬ್ರಸೆಲ್ಸ್‌ನಿಂದ ಹೊರಟ ನಮ್ಮ ರೈಲು ಪ್ಯಾರಿಸ್ ಉತ್ತರ ರೈಲು ನಿಲ್ದಾಣಕ್ಕೆ ಬರಲು ತೆಗೆದುಕೊಂಡ ಸಮಯ ಕೇವಲ ಎಂಭತ್ತು ನಿಮಿಷ ಮಾತ್ರ. ಗೆಳೆಯ ಬಾಲಕೃಷ್ಣ ರೈಲ್ವೆ ಸ್ಟೇಷನ್‌ನಲ್ಲಿ ನಮ್ಮನ್ನು ಭೇಟಿಯಾಗಿ ಈ ಸ್ಟೇಷನ್ ಇರುವುದು ಊರಿನ ಮಧ್ಯ ಭಾಗದಲ್ಲಿ ನಾವು ಮನೆಗೆ ಹೋಗುತ್ತಾ ಪ್ಯಾರಿಸ್‌ನ ಕೆಲವು ಮುಖ್ಯ ಪ್ರದೇಶಗಳನ್ನು ತೋರಿಸುತ್ತೇನೆ ಎಂದ. ಶರ್ಮಾನ ಮನೆಯಲ್ಲೇ ಬೆಳಿಗಿನ ಸ್ನಾನ, ಉಪಹಾರ ಮುಗಿಸಿದ್ದರಿಂದ ನಾವು ವೇಳೆ ವ್ಯರ್ಥಮಾಡದೆ ಪ್ಯಾರಿಸ್‌ನ ಪ್ರಾಮುಖ್ಯ ಸ್ಥಳಗಳನ್ನು ನೋಡುವುದು ಒಳಿತು ಎಂದುಕೊಂಡು ಅವನ ಸಲಹೆಗೆ ಕೂಡಲೇ ಒಪ್ಪಿದೆವು.

ಪ್ಯಾರಿಸ್‌ನ ಅತ್ಯಂತ ಹೆಸರು ವಾಸಿಯಾದ ಐಫೆಲ್ ಟವರ್‌ನ ದರ್ಶನದಿಂದಲೇ ನಮ್ಮ ಟೂರ್ ಪ್ರಾರಂಭ ಎಂದ ಬಾಲಕೃಷ್ಣ ಮೊದಲಿಗೆ ನಮ್ಮನ್ನು ಕರೆದೊಯ್ದದ್ದು ಅಲ್ಲಿಗೇ. 1889ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಮೇಳದ ಸಂದರ್ಭದಲ್ಲಿ ಕಟ್ಟಲಾದ ಈ ಕಬ್ಬಿಣದ ಗೋಪುರವನ್ನು ಕಟ್ಟಿದ ಇಂಜಿನಿಯರ್‌ನ ಹೆಸರು ಅಲೆಕ್ಸಾಂಡರ್ ಗುಸ್ತಾವ್ ಐಫೆಲ್. 1050 ಅಡಿ ಎತ್ತರವಿರುವ ಈ ಗೋಪುರವನ್ನು ನೋಡಲು ಪ್ರತಿ ವರ್ಷ ಸುಮಾರು ನಲವತ್ತು ಲಕ್ಷ ಜನ ಬರ್‍ತಾರಂತೆ. ಗೋಪುರ ಮೂರು ಹಂತಗಳಲ್ಲಿದೆ. ಮೊದಲನೆಯ ಹಂತದಲ್ಲಿ ಗೋಪುರದ ನಾಲ್ಕು ಬೃಹತ್ ಕಾಲುಗಳಿದ್ದು ಈ ಕಾಲುಗಳು ಮೇಲೇರುತ್ತಾ ಕೂಡಿಕೊಂಡು ಒಂದೇ ಗೋಪುರವಾಗುತ್ತದೆ. ಗೋಪುರದಲ್ಲಿ ಮೂರು ಪ್ಲಾಟ್ ಫಾರ್ಮ್‌ಗಳಿವೆ. ಮೊದಲ ಪ್ಲಾಟ್ ಫಾರ್ಮ್‌ನಲ್ಲಿ ಒಂದು ರೆಸ್ಟೋರೆಂಟ್ ಕೂಡಾ ಇದೆ. ಮೇಲುಗಡೆಯ ಪ್ಲಾಟ್ ಫಾರ್ಮ್‌ನಲ್ಲಿ ಹವಾಮಾನ ಕಛೇರಿ ಹಾಗೂ ರೇಡಿಯೋ ಟೆಲಿವಿಷನ್ ತರಂಗ ಪ್ರಸರಣ ಕಛೇರಿಗಳಲ್ಲದೆ ಐಫೆಲ್ ಉಪಯೋಗಿಸುತ್ತಿದ್ದ ಕೊಠಡಿಗಳೂ ಇವೆ.

ಗೋಪುರ ಏರಲು ಏಣಿ ಹಾಗೂ ಲಿಫ್ಟ್‌ಗಳಿವೆ. ಈ ಗೋಪುರದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಜಾಸ್ತಿ ಆದ ನಂತರ ವೀಕ್ಷಕರನ್ನು ಕೇವಲ ಮೊದಲ ಹಂತದ ಪ್ಲಾಟ್‌ಫಾರ್ಮ್‌ನವರೆಗೆ ಮಾತ್ರ ಒಯ್ಯಲಾಗುತ್ತದೆ. ನಾವೂ ಟಿಕೆಟ್ ಪಡೆದು ಮೊದಲ ಹಂತದವರೆಗೆ ಲಿಫ್ಟ್‌ನಲ್ಲಿ ಹೋಗಿ ಪ್ಯಾರಿಸ್ ನಗರದ ವಿಹಂಗಮ ನೋಟವನ್ನು ಸವಿದೆವು.

ಸೀನ್ ನದಿಯ ತಟದಲ್ಲಿ ಕಟ್ಟಲಾಗಿರುವ ಪ್ಯಾರಿಸ್‌ನಗರ ಗೋಲಾಕಾರದಲ್ಲಿದ್ದು ಮೊದಲನೆಯ ಶತಮಾನದಲ್ಲಿ ನಿರ್ಮಾಣಗೊಂಡಿತು. ಪ್ಯಾರಿಸ್ ನಗರದ ಮಧ್ಯಭಾಗದಲ್ಲಿ ಯಾವ ಕಟ್ಟಡವನ್ನೂ ಆರು ಮಹಡಿಗಳಿಗಿಂತ ಎತ್ತರ ಕಟ್ಟಬಾರದೆಂಬ ನಿರ್ಬಂಧ ಹೇರಿರುವುದರಿಂದ ಈ ನಗರದಲ್ಲಿ ಗಗನಚುಂಬಿ ಕಟ್ಟಡಗಳು ಕಾಣುವುದಿಲ್ಲ. ಫ್ರಾನ್ಸ್ ದೇಶದ ಶೇಕಡಾ 20 ರಷ್ಟು ಜನ ಪ್ಯಾರಿಸ್‌ನಲ್ಲೇ ವಾಸ ಮಾಡುತ್ತಾರೆ ಎಂದು ಬಾಲಕೃಷ್ಣ ಹೇಳಿದಾಗ ನನಗೆ ನಂಬಲೇ ಆಗಲಿಲ್ಲ.

ಐಫೆಲ್ ಟವರ್‌ನಿಂದ ಕೆಳಗಿಳಿದು ಕಾರನ್ನು ಹತ್ತಿದಾಗ ಬಾಲಕೃಷ್ಣ "ನೋಡಿ, ಸಾಮಾನ್ಯವಾಗಿ ಪ್ಯಾರಿಸ್‌ಗೆ ಬರುವ ಪರ್ಯಟಕರು ನೋಡದೇ ಇರುವಂತಹ ಜಾಗಗಳನ್ನು ನಿಮಗೆ ತೋರಿಸ್ತೀನಿ. ನೀವು ಬರೀ ಪ್ರವಾಸೀ ತಾಣಗಳಿಗೆ ಮಾತ್ರ ಭೇಟಿ ನೀಡಿದರೆ ನೀವು ಈ ದೇಶದ ಜನಜೀವನ ಅರ್ಥ ಮಾಡಿಕೊಳ್ಳಲು ಆಗುವುದಿಲ್ಲ" ಎಂದು ಹೇಳಿ. ಕಾರನ್ನು ನದಿಯ ಪಕ್ಕದ ಒಂದು ರಸ್ತೆಗೆ ಒಯ್ದು ಅಲ್ಲಿ ಒಂದು ಸುರಂಗ ಮಾರ್ಗದೊಳಗೆ ಹೋದ. ನಿಧಾನವಾಗಿ ಕಾರನ್ನು ನಡೆಸಿ. ಅಲ್ಲಿ ಇದ್ದ ಒಂದು ದೊಡ್ಡ ಕಂಬ ತೋರಿಸಿ "ಇದೇ ಕಂಬಕ್ಕೆ ಡಿಕ್ಕಿ ಹೊಡೆದೇ ಡಯಾನಾ ಸತ್ತಿದ್ದು" ಎಂದ. ಸುರಂಗದಿಂದ ಕಾರನ್ನು ಹೊರಗೆ ತಂದು ಪಕ್ಕದ ರಸ್ತೆಯಲ್ಲಿ ನಿಲ್ಲಿಸಿ "ನೋಡಿ ಡಯಾನ (ಬ್ರಿಟಿಷ್ ರಾಜಮನೆತನದ ಸೊಸೆ) ನೆನಪಿನಲ್ಲಿ ಆಕೆಯ ಅಭಿಮಾನಿಗಳು ಸ್ಮಾರಕ ಮಾಡಿದ್ದಾರೆ" ಎಂದು ಒಂದು ಪ್ರತಿಮೆ ತೋರಿಸಿದ.

ಪ್ರಜ್ವಲಿಸುತ್ತಿರುವ ಜ್ವಾಲೆಯಂತೆ ಕಾಣುವ ಡಯಾನಾ ಸ್ಮಾರಕ ನೋಡಿ ಎಂತಹ ದುರ್ಗತಿ ಬಂತು ಈ ವಿಶ್ವವಿಖ್ಯಾತ ಹೆಣ್ಣಿಗೆ ಎಂದುಕೊಂಡು ಸ್ಮಾರಕದ ಸುತ್ತ ಒಂದು ಪ್ರದಕ್ಷಿಣೆ ಮಾಡಿದೆವು. ಸ್ಮಾರಕದ ಬುಡದಲ್ಲಿ ಪುಷ್ಪಗುಚ್ಚಗಳು, ಗ್ರೀಟಿಂಗ್‌ಗಳು ಹಾಗೂ ನಾಣ್ಯಗಳನ್ನು ಜನ ಹಾಕಿದ್ದರು. ನಾನೂ ಒಂದು ಹೂವನ್ನು ಅದರ ಮೇಲೆ ಇಟ್ಟು ನಮಸ್ಕರಿಸಿದೆ.

"ಡಯಾನಾ ಸತ್ತ ಜಾಗ ನೋಡಿದಿರಿ, ಈಗ ನೆಪೋಲಿಯನ್ ದೊರೆ ಸಮಾಧಿ ತೋರಿಸ್ತೀನಿ" ಎಂದ ಬಾಲಕೃಷ್ಣ ನೇರವಾಗಿ ಕಾರನ್ನು ನೆಪೋಲಿಯನ್‌ನ ಸಮಾಧಿಗೆ ಒಯ್ದ. "ನಮ್ಮ ಯಜಮಾನರು ಬೆಲ್ಜಿಯಂನಲ್ಲಿ ವಾಟರ್‌ಲೂ ನೋಡಲಿಲ್ಲ ಎಂದು ಕೊರಗುತ್ತಿದ್ದರು ಈಗ ನೆಪೋಲಿಯನ್‌ನ ಸಮಾಧಿಯಾದರೂ ನೋಡಿ ತೃಪ್ತಿಪಟ್ಕೋತಾರೆ" ಅಂದಳು ನನ್ನ ಹೆಂಡತಿ. "ಹೌದು ನಾನು ಖಂಡಿತಾ ಈ ಧೀರನನ್ನ ಇಷ್ಟಪಡ್ತೀನಿ, ಆದರೂ ಪಾಪ ಆತ ವಾಟರ್‌ಲೂ ಯುದ್ಧದಲ್ಲಿ ಸೋತನಂತರ ಆಫ್ರಿಕಾ ಖಂಡದ ಬಳಿ ಇರುವ ಸೇಂಟ್ ಹೆಲೀನಾ ದ್ವೀಪದಲ್ಲಿ ಆರು ವರ್ಷ ಇದ್ದು 1821ರಲ್ಲಿ ಹೊಟ್ಟೆಯ ಕ್ಯಾನ್ಸರ್‌ನಿಂದ ಸತ್ತ ಮೇಲೆ ಅವನ ಶವ ಇಲ್ಲಿ ತಂದು ಹುಗಿದಿದ್ದಾರೆ ಅಂತ ಕಾಣುತ್ತದೆ" ಅಂತ ನಾನಂದೆ. ಆಶ್ಚರ್ಯದ ಸಂಗತಿ ಎಂದರೆ ಈ ಸಮಾಧಿ ವೀಕ್ಷಿಸಲು ನಮ್ಮ ಹೊರತಾಗಿ ಬೇರೆ ಯಾರೂ ಇರಲಿಲ್ಲ. "ಅಂತೂ ಎಷ್ಟೇ ಹೆಸರುವಾಸಿಯಾಗಿರಲೀ ಸಾವು ಬಂದಾಗ ಎಲ್ಲರೂ ಒಂದೇ ಲೆವಲ್" ಎಂದು ಬಾಲಕೃಷ್ಣ.

ಅವನು ನಮಗೆ ಮುಂದೆ ತೋರಿಸಿದ್ದು ಆರ್ಕ್-ಡಿ-ಟ್ರಯಂಫ್. ತಾನು ಗೆದ್ದ ಹಲವಾರು ಕದನಗಳ ನೆನಪಿಗಾಗಿ ನೆಪೋಲಿಯನ್ ಪ್ಯಾರಿಸ್‌ನ ಮಧ್ಯಭಾಗದಲ್ಲಿ ಕಟ್ಟಿಸಿರುವ ಆರ್ಕ್ ಡಿ ಟ್ರಯಂಫ್ ನೋಡಲು ದೆಹಲಿಯ ಇಂಡಿಯಾ ಗೇಟ್‌ನಂತೆ ಕಾಣುತ್ತದೆ. 1806ರಲ್ಲಿ ಕಟ್ಟಿದ ಈ ಸ್ಮಾರಕ 164 ಅಡಿ ಎತ್ತರವಿದ್ದು 147 ಅಡಿ ಅಗಲವಾಗಿದೆ. ಈ ಸ್ಮಾರಕದ ಒಳ ಗೋಡೆಯಲ್ಲಿ

ನೆಪೋಲಿಯನ್ ಗೆದ್ದ ಯುದ್ಧದ ಹೆಸರುಗಳು ಹಾಗೂ ಅವನ ಜತೆ ಯುದ್ಧದಲ್ಲಿ ಭಾಗಿಯಾದ ಜನರಲ್‌ಗಳ ಹೆಸರುಗಳನ್ನು ಕೆತ್ತಲಾಗಿದೆ.

ಈ ಸ್ಮಾರಕದ ಎದುರಿನಲ್ಲಿರುವ ರಸ್ತೆ ತೋರಿಸಿದ ಬಾಲಕೃಷ್ಣ "ಭಾಬೀ ಇದೇ ನೋಡಿ ಪ್ಯಾರಿಸ್ಸಿನ ಹೆಸರಾಂತ ಫ್ಯಾಷನ್ ಬೀದಿ ಚಾಂಪ್ಸ್ ಎಲಿಸೀ - ನಮ್ಮ ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್ ಇದ್ದ ಹಾಗೆ" ಎಂದ. ಅಂಗಡಿ ಬೀದಿಯಲ್ಲಿ ಒಂದು ವಾಕ್ ಮಾಡೋಣವೇ ಎಂದು ನಾನಂದಾಗ "ಸಾರ್ ಈ ಅಂಗಡಿಗಳಲ್ಲಿ ಗುಂಡು ಸೂಜಿ ಖರೀದಿಸಿದರೂ ಸಾವಿರಾರು ರೂಪಾಯಿ ತೆರಬೇಕಾಗುತ್ತೆ" ಎಂದ ಬಾಲಕೃಷ್ಣ. 'ಅಲ್ಲ ಕಣೋ, ವಿಂಡೋ ಶಾಪಿಂಗ್, ಅಂದರೆ ಷೋ ಕೇಸಿನಲ್ಲಿ ಪ್ರದರ್ಶನಕ್ಕಿರುವ ವಸ್ತು ನೋಡಿದರೆ ದುಡ್ಡೇನೂ ಕೊಡಬೇಕಾಗಿಲ್ಲವಲ್ಲ' ಎಂದು ಹೇಳಿ ಅಂಗಡಿಗಳ ಮುಂದೆ ನಿಧಾನವಾಗಿ ನಡೆದಾಡಿ ತರಹೇವಾರಿ ಬಟ್ಟೆಗಳು, ಚರ್ಮದ ವಸ್ತುಗಳು, ಸುಗಂಧ ದ್ರವ್ಯಗಳು, ವಾಚುಗಳು, ಕಣ್ಣು ಕೋರೈಸುವ ಆಭರಣಗಳು ಇತ್ಯಾದಿಗಳನ್ನು ನೋಡಿಯೇ ತೃಪ್ತರಾದೆವು.

ಅಲ್ಲಿಂದ ಮುಂದೆ ಒಂದು ದೊಡ್ಡ ಬೀದಿಗೆ ಕರೆದೊಯ್ದು ಗೆಳೆಯ ಒಂದು ಕಟ್ಟಡ ತೋರಿಸಿ "ಇದೇ ನೋಡು ಹೋಟೆಲ್ ರಿಟ್ಜ್. ಡಯಾನಾ ಸಾಯುವ ಮೊದಲು ಇದೇ ಹೋಟೆಲ್‌ನಿಂದಲೇ ಹೊರಟಿದ್ದು. ಬೇರೆ ಬೇರೆ ದೇಶದ ಅಧ್ಯಕ್ಷರು ಪ್ರಧಾನಿಗಳು ಬಂದರೆ ಅವರನ್ನು ಇಳಿಸೋದು ಇಲ್ಲೇ" ಎಂದ. ರಸ್ತೆಯ ಬದಿಯಲ್ಲೇ ಇರುವ ಇಂತಹ ಕಟ್ಟಡದಲ್ಲಿ ಪ್ರಧಾನಿ ಮತ್ತಿತರ ಗಣ್ಯರ ರಕ್ಷಣೆ ಹೇಗೆ ಮಾಡ್ತಾರೆ ಅಂತ ನನ್ನ ಯೋಚನೆಯಾದರೆ ನನ್ನ ಹೆಂಡತಿಗೆ ಹೋಟೆಲ್ ಒಳಗೆ ನೋಡುವ ಯೋಚನೆ. ಎಲ್ಲರೂ ಹೋಟೆಲ್ ಲಾಬಿಯೊಳಗೆ ಹೋದೆವು. "ಇಲ್ಲಿ ದಿನವೊಂದಕ್ಕೆ ಸುಮಾರು ಒಂದು ಲಕ್ಷ ರೂ ಬಾಡಿಗೆ" ಎಂದ ಬಾಲಕೃಷ್ಣ. ಅಬ್ಬಾ ಎಂದು ಮೂಗಿನ ಮೇಲೆ ಬೆರಳಿಟ್ಟು ಹೊರಗೆ ಬಂದೆವು.

ನಮ್ಮ ಮುಂದಿನ ತಾಣ - ವಿಶ್ವವಿದ್ಯಾಲಯ ಎಂದ ಬಾಲಕೃಷ್ಣ ಸೀದಾ ಕಾಲೇಜುಗಳು ಇರುವ ಪ್ರದೇಶಕ್ಕೆ ನಮ್ಮನ್ನೊಯ್ದ. ರಸ್ತೆಗಳ ತುಂಬಾ ಹದಿಹರೆಯದ ಯುವಕ ಯುವತಿಯರು. ಕೆಲವರಂತೂ ಒಬ್ಬರನ್ನೊಬ್ಬರು ಚುಂಬಿಸುತ್ತಾ ಹೊರ ಪ್ರಪಂಚವನ್ನೇ ಮರೆತಿದ್ದರು. ರಸ್ತೆ ಪಕ್ಕದಲ್ಲಿ ಸೆಕೆಂಡ್ ಹ್ಯಾಂಡ್ ಪುಸ್ತಕದ ಅಂಗಡಿಗಳು, ಉಪಾಹಾರ ಗೃಹಗಳು ಇದ್ದವು. ಪ್ಯಾರಿಸ್ಸಿನ ವಿಶೇಷತೆ ಎಂದರೆ ಉಪಹಾರ ಗೃಹಗಳು ತಮ್ಮ ಎದುರು ಇರುವ ಫುಟ್‌ಪಾತ್‌ಗಳ ಮೇಲೆ ಕುರ್ಚಿ ಟೇಬಲ್‌ಗಳನ್ನು ಹಾಕಿ ಅಲ್ಲಿ ಗಿರಾಕಿಗಳಿಗೆ ಉಣಬಡಿಸುತ್ತಾರೆ. ಪ್ಯಾರಿಸ್ಸಿನ ಜನ ಕಾಫಿ ಪ್ರಿಯರು. ಗ್ಯಾಲನ್‌ಗಟ್ಟಲೆ ಕಾಫಿ ದಿನವೂ ಸೇವಿಸುತ್ತಾರೆ. ಆದರೆ ನಮ್ಮ ಹಾಗೆ ಹಾಲಿನ ಜತೆ ಅಲ್ಲ. ಬ್ಲಾಕ್ ಕಾಫಿ. ಕೆಲವು ಬಾರಿ ಸಕ್ಕರೆ ಕೂಡಾ ಬೆರೆಸಿಕೊಳ್ಳುವುದಿಲ್ಲ.

ಎದುರಿಗೆ ಇದ್ದ ಒಂದು ಅಂಗಡಿ ಕಿಟಕಿಯತ್ತ ಬೊಟ್ಟು ಮಾಡಿದ ನನ್ನ ಹೆಂಡತಿ 'ಅಲ್ಲಿ ನೋಡ್ರೀ' ಎಂದಳು. ಉರಿಯುವ ಇದ್ದಲಿ ಒಲೆಯ ಮೇಲೆ ಒಂದು ಭಾರೀ ಗಾತ್ರದ ಹಂದಿಯ ಮಾಂಸ ನೇತುಹಾಕಿದ್ದರು. ಕಬ್ಬಿಣದ ರಾಡೊಂದಕ್ಕೆ ಕಾಲುಗಳನ್ನು ಕಟ್ಟಿ ತೂಗುಹಾಕಿದ್ದ ಪ್ರಾಣಿಯ ದೇಹ ಹದವಾಗಿ ಬೇಯಲೆಂದು ಒಬ್ಬ ಹುಡುಗ ಆ ರಾಡನ್ನು ನಿಧಾನವಾಗಿ ಬೆಂಕಿಯ ಮೇಲೆ ತಿರುಗಿಸುತ್ತಾ ಇದ್ದ. ಆ ಪ್ರಾಣಿಯ ದೇಹದ ಕೊಬ್ಬು ಉರಿಯುವ ಇದ್ದಲಿ ಮೇಲೆ ಬಿದ್ದಾಗ ಬೆಂಕಿ ಜಗ ಜಗ ಉರಿಯುತ್ತಿತ್ತು.

ನಾವು ವಾಕರಿಸಿಕೊಂಡು ಮುಖ ತಿರುಗಿಸಿದಾಗ ಗೆಳೆಯ ಬಾಲಕೃಷ್ಣ "ಭಾಬೀ ಈ ಊರಿನ ಜನ ದನದ ಮಾಂಸ ಭಕ್ಷಕರು. ಇವರಿಗೆ ಪ್ರತಿ ನಿತ್ಯವೂ ಬೀಫ್ ತಿನ್ನದಿದ್ದರೆ ನಿದ್ದೆಯೇ ಬರೋಲ್ಲ ಆದರೆ ನೀವು ನೋಡುತ್ತಿರುವುದು ಹಂದಿ ಮಾಂಸ" ಎಂದ.

'ಏನ್ರೀ ಊಟ ಮಾಡೋ ಸಮಯದಲ್ಲಿ ಇಂತಹ ದೃಶ್ಯಗಳನ್ನು ತೋರಿಸಿ ಹಸಿವೆಯನ್ನೇ ಮರೆಸಿಬಿಟ್ರಿ' ಎಂದ ನನ್ನ ಶ್ರೀಮತಿ ಅಂದಾಗ ಬಾಲಕೃಷ್ಣ ವೇಳೆ ನೋಡಿಕೊಂಡು ಹೌದು ಮನೆಗೆ ಹೋಗಿ ಊಟ ಮಾಡೋಣ. ಅದಕ್ಕೂ ಮೊದಲು ನಿಮಗೆ ನಮ್ಮ ಭಾರತದ ರಾಯಭಾರಿಯವರ ಮನೆ ತೋರಿಸ್ತೇನೆ ಎಂದು ಅಲ್ಲಿಗೆ ಕರೆದೊಯ್ದು. ಹಚ್ಚ ಹಸಿರು ಉದ್ಯಾನವನದ ಎದುರಿನ ರಸ್ತೆಯ ಭವ್ಯ ಮನೆಗಳ ಸಾಲಿನಲ್ಲಿ ಒಂದು ಮನೆಯ ಮೇಲೆ ನಮ್ಮ ದೇಶದ ತ್ರಿವರ್ಣ ಧ್ವಜವನ್ನು ನೋಡಿ ಪುಳಕಿತನಾದೆ. ನಮ್ಮ ರಾಯಭಾರಿಯವರ ಬಂಗ್ಲೆಯನ್ನು ದೂರದಿಂದಲೇ ನೋಡಿ ಮೆಚ್ಚಿಕೊಂಡು ಬಾಲಕೃಷ್ಣನ ಮನೆಗೆ ಹೊರಟೆವು.

15

ರಾತ್ರಿಯ ವೇಳೆಯಲ್ಲಿ ಪ್ಯಾರಿಸ್

ಬಾಲಕೃಷ್ಣನ ಮನೆಯಲ್ಲಿ ಮಧ್ಯಾಹ್ನದ ಊಟ ಮುಗಿಸಿ ಕೈ ತೊಳೆದುಕೊಳ್ಳುವಷ್ಟರಲ್ಲಿ ನನ್ನ ಸ್ನೇಹಿತ ಅಬ್ದುಲ್ ತನ್ನ ಕುಟುಂಬದೊಡನೆ ಅವರ ಮನೆಗೆ ಬಂದ. ನಮ್ಮ ದೇಶದ ಪಾಂಡಿಚೆರಿ ಫ್ರೆಂಚರ ಆಳ್ವಿಕೆಯಲ್ಲಿ ಇದ್ದಾಗ ಅಬ್ದುಲ್ಲನ ತಂದೆ ಸರ್ಕಾರಿ ನೌಕರಿಯಲ್ಲಿದ್ದರಂತೆ. ಫ್ರೆಂಚರು ಭಾರತದಿಂದ ಹೊರಟು ಹೋಗುವಾಗ ಫ್ರಾನ್ಸ್ ದೇಶದಲ್ಲಿ ನೆಲೆಸಲು ಇಚ್ಛಿಸುವ ಪಾಂಡಿಚೆರಿ ನಿವಾಸಿಗಳಿಗೆ ಅಲ್ಲಿಗೆ ವಲಸೆ ಹೋಗಲು ಅನುಕೂಲ ಕಲ್ಪಿಸಿ ಫ್ರೆಂಚ್ ಸರ್ಕಾರ ಆಹ್ವಾನ ನೀಡಿತಂತೆ. ಈ ಆಹ್ವಾನದ ಮೇರೆಗೆ ಅಬ್ದುಲ್ಲ ತನ್ನ ಪೂರ್ಣ ಪರಿವಾರದೊಂದಿಗೆ ಫ್ರಾನ್ಸ್ ದೇಶಕ್ಕೆ ಬಂದು ಅಲ್ಲೇ ಸರ್ಕಾರಿ ನೌಕರಿ ಮಾಡುತ್ತಾ ನೆಲಸಿದ್ದಾನೆ. ನಾನು ಕಳೆದ ಸಲ ಫ್ರಾನ್ಸ್‌ಗೆ ಹೋಗಿದ್ದಾಗ ಅಬ್ದುಲ್ಲನ ಪರಿಚಯವಾಗಿ ಆತ ತುಂಬಾ ಆತ್ಮೀಯನಾಗಿಬಿಟ್ಟ. ನಾನು ಪತ್ನಿಯೊಡನೆ ಪ್ಯಾರಿಸ್‌ಗೆ ಬಂದಿದ್ದೇನೆಂದು ತಿಳಿದ ಕೂಡಲೇ ಅವನು ನಮ್ಮನ್ನು ನೋಡಲು ಓಡಿ ಬಂದು, ನಮ್ಮನ್ನು ತನ್ನ ಮನೆಗೆ ಬಂದಿರಲು ತುಂಬಾ ಬಲವಂತ ಮಾಡಿದ. ನಾವು ಇನ್ನು ಕೇವಲ ಒಂದು ದಿನ ಮಾತ್ರ ಪ್ಯಾರಿಸ್‌ನಲ್ಲಿ ಇರುವುದರಿಂದ ಬಾಲಕೃಷ್ಣನ ಮನೆಯಲ್ಲೇ ಇರುತ್ತೇವೆಂದು ಹೇಳಿದರೂ ಒಪ್ಪದೆ ಬಲವಂತವಾಗಿ ನಮ್ಮನ್ನು ತನ್ನೊಡನೆ ಕರೆದೊಯ್ದ. ಅವನ ಮನಸ್ಸು ನೋಯಿಸಬಾರದೆಂದು ನಾವು ಬಾಲಕೃಷ್ಣನಿಗೆ ವಿಧಾಯ ಹೇಳಿ ಹೊರಟೆವು.

ಮೊಟ್ಟ ಮೊದಲಿಗೆ ನಮಗೆ ಪ್ಯಾರಿಸ್‌ನ ರೈಲು ವ್ಯವಸ್ಥೆ ತೋರಿಸುತ್ತೇನೆಂದು ಅಬ್ದುಲ್ಲಾ ಬಾಲಕೃಷ್ಣನ ಮನೆಯ ಮುಂದೆಯೇ ಇದ್ದ ಸುರಂಗಮಾರ್ಗದ ರೈಲ್ವೇ ಸ್ಟೇಷನ್‌ಗೆ ಕರೆದೊಯ್ದು ರೈಲು ಹತ್ತಿಸಿದ. ಅಬ್ದುಲ್ಲನ ಮನೆ ಪ್ಯಾರಿಸ್‌ನಿಂದ 30 ಕಿ.ಮೀ. ದೂರ ಇರುವ ಚಾಂಟಲಿ ಎಂಬ ಉಪನಗರದಲ್ಲಿದೆ. ಸುರಂಗದಲ್ಲಿ ಹೊರಟ ರೈಲು ಸ್ವಲ್ಪ ದೂರ ಚಲಿಸಿದ ನಂತರ ನೆಲದ ಮೇಲೆ ಬಂದು ಚಲಿಸಲಾರಂಭಿಸಿತು. ರೈಲು ಡಬ್ಬಲ್ ಡೆಕ್ಕರ್ ಆಗಿದ್ದುದು ನಮಗೆ ಒಂದು ವಿಶೇಷ ಅನುಭವ ನೀಡಿತು. ಚಾಂಟಲಿ ರೈಲು ನಿಲ್ದಾಣದಲ್ಲಿ ಅಬ್ದುಲ್ಲನ ಮಗ ನಮ್ಮನ್ನು ಎದುರುಗೊಳ್ಳಲು ಬಂದಿದ್ದ. ನಾವೆಲ್ಲರೂ ಅಬ್ದುಲ್ಲನ ಮನೆ ತಲುಪಿ ಕುಟುಂಬದವರೊಡನೆ ಹರಟೆ ಹೊಡೆದ ನಂತರ ತಯಾರಾಗಿ ಅಬ್ದುಲ್ಲನ ಶ್ರೀಮತಿಯ ಜೊತೆ ಅವರ ವ್ಯಾನ್‌ನಲ್ಲಿ ಪ್ಯಾರಿಸ್ ನೋಡಲು ಹೊರಟೆವು.

ನಾವು ಈಗಾಗಲೇ ಐಫೆಲ್ ಟವರ್ ಮತ್ತು ಆರ್ಕ್ - ಡಿ - ಟ್ರಿಯಂಫ್ ನೋಡಿದ್ದರಿಂದ ಪ್ಯಾರಿಸ್ಸಿನ ಹೆಸರಾಂತ ಲೂವ್ರ್ (Louvre) ತೋರಿಸುತ್ತೇನೆಂದು ಅಬ್ದುಲ್ಲಾ ಅಲ್ಲಿಗೆ ಕರೆದೊಯ್ದ. ಲೂವ್ರ್ ವಿಶ್ವದ ಅತಿ ದೊಡ್ಡ ಮ್ಯೂಸಿಯಂಗಳಲ್ಲಿ ಒಂದು. ಈ ಮ್ಯೂಸಿಯಂನ ವಿಶೇಷತೆ ಏನೆಂದರೆ ಲಿಯೋನಾರ್ಡೋ ಡಾವಿಂಚಿ ಪೇಂಟ್ ಮಾಡಿದ ಮೊನಾಲೀಸಾ ಚಿತ್ರ ಅಲ್ಲಿದೆ. ನಾವು ಕಾರಿನಿಂದ ಇಳಿದು ಮ್ಯೂಸಿಯಂ ನೋಡಲು ಟಿಕೇಟ್ ಕೌಂಟರ್‌ಗೆ ಹೋದಾಗ ಅಲ್ಲಿಯ ಕಾರ್ಮಿಕರು ಮುಷ್ಕರ ಹೂಡಿದ್ದರಿಂದ ಮ್ಯೂಸಿಯಂ ಬಂದಾಗಿದೆ ಎಂದರು. "ಪರವಾಗಿಲ್ಲ ನಮ್ಮ ಭಾರತೀಯರಂತೆ ನಿಮ್ಮ ದೇಶದಲ್ಲೂ ಮುಷ್ಕರ ಹೂಡುತ್ತಾರಲ್ಲಾ" ಎಂದು ಉದ್ಗರಿಸಿದೆ. ಅಬ್ದುಲ್ಲಾ ನಕ್ಕು ಅಲ್ಲೆ ಹತ್ತಿರಲ್ಲೇ ಇದ್ದ ಬಸ್ತಿಲ್ (Bastille) ತೋರಿಸಿದ. 1370ರಲ್ಲಿ ಇಲ್ಲಿ ಕೋಟೆಯೊಂದನ್ನು ಕಟ್ಟಿ ಅದರಲ್ಲಿ 17 ಹಾಗೂ 18ನೇ ಶತಮಾನದಲ್ಲಿ ಹಲವಾರು ಜನರನ್ನು ಕೈದಿಗಳನ್ನಾಗಿ ಇಡಲಾಗಿತ್ತಂತೆ. 1789ರಲ್ಲಿ ಫ್ರೆಂಚ್ ಕ್ರಾಂತಿಯಾದಾಗ ಈ ಕೋಟೆಯನ್ನು ಜನರು ಮುತ್ತಿಗೆ ಹಾಕಿ ಕೋಟೆಯಲ್ಲಿ ಇದ್ದ ಬಂಧಿತರನ್ನು ಬಿಡುಗಡೆ ಮಾಡಿದರಂತೆ. ಜುಲೈ 14ನೇ ತಾರೀಖು ಬಸ್ತಿಲ್ ಕೋಟೆಗೆ ಮುತ್ತಿಗೆ ಹಾಕಿದ ದಿನವಾದ್ದರಿಂದ ಇಂದಿಗೂ ಸರ್ಕಾರ ಆ ದಿನವನ್ನು ರಜೆ ಎಂದು ಘೋಷಿಸಿದೆ. ಈಗ ಬಸ್ತಿಲ್ ಕೋಟೆ ನೆಲಸಮವಾಗಿ ಅದರ ಬದಲು ಒಂದು ದೊಡ್ಡ ಚೌಕ ಇದೆ.

ಬಸ್ತಿಲ್ ಚೌಕ ನೋಡಿದ ನಾವು ನೋತ್ರದ್ಯಾಮ್ (Notre Dame) ಚರ್ಚ್ ನೋಡಲು ಹೋದೆವು. 1110ರಲ್ಲಿ ಕಟ್ಟಲು ಆರಂಭಿಸಿದ ಈ ಚರ್ಚ್‌ನ್ನು 1225ರಲ್ಲಿ ಕಟ್ಟಿ ಮುಗಿಸಲಾಯಿತು. ಫ್ರೆಂಚ್ ಶೈಲಿನಲ್ಲಿ ಇರುವ ಈ ಚರ್ಚ್‌ನಲ್ಲಿ ಅತ್ಯಂತ ಉನ್ನತ ದರ್ಜೆಯ ಕೆತ್ತನೆಗಳು ಇವೆ. ಇಲ್ಲಿರುವ ಲಾಸ್ಟ್ ಜಡ್ಜ್‌ಮೆಂಟ್ ಕೆತ್ತನೆ ಬಹಳ ಹೆಸರಾದದ್ದು. 19ನೇ ಶತಮಾನದಲ್ಲಿ ಈ ಚರ್ಚನ್ನು ಮತ್ತೆ ಪುನರ್ ನಿರ್ಮಾಣ ಮಾಡಿದ್ದರಂತೆ. 1804ರಲ್ಲಿ ನೆಪೋಲಿಯನ್‌ನ ಪಟ್ಟಾಭಿಷೇಕ ಇದೇ ಚರ್ಚ್‌ನಲ್ಲಿ ಆಗಿತ್ತೆಂದು ಹೇಳುತ್ತಾರೆ.

ಈ ಚರ್ಚ್ ನೋಡಿದ ನಂತರ ಅಬ್ದುಲ್ಲಾ ನಗರದ ಮುಖ್ಯ ಭಾಗಕ್ಕೆ ಕರೆದೊಯ್ದು ಒಂದು ಕಟ್ಟಡದ ಮುಂದೆ ಕಾರ್ ನಿಲ್ಲಿಸಿದ. ಆ ಕಟ್ಟಡದ ವಾಸ್ತುಕಲೆ ನೋಡಿ ನಾವು ಆಶ್ಚರ್ಯಗೊಂಡೆವು. ಎಲ್ಲಿ ನೋಡಿದರೂ ಪೈಪುಗಳೇ ಪೈಪುಗಳು. ಕಟ್ಟಡದ ಹೊರ ಆವರಣದಲ್ಲಿ ಹಲವಾರು ಜನ ಕುಳಿತುಕೊಂಡು ಪೇಂಟಿಂಗ್ ಮಾಡುತ್ತಿದ್ದರು. ಇದೇನು ಈ ಕಟ್ಟಡವನ್ನು ವಿಚಿತ್ರ ಶೈಲಿಯಲ್ಲಿ ಕಟ್ಟಿದಾರಲ್ಲಾ ಎಂದು ಕೇಳಿದಾಗ, ಅಬ್ದುಲ್ಲಾ ಇದಕ್ಕೆ ಪಾಂಪಿಡೋ ಸೆಂಟರ್ ಎಂದು ಕರೆಯುತ್ತಾರೆ. ಈ ಕಟ್ಟಡವನ್ನು 1977 ರಲ್ಲಿ ಕಟ್ಟಲಾಯಿತು. ಇಲ್ಲಿ ನವ್ಯ ಕಲೆಯ ರಾಷ್ಟ್ರೀಯ ಸಂಗ್ರಹಾಲಯ ಇದ್ದು ವಿಶ್ವದ ವಿಖ್ಯಾತ ನವ್ಯ ಕಲಾವಿದರ ಕೃತಿಗಳು ಇವೆ ಎಂದ. ನಾವು ಲೂವ್ರ್ ಮ್ಯೂಸಿಯಂ ನೋಡಲಾಗದ್ದರಿಂದ ಪಾಂಪಿಡೋ ಸಂಗ್ರಹಾಲಯಕ್ಕೆ ಭೇಟಿ ನೀಡಿದೆವು.

ಸಂಗ್ರಹಾಲಯ ನೋಡಿ ಬಂದ ನಂತರ ನನಗೆ ಬೆಂಗಳೂರಿನಲ್ಲಿರುವ ನನ್ನ ಮಗನಿಗೆ ಈ ಮೇಲ್ ಸಂದೇಶ ಕೊಡಬೇಕೆಂಬ ಮನಸ್ಸಾಗಿ, ಹತ್ತಿರದಲ್ಲೇ ಇದ್ದ ಒಂದು ಉಪಾಹಾರ ಗೃಹಕ್ಕೆ ಹೋದೆ. ಈ - ಮೇಲ್ ಕೊಡಲು ಕಂಪ್ಯೂಟರ್ ಮುಂದೆ ಕುಳಿತು ಕೀ ಬೋರ್ಡ್‌ನಲ್ಲಿ ಟೈಪ್ ಮಾಡಿದಾಗ, ಬೇರೆ ಬೇರೆ ಅಕ್ಷರಗಳು ಮೂಡತೊಡಗಿದವು. ಇದೇಕೆ ಹೀಗೆ ಎಂದು ಗಾಬರಿಯಾದಾಗ, ಅಬ್ದುಲ್ಲಾ ಕೀ ಬೋರ್ಡ್ ನೋಡು ಎಂದ. ಅಲ್ಲಿದ್ದ ಕೀ ಬೋರ್ಡ್ ಫ್ರೆಂಚ್ ಭಾಷೆಯಲ್ಲಿ ಇದ್ದುದರಿಂದ ನನಗೆ ತೊಂದರೆಯಾಗಿತ್ತು. ಕೂಡಲೇ ಇಂಗ್ಲೀಷ್ ಭಾಷೆಯಲ್ಲಿ ಇದ್ದಂತಹ ಕೀ

ಬೋರ್ಡ್ ಇರುವ ಕಂಪ್ಯೂಟರ್ ಹುಡುಕಿ ಸಂದೇಶ ಕಳುಹಿಸಿದೆ. ಅಂದ ಹಾಗೆ ಫ್ರೆಂಚ್ ಜನ ತಮ್ಮ ಭಾಷೆಯ ಕಟ್ಟಾ ಅಭಿಮಾನಿಗಳು. ಇಂಗ್ಲಿಷ್‌ನಲ್ಲಿ ಪ್ರಶ್ನಿಸಿದರೆ ಇಂಗ್ಲಿಷ್ ತಿಳಿದಿದ್ದರೂ ಫ್ರೆಂಚ್‌ನಲ್ಲೇ ಉತ್ತರಿಸುತ್ತಾರೆ. ಅಷ್ಟರಲ್ಲಿ ಕತ್ತಲಾಗಿತ್ತು. ಇವೆಲ್ಲ ನೋಡಿದೆವಲ್ಲಾ ಮನೆಗೆ ಹೋಗೋಣ ಎಂದಳು ನನ್ನ ಪತ್ನಿ. ಆಗ ಅಬ್ದುಲ್ಲಾ ಹೇಳಿದ, "ಭಾಬೀ ಪ್ಯಾರಿಸ್‌ನ್ನು ನೋಡಬೇಕಾದ್ದು ರಾತ್ರಿ ವೇಳೆಯಲ್ಲಿ. ರಾತ್ರಿಯಲ್ಲಿ ಈ ನಗರ ಎಷ್ಟು ಬದಲಾಗುತ್ತದೆ ಎಂದು ನಿಮಗೆ ನಂಬಿಕೆ ಆಗುವುದಿಲ್ಲ" ಎಂದು ಹೇಳುತ್ತಾ ನಮ್ಮನ್ನು ಐಫೆಲ್ ಟವರ್ ಬಳಿ ಕರೆದೊಯ್ದ. ನಾವು ಬೆಳಿಗ್ಗೆ ನೋಡಿದ್ದ ಐಫೆಲ್ ಟವರ್ ಗೂ ರಾತ್ರಿ ನೋಡಿದ ಐಫೆಲ್ ಟವರ್‌ಗೂ ಅಜಗಜಾಂತರ ವ್ಯತ್ಯಾಸ. ತನ್ನ ಮೈತುಂಬಾ ದೀಪಗಳನ್ನು ಬೆಳಗಿಸಿಕೊಂಡು ಐಫೆಲ್ ಟವರ್ ಕಂಗೊಳಿಸುತ್ತಿತ್ತು. ಟವರ್‌ನ ಮೇಲೆ 454 ಎಂದು ದೊಡ್ಡದಾಗಿ ಬರೆದಿತ್ತು. ಇದೇನು ಹೀಗೆ ಬರೆದಿದ್ದಾರೆಂದು ಕೇಳಿದೆ. ಹೊಸ ಸಹಸ್ರಮಾನ ಬರಲು 454 ದಿನ ಉಳಿದಿದೆ ಎಂದ ತೋರಿಸುತ್ತಿದ್ದಾರೆ ಎಂದು ಅಬ್ದುಲ್ಲಾ.

ಅಲ್ಲಿಂದ ಮುಂದೆ ಅಬ್ದುಲ್ಲಾ ಕುಟುಂಬ ನಮ್ಮನ್ನು ಪಿಗಾಲ್ ಎನ್ನುವ ಜಾಗಕ್ಕೆ ಕರೆದೊಯ್ಯಿತು. ಇಲ್ಲಿಗೆ ಏಕೆ ಕರೆದೊಯ್ಯುತ್ತಿದ್ದೀರಿ ಎಂದು ಅಬ್ದುಲ್ಲನ ಪತ್ನಿ ಆಕ್ಷೇಪಣೆ ಮಾಡಿದಾಗ ಅಬ್ದುಲ್ಲಾ ಪ್ಯಾರಿಸ್‌ನ ಎಲ್ಲಾ ವಿಶೇಷತೆಯನ್ನು ನೋಡಿದರೆ ತಪ್ಪೇನು? ಎಂದ. ನಾನು ಕುತೂಹಲ ತಡೆಯದೆ ನಾವು ಎಲ್ಲಿಗೆ ಬಂದಿದ್ದೇವೆ ಎಂದು ಕೇಳಿದೆ. ಅಬ್ದುಲ್ಲಾ ಹೇಳಿದ ಈ ರಸ್ತೆಯಲ್ಲಿಯೇ ಪ್ಯಾರಿಸ್ ದೇಶದ ನೈಟ್ ಕ್ಲಬ್‌ಗಳು ಕೇಂದ್ರೀಕೃತವಾಗಿರುವುದು. ಇಲ್ಲಿ ಕ್ಯಾಬರೆ ನೃತ್ಯಗಳು ರಾತ್ರಿ ಪೂರ್ತಿ ನಡೆಯುತ್ತವೆ. ಕೆಲವು ಜಾಗಗಳಲ್ಲಿ ನಡೆಯುವ ನೃತ್ಯಗಳು ಅಶ್ಲೀಲವಲ್ಲ. ಇಲ್ಲಿ ಬರುವ ಬಹಳಷ್ಟು ಪ್ರಯಾಣಿಕರು ನೈಟ್ ಕ್ಲಬ್ ನೋಡಲು ಬರುತ್ತಾರೆ ಎಂದ. ಬಣ್ಣ ಬಣ್ಣದ ದೀಪಗಳಿಂದ ಪ್ರಜ್ವಲಿಸುತ್ತಿದ್ದ ಒಂದು ಭವ್ಯ ಕಟ್ಟಡದ ಎದುರುಗಡೆ ನಮ್ಮನ್ನು ನಿಲ್ಲಿಸಿ, ಇದೇ ವಿಶ್ವ ವಿಖ್ಯಾತ Moulin Rouge ಎಂದು ತೋರಿಸಿದ. ನೂರು ನರ್ತಕಿಯರು ಕೂಡಿ ನರ್ತಿಸುವ ಅಲ್ಲಿನ ನೃತ್ಯದ ಬಗ್ಗೆ ನಾನು ಪುಸ್ತಕಗಳಲ್ಲಿ ಓದಿದ್ದೆ. ಒಳಗೆ ಹೋಗೋಣವೇ ಎಂದ ಅಬ್ದುಲ್ಲಾ. ನನ್ನ ಪತ್ನಿ ಬೇಡ ಎಂದಳು. ಆಗ ಅವನು ಹೇಳಿದ. ಇಲ್ಲಿ ನಡೆಯುವ ನೃತ್ಯ ಬೇರೆ ನೈಟ್ ಕ್ಲಬ್‌ಗಳಂತೆ ಅಲ್ಲ. ಇದು ಬಹಳ ಡೀಸೆಂಟ್ ನೃತ್ಯ ಎಂದ ಅಬ್ದುಲ್ಲಾ. ಬೇಕಾದರೆ ನೀವಿಬ್ಬರೂ ಹೋಗಿ ಎಂದರು ಜತೆಯಲ್ಲಿದ್ದ ಇಬ್ಬರೂ ಮಹಿಳೆಯರು. ನಾವು ಟಿಕೇಟ್ ಕೌಂಟರ್ ಬಳಿ ಹೋಗಿ ಟಿಕೇಟ್ ಕೇಳಿದರೆ. ಮುಂದಿನ ಐದು ಪ್ರದರ್ಶನಗಳಿಗೂ ಟಿಕೇಟ್‌ಗಳು ಮಾರಾಟವಾಗಿವೆ ಎಂದಿದ್ದರಿಂದ, ಇನ್ನು ಸ್ವಲ್ಪ ಹೊತ್ತು ಪಿಗಾಲ್ ಪ್ರದೇಶದಲ್ಲಿ ಒಡಾಡಿ ಅಲ್ಲಿಂದ ಮುಂದೆ ಸೀನ್ ನದಿ ದಡದ ಮೇಲಿನ ರಸ್ತೆಯಲ್ಲಿ ಓಡಾಡಿದೆವು. ರಾತ್ರಿ ವೇಳೆ ಸೀನ್ ನದಿಯ ಮೇಲೆ ಹೋಗುತ್ತಿದ್ದ ದೋಣಿಗಳು, ಬಾರ್ಜ್‌ಗಳು ಬಹಳ ಸುಂದರವಾಗಿ ಕಂಡವು.

ಪ್ಯಾರಿಸ್ ಜನ ತುಂಬಾ ರಸಿಕರು. ರಾತ್ರಿ ಇಡೀ ವೈನ್ ಕುಡಿದು ನೈಟ್ ಕ್ಲಬ್‌ಗಳಲ್ಲೇ ಇರುತ್ತಾರೆ ಎಂದ ಅಬ್ದುಲ್ಲಾ. ಇಡೀ ದಿನ ತಿರುಗಾಡಿದ್ದರಿಂದ ನಮಗೂ ಸುಸ್ತಾಗಿತ್ತು. ಇನ್ನು ಮನೆಗೆ ಹೋಗೋಣ ಎಂದು ಮನೆಗೆ ಹಿಂದಿರುಗಿದೆವು. ಅವರ ಮನೆಯಲ್ಲಿ ಟಿ.ವಿ. ಹಾಕಿದಾಗ ತಮಿಳು ಪ್ರೋಗ್ರಾಮ್ ಬರುತ್ತಿತ್ತು. ಇದೇನು ತಮಿಳು ಎಂದೆ. ನಾವೆಲ್ಲರೂ ಮನೆಯಲ್ಲಿ ತಮಿಳು ಮಾತನಾಡುತ್ತೇವೆ. ನಮ್ಮಂತೆ ಪ್ಯಾರಿಸ್‌ನಲ್ಲಿ ನೂರಾರು ಜನ ತಮಿಳರು ಇದ್ದಾರೆ. ನಿಮಗೆ ಹಪ್ಪಳ - ಸಂಡಿಗೆ, ಸೀರೆ - ಕುಪ್ಪಸ, ಊದು ಬತ್ತಿ ಸಾಂಬಾರ್ ಪುಡಿ, ದಕ್ಷಿಣ ಭಾರತದ ಆಭರಣಗಳು

ಎಲ್ಲಾ ಸಿಗುತ್ತವೆ. ಉತ್ತರ ಪ್ಯಾರಿಸ್ ರೈಲು ನಿಲ್ದಾಣದ ಹತ್ತಿರ ಇರುವ ರಸ್ತೆಗೆ ಹೋದರೆ ನಿಮಗೆ ಪ್ಯಾರಿಸ್‌ನಲ್ಲಿದ್ದೇವೋ, ಮದ್ರಾಸ್‌ನಲ್ಲಿದ್ದೇವೋ ಎಂದು ತಿಳಿಯುವುದಿಲ್ಲ ಎಂದ ಅಬ್ದುಲ್ಲಾ.

ನಮ್ಮ ಯೂರೋಪ್ ಪ್ರವಾಸದಲ್ಲೇ ಮೊದಲ ಭಾರಿಗೆ ದಕ್ಷಿಣ ಭಾರತದ ಶಾಖಾಹಾರಿ ಊಟವನ್ನು ಅಬ್ದುಲ್ಲನ ಮನೆಯಲ್ಲಿ ಭುಂಜಿಸಿ ವಿರಮಿಸಿದೆವು.



ಪ್ಯಾರಿಸ್‌ನಿಂದ ಲಂಡನ್ನಿಗೆ

ಪ್ಯಾರಿಸ್ಸಿನಿಂದ ಲಂಡನ್‌ಗೆ ಹೋಗಲು ಹಲವಾರು ಮಾರ್ಗಗಳಿವೆ. ತುಂಬಾ ಸಾಮಾನ್ಯ ಮಾರ್ಗ ಕ್ಯಾಲೇವರೆಗೆ ಬಸ್ಸು ಯಾ ರೈಲಿನಲ್ಲಿ ಹೋಗಿ ಅಲ್ಲಿಂದ ಡೋವರ್‌ಗೆ ಫೆರ್ರಿ ಮೂಲಕ ಇಂಗ್ಲೀಷ್ ಕಡಲ್ಗಾಲುವೆ ದಾಟುವುದು. ಇಲ್ಲವೆಂದರೆ ಇಂಗ್ಲಿಷ್ ಚಾನಲ್ಲಿನ ಕೆಳಗಿರುವ ಸುರಂಗಮಾರ್ಗವನ್ನು ರೈಲಿನ ಮೂಲಕ ಹಾದು ಬ್ರಿಟನ್ನಿಗೆ ಹೋಗುವುದು. ಇದೂ ಬೇಡವೆಂದರೆ ನೀರಿನ ಮೇಲೆಯೇ ಹಾರಾಡುವ ಹೋವರ್ ಕ್ರಾಫ್ಟ್ ಎಂಬ ವಾಹನದ ಮೂಲಕ ಹೋಗಬಹುದು. ಇಲ್ಲವಾದರೆ ವಿಮಾನದ ಮೂಲಕ ಹೋಗುವುದು. ನನ್ನ ಶ್ರೀಮತಿಗೆ ರೈಲಿನಲ್ಲಿ ಹೋಗುವುದು ಇಷ್ಟವಾಗಿತ್ತು. ನನಗೆ ಹೋವರ್ ಕ್ರಾಫ್ಟ್‌ನಲ್ಲಿ ಹೋಗಬೇಕೆಂಬಾಸೆ. ಕಡೆಗೆ ಹೋದುದು ವಿಮಾನದಲ್ಲಿ. ಏಕೆ ಗೊತ್ತೇ? ಕೆಲವು ಏರ್‌ಲೈನ್ಸ್‌ಗಳ ವಿಮಾನದಲ್ಲಿ ಲಂಡನ್ - ಪ್ಯಾರಿಸ್ ನಡುವೆ ಬಹಳ ಸೀಟುಗಳು ಖಾಲಿ ಇರುವುದರಿಂದ ರೈಲು ದರಕ್ಕಿಂತ ಕಡಿಮೆ ದರಲ್ಲಿ ಕರೆದೊಯ್ಯುತ್ತಾರೆ. ಹೀಗಾಗಿ ನಾವು ವಿಮಾನದಲ್ಲೇ ಹೊರಟೆವು.

ಸೋಜಿಗವೆಂದರೆ ಪ್ಯಾರಿಸ್ಸಿನ ಚಾರ್ಲ್ಸ್ ಡಿಗಾಲ್ ಏರ್‌ಪೋರ್ಟಿನ ರಕ್ಷಣಾ ವ್ಯವಸ್ಥೆ ಖಾಸಗಿ ಸೆಕ್ಯೂರಿಟಿ ಗಾರ್ಡ್‌ಗಳ ಕೈಯಲ್ಲಿದೆ. ವಿಶ್ವದ ಹಲವಾರು ಏರ್‌ಪೋರ್ಟುಗಳಿಗೂ ಖಾಸಗೀ ಸೆಕ್ಯೂರಿಟಿಯವರೇ ಭದ್ರತಾ ವ್ಯವಸ್ಥೆ ನೀಡಿದ್ದಾರೆ. ನಾವು ಗಂಡ ಹೆಂಡತಿ ವಿಮಾನ ನಿಲ್ದಾಣದ ಹೊರಗಡೆಯೇ ಇರುವ ಚೆಕ್ - ಇನ್ - ಕೌಂಟರ್‌ನಲ್ಲಿ ಟಿಕೆಟ್ ನೀಡಿದಾಗ ಅಲ್ಲಿದ್ದ ಮಹಿಳಾ ಸೆಕ್ಯೂರಿಟಿ ಗಾರ್ಡಿಗೆ ನನ್ನನ್ನು ನೋಡಿ ಏನೋ ಅನುಮಾನ ಬಂದು, ನೂರು ಪ್ರಶ್ನೆಗಳನ್ನು ಹಾಕಿದಳು 'ಈ ಸೂಟ್‌ಕೇಸ್ ಯಾರದ್ದು? ನೀವೇ ಪ್ಯಾಕ್ ಮಾಡಿದಿರಾ?, ಯಾರಾದರೂ ಕೊಟ್ಟ ಪ್ಯಾಕೆಟ್ ಒಯ್ಯುತ್ತಿರುವಿರಾ?' ಇತ್ಯಾದಿ. ಬಾಂಬ್‌ಗಳು ಹಾಗೂ ಹೈಜಾಕಿಂಗ್ ತಡೆಯಲು ಈ ರೀತಿ ಕೇಳ್ತಾರೆ ಎಂದು ಸಮಾಧಾನದಿಂದಲೇ ಉತ್ತರಿಸಿದೆ. ಅಲ್ಲಿಂದ ಮುಂದೆ ಬೋರ್ಡಿಂಗ್ ಕಾರ್ಡು ಪಡೆದು ಸೆಕ್ಯೂರಿಟಿ ಚೆಕ್‌ಗೆ ಹೋದಾಗ ಮತ್ತೆ ಅದೇ ಪ್ರಶ್ನಾವಳಿ. ಬೇರೆ ಬೇರೆ ಇಬ್ಬರು ಗಾರ್ಡುಗಳು ಕೇಳಿದರು - ಅವರಿಗೆ ಸರಿಯಾಗಿ ಇಂಗ್ಲಿಷ್ ಬರೋದಿಲ್ಲ. ನಮಗೆ ಫ್ರೆಂಚ್ ಬರೋದಿಲ್ಲ. ಕಡೆಗೆ ಬೇಸುತ್ತ 'ನಾನೂ ನಿಮ್ಮಂತೆಯೇ ನಮ್ಮ ದೇಶದ ಭದ್ರತಾ ಅಧಿಕಾರಿ - ಐ.ಪಿ.ಎಸ್. ಆಫೀಸರ್'

ಎಂದೆ. ಅದನ್ನು ಕೇಳಿ ಇನ್ನೂ ಅನುಮಾನಗೊಂಡ ಅವರು ನಮ್ಮ ಕೈಯಲ್ಲಿದ್ದ ಬ್ಯಾಗುಗಳನ್ನು ಎರಡೆರಡು ಸಲ ಎಕ್ಸ್ - ರೇ ಯಂತ್ರದಲ್ಲಿ ಹಾಕಿದರು. ಅವರಿಗೇನೂ ಸಿಕ್ಕಲಿಲ್ಲ.

ಏರ್‌ಪೋರ್ಟಿನಿಂದ ವಿಮಾನಕ್ಕೆ ಹೋಗುವ ಏರೋಬಿಡ್ಜ್ ಬಾಗಿಲಲ್ಲಿ ಒಬ್ಬ ಸೆಕ್ಯೂರಿಟಿ ಅಧಿಕಾರಿ ಮತ್ತೆ ನಮ್ಮನ್ನು ತಡೆದು ನಿಲ್ಲಿಸಿ ಅದೇ ಪ್ರಶ್ನೆಗಳನ್ನು ಕೇಳಿದ. ಇವತ್ತು ಏಕೋ ನಾವು ಎದ್ದ ಘಳಿಗೆ ಸರಿಯಾಗಿಲ್ಲ ಎಂದುಕೊಂಡು ತಾಳ್ಮೆಯಿಂದಲೇ ಉತ್ತರಿಸಿದೆ. ಅವನಿಗೆ ಸಮಾಧಾನವಾದಂತೆ ಕಾಣಲಿಲ್ಲ. ಆದರೂ ನಮ್ಮನ್ನು ಒಳಹೋಗಲು ಬಿಟ್ಟ. 'ಏನ್ರೀ ನಾವು ಭಾರತೀಯರು ಅಂತ ಹೀಗೆ ಅನುಮಾನ ಪಡ್ತಿದಾರಾ' ಎಂದು ಕೇಳಿದಳು ನನ್ನ ಪತ್ನಿ. 'ಇಲ್ಲಿ ಅಂದರೆ, ಫ್ರಾನ್ಸ್‌ನಲ್ಲಿ ಹಲವಾರು ದೇಶಗಳಿಂದ ಜನ ವಲಸೆ ಬರ್ತಾರೆ. ಎಲ್.ಟಿ.ಟಿ.ಇ. ಅಂಗ ಕೂಡ ಇಲ್ಲಿದೆ. ನಮ್ಮ ದೇಶದಲ್ಲಿ ತಮ್ಮ ಮೇಲೆ ಅತ್ಯಾಚಾರ/ ಶೋಷಣೆ ನಡೀತಾ ಇದೆ ಎಂದು ಯಾರು ಫ್ರಾನ್ಸ್ ದೇಶದ ಮೊರೆ ಹೋದರೂ ಅವರಿಗೆ ಈ ದೇಶದಲ್ಲಿ ರಕ್ಷಣೆಯಂತೆ. ಹೀಗಾಗಿ ಭಾರತದಲ್ಲಿ ನಾವು ಭಯೋತ್ಪಾದಕರು ಎಂದು ಭಾವಿಸುವ ಹಲವಾರು ಜನ ಇಲ್ಲಿದ್ದಾರೆ. ಪಾಕಿಸ್ತಾನಿ ಜನ ಡ್ರಗ್ಸ್ ಸ್ಮಗಲಿಂಗ್ ಮಾಡ್ತಾರೆ ಅಂತ ಅನುಮಾನ. ಹೀಗಾಗಿ ಏಷ್ಯನ್ ಜನರನ್ನು ಇಲ್ಲಿಯ ಸೆಕ್ಯೂರಿಟಿ ನಂಬುವುದಿಲ್ಲ' ಎಂದೆ. ನಾವು ಮಾತು ಮುಗಿಸುವ ವೇಳೆಗೇ ಲಂಡನ್‌ನ ಹೀಥ್ರೋ ವಿಮಾನ ನಿಲ್ದಾಣದಲ್ಲಿ ಇಳಿಯಲು ನಮ್ಮ ವಿಮಾನ ಸಜ್ಜಾಯಿತು. ನಾನು ಕಿಟಕಿಯಿಂದ ಹಣಿಕಿ ನೋಡಿದೆ. ಲಂಡನ್ ನಗರ ಸೂರ್ಯನ ಬೆಳಕಿನಲ್ಲಿ ಮಿಂಚುತ್ತಿತ್ತು. ಎಲ್ಲೆಲ್ಲಿ ನೋಡಿದರೂ ಫುಟ್‌ಬಾಲ್ ಮೈದಾನಗಳು. ಥೇಮ್ಸ್ ನದಿ ಹಾವಿನಂತೆ ಹರಿಯುತ್ತಾ ಇತ್ತು.

ವಿಮಾನದಿಂದ ಇಳಿದ ಕೂಡಲೇ ಇಮಿಗ್ರೇಷನ್ ಕ್ಲಿಯರ್ ಮಾಡಿಕೊಂಡು ನಮ್ಮ ಸೂಟ್‌ಕೇಸುಗಳನ್ನು ಪಡೆದು ಕಸ್ಟಂನ ಗ್ರೀನ್ ಚಾನೆಲ್‌ನಲ್ಲಿ ಹೋದೆವು. ಅಲ್ಲೇ ದೂರದಿಂದ ನೋಡ್ತಾ ಇದ್ದ ಒಬ್ಬ ಕಸ್ಟಂ ಅಧಿಕಾರಿ ನನ್ನನ್ನು ಪಕ್ಕಕ್ಕೆ ಕರೆದು ಹಲವಾರು ಪ್ರಶ್ನೆಗಳನ್ನು ಕೇಳಿ ಸೂಟ್‌ಕೇಸ್ ತೆರೆದು ತೋರಿಸಲು ಹೇಳಿದ. 'ನಾವು ಡ್ರಗ್ ಸ್ಮಗ್ಲರ್‌ಗಳಿಲ್ಲ' ಎಂದು ಅವನಿಗೆ ಹೇಳಬೇಕು ಅನ್ನಿಸಿತು. ಸೂಟ್‌ಕೇಸಿನಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿದ್ದ ಚಟ್ನಿಪುಡಿ ನೋಡಿ ಅವನಿಗೆ ಏನೋ ಅನುಮಾನ. ಅದನ್ನು ತೆಗೆದು ತೋರಿಸು ಎಂದ. ನಾನು ತೆಗೆದು ಅವನ ಮುಂದೆ ಹಿಡಿದೆ. ಅವನು ತನ್ನ ಮೂಗನ್ನು ಅದರ ಮುಂದೆ ಹಿಡಿದು ದೀರ್ಘವಾಗಿ ಆಘ್ರಾಣಿಸಿದ. ಆಗ ನೋಡಬೇಕಿತ್ತು ಮಜಾನಾ. ಚಟ್ನಿಪುಡಿಯ ಘಾಟಿನಿಂದ ಅವನಿಗೆ ತಡೆಯಲಾರದ ಸೀನು ಬಂದು ಕಣ್ಣಲ್ಲೆಲ್ಲಾ ನೀರು ಬರತೊಡಗಿತು. ಇನ್ನು ಹೆಚ್ಚು ಪ್ರಶ್ನೆ ನನಗೆ ಕೇಳುವುದು ಬೇಡ ಎಂದುಕೊಂಡು ನಮ್ಮನ್ನು ಹೊರಟಲು ಬಿಟ್ಟ.

ನಿಲ್ದಾಣದ ಹೊರಗಡೆ ನನ್ನ ಶ್ರೀಮತಿಯ ಕಸಿನ್ ರಾಗಿಣಿ ತನ್ನ ಗಂಡ ಚಂದ್ರಶೇಖರನೊಂದಿಗೆ ನಮ್ಮನ್ನು ಎದುರುಗೊಳ್ಳಲು ಬಂದಿದ್ದಳು. ನಮ್ಮ ಸೂಟ್‌ಕೇಸುಗಳನ್ನು ತಮ್ಮ ಕಾರಿನ ಡಿಕ್ಕಿಯಲ್ಲಿ ಹಾಕಿಕೊಂಡು ನಮ್ಮನ್ನು ಕರೆದೊಯ್ದರು. ಪ್ಯಾರಿಸ್ ಹಾಗೂ ಲಂಡನ್ ನಿಲ್ದಾಣಗಳಲ್ಲಿ ನಮಗಾದ ತೊಂದರೆ ವಿವರಿಸಿದೆವು. ಶೇಖರ್ ಜೋರಾಗಿ ನಕ್ಕು "ಸಾಮಾನ್ಯವಾಗಿ ಇಲ್ಲಿ ಭಾರತೀಯರನ್ನು ಕಂಡರೆ ತಾತ್ಸಾರ ಭಾವನೆ. ಅನುಮಾನ ಕೂಡಾ. ಆದರೆ ಗುರುಪ್ರಸಾದ್ ಸೂಟ್ ಧರಿಸಿ ಜಾಗಿಂಗ್ ಷೂಸ್ (ಅಂದರೆ ಜೀನ್ಸ್ ಮೇಲೆ ಧರಿಸುವ ಕ್ಯಾನ್‌ವಾಸ್ ಬೂಟುಗಳು) ಹಾಕಿಕೊಂಡಿರುವುದರಿಂದ ಅವರ ಮೇಲೆ ಅನುಮಾನ ಬಂದಿದೆ" ಎಂದ.

ಆಗ ನನಗೆ ತಿಳಿಯಿತು, ಏಕೆ ಹೀಗಾಯಿತು ಎಂದು. ಅಂದಿನಿಂದ ಇಂದಿನವರೆಗೆ ಸೂಟ್ ಧರಿಸಿದಾಗ ನಾನು ಅಪ್ಪಿತಪ್ಪಿಯೂ ಕರಿ ಅಥವಾ ಕಂದು ಬಣ್ಣದ ಚರ್ಮದ ಬೂಟಿನ ಹೊರತಾಗಿ ಬೇರಾವ ರೀತಿಯ ಪಾದರಕ್ಷೆಗಳನ್ನೂ ಧರಿಸುವುದಿಲ್ಲ! "ಸ್ವರ್ಣಾ, ಶೇಖರ್ ಇಂದು ಕಛೇರಿಗೆ ರಜೆ ಹಾಕಿದ್ದಾರೆ. ನಾವು ಇಲ್ಲಿಂದ ನೇರವಾಗಿ ಲಂಡನ್ನಿನ ಪ್ರಸಿದ್ಧ ಸ್ಥಳಗಳ ದರ್ಶನಕ್ಕೆ ಹೋಗೋಣ ಮೊದಲಿಗೆ ಎಲ್ಲಿಗೆ ಹೋಗೋಣ?" ಎಂದಳು ರಾಗಿಣಿ. ನಾನು ತಟ್ಟನೆ "ಲಂಡನ್ ಬ್ರಿಡ್ಜ್‌ಗೆ ಹೋಗೋಣ. ನಾನು ಸಣ್ಣವನಾಗಿದ್ದಾಗ 'ಲಂಡನ್ ಬ್ರಿಡ್ಜ್ ಈಸ್ ಫಾಲಿಂಗ್ ಡೌನ್' ಅನ್ನುವ ಪದ್ಯ ಓದುತ್ತಾ ಇದ್ದೆ. ಅಲ್ಲಿಗೇ ಮೊದಲು ಹೋಗೋಣ" ಎಂದೆ. ಸರಿ ಎಂದ ಶೇಖರ್ ಕಾರನ್ನು ಲಂಡನ್ ಬ್ರಿಡ್ಜ್‌ನತ್ತ ಓಡಿಸಿದರು. ಅರ್ಧ ಗಂಟೆಯ ನಂತರ ಹಲವಾರು ಕ್ಯಾಲೆಂಡರುಗಳು, ಪಿಕ್ಚರ್ ಪೋಸ್ಟ್ ಕಾರ್ಡುಗಳು, ಸಿನಿಮಾಗಳಲ್ಲಿ ನೋಡಿದ್ದ ಥೇಮ್ಸ್ ಮೇಲಿನ ಸೇತುವೆ ಎದುರಿಗೇ ಕಂಡಿತು. "ಈ ಸೇತುವೆಯ ಹೆಸರು ಲಂಡನ್ ಬ್ರಿಡ್ಜ್ ಅಲ್ಲ, ಟವರ್ ಬ್ರಿಡ್ಜ್. ಏಕೆ ಈ ಹೆಸರು ಬಂತೆಂದರೆ ನದಿಯ ಆಚೆಕಡೆ ಟವರ್ ಆಫ್ ಲಂಡನ್ ಎನ್ನುವ ಭಾರೀ ಅರಮನೆ ಇದೆ, ಅದಕ್ಕೇ. ಈಗ ನಾವು ಚಲಿಸುತ್ತಿರುವ ಸೇತುವೆಯ ಕೆಳಗಡೆ ಹಡಗು ಬಂದಾಗ ಆ ಹಡಗು ಸುಲಭವಾಗಿ ಸೇತುವೆ ಕೆಳಗಡೆ ಹಾದು ಹೋಗಲು ಸೇತುವೆ ಎರಡು ಹೋಳಾಗಿ ನಮಸ್ಕರಿಸುವ ಎರಡು ಕರಗಳಂತೆ ಕಾಣುತ್ತದೆ. ಹಡಗು ಪಾರಾದಾಗ ನಿಧಾನವಾಗಿ ಎರಡೂ ಭಾಗಗಳು ಬಂದಾಗಿ ಕಾರು, ಬಸ್ಸುಗಳು ನದಿದಾಟುವ ರಸ್ತೆ ಸೇತುವೆ ಆಗಿ ಮಾರ್ಪಾಟಾಗುತ್ತದೆ. ಈ ಎರಡೂ ಭಾಗಗಳೂ ಒಂದಾಗುವ ಪ್ರಕ್ರಿಯೆಯನ್ನು ವಿವರಿಸಲೇ ಕವಿ 'ಲಂಡನ್ ಬ್ರಿಡ್ಜ್ ಈಸ್ ಫಾಲಿಂಗ್ ಡೌನ್' ಎಂದಿದ್ದು" ಅಂತ ಕಾಮೆಂಟರಿ ಕೊಟ್ಟ. ಥೇಮ್ಸ್ ನದಿಯ ಆಚೆ ಬದಿಯಲ್ಲಿರುವ ಟವರ್ ಆಫ್ ಲಂಡನ್‌ಗೆ ಹೋದೆವು. ಈ ಕಟ್ಟಡ ಭಾರತೀಯರಿಗೆ ಏಕೆ ವಿಶೇಷವೆಂದರೆ ಇದರಲ್ಲಿಯೇ ನಮ್ಮ ದೇಶದಿಂದ ಒಯ್ದ ಕೊಹಿನೂರ್ ವಜ್ರವನ್ನು ಇಟ್ಟಿರುವುದು. ಈ ಕಟ್ಟಡ ಒಂದು ಕಾಲದಲ್ಲಿ ಸೆರೆಮನೆ ಆಗಿದ್ದು ಆ ನಂತರ ಅರಮನೆ ಆಯಿತಂತೆ. ಈಗ ಮ್ಯೂಸಿಯಂ ಆಗಿದೆ. ಟಿಕೆಟ್ ಖರೀದಿಸಿ ಟವರ್‌ನ ದರ್ಶನ ಮಾಡಿ ಬ್ರಿಟಿಷ್ ರಾಣಿಯ ಕಿರೀಟದಲ್ಲಿ ಭದ್ರವಾಗಿ ಕುಳಿತಿರುವ ಕೋಹಿನೂರ್ ವಜ್ರವನ್ನೂ ನೋಡಿದೆವು. ವಾಪಸ್ ಬಂದು ಹೊರಗಡೆ ಇದ್ದ ಒಂದು ಕಾಗೆಯನ್ನು ನೋಡಿ 'ಈ ಕಾಗೆ ನೋಡಿ ಎಷ್ಟು ಕಪ್ಪಾಗಿದೆ' ಎಂದೆ. ರಾಗಿಣಿ ಇದು ಕಾಗೆಯಲ್ಲ ಇದಕ್ಕೆ ರೇವನ್ ಎಂದು ಕರೀತಾರೆ ಎಂದಳು.

ಟವರ್ ಮ್ಯೂಸಿಯಂನಿಂದ ಹೊರಬಂದು ಆಯಾಸವಾದ್ದರಿಂದ ಅಲ್ಲೇ ಇದ್ದ ಚಾದಂಗಡಿಗೆ ಹೋಗಿ ಚಾ ಕುಡಿಯಲು ಕುಳಿತೆವು. ಅಷ್ಟರಲ್ಲಿ ಅಲ್ಲಿಗೆ ಬಂದ ಒಬ್ಬ ಬಿಳಿಯ ನಮ್ಮನ್ನು ನೋಡಿ "ಥೂ" ಎಂದು ಉಗುಳಿದ. ನನಗೆ ಮೈಯಲ್ಲಾ ಉರಿಯಿತು. ಅವನ ಜತೆ ಜಗಳವಾಡಲು ಎದ್ದೆ. ಶೇಖರ್ ನನ್ನನ್ನು ಸಮಾಧಾನ ಮಾಡಿ 'ಈ ದೇಶದ ಜನರಲ್ಲಿ ಸುಪ್ತವಾಗಿ ಇಂದಿಗೂ ವರ್ಣದ್ವೇಷ ಇದೆ. ಅದಕ್ಕೇ ಆ ಬಿಳಿಯ ಆ ರೀತಿ ವರ್ತಿಸಿದ್ದು' ಎಂದ. ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಿಗೆ ಬಂದಿದ್ದರೂ ಇನ್ನೂ ಈ ದೇಶದ ಕೆಲವರು ಹೀಗೆ ವರ್ತಿಸುತ್ತಾರಲ್ಲ ಎಂದು ಬೇಜಾರಾಯಿತು. ಅಲ್ಲಿಂದ ಎದ್ದು ಮತ್ತೆ ಟವರ್ ಸೇತುವೆಗೆ ಹೋಗಿ ಸೇತುವೆಯ ಮೇಲುಗಡೆ ನಡೆಯಲೆಂದೇ ಮಾಡಿರುವ ದಾರಿಗೆ ಹೋಗಿ ಥೇಮ್ಸ್ ನದಿಯಲ್ಲಿ ವೇಗವಾಗಿ ಹೋಗುತ್ತಿದ್ದ ದೋಣಿಗಳನ್ನು ನೋಡುತ್ತಾ ನಿಂತೆ.

ಎದುರುಗಡೆ ಒಂದು ಭಾರೀ ಫೆರ್ರಿಸ್ ವೀಲ್ (ಜನರು ಕುಳಿತು ಮೇಲಿನಿಂದ ಕೆಳಕ್ಕೆ ತಿರುಗುವ ಗಿರಗಟ್ಟಲೆ) ಕಂಡಿತು. ಇಪ್ಪತ್ತೊಂದನೆಯ ಶತಮಾನವನ್ನು ಎದುರುಗೊಳ್ಳಲು ಲಂಡನ್ ಐ ಎಂದು ಕರೆಯಲಾಗುವ ಈ ಭಾರೀ ಗಾಲಿ ಕಟ್ಟುತ್ತಿದ್ದಾರೆ. ಇದರ ಖರ್ಚು ಮುವ್ವತ್ತೈದು ದಶಲಕ್ಷ ಪೌಂಡುಗಳು (ರೂ. 262 ಕೋಟಿ) ಆಗುತ್ತದೆ.

ನಾಳೆ - ನಾಡಿದ್ದು ಇನ್ನಷ್ಟು ಜಾಗಗಳನ್ನು ನೋಡೋಣ, ಈಗ ನಮ್ಮ ಮನೆಗೆ ವಾಪಸ್ಸಾಗೋಣ ಎಂದ ಶೇಖರ್ ತನ್ನ ಮನೆಯತ್ತ ಕಾರು ಓಡಿಸಿದ. ಒಂದು ಆಶ್ಚರ್ಯವೆಂದರೆ ಇಂಗ್ಲೆಂಡಿನಲ್ಲಿ ನಮ್ಮಂತೆ ಬಲಭಾಗದ ಡ್ರೈವಿಂಗ್ - ಯೂರೋಪಿನಲ್ಲಿ ಎಲ್ಲ ಕಡೆಯೂ ಲೆಫ್ಟ್ ಹ್ಯಾಂಡ್ ಡ್ರೈವ್ ಎಲ್ಲರಿಗೂ ಒಂದು ದಾರಿಯಾದರೆ ಬ್ರಿಟಿಷರಿಗೇ ಇನ್ನೊಂದು ದಾರಿ ಎಂದ ಶೇಖರ್.

17

ಲಂಡನ್‌ನ ವಿಶೇಷತೆಗಳು

ಇಂಗ್ಲೆಂಡಿನ ರಾಜಧಾನಿ ಲಂಡನ್ ಬಗೆಗಿನ ಪ್ರವಾಸ ಕಥನಗಳಲ್ಲಿ ಸಾಮಾನ್ಯವಾಗಿ ಬಕಿಂಗ್ ಹ್ಯಾಂ ಅರಮನೆ, ಟವರ್ ಬ್ರಿಡ್ಜ್, ಟ್ರೆಫಾಲ್‌ಗರ್ ಚೌಕ, ಪಿಕಾಡಿಲ್ಲಿ ಸರ್ಕಸ್ ಇವುಗಳ ವಿವರಣೆ ಇದ್ದೇ ಇರುತ್ತವೆ. ಹೀಗಾಗಿ ಪ್ರವಾಸಿಗರು ಸರ್ವೇ ಸಾಧಾರಣವಾಗಿ ನೋಡದಂತಹ ಜಾಗಗಳನ್ನೂ ನೋಡುವ ಉದ್ದೇಶ ನನ್ನದಾಗಿತ್ತು. ಲಂಡನ್ ನಗರದ ಕಟ್ಟಡಗಳಲ್ಲಿ ವೆಸ್ಟ್ ಮಿನ್‌ಸ್ಟರ್ ಅಬ್ಬೀ ಗಮನಾರ್ಹವಾದುದು. 13 ರಿಂದ 14ನೇ ಶತಮಾನದಲ್ಲಿ ಕಟ್ಟಲಾದ ಈ ಚರ್ಚ್‌ನಲ್ಲಿ ಹಲವಾರು ಬ್ರಿಟಿಷ್ ರಾಜ ಮಹಾರಾಜರು ಹಾಗೂ ಮಹಾರಾಣಿಯರ ಗೋರಿಗಳು ಇರುವುದಷ್ಟೇ ಅಲ್ಲದೆ ಬ್ರಿಟನ್ನಿನ ಹಲವಾರು ಖ್ಯಾತಿವೆತ್ತ ನಾಗರೀಕರ ಗೋರಿಗಳೂ ಇವೆ. ಈ ಪ್ರಾರ್ಥನಾಲಯದಲ್ಲಿಯೇ ಬ್ರಿಟಿಷ್ ರಾಜಮನೆತನಕ್ಕೆ ಸಂಬಂಧಿಸಿದಂತಹ ಎಲ್ಲಾ ಸಮಾರಂಭಗಳೂ ಅಂದರೆ ಪಟ್ಟಾಭಿಷೇಕ, ಮದುವೆ ಇತ್ಯಾದಿಗಳು ನಡೆಯುತ್ತವೆ. 1066ನೇ ಇಸವಿಯಿಂದ ಇಲ್ಲಿಯವರೆಗೆ, ಎಡ್ವರ್ಡ್ - 5 ಹಾಗೂ ಎಡ್ವರ್ಡ್ - 8ರ ಹೊರತಾಗಿ, ಬ್ರಿಟನ್ನಿನ ಎಲ್ಲಾ ರಾಜ ರಾಣಿಯರೂ ಇದೇ ಮಂದಿರದಲ್ಲಿಯೇ ಪಟ್ಟದ ಗದ್ದಿಗೆಯನ್ನು ಏರಿದ್ದಾರೆ.

ಲಂಡನ್ನಿನ ಇನ್ನೊಂದು ಹೆಸರುವಾಸಿ ಯಾತ್ರಾಸ್ಥಳ ಮೇಡಮ್ ಟಸ್ಸಾಡ್ ಮೇಣದ ವಿಗ್ರಹಗಳ ಮ್ಯೂಸಿಯಂ. 19ನೇ ಶತಮಾನದಲ್ಲಿ ಮೇಡಮ್ ಟಸ್ಸಾಡ್ ತನ್ನ ಚಿಕ್ಕಪ್ಪನಿಂದ ಮೇಣದಲ್ಲಿ ಪ್ರತಿಮೆಗಳನ್ನು ರೂಪಿಸುವ ಕಲೆಯನ್ನು ಕಲಿತಳಂತೆ. ಫ್ರೆಂಚ್ ಕ್ರಾಂತಿಯ ಸಮಯದಲ್ಲಿ ಈಕೆಯನ್ನು ಜೈಲಿಗೆ ಹಾಕಿದ್ದಾಗ ಗೆಲೋಟನ್‌ನಿಂದ ಶಿರಚ್ಛೇದನ ಮಾಡಿದ ವ್ಯಕ್ತಿಗಳ ತಲೆಗಳ ಪ್ರತಿಮೆಯನ್ನು ಮಾಡಲು ಒತ್ತಾಯ ಮಾಡಿದ್ದರಂತೆ. ಜೈಲಿನಿಂದ ಹೊರ ಬಂದ ನಂತರ ಈಕೆ 33 ವರ್ಷ ಬ್ರಿಟನ್ನಿನಾದ್ಯಂತ ಸಂಚರಿಸಿ, ಹಲವಾರು ನಾಯಕರ ಮೇಣದ ಪ್ರತಿಮೆಗಳನ್ನು ಮಾಡಿದಳು. ಈ ಮೇಣದ ಪ್ರತಿಮೆಗಳು ಎಷ್ಟು ನೈಜವಾಗಿದ್ದವೆಂದರೆ, ಈ ಪ್ರತಿಮೆಗಳನ್ನು ಮಾಡಿಸಿಕೊಳ್ಳಲು ಜನ ನಾ ಮುಂದು ತಾ ಮುಂದು ಎಂದು ಬರತೊಡಗಿದರು. ಕಡೆಗೊಮ್ಮೆ ಆಕೆ ತಾನು ತಯಾರಿಸಿದ ಪ್ರತಿಮೆಗಳ ಮ್ಯೂಸಿಯಂ ತೆರೆದಳಂತೆ. ಮೇಡಮ್ ಟಸ್ಸಾಡ್ ಮ್ಯೂಸಿಯಂನಲ್ಲಿ ಯಾವ ವ್ಯಕ್ತಿಯ ಮೇಣದ ಪ್ರತಿಮೆ ಇದೆಯೋ ಆ ವ್ಯಕ್ತಿ ಖಂಡಿತಾ ವಿಶ್ವ ವಿಖ್ಯಾತರಾಗಿರುತ್ತಾರೆ ಎನ್ನುಬಹುದು. ಮಹಾತ್ಮಾಗಾಂಧಿ, ಇಂದಿರಾಗಾಂಧಿ, ರಾಜೀವ್ ಗಾಂಧಿ ಹಾಗೂ ಇತ್ತೀಚೆಗೆ ಅಮಿತಾಬ್ ಬಚ್ಚನ್

ಅವರುಗಳ ಪ್ರತಿಮೆಗಳನ್ನು ಈ ಮ್ಯೂಸಿಯಂನಲ್ಲಿ ಇಡಲಾಗಿದೆ. ಈ ಮ್ಯೂಸಿಯಂ ನೋಡದೆ ಹೋದರೆ ಲಂಡನ್ನಿಗೆ ಹೋಗಿದ್ದು ವ್ಯರ್ಥವಾಗುತ್ತದೆ ಎಂದು ನನ್ನ ಅನಿಸಿಕೆ.

ಲಂಡನ್ನಿನ ಹೆಸರಾಂತ ಕ್ರೀಡಾಸ್ಥಳಗಳಾದ ಲಾರ್ಡ್ಸ್ ಕ್ರಿಕೆಟ್ ಮೈದಾನ ಹಾಗೂ ವಿಂಬಲ್ಡನ್ ಟೆನ್ನಿಸ್ ಮೈದಾನಗಳನ್ನು ನೋಡಲೇಬೇಕು ಎಂದುಕೊಂಡು ಅಲ್ಲಿಗೂ ಹೋದೆವು. ದೂರದರ್ಶನದಲ್ಲಿ ಸಾಕಷ್ಟು ಬಾರಿ ಈ ಮೈದಾನಗಳನ್ನು ನೋಡಿದ್ದರೂ ಅವುಗಳನ್ನು ಕಣ್ಣ ಮುದೆ ಸಾಕ್ಷಾತ್ ನೋಡಿದಾಗ ಮನಸ್ಸು ಪುಳಕಿತಗೊಂಡಿತು. ವಿಂಬಲ್ಡನ್ ಸಮೀಪವೇ ಲಂಡನ್ನಿನ ಹೆಸರಾಂತ ಕ್ಯೂ ಉದ್ಯಾನವನ ಇರುವುದು.

ಲಂಡನ್ ಶಾಪಿಂಗ್‌ಗೆ ಬಹಳ ಹೆಸರುವಾಸಿಯಾದ ಜಾಗ. ಅಲ್ಲಿಯ ರಿಜಂಟ್ ಸ್ಟ್ರೀಟ್, ಆಕ್ಸ್‌ಫರ್ಡ್ ಸ್ಟ್ರೀಟ್ ಹಾಗೂ ಬಾಂಡ್ ಸ್ಟ್ರೀಟ್ ಗಳಿಗೆ ಹೋದರೆ ತರಹೇವಾರಿ ವಸ್ತುಗಳನ್ನು ಮಾರುವ ಅಂಗಡಿಗಳನ್ನು ಕಾಣಬಹುದು. ಸಂಜೆ ವೇಳೆಯಲ್ಲಿ ಆಕ್ಸ್‌ಫರ್ಡ್ ಸ್ಟ್ರೀಟ್‌ನಲ್ಲಿ ಓಡಾಡುವುದೇ ಒಂದು ರೋಮಾಂಚಕಾರಿ ಅನುಭವ. ಲಂಡನ್ನಿನಲ್ಲಿ ಎರಡು ಅತಿ ದೊಡ್ಡ ಅಂಗಡಿಗಳು ಇವೆ. ಒಂದರ ಹೆಸರು ಹೆರಾಡ್ಸ್ ಹಾಗೂ ಇನ್ನೊಂದರ ಹೆಸರು ಸೆಲ್ ಫ್ರಿಡ್ಜಸ್ ಈ ಎರಡೂ ಅಂಗಡಿಗಳು ಬಹು ಮಹಡಿ ಕಟ್ಟಡಗಳಾಗಿದ್ದು ನಮಗೆ ಬೇಕಾದ ವಸ್ತುಗಳೆಲ್ಲಾ ಇಲ್ಲಿ ಸಿಗುತ್ತವೆ.

ಬ್ರಿಟಿಷ್ ಮ್ಯೂಸಿಯಂ ಅನ್ನು ನೋಡದೆ ಹೋದರೆ ಲಂಡನ್ನಿನ ಪ್ರಯಾಣ ಸಾರ್ಥಕವಾಗುವುದಿಲ್ಲ. ಈ ರಾಷ್ಟ್ರೀಯ ಸಂಗ್ರಹಾಲಯವನ್ನು ಸರಿಯಾಗಿ ನೋಡಲು ಕಡಿಮೆ ಎಂದರೂ ಹತ್ತು ದಿನಗಳು ಬೇಕು. ಭಾರತಕ್ಕೆ ಸಂಬಂಧಪಟ್ಟ ಭಾರತದಲ್ಲಿಯೇ ಇರದ ಹಲವಾರು ಕಲಾಕೃತಿಗಳನ್ನು ಈ ಸಂಗ್ರಹಾಲಯ ಹೊಂದಿದೆ ಎನ್ನುವುದು ಆಶ್ಚರ್ಯಕರ ಸಂಗತಿ. ಇದು ವಿಶ್ವದ ಅತಿ ದೊಡ್ಡ ಸಂಗ್ರಹಾಲಯಗಳಲ್ಲಿ ಒಂದಾಗಿದೆ.

ಥೇಮ್ಸ್ ನದಿಯ ಮೇಲೆ ದೋಣಿ ವಿಹಾರ ಮಾಡುವುದು ಲಂಡನ್ನಿಗೆ ಬರುವ ಹಲವಾರು ಪ್ರವಾಸಿಗರು ಇಷ್ಟಪಡುವ ಕ್ರಿಯೆ. ಲಂಡನ್ನಿನ ಪೊಲೀಸರ ಸಹಾಯದಿಂದ ನಮ್ಮಿಬ್ಬರಿಗೂ ದೋಣಿಯೊಂದು ಮುಫತ್ತಾಗಿ ದೊರೆಯಿತು. ಹಿಂದಿನ ಕಾಲದಲ್ಲಿ ದರೋಡೆಕೋರರು, ಹಾಗೂ ಕಳ್ಳ ಕಾಕರು ಥೇಮ್ಸ್ ನದಿಯ ಮೂಲಕ ನಗರದ ಒಳಗೆ ಬಂದು ಜನರನ್ನು ಸುಲಿಗೆ ಮಾಡುತ್ತಾ ಇದ್ದರಂತೆ. ಇದೇ ಕಾರಣಕ್ಕಾಗಿ ಪೊಲೀಸರು ತಮ್ಮದೇ ಆದ ದೋಣಿಗಳಲ್ಲಿ ನದಿಯ ಗಸ್ತು ತಿರುಗುತ್ತಿದ್ದರಂತೆ. ಹೀಗಾಗಿ ನದಿ ಗಸ್ತಿಗಾಗಿಯೇ ಪೊಲೀಸ್ ದೋಣಿಗಳು ಇವೆ. ಬಿಗ್‌ಬೆನ್ ಬಳಿ ಇರುವ ನದಿ ದಡದಿಂದ ನಾವು ದೋಣಿ ಏರಿದೆವು. ಸುಮಾರು ಅರ್ಧ ಮುಕ್ಕಾಲು ಗಂಟೆಯ ಪ್ರಯಾಣದ ನಂತರ ನಮ್ಮ ನಾವಿಕ ದಡದಲ್ಲಿ ದೋಣಿ ನಿಲ್ಲಿಸಿ ನಾವು ಈಗ ಗ್ರೀನ್‌ವಿಚ್‌ಗೆ ಬಂದಿದ್ದೇವೆ ಎಂದ. ಕೂಡಲೇ ನಾನು ಗ್ರೀನ್ವಿಚ್ ಮೀನ್ ಟೈಮ್ ಎಂದು ಕರೆಯುತ್ತಾರಲ್ಲಾ ಇದಕ್ಕೂ ಅದಕ್ಕೂ ಸಂಬಂಧ ಇದೆಯೇ ಎಂದೆ. ಹೌದು ಎಂದ ಆತ, ಇದೇ ಜಾಗದಲ್ಲಿರುವ ಖಗೋಳಾಲಯದಿಂದಲೇ ವೇಳೆಯನ್ನು ನಿಗದಿ ಮಾಡುವುದು, ಗ್ರೀನ್ ವಿಚ್ ಪೂರ್ವ ಭಾಗಕ್ಕೆ ಹೋದಾಗ ವೇಳೆ ಹೆಚ್ಚಾಗುತ್ತದೆ ಹಾಗೂ ಪಶ್ಚಿಮ ಭಾಗಕ್ಕೆ ಕಡಿಮೆ ಆಗುತ್ತದೆ ಎಂದ. ಅಲ್ಲಿಂದ ಮತ್ತೆ ನದಿಯ ಮೂಲಕ ಅಕ್ಕ ಪಕ್ಕದ ಭಾರೀ ಕಟ್ಟಡಗಳು ಹಾಗೂ ಇನ್ನಿತರ ದೃಶ್ಯಗಳನ್ನು ಸವಿಯುತ್ತಾ ವಾಪಸ್ಸಾದೆವು.

ಲಂಡನ್ನಿನ ಇತರ ಆಕರ್ಷಣೆಗಳಾದ ಪಿಕ್ಯಾಡಲಿ ಸರ್ಕಸ್, ಲೆಸ್ಟರ್ ಚೌಕ, ಇತ್ಯಾದಿಗಳನ್ನು ನೋಡಿದ ನಂತರ ಲಂಡನ್ನಿನ ಪ್ರವಾಸ ಮುಗಿಯಿತು ಎಂದೆನಿಸಿತು. ಶೇಕ್ಸ್‌ಪಿಯರ್‌ನ 'ಮೆರಿ ವೈವ್ಸ್ ಆಫ್ ವಿಂಡ್ಸರ್' ನೆನಪಿಗೆ ತರುವ ವಿಂಡ್ಸರ್ ಅರಮನೆ ನೋಡಲು ತುಂಬಾ ಆಸೆ ಇದ್ದದ್ದರಿಂದ ಈ ಅರಮನೆಯನ್ನು ಮಾರನೆಯ ದಿನ ನೋಡಿ ಬಂದೆವು.

ಲಂಡನ್ ನಗರದ ಜನಜೀವನದ ಬಗ್ಗೆ ಇಲ್ಲಿ ಹೇಳಲೇಬೇಕು. ಲಂಡನ್ನಿನಲ್ಲಿ ಎಲ್ಲಾ ತರಹದ ಎಲ್ಲಾ ಜನಾಂಗಗಳ ಜನರೂ ಇದ್ದಾರೆ. ಭಾರತೀಯ ಸಂಜಾತರು, ಪಾಕಿಸ್ತಾನಿಗಳು, ಅರಬ್ ದೇಶದವರು, ಯೂರೋಪ್‌ನ ಇತರ ದೇಶಗಳವರು ಹೀಗೆ ಹತ್ತು ಹಲವು ವರ್ಣಗಳ ಸಮಾಗಮವನ್ನು ಇಲ್ಲಿ ನೋಡಬಹುದು. ಇಂಗ್ಲೀಷ್ ಜನ ಬೆಳಗ್ಗೆ ಎದ್ದ ಕೂಡಲೇ ಉಪಹಾರ ಮುಗಿಸಿ, ಬಟ್ಟೆ ಧರಿಸಿ, ಕೆಲಸಗಳಿಗೆ ಹೋಗುತ್ತಾರೆ. ಕೆಲಸಕ್ಕೆ ಹೋಗುವವರು ರೈನ್ ಕೋಟ್ ಮತ್ತು ಛತ್ರಿ ಇಲ್ಲದೆ ಹೋಗುವುದೇ ಇಲ್ಲ. ಏಕೆಂದರೆ ಈ ದೇಶದಲ್ಲಿ ಯಾವಾಗ ಮಳೆ ಬರುತ್ತದೆ ಯಾವಾಗ ನಿಲ್ಲುತ್ತದೆ ಎನ್ನುವುದು ಗೊತ್ತಾಗುವುದಿಲ್ಲ. ಪ್ರಯಾಣ ಮಾಡುವಾಗ ತಮ್ಮ ಪಾಡಿಗೆ ತಾವು ಪೇಪರ್ ಓದಿಕೊಂಡು ಇರುತ್ತಾರೆ. ಪರಿಚಯ ಇಲ್ಲದ ಯಾರನ್ನೂ ಮಾತನಾಡಿಸುವುದಿಲ್ಲ. ಸಂಜೆ ಕೆಲಸ ಮುಗಿಸಿ ಮನೆಗೆ ಬಂದ ನಂತರ ಬಹಳ ಜನ ವ್ಯಾಯಾಮ ಮಾಡುತ್ತಾರೆ. ಆ ನಂತರ ಊಟ ಮಾಡಿ ಪಬ್‌ಗಳಿಗೆ ಹೋಗಿಬಿಡುತ್ತಾರೆ. ಬ್ರಿಟನ್ ದೇಶದ ಸಾಮಾಜಿಕ ಜೀವನದಲ್ಲಿ ಪಬ್‌ಗಳಿಗೆ ಅತಿ ಪ್ರಾಮುಖ್ಯ ಸ್ಥಾನ. ಪ್ರತಿ ಮೂಲೆ ಮೂಲೆಗಳಲ್ಲೂ ಪಬ್‌ಗಳಿವೆ. ಎಷ್ಟೋ ಜನ ಮಧ್ಯಾಹ್ನದ ಊಟವನ್ನು ಪಬ್‌ಗಳಲ್ಲೇ ಮಾಡುತ್ತಾರೆ. ನಾಲ್ಕು - ಐದು ತರಹದ ಬಿಯರ್ ಪಬ್‌ಗಳಲ್ಲಿ ಸಿಗುತ್ತದೆ. ಇದರ ಜೊತೆ ಮೀನು ಹಾಗೂ ಕರಿದ ಆಲೂಗಡ್ಡೆ ಫಿಷ್ ಅಂಡ್ ಚಿಪ್ಸ್ ಸೇವಿಸುತ್ತಾರೆ. ಸಂಜೆ ವೇಳೆ ಪಬ್‌ಗೆ ಹೋದವರು ಕೇವಲ ಬಿಯರ್ ಸೇವಿಸಿ ರಾತ್ರಿ 10ರ ಸುಮಾರಿಗೆ ಮನೆಗೆ ವಾಪಸ್ಸಾಗುತ್ತಾರೆ.

ಇಂಗ್ಲೆಂಡ್‌ನಲ್ಲಿ ಕಂಡ ಇನ್ನೊಂದು ಸೋಜಿಗದ ಸಂಗತಿ ಎಂದರೆ ಅಲ್ಲಿಯ ಬಹಳಷ್ಟು ಜನ ಮೆಟ್ರಿಕ್ ಪರೀಕ್ಷೆ ಪಾಸಾದ ನಂತರ ನೌಕರಿಗೆ ಸೇರಿ ಬಿಡುತ್ತಾರೆ. ಗ್ರಾಜುಯೇಟ್‌ಗಳ ಸಂಖ್ಯೆ ತುಂಬಾ ಕಡಿಮೆ. ನಾವು ಕೆಲವು ಭಾರತೀಯರು ಇಂಗ್ಲೆಂಡ್ ದೇಶದವರಿಗಿಂತ ಚೆನ್ನಾಗಿ ಇಂಗ್ಲೀಷ್ ಮಾತನಾಡಬಲ್ಲೆವು ಎನ್ನುವುದೂ ಸೋಜಿಗದ ಸಂಗತಿಯೇ. ಯುನೈಟೆಡ್ ಕಿಂಗ್‌ಡಂ ಎಂದು ಕರೆಯಲಾಗುವ (ಇಂಗ್ಲೆಂಡ್, ಸ್ಕಾಟ್ಲೆಂಡ್, ಉತ್ತರ ಐರೆಲೆಂಡ್ ಹಾಗೂ ವೇಲ್ಸ್ ಪ್ರಾಂತಗಳು ಒಂದು ಗೂಡಿ ಈ ದೇಶ ರಚಿತವಾಗಿದೆ) ಬ್ರಿಟಿಷ್ ದ್ವೀಪಸಮೂಹದ ಬಗ್ಗೆ ನನಗೆ ಸ್ವಲ್ಪ ಜಾಸ್ತಿಯೇ ಒಲವು. ಕಾರಣ ಇಷ್ಟೇ. ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಯಾಗಿರುವ ನಾನು ಆ ದೇಶದ ಹಲವಾರು ಪ್ರದೇಶಗಳ ಬಗ್ಗೆ ಕಥೆ, ಕಾದಂಬರಿ, ಕವನ, ನಾಟಕಗಳಲ್ಲಿ ಓದಿ ನನ್ನ ಮನದಲ್ಲಿ ಆ ಜಾಗಗಳದ್ದೇ ಒಂದು ಚಿತ್ರಣ ರೂಪಿಸಿಕೊಂಡಿದ್ದೆ. ಹೀಗಾಗಿ ಲಂಡನ್ ನೋಡಿದಾಗ ಡಿಕನ್ಸ್ ನೆನಪಾಗಿದ್ದ.

ನನಗೆ ರೊಮ್ಯಾಂಟಿಕ್ ಕವಿಗಳು ಎಂದು ಕರೆಯಲ್ಪಡುವ ವರ್ಡ್ಸ್‌ವರ್ತ್, ಕೋಲರಿಜ್ ಇವರುಗಳು ಇದ್ದ ಜಾಗ ಹಾಗೂ ಶೇಕ್ಸ್‌ಪಿಯರ್ ಜನ್ಮಸ್ಥಳವನ್ನು ನೋಡುವ ಆಸೆ ಬಂದದ್ದರಿಂದ ಲಂಡನ್‌ನಿಂದ ರೈಲಿನಲ್ಲಿ ಸ್ಟ್ರಾಟ್‌ಫರ್ಡ್‌ಗೆ ಹೊರಟೆವು.

18

ಇಂಗ್ಲೀಷ್ ಸಾಹಿತಿಗಳು ಓಡಾಡಿದ ಜಾಗಗಳಲ್ಲಿ

ಆಂಗ್ಲ ಭಾಷಾ ಎಂ.ಎ. ಕಲಿಯುತ್ತಿದ್ದಾಗಲೇ ಮುಂದೆ ಎಂದಾದರೊಮ್ಮೆ ಇಂಗ್ಲೆಂಡಿಗೆ ಹೋಗುವ ಅವಕಾಶ ಸಿಕ್ಕರೆ ಹೆಸರಾಂತ ಸಾಹಿತಿಗಳಾದ ಶೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಕೋಲರಿಜ್, ಡಿಕನ್ಸ್, ಡಿ.ಎಚ್. ಲಾರೆನ್ಸ್, ಯೇಟ್ಸ್ ಇವರುಗಳು ಹುಟ್ಟಿಬೆಳೆದಿದ್ದ, ಕಲಿತಿದ್ದ ಅಥವಾ ವರ್ಣಿಸಿದ್ದ ಜಾಗಗಳನ್ನು ನೋಡಲೇ ಬೇಕು ಎಂದು ನಾನು ನಿರ್ಧರಿಸಿಬಿಟ್ಟಿದ್ದೆ. ಇದೇ ಕಾರಣಕ್ಕೇ ಲಂಡನ್ನಿನ ದೃಶ್ಯಗಳನ್ನು ಸವಿದಾದ ಕೂಡಲೇ ರೈಲು ಹಿಡಿದು ಆಕ್ಸ್‌ಫರ್ಡ್‌ಗೆ ಹೊರಟೇಬಿಟ್ಟೆವು. ಕೇವಲ 45 ನಿಮಿಷದಲ್ಲೇ ಆಕ್ಸ್‌ಫರ್ಡ್ ತಲುಪಿದೆವು.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಇಂಗ್ಲೆಂಡಿನ ಅತಿ ಹಳೆಯ ವಿಶ್ವವಿದ್ಯಾಲಯ. 39 ಕಾಲೇಜುಗಳುಳ್ಳ ಈ ವಿಶ್ವವಿದ್ಯಾಲಯದಲ್ಲಿ ಸುಮಾರು 15000 ವಿದ್ಯಾರ್ಥಿಗಳು ಕಲಿಯುತ್ತಾ ಇದ್ದಾರೆ. ಇಲ್ಲಿಯ ಕುಲಪತಿಗಳನ್ನು ಚಾನ್ಸಲರ್ ಎನ್ನುತ್ತಾರೆ. ಇವರನ್ನು ಆ ವಿಶ್ವವಿದ್ಯಾಲಯದ ಮಾಸ್ಟರ್ ಡಿಗ್ರಿ ಹೊಂದಿದ ಪದವೀಧರರು ಆರಿಸುತ್ತಿದ್ದು, ಒಮ್ಮೆ ಚಾನ್ಸಲರ್ ಆದರೆ ಜೀವಮಾನಪರ್ಯಂತ ಅದೇ ಸ್ಥಾನದಲ್ಲೇ ಉಳಿಯುತ್ತಾರೆ. ಅವರ ಕೆಳಗಿರುವ ಉಪಕುಲಪತಿಗಳು ನಾಲ್ಕು ವರ್ಷಕ್ಕೊಮ್ಮೆ ಬದಲಾಗುತ್ತಾರೆ. ಇಲ್ಲಿನ ಕಾಲೇಜು ಮುಖ್ಯಸ್ಥರುಗಳ ಹೆಸರುಗಳೂ ವಿಭಿನ್ನ - ಪ್ರಿನ್ಸಿಪಾಲ್, ಪ್ರೆಸಿಡೆಂಟ್, ಮಾಸ್ಟರ್, ವಾರ್ಡನ್, ಪ್ರವೋಸ್ಟ್ ಇತ್ಯಾದಿ. ಲೆಕ್ಚರರ್‌ಗಳಿಗೆ 'ಡಾನ್' ಎಂದು ಕರೆಯುತ್ತಾರೆ. ಎಂಟು ಶತಮಾನಗಳಷ್ಟು ಹಳೆಯದಾದ ಆಕ್ಸ್‌ಫರ್ಡ್ ವಿವಿಯಲ್ಲಿ 1902ರ ನಂತರವೇ ವಿದೇಶೀ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆತದ್ದು ಎನ್ನುವುದು ಗಮನಾರ್ಹ.

ಆಕ್ಸ್‌ಫರ್ಡ್ ಶಹರದಲ್ಲಿ ಎಲ್ಲಿ ನೋಡಿದರೂ ಕಾಲೇಜು ಕಟ್ಟಡಗಳೇ. ವಾಸ್ತುಶಿಲ್ಪಕ್ಕೆ ಹೆಸರಾದ ಕಾಲೇಜು ಕಟ್ಟಡವೆಂದರೆ ಕ್ರೈಸ್ಟ್ ಚರ್ಚ್. ಗೋಥಿಕ್ ವಿನ್ಯಾಸವಿರುವ ಈ ಕಟ್ಟಡದ ಒಳ ಪ್ರಾಂಗಣ ಇಡೀ ವಿಶ್ವವಿದ್ಯಾಲಯದಲ್ಲೇ ಅತಿ ದೊಡ್ಡದು. ಇದರ ಬಾಗಿಲ ಮೇಲಿರುವ ಗ್ರೇಟ್ ಟಾಮ್ ಗೋಪುರದಲ್ಲಿ ಏಳು ಟನ್ ತೂಕದ ಗಂಟೆ ಇದೆ. ವಿಶ್ವವಿದ್ಯಾಲಯದ ಮುಖ್ಯ ಗ್ರಂಥಾಲಯಕ್ಕೇ ಬೋಡ್‌ಲೆಯರ್ ಲೈಬ್ರರಿ ಎಂದು ಹೆಸರು. ಇಂಗ್ಲೆಂಡಿನಲ್ಲಿ ಪ್ರಕಟವಾದ ಪ್ರತಿ ಪುಸ್ತಕದ ಪ್ರತಿಯೊಂದನ್ನು ಈ ಗ್ರಂಥಾಲಯಕ್ಕೆ ಮುಫತ್ತಾಗಿ ನೀಡಲೇಬೇಕೆಂಬ ನಿಯಮ ಇದೆ. ಈ ಗ್ರಂಥಾಲಯದ ಒಂದು ರೀಡಿಂಗ್ ರೂಂ ಗೋಲಾಕಾರದಲ್ಲಿದ್ದು ರ್‍ಯಾಡ್‌ಕ್ಲಿಫ್ ಕ್ಯಾಮೆರಾ ಎಂದು ಹೆಸರು ವಾಸಿಯಾಗಿದೆ.

ಆಕ್ಸ್‌ಫರ್ಡ್ಸ್ ವಿಶ್ವವಿದ್ಯಾಲಯದ ಮ್ಯೂಸಿಯಂಗಳೂ ಸಾಕಷ್ಟು ಹೆಸರುವಾಸಿ. ಇಂಗ್ಲೆಂಡಿನ ಪ್ರಪ್ರಥಮ ಸಾರ್ವಜನಿಕ ಸಂಗ್ರಹಾಲಯ ಇಲ್ಲೇ 1693ರಲ್ಲಿ ಪ್ರಾರಂಭವಾದದ್ದು! ಆಶ್‌ಮೋಲಿಯನ್ ಮ್ಯೂಸಿಯಂ ಎಂದು ಕರೆಯಲಾಗುವ ಈ ಸಂಗ್ರಹಾಲಯದಲ್ಲಿ ಮಧ್ಯಪೂರ್ವ ದೇಶಗಳ ಬಹು ಪ್ರಾಚೀನ ವಸ್ತುಗಳಲ್ಲದೆ ಯೂರೋಪಿಯನ್ ಕಲಾಕೃತಿಗಳ ಭವ್ಯ ಸಂಗ್ರಹ ಇದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮುದ್ರಣಾಲಯ - ಈ ಹೆಸರನ್ನು ಯಾರು ತಾನೇ ಕೇಳಿಲ್ಲ? 1480ರ ಸಮಯದಲ್ಲೇ ಪ್ರಾರಂಭವಾದ ಈ ಪ್ರೆಸ್‌ನಲ್ಲಿ ಪ್ರತಿ ವರ್ಷವೂ ನೂರಾರು ಪುಸ್ತಕಗಳು ಪ್ರಕಟವಾಗುತ್ತವೆ. ಇವುಗಳಲ್ಲಿ ಅತಿ ಹೆಸರುವಾಸಿಯಾದದ್ದು ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟು.

ಎರಡು ಮೂರು ಕಾಲೇಜು ಪ್ರಾಂಗಣಗಳಲ್ಲಿ ಅಡ್ಡಾಡಿ ಬಂದೆವು. ರಸ್ತೆಯ ಎರಡೂ ಬದಿಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭರದಿಂದ ಓಡಾಡುತ್ತಾ ಇದ್ದರು. ಈ ಮಹಾನ್ ವಿಶ್ವವಿದ್ಯಾಲಯದಲ್ಲಿ ಕಲಿಯದಿದ್ದರೆ ಏನಂತೆ, ಇಲ್ಲಿಯ ಮಣ್ಣನ್ನಾದರೂ ಸ್ಪರ್ಶ ಮಾಡಿದ್ದೇನಲ್ಲಾ ಎಂದುಕೊಂಡು ಮಧ್ಯಾಹ್ನದ ಊಟ ಅಲ್ಲೇ ಮುಗಿಸಿ ಅಲ್ಲಿಂದಲೇ ಸ್ಟ್ರಾಟ್‌ಫರ್ಡ್ - ಅಪಾನ್ - ಏವನ್‌ಗೆ ಹೋಗುವ ರೈಲು ಹಿಡಿದೆವು.

ನಾವು ಹೋಗುವ ಊರಿಗೆ ಏಕೆ ಈ ವಿಚಿತ್ರ ಹೆಸರು ಎಂದು ಕೇಳಿದಳು ನನ್ನ ಶ್ರೀಮತಿ. "ನೋಡು ಈ ದೇಶದಲ್ಲಿ ನದಿಗಳ ದಡದ ಮೇಲೆ ಇರುವ ಪಟ್ಟಣಗಳಿಗೆ ಈ ರೀತಿ ಹೆಸರು. ಏವನ್ ನದಿಯ ದಡದ ಮೇಲಿರುವ ಸ್ಟ್ರಾಟ್‌ಫರ್ಡ್ ಮಹಾಕವಿ ಶೇಕ್ಸ್‌ಪಿಯರ್ ಹುಟ್ಟಿದ ಊರು" ಎಂದು ತಿಳಿಸಿ, "ಶೇಕ್ಸ್‌ಪಿಯರ್‌ನ ಈ ಜನ್ಮಸ್ಥಳ ವಾರ್ವಿಕ್‌ಶೈರ್ ಪ್ರಾಂತದಲ್ಲಿ ಇದೆ. ಅಂದ ಹಾಗೆ ಈ ವ್ಯಕ್ತಿ 37 ನಾಟಕಗಳಲ್ಲೂ 154 ಸಾನೆಟ್‌ಗಳನ್ನೂ ಬರೆದು ಎಲ್ಲಾ ಭಾಷೆಗಳಲ್ಲೂ ತರ್ಜುಮೆಗೊಂಡಿರುವ ವಿಶಿಷ್ಟ ವ್ಯಕ್ತಿ" ಎಂದೆ. ನಮ್ಮ ನಿಲ್ದಾಣ ಬರುವವರೆಗೂ ಶೇಕ್ಸ್‌ಪಿಯರ್‌ನ ಮೇಲೆ ವಿವರವಾದ ಭಾಷಣವನ್ನೇ ಹೊಡೆದೆ. ಎಷ್ಟಾದರೂ ಎಂ.ಎ. ಕಲಿಯುವಾಗ ನಾವು ಒಂದು ಪೇಪರ್ ಕಡ್ಡಾಯವಾಗಿ ಶೇಕ್ಸ್‌ಪಿಯರ್ ಕಲಿಯಬೇಕಾಗಿ ಇತ್ತಲ್ಲಾ!

ಸ್ಟ್ರಾಟ್‌ಫರ್ಡ್ - ಅಪಾನ್ - ಏವನ್ ಒಂದು ಪುಟ್ಟ ನಗರ. ಇಲ್ಲಿನ ಜನ ಸಂಖ್ಯೆ 25000 ಮೀರಿಲ್ಲ. ಇಲ್ಲಿಯ ಸರಿಸುಮಾರು ಎಲ್ಲ ಜನರೂ ಪರ್ಯಟನಕ್ಕೆ ಸಂಬಂಧಿಸಿದ ಉದ್ಯಮದಲ್ಲಿಯೇ ತೊಡಗಿದ್ದಾರೆ. ಏಕೆಂದರೆ ಪ್ರತಿ ವರ್ಷವೂ ಇಲ್ಲಿಗೆ 25 ಲಕ್ಷ ಜನ ಪ್ರವಾಸಿಗಳು ಬರುತ್ತಾರಂತೆ. ಊರಿನಲ್ಲಿ ಬಂದಿಳಿದ ಕೂಡಲೇ ನಾವು ಮೊದಲು ಹೋಗಿದ್ದು ಹೆನ್‌ಲೀ ಬೀದಿಯಲ್ಲಿರುವ ಶೇಕ್ಸ್‌ಪಿಯರ್‌ನ ಮನೆಗೆ. ಒಳಗೆ ಹೋಗಲು ಶುಲ್ಕ ಎಷ್ಟು ಗೊತ್ತೇ? ತಲಾ 250 ರೂಪಾಯಿಗಳು! "ಇದು ತುಂಬಾ ದುಬಾರಿ ಶುಲ್ಕ ರೀ, ಒಬ್ಬ ವ್ಯಕ್ತಿ ಮನೆ ನೋಡಲು ಇಷ್ಟು ಜಾಸ್ತಿ ಹಣ ಇಡಬಾರದು. ನಾನು ಬರುವುದಿಲ್ಲ ನೀವು ಬೇಕಾದರೆ ಒಳಗೆ ಹೋಗಿ ನೋಡಿ ಬನ್ನಿ" ಎಂದಳು ಸ್ವರ್ಣ. "ನೀನಿಲ್ಲದೆ ನಾನೊಬ್ಬನೇ ಏನು ಮಾಡಲಿ, ಹೊರಗಿನಿಂದಲೇ ನೋಡಿದರೆ ಸಾಕು" ಎಂದು ನಾನು ಅಲ್ಲೇ ಹೊರಗಡೆ ಫಲಕವೊಂದರಲ್ಲಿ ಮನೆಯೊಳಗಿನ ಕೋಣೆಗಳ ಚಿತ್ರ ಹಾಕಿದ್ದನ್ನು ಕಂಡು ಅವನ್ನು ನೋಡಿಯೇ ತೃಪ್ತಿ ಪಟ್ಟೆ.

ಅಲ್ಲಿಂದ ನಿಧಾನವಾಗಿ ನಡೆದುಕೊಂಡು ಶೇಕ್ಸ್‌ಪಿಯರ್‌ನ ಪತ್ನಿಯ ಮನೆ ಇರುವ ಶೋಟೆರಿ ಎನ್ನುವ ಜಾಗಕ್ಕೆ ಹೋದೆವು. 12 ಕೋಣೆಗಳಿರುವ ಹುಲ್ಲಿನ ಮೇಲ್ಚಾವಣಿ ಇರುವ ಇದೇ ಮನೆಯಲ್ಲೇ ಆ್ಯನ್ ಹ್ಯಾಥವೇ ಶೇಕ್ಸ್‌ಪಿಯರ್‌ನನ್ನು 28-11-1582ರಲ್ಲಿ ಮದುವೆಯಾಗುವವರೆಗೂ ವಾಸಿಸುತ್ತಾ

ಇದ್ದಳಂತೆ. ನಾಲ್ಕು ನೂರು ವರ್ಷ ಹಳೆಯದಾದರೂ ಈ ಮನೆ ಸ್ವಲ್ಪವೂ ಹಾಳಾಗಿಲ್ಲ. ಈ ಮನೆ ನೋಡಿದ ನಂತರ ಈ ನಗರದ ಮುಖ್ಯ ನಾಟಕ ಮಂದಿರಗಳಾದ ರಾಯಲ್ ಶೇಕ್ಸ್‌ಪಿಯರ್ ಥಿಯೇಟರ್ ಹಾಗೂ ಸ್ವಾನ್ ಥಿಯೇಟರ್ ನೋಡಿ ನನಗೆ ಶೇಕ್ಸ್‌ಪಿಯರ್ ಕಲಿಸಿದ್ದ ಪ್ರೊ. ಆರ್ಮಾಂಡೋ ಮೆನೆಜಿಸ್ ಹಾಗೂ ಎಂ.ಕೆ. ನಾಯಕರನ್ನು ನೆನಪು ಮಾಡಿಕೊಂಡೆ. ಹಾಗೆಯೇ ನದೀ ದಂಡೆಯ ಮೇಲೆ ಹಾದು ಹೋದಾಗ ಎದುರಾದದ್ದು ಹೋಲಿ ಟ್ರಿನಿಟಿ ಚರ್ಚ್. ಈ ಚರ್ಚಿನ ಆವರಣದಲ್ಲಿಯೇ ಶೇಕ್ಸ್‌ಪಿಯರ್‌ನ ಸಮಾಧಿ ಇರುವುದು. ಸಾಹಿತ್ಯದ ಈ ದಿಗ್ಗಜನ ಸಮಾಧಿಯ ಮುಂದೆ ನಿಂತು ಎರಡು ನಿಮಿಷ ಮೌನ ಆಚರಿಸಿ ನನ್ನ ಗೌರವ ತೋರಿಸಿದೆ.

ಇಷ್ಟೆಲ್ಲಾ ನೋಡುವಷ್ಟರಲ್ಲಿ ಕತ್ತಲಾಗಿತ್ತು. ರಾತ್ರಿ ಅಲ್ಲಿಂದ ಹೊರಡುವ ರೈಲೊಂದನ್ನು ಏರಿ ಇಂಗ್ಲೆಂಡಿನ ವಾಯುವ್ಯ ಭಾಗದಲ್ಲಿರುವ "ಲೇಕ್ ಡಿಸ್ಟ್ರಿಕ್ಟ್" ನೋಡಲು ತೆರಳಿದೆವು. ಕಂಬ್ರಿಯಾ ಎಂದು ಕರೆಯಲಾಗುವ ಪ್ರಾಂತದಲ್ಲಿರುವ ಈ ಸರೋವರ ಪ್ರಾಂತ ಬ್ರಿಟನ್ನಿನ ಅತಿ ಸುಂದರ ಪ್ರದೇಶ. ಸುಮಾರು 2000 ಕಿಲೋ ಮೀಟರ್ ವಿಸ್ತೀರ್ಣವಿರುವ ಲೇಕ್ ಡಿಸ್ಟಿಕ್ಟ್ (ಸರೋವರ ಪ್ರಾಂತ) ದಲ್ಲಿ ನೋಡಿದಂತಹ ದೃಶ್ಯಗಳಿಂದ ಪುಳಕಿತರಾಗಿಯೇ ಕವಿಗಳಾದ ವರ್ಡ್ಸ್‌ವರ್ತ್, ಕೋಲರಿಜ್ ಹಾಗೂ ರಾಬರ್ಟ್ ಸೌಥೇ ಈ ಪ್ರದೇಶದಲ್ಲೇ ಮನೆ ಮಾಡಿ ರೊಮ್ಯಾಂಟಿಕ್ ಕವಿತೆ ಬರೆದರು. ಹತ್ತೊಂಬತ್ತನೆಯ ಶತಮಾನದ ಆದಿ ಭಾಗದಲ್ಲಿ ಇವರು ಇಂಗ್ಲಿಷ್ ಸಾಹಿತ್ಯಕ್ಕೇ ಒಂದು ವಿಶೇಷ ಆಯಾಮ ನೀಡಿದರು.

ಲೇಕ್ ಡಿಸ್ಟ್ರಿಕ್ಸ್‌ನಲ್ಲಿ ಅದರ ಹೆಸರೇ ಹೇಳುವಂತೆ ಸರೋವರಗಳು ಇವೆ. "ಯು" ಆಕಾರದ ಕೊಳ್ಳಗಳಲ್ಲಿ ಇರುವ ಈ ಸರೋವರಗಳಲ್ಲಿ ಪ್ರಮುಖವಾದವು ವಿಂಡರ್‌ಮಿಯರ್, ಡರ್‌ವೆಂಟ್ ವಾಟರ್, ಕೋನಿಸ್ಟನ್ ವಾಟರ್, ಉಲ್ಸ್‌ವಾಟರ್, ಕ್ರಮಕ್ ವಾಟರ್ ಇತ್ಯಾದಿ. 750 ಎಕರೆ ವಿಸ್ತೀರ್ಣವಿರುವ ಉಲ್ಸ್‌ವಾಟರ್ ಸರೋವರವನ್ನು 1906ರಲ್ಲಿಯೇ ರಾಷ್ಟ್ರೀಯ ಉದ್ಯಾನವನ ಎಂದು ಘೋಷಿಸಲಾಗಿದ್ದು ಈ ಸರೋವರದ ದೃಶ್ಯ ನೋಡಲೆಂದೇ ಕೋಟಿಗಟ್ಟಲೆ ಪ್ರವಾಸಿಗಳು ಇಲ್ಲಿಗೆ ಬರುತ್ತಾರೆ. ಸರೋವರಗಳಲ್ಲಿ ಹಲವಾರು ರೀತಿಯ ನೀರಿನ ಕ್ರೀಡೆಗಳನ್ನು ಆಡಬಹುದು. ಇಲ್ಲವೇ ದೋಣಿ ವಿಹಾರ ಮಾಡಬಹುದು. ಇಲ್ಲವೇ ಸುಮ್ಮನೆ ದಡದ ಮೇಲೆ ಕುಳಿತು ಮುಂದಿರುವ ಪ್ರಕೃತಿಯನ್ನು ಸವಿಯಬಹುದು. ಬೇಜಾರಾದರೆ ಚಾರಣ ಮಾಡಬಹುದು.

ಚಾರಣ ಆಸಕ್ತರಿಗೆ ಲೇಕ್ ಡಿಸ್ಟ್ರಿಕ್ಟ್ ಸ್ವರ್ಗವೆಂದೇ ಹೇಳಬಹುದು. ಇಲ್ಲಿಯ ಸರೋವರಗಳ ನಾಲ್ಕೂ ಕಡೆಗಳಲ್ಲಿ ಇರುವ ನಾಲ್ಕು ಬೆಟ್ಟಗಳು - ಸ್ಕಾಫೆಲ್ ಟೈಕ್, ಸ್ಕಿಡ್ ಡಾ, ಹೈ ಪೀಕ್ ಹಾಗೂ ಹೆಲ್‌ವೆಲಿನ್, ಇವುಗಳ ಸರಾಸರಿ ಎತ್ತರ 3000 ಅಡಿ! ಆದರೆ ಈ ಬೆಟ್ಟಗಳ ನಡುವೆ ನಡೆಯುವಾಗ ಎದುರಾಗುವ ಝರಿಗಳು, ಪುಟ್ಟ ಪ್ರಪಾತಗಳು, ಜಲಪಾತಗಳು, ಸ್ಲೇಟ್‌ಶಿಲೆಯ ವಿವಿಧ ರೂಪಗಳು ಪುಟ್ಟ ಪುಟ್ಟ ವಯಲೆಟ್ ಹೂಗಳು ಚಾರಣವನ್ನು ತುಂಬಾ ಆಕರ್ಷಣೀಯವಾಗಿ ಮಾಡುತ್ತವೆ.

ಒಮ್ಮೆಲೇ ತುಂಬಾ ನಯನಮನೋಹರ ದೃಶ್ಯಗಳನ್ನು ನೋಡಿ ಮನಸ್ಸು ಪುಳಕಿತವಾಗಿ ರೊಮ್ಯಾಂಟಿಕ್ ಕವಿತೆ (ನಾನು ಬರೆದಿದ್ದಲ್ಲ, ಕೋಲ್‌ರಿಜ್ ಬರೆದಿದ್ದು) ಹಾಡಲು ಆರಂಭಿಸಿದೆ. ನನ್ನ ಶ್ರೀಮತಿ "ರೀ ನೋಡ್ರೀ ಇಲ್ಲಿ ವರ್ಡ್ಸ್ ವರ್ತನ ಗೋರಿಗೆ ದಾರಿ ಎಂದು ಬರೆದಿದೆ" ಎಂದು ಅಲ್ಲಿದ್ದ ಒಂದು ಫಲಕ ತೋರಿಸಿದಳು. ಹಾಗೇ ಮುಂದೆ ಸಾಗಿದಾಗ ವರ್ಡ್ಸ್‌ವರ್ತನ ಮನೆ

ಕಾಣಿಸಿತು. ಅದನ್ನು ದರ್ಶನ ಮಾಡಿದ ನಂತರ ಹತ್ತಿರವೇ ಇದ್ದ ವರ್ಡ್ಸ್‌ವರ್ತ್ ಗೋರಿಯನ್ನೂ ನೋಡಿ, ಆತನಿಗೂ ಗೌರವ ಸಲ್ಲಿಸಿದೆ.

"ಅಂತೂ ನಿಮಗೆ ಇಷ್ಟವಾದ ಜಾಗಗಳನ್ನು ನೋಡಿದಿರಿ. ಸಾಹಿತ್ಯದ ವಿದ್ಯಾರ್ಥಿಯಾಗಿ ಇನ್ನು ನಿಮಗೆ ತೃಪ್ತಿ ಆಗಿರಬೇಕು" ಎಂದಳು ಸ್ವರ್ಣ.

"ಆಕ್ಸ್‌ಫರ್ಡ್, ಸ್ಟ್ರಾಟ್‌ಫರ್ಡ್ ಅಪಾನ್ ಏವನ್ ಹಾಗೂ ಈಗ ಲೇಕ್ ಡಿಸ್ಟ್ರಿಕ್ಟ್ ನೋಡಿ ನನಗೇನೋ ತೃಪ್ತಿ ಆಯಿತು. ಆದರೆ ಒಂದು ಮಾತು ಹೇಳಲೇ, ನಮ್ಮ ಕಾಶ್ಮೀರದ ಡಾಲ್ ಸರೋವರ ಇದರಷ್ಟೇ ಚೆನ್ನಾಗಿದೆ" ಎಂದೆ.

"ಹಿತ್ತಲಗಿಡ ಮದ್ದಲ್ಲ ಎನ್ನುವವರೇ ತಾನೇ ನಮ್ಮಲ್ಲಿ ಬಹಳಷ್ಟು ಜನ" ಎಂದಳು ಸ್ವರ್ಣ.

"ನಾನಂತೂ ಹಾಗಲ್ಲ, ಬೇರೆ ದೇಶಗಳ ಜಾಗ ನೋಡಿದರೆ ತಾನೇ ನಮ್ಮಲ್ಲಿರುವ ಜಾಗಗಳು ಎಷ್ಟು ಚೆನ್ನಾಗಿದೆ ಎಂಬ ಅರಿವು ಮೂಡುವುದು" ಎಂದು "ನಾಳೆ ನಾವು ವಿಸ್ಕಿಯ ತೌರೂರಾದ ಸ್ಕಾಟ್ಲೆಂಡ್‌ಗೆ ಹೋಗೋಣ" ಅಂದೆ.

19

ವಿಸ್ಕಿಯ ತವರೂರು ಸ್ಕಾಟ್ಲೆಂಡ್

ಯುನೈಟೆಡ್ ಕಿಂಗ್‌ಡಮ್ ಎಂದು ಕರೆಯಲಾಗುವ ರಾಷ್ಟ್ರದಲ್ಲಿ ಇಂಗ್ಲೆಂಡ್ ಹಾಗೂ ವೇಲ್ಸ್ ಅಲ್ಲದೆ ಇರುವ ಇತರ ಎರಡು ಪ್ರಾಂತಗಳು ಸ್ಕಾಟ್ಲೆಂಡ್ ಹಾಗೂ ಐರ್ಲಂಡ್. ಇವುಗಳಲ್ಲಿ ಸ್ಕಾಟ್ಲೆಂಡ್ ಪ್ರದೇಶವು ಬ್ರಿಟಿಷ್ ನಡುಗಡ್ಡೆಯ ಉತ್ತರಭಾಗದ ಮೂರನೇ ಒಂದು ಭಾಗವನ್ನು ಆಕ್ರಮಿಸಿದೆ. 1707ರಲ್ಲಿ ಇಂಗ್ಲೆಂಡ್ ಹಾಗೂ ಸ್ಕಾಟ್ಲೆಂಡ್ ರಾಷ್ಟ್ರಗಳು ಒಂದು ಗೂಡಿದ್ದು ಇಂದಿಗೂ ಎಲಿಜಬೆತ್ ರಾಣಿಯ ಗಂಡನನ್ನು ಡ್ಯೂಕ್ ಆಫ್ ಎಡಿನ್‌ಬರೋ ಎಂದೇ ಕರೆಯಲಾಗುತ್ತದೆ. ಎರಡು ರಾಷ್ಟ್ರಗಳು ಒಂದು ಗೂಡಿದ್ದರೂ ಸ್ಕಾಟ್ಲೆಂಡ್ ತನ್ನದೇ ಆದ ವಿಭಿನ್ನ ಕಾನೂನು ವ್ಯವಸ್ಥೆ ಹೊಂದಿದ್ದು ಇಲ್ಲಿಯ ಶಿಕ್ಷಣ ವ್ಯವಸ್ಥೆಯೂ ಇಂಗ್ಲೆಂಡಿಗಿಂತ ಭಿನ್ನ. ಭೌಗೋಳಿಕವಾಗಿ ಸ್ಕಾಟ್ಲೆಂಡ್ ಮೂರು ಭಾಗವಾಗಿದ್ದು ಇದನ್ನು ಉತ್ತರದ ಎತ್ತರ ಪ್ರದೇಶ, ಮಧ್ಯಭಾಗದ ತಗ್ಗು ಪ್ರದೇಶ ಹಾಗೂ ದಕ್ಷಿಣ ಎತ್ತರ ಪ್ರದೇಶ ಎಂದು ಗುರುತಿಸಲಾಗುತ್ತದೆ. ಉತ್ತರ ಭಾಗದಲ್ಲಿಯೇ ಎತ್ತರದ ಬೆಟ್ಟಗಳು ಇದ್ದು ಇಲ್ಲಿಯ ಕಣಿವೆಗಳು ನಯನಮನೋಹರವಾಗಿದ್ದು ಸ್ಕಾಟಿಷ್ ಹೈಲ್ಯಾಂಡ್‌ಗಳೆಂದು ಪ್ರಸಿದ್ಧ ಪಡೆದಿವೆ.

ಸ್ಕಾಟ್ಲೆಂಡ್ ತನ್ನ ಸರೋವರಗಳು (ಇಲ್ಲಿಯ ಭಾಷೆಯಲ್ಲಿ ಅವಕ್ಕೆ ಲೋಕ್ - Loch ಎನ್ನುತ್ತಾರೆ) ಹಾಗೂ ವೇಗವಾಗಿ ಹರಿಯುವ ನದಿಗಳಿಗೆ ಹೆಸರುವಾಸಿ. ಲೋಮೊಂಡ್ ಅತಿ ವಿಶಾಲವಾದ ಸರೋವರವಾದರೆ, ನೆಸ್ ಅತಿ ಹೆಸರಾಂತ ಸರೋವರ. ತನ್ನದೇ ಆದ ವಿಶಿಷ್ಟ ಪ್ರಾಕೃತಿಕ ಸೌಂದರ್ಯ ಹೊಂದಿರುವ ಸ್ಕಾಟ್ಲೆಂಡ್‌ನಲ್ಲಿರುವುದು ಎರಡೇ ದೊಡ್ಡ ನಗರಗಳು - ಎಡಿನ್‌ಬರ್ಗ್ ಹಾಗೂ ಗ್ಲಾಸ್ಗೋ. ಎಡಿನ್‌ಬರ್ಗ್ ಈ ಪ್ರಾಂತದ ರಾಜಧಾನಿ. ಫಿರ್ತ್ ಆಫ್ ಫೋರ್ತ್ (Firth of Forth) ಎಂಬ ನದಿ ದಡದ ಮೇಲಿರುವ ಈ ನಗರವನ್ನು ಬೆಟ್ಟಗಳ ಮೇಲೆಯೇ ಕಟ್ಟಲಾಗಿದ್ದು ಈ ನಗರವನ್ನು ನೋಡಲು ವಿಶ್ವದ ಎಲ್ಲ ಜಾಗಗಳಿಂದಲೂ ವರ್ಷಕ್ಕೆ ಎರಡು ದಶಲಕ್ಷ ಪರ್ಯಟಕರು ಬರುತ್ತಾರಂತೆ

ನಾವು ರೈಲಿನಿಂದ ಇಳಿದು ಒಂದು ಹೋಟೆಲ್‌ನಲ್ಲಿ ರೂಂ ಮಾಡಿ ಸ್ನಾನ ಉಪಹಾರದ ನಂತರ ಎಡಿನ್‌ಬರ್ಗ್ ಸುತ್ತಲು ಹೊರಟೆವು. ಮೊದಲಿಗೆ ಈ ಊರಿನ ಅತಿ ಹೆಸರಾಂತ ಅರಮನೆ ಎಡಿನ್‌ಬರ್ಗ್ ಕ್ಯಾಸಲ್‌ಗೆ ಹೋದೆವು. ಸ್ಕಾಟ್ಲೆಂಡಿನ ಮುಖ್ಯ ಕೋಟೆಯಾದ ಇದನ್ನು ಕ್ಯಾಸಲ್‌ರಾಕ್ (ನಮ್ಮ ಬೆಳಗಾವಿ - ಗೋವಾ ನಡುವಣ ಜಾಗವಲ್ಲ!) ಎನ್ನುವ ಭಾರೀ ಶಿಲೆಯ ಮೇಲೆ ನಿರ್ಮಿಸಿದ್ದಾರೆ. ಈ ಕ್ಯಾಸಲ್ ರಾಕ್ ಎದುರುಗಡೆಯೇ ಭವ್ಯವಾದ ಉತ್ತರ ಸಾಗರ

ಕಾಣುತ್ತದೆ. ಕ್ಯಾಸಲ್ ರಾಕ್‌ನ ಮೇಲೆ ಕೋಟೆ ನಿರ್ಮಿಸಿ ಹಲವಾರು ಕಟ್ಟಡಗಳನ್ನು ಚರಿತ್ರೆಯ ವಿವಿಧ ಕಾಲಗಳಲ್ಲಿ ಕಟ್ಟಿದ್ದಾರೆ. ಇದರಲ್ಲಿ ಅತಿ ಹಳೆಯದು ಹನ್ನೆರಡನೇ ಶತಮಾನದ ಮಾರ್ಗರೇಟ್ ಚಾಪೆಲ್. ಹಲವಾರು ಗೋಪುರಗಳು, ಬಂದೀಖಾನೆಗಳು ಇತ್ಯಾದಿ ಇರುವ ಈ ಸಮುಚ್ಚಯದಲ್ಲಿ ಜೇಮ್ಸ್ 4ನೇ ರಾಜ್ಯಭಾರದ ಸಮಯದಲ್ಲಿ ಕಟ್ಟಿದ ಗ್ರೇಟ್ ಹಾಲ್ ಹೆಸರಾದದ್ದು.

ಕ್ಯಾಸಲ್ ರಾಕ್‌ನಿಂದ ಹೋಲಿರೂಡ್ ಹೌಸ್‌ಗೆ (ಈ ಮನೆಯಲ್ಲಿ ಹಿಂದೆ ಅರಸರು ವಾಸಿಸುತ್ತಿದ್ದರಂತೆ) ಹೋಗಲು ನಿರ್ಮಿಸಿರುವ ರಸ್ತೆಗೆ ರಾಯಲ್ ಮೈಲ್ ಎಂದು ಕರೆಯುತ್ತಾರೆ. ಸರಿ ಸುಮಾರು ಎಲ್ಲ ಪ್ರವಾಸಿಗಳೂ ಹೋಗುವ ಈ ರಸ್ತೆಯೇ ಹಳೆಯಕಾಲದ ಎಡಿನ್ ಬರ್ಗ್‌ನ ಅತಿ ಮುಖ್ಯ ರಸ್ತೆ. ಹಳೆಯ ಎಡಿನ್‌ಬರ್ಗ್‌ನ ಇತರ ಹೆಸರಾಂತ ಸ್ಥಳಗಳೆಂದರೆ ಗೈಲ್ಸ್ ಕ್ಯಾಥೆಡ್ರಲ್, ಹಳೇ ಪಾರ್ಲಿಮೆಂಟ್ ಭವನ ಹಾಗೂ ಜಾನ್ ನಾಕ್ಸ್ ಎನ್ನುವ ಸಮಾಜ ಸುಧಾರಕನ ಮನೆ.

ಹಳೆಯ ಎಡಿನ್‌ಬರ್ಗ್ ನಗರದ ಉತ್ತರ ಭಾಗಕ್ಕೆ ಇರುವುದೇ ಹೊಸಾ ಎಡಿನ್‌ಬರ್ಗ್ ನಗರ. ಎರಡೂ ನಗರಗಳ ಮಧ್ಯಭಾಗದಲ್ಲಿ ಇರುವುದೇ ಪ್ರಿನ್ಸಸ್ ರಸ್ತೆ ಉದ್ಯಾನವನ. ಹತ್ತೊಂಬತ್ತನೇ ಶತಮಾನದ ಆದಿ ಭಾಗದಲ್ಲಿ ನಿರ್ಮಾಣವಾದ ಈ ಉದ್ಯಾನ ಅತಿ ಸುಂದರವಾಗಿದೆ. ಉದ್ಯಾನದ ಪಕ್ಕದಲ್ಲೇ ಸರ್ ವಾಲ್ಟರ್ ಸ್ಕಾಟ್ ಇವರ ನೆನಪಿನಲ್ಲಿ ಕಟ್ಟಿರುವ ಭವ್ಯ ಸ್ಮಾರಕವಿದೆ.

ಪ್ರಿನ್ಸಸ್ ರಸ್ತೆ ಈ ಊರಿನ ಫ್ಯಾಷನ್ ಕೇಂದ್ರ. ಆದರೆ ಇಲ್ಲಿನ ಅಂಗಡಿಗಳಲ್ಲಿ ನಮಗೆ ಲಂಡನ್ನಿಗಿಂತ ವಿಭಿನ್ನವಾದ ವಸ್ತುಗಳೇನೂ ಕಾಣಲಿಲ್ಲ. ಆದರೆ ನನಗೆ ಆಶ್ಚರ್ಯವಾಗಿದ್ದೇನೆಂದರೆ ಇಂದಿಗೂ ಈ ರಸ್ತೆಯಲ್ಲಿ ಜನರು ಕುದುರೆ ಸಾರೋಟಿನಲ್ಲಿ ಹೋಗುತ್ತಾರೆ. ಎಡಿನ್‌ಬರ್ಗ್ ಮೃಗಾಲಯ ಹಾಗೂ ರಾಯಲ್ ಬಟಾನಿಕಲ್ ಗಾರ್ಡನ್ ನೋಡಬೇಕಾದ ಇತರ ಸ್ಥಳಗಳು. ಇಲ್ಲಿಯ ಮೃಗಾಲಯದಲ್ಲಿ ಇಂಗ್ಲೆಂಡಿನ ಅತಿ ಹೆಚ್ಚು ಸಂಖ್ಯೆಯ ಪೆಂಗ್ವಿನ್ ಪಕ್ಷಿಗಳಿವೆ. ಈ ಊರಿನಲ್ಲಿರುವ ಹಲವಾರು ಮ್ಯೂಸಿಯಂಗಳನ್ನು ನೋಡಬೇಕಾದರೆ ತಿಂಗಳುಗಳೇ ಬೇಕು.

ಎಡಿನ್ ಬರ್ಗ್ ಆರ್ಟ್ಸ್ ಫೆಸ್ಟಿವಲ್ ಎನ್ನುವ ಅಂತರಾಷ್ಟ್ರೀಯ ಕಲಾ ಮೇಳ ಈ ಊರಿಗೆ ವಿಶ್ವ ಖ್ಯಾತಿ ತಂದಿದೆ. ಆಗಸ್ಟ್ - ಸೆಪ್ಟೆಂಬರ್‌ನಲ್ಲಿ ನಡೆಯುವ ಈ ಉತ್ಸವ ಜಗತ್ತಿನ ಅತಿ ದೊಡ್ಡ ಕಲಾ ಮೇಳ ಎಂದು ಹೆಸರುವಾಸಿಯಾಗಿದ್ದು ವಿಶ್ವವಿಖ್ಯಾತ ಕಲಾವಿದರು ಈ ಮೇಳದಲ್ಲಿ ಪಾಲ್ಗೊಳ್ಳುತ್ತಾರೆ. ನಾವು ಹೋದ ಸಮಯಕ್ಕೆ ಈ ಮೇಳ ಮುಕ್ತಾಯವಾಗಿ ಹದಿನೈದು ದಿನ ಆಗಿತ್ತು ನಮ್ಮ ಪ್ರತಿಭಾ ಪ್ರಹ್ಲಾದ್ ಕೂಡಾ ಇಲ್ಲಿ ನೃತ್ಯ ಮಾಡಿದ್ದಾರೆ.

ಎಡಿನ್‌ಬರ್ಗ್‌ನ ಎಲ್ಲ ಪ್ರಾಮುಖ್ಯ ಸ್ಥಳಗಳನ್ನೂ ಸಂಜೆಯ ಒಳಗೆ ನೋಡಿದ್ದರಿಂದ ರೈಲಿನ ಮೂಲಕ ಸ್ಕಾಟ್ಲೆಂಡ್‌ನ ಇನ್ನೊಂದು ಪಟ್ಟಣ ಗ್ಲಾಸ್ಗೋಗೆ ಹೋದೆವು. ಅಲ್ಲಿಯ ಒಬ್ಬರು ಪೊಲೀಸ್ ಅಧಿಕಾರಿ ನಮ್ಮನ್ನು ಭೇಟಿಯಾಗಿ ಅವರ ಪೊಲೀಸ್ ಅತಿಥಿಗೃಹಕ್ಕೆ ಒಯ್ದರು. ಗ್ಲಾಸ್ಗೋ ಸ್ಕಾಟ್ಲೆಂಡಿನ ಅತಿ ದೊಡ್ಡ ನಗರವಲ್ಲದೆ ಇಲ್ಲಿಯ ಆರ್ಥಿಕ ಹಾಗೂ ವಾಣಿಜ್ಯ ರಾಜಧಾನಿಯೂ ಹೌದು. ಈ ನಗರವನ್ನು 1990ರಲ್ಲಿ ಯೂರೋಪಿಯನ್ ಸಮುದಾಯವು ಯೂರೋಪಿಯನ್ ಸಾಂಸ್ಕೃತಿಕ ನಗರ ಎಂದು ನಾಮಕರಣ ಮಾಡಿದೆ ಎಂದು ನಮ್ಮ ಜತೆಗಿದ್ದ ಪೊಲೀಸ್ ಅಧಿಕಾರಿ ತಿಳಿಸಿದರು.

ಮಾರನೆಯ ದಿನ ನಾನು ಹಾಗೂ ಶ್ರೀಮತಿ ಎದ್ದ ಕೂಡಲೇ ನೋಡಿದ್ದು ಅಲ್ಲಿಯ ಪೊಲೀಸ್ ತರಬೇತಿ ಶಾಲೆ. ನಮ್ಮಲ್ಲಿ ಮಾಡುವ ಹಾಗೆಯೇ ಅಲ್ಲಿ ದಿನದ ವ್ಯಾಯಾಮ ಹಾಗೂ ಡ್ರಿಲ್

ಮಾಡಿಸುತ್ತಿದ್ದರು. ಒಂದು ವಿಷಯ ಹೇಳುವುದು ಮರೆತೆ. ಹಲವಾರು ಸ್ಕಾಟಿಷ್ ಪುರುಷರು ಪ್ಯಾಂಟ್ ಬದಲಾಗಿ ಹೆಣ್ಣು ಮಕ್ಕಳು ತೊಡುವಂತಹ ಸ್ಕರ್ಟ್ ಧರಿಸಿ, ಅದರ ಮೇಲೆ ಶರ್ಟು, ಟೈ ಧರಿಸುತ್ತಾರೆ. ಮೊಣಕಾಲಿನವರೆಗೆ ಕಾಲು ಚೀಲ ಧರಿಸುತ್ತಾರೆ! ನಮ್ಮದು ಸಾಂಸ್ಕೃತಿಕ ನಗರವಾದ್ದರಿಂದ ನೀವು ಇಲ್ಲಿಯ ಮ್ಯೂಸಿಯಂಗಳನ್ನು ಸಂದರ್ಶಿಸಿ ಎಂದ ನಮ್ಮ ಗೈಡ್. ಸರಿ ಎಂದ ನಾವು ಗ್ಲಾಸ್ಗೋ ಆರ್ಟ್ ಗ್ಯಾಲರಿಗೆ ಭೆಟ್ಟಿ ನೀಡಿದೆವು. ಈ ವಿಶ್ವವಿಖ್ಯಾತ ಮ್ಯೂಸಿಯಂ ನೋಡಲು ಪ್ರತಿ ವರ್ಷ ಹತ್ತು ಲಕ್ಷ ಜನ ಬರ್ತಾರಂತೆ. ಆರ್ಟ್ಸ್ ಗ್ಯಾಲರಿ ನೋಡಿದ ನಂತರ ಆತ ನಮ್ಮನ್ನು ಗ್ಲಾಸ್ಗೋ ರಾಯಲ್ ಕಂಸರ್ಟ್ ಹಾಲ್ ತೋರಿಸಿದ. ಇದು ಸಂಗೀತಕ್ಕೇ ಮೀಸಲಾದ ಭವನ. 1990ರಲ್ಲಿ ಕಟ್ಟಿದರಂತೆ.

ಆರನೇ ಶತಮಾನದಲ್ಲಿ ಸೇಂಟ್ ಮುಂಗೋ ಎಂಬಾತ ಚರ್ಚೊಂದನ್ನು ಗ್ಲಾಸ್ಗೋದಲ್ಲಿ ನಿರ್ಮಿಸಿ ಸ್ಕಾಟ್‌ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತಿಸಿದನಂತೆ. ಹನ್ನೆರಡನೇ ಶತಮಾನದಲ್ಲಿ ಮರುನಿರ್ಮಾಣವಾದ ಈ ಚರ್ಚ್ ಇನ್ನೂ ಇದೆ. ನಗರದ ಮಧ್ಯಭಾಗದಲ್ಲಿರುವ ಜಾರ್ಜ್ ಚೌಕದಲ್ಲಿ ಇರುವ ಹಲವಾರು ಕಟ್ಟಡಗಳು ಇಟಾಲಿಯನ್ ರಿನೈಸಾನ್ಸ್ ಶೈಲಿಯಲ್ಲಿ ಇದೆ. ಗ್ಲಾಸ್ಗೋ ಕ್ಯಾಥೆಡ್ರಲ್ ಕೂಡಾ ಇನ್ನೊಂದು ಹೆಸರುವಾಸಿ ಪುರಾತನ ಚರ್ಚ್.

ಇಲ್ಲಿಯ ಬೊಟಾನಿಕಲ್ ಗಾರ್ಡನ್ ಕೂಡಾ ತನ್ನ ಆರ್ಕಿಡ್ ಪುಷ್ಪಗಳಿಗೆ ಇಡೀ ದೇಶದಲ್ಲಿಯೇ ಹೆಸರುವಾಸಿಯಾಗಿದೆ. ಇಲ್ಲಿಯ ಆರ್ಕಿಡ್ ಪುಷ್ಪಗಳನ್ನು ನೋಡಿ ಕಾರಿನಲ್ಲಿಯೇ ಊರನ್ನು ಸುತ್ತಿದೆವು. ಹೆಸರಾಂತ ಗ್ಲಾಸ್ಗೋ ಬಂದರನ್ನು ನೋಡಿದೆವು. ಯೂರೋಪಿನ ಅತಿ ದೊಡ್ಡ ಷಾಪಿಂಗ್ ಮಾಲ್ ಎನೋಕ್ (Enoch) ಸೆಂಟರ್ ನೋಡಿದೆವು. ಎಡಿನ್‌ಬರ್ಗ್‌ಗಿಂತ ಗ್ಲಾಸ್ಗೋ ಲವಲವಿಕೆಯ ನಗರ ಎನಿಸಿತು.

ಸ್ಕಾಟ್ಲೆಂಡ್ ಬಗ್ಗೆ ಪ್ರಸ್ತಾಪ ಬಂದಾಗ ಪ್ರತಿಯೊಬ್ಬರಿಗೂ ನೆನಪಾಗುವುದು ಸ್ಕಾಚ್ ವಿಸ್ಕಿ. ವಿಸ್ಕಿ ಎನ್ನುವ ಶಬ್ದ ಬಂದಿದ್ದೇ ಸ್ಕಾಟಿಷ್ ಭಾಷೆಯ ವಿಸ್ಲೆ ಬಿಯಥ್ ಎನ್ನುವ ಶಬ್ದದಿಂದ. ಇದಕ್ಕೆ ಅರ್ಥ ಜೀವಾಧಾರವಾದ ನೀರು ಎಂದಂತೆ! ಮೊಟ್ಟ ಮೊದಲು ಸ್ಕಾಚ್ ವಿಸ್ಕಿ ತಯಾರು ಮಾಡಿದ್ದು 1494 ರಲ್ಲಾದರೂ 1820ರ ಆಚೆಗೆ ಈ ಉದ್ಯಮ ಬೃಹದಾಕಾರವಾಗಿ ಬೆಳೆದು ವಿಶ್ವದ ಅತಿದೊಡ್ಡ ವಿಸ್ಕಿ ತಯಾರಕ ಎಂದು ಸ್ಕಾಟ್ಲೆಂಡ್ ಹೆಸರುವಾಸಿಯಾಗಿದೆ. ಕುತೂಹಲಕ್ಕಾಗಿ ನಾವು ಒಂದು ವಿಸ್ಕಿ ತಯಾರಿಕಾ ಘಟಕಕ್ಕೆ ಭೇಟಿ ನೀಡಿದೆವು. ಬಾರ್ಲಿಯನ್ನು ನೀರಿನಲ್ಲಿ ನೆನೆಸಿ, ನಂತರ ಅದು ಹುಳಿಯಾಗಲು ಈಸ್ಟ್ ಮತ್ತಿತರ ರಾಸಾಯನಿಕಗಳನ್ನು ಬೆರೆಸಿ ಅದನ್ನು ಕುದಿಸಿ ಸೋಸಿ, ಆ ನಂತರ ಬಂದ ದ್ರಾವಣವನ್ನು ಮತ್ತೊಮ್ಮೆ ಹುಳಿ ಆಗುವಂತೆ ಮಾಡಿ ಅದನ್ನು ಮತ್ತೆ ಡಬ್ಬಗಳಲ್ಲಿ ಕಾಯಿಸಿ, ಮೇಲೆ ಬರುವ ಆವಿಯನ್ನು ಪೈಪುಗಳ ಮೂಲಕ ಚಲಿಸುವಂತೆ ಮಾಡಿ ಆ ಆವಿ ತಣ್ಣಗಾಗುತ್ತಾ ದ್ರವ ರೂಪದಲ್ಲಿ ಹೊರ ಬಂದ ಮೇಲೆ ಮರದ ದೊಡ್ಡ ದೊಡ್ಡ ಬ್ಯಾರಲ್‌ಗಳಲ್ಲಿ ಹಲವಾರು ವರ್ಷಗಳು ಇಡಲಾಗುತ್ತದೆ. ಆ ನಂತರವೇ ಅವುಗಳನ್ನು ಬಾಟಲ್‌ಗಳಿಗೆ ಹಾಕಿ ಮಾರಾಟ ಮಾಡುತ್ತಾರಂತೆ. ನಿಮ್ಮ ದೇಶ ನಕಲಿ ಸ್ಕಾಚ್ ವಿಸ್ಕಿಗೆ ಹೆಸರು ವಾಸಿ ಎಂದು ಅಲ್ಲಿಯ ಜನ ನನಗೆ ಚೇಷ್ಟೆ ಮಾಡಿದರು.

ಸ್ಕಾಟ್ಲೆಂಡ್ ಬ್ಯಾಗ್ ಪೈಪ್ ಎನ್ನುವ ವಾದ್ಯಕ್ಕೂ ಹೆಸರುವಾಸಿ. ಚರ್ಮದ ಚೀಲದಲ್ಲಿ ಗಾಳಿಯನ್ನು ತುಂಬಿ, ಆ ಗಾಳಿ ಬಿದರಿನ ಪೈಪ್‌ಗಳಿಂದ ಹೊರ ಬಂದಾಗ ಕೊಳಲಿನಂತೆ ನಾದಗಳು ಬರುತ್ತದೆ. ಈ ರೀತಿಯ ವಾದ್ಯಗಳನ್ನು ಹಲವಾರು ಮಿಲಿಟರಿ ಹಾಗೂ ಪೊಲೀಸ್ ಬ್ಯಾಂಡ್‌ಗಳು

ಇಂದಿಗೂ ಉಪಯೋಗಿಸುತ್ತವೆ. ಸ್ಕಾಟ್ಲೆಂಡ್ ಜನ 15ನೇ ಶತಮಾನದಿಂದಲೇ ಈ ವಾದ್ಯವನ್ನು ಉಪಯೋಗಿಸುತ್ತಿದ್ದು ಈಗಲೂ ಈ ವಾದ್ಯ ಸಂಗೀತ ಹೆಸರುವಾಸಿ.

ಸ್ಕಾಟ್ಲೆಂಡ್ ಬಗ್ಗೆ ಮಾತನಾಡುವಾಗ ಸ್ಕಾಟ್ಲೆಂಡ್‌ನ ಹಿಂದಿನ ರಾಣಿ ಮೇರಿಯ ಬಗ್ಗೆ ಹೇಳಲೇಬೇಕು. 1520ರಲ್ಲಿ ಈಕೆ ಇನ್ನೂ ತೊಟ್ಟಿಲಲ್ಲಿ ಇರುವಾಗಲೇ ರಾಣಿಯ ಪಟ್ಟಕ್ಕೆ ಏರಿ 1548ರಲ್ಲಿ ವಿದ್ಯಾಭ್ಯಾಸಕ್ಕೆಂದು ಫ್ರಾನ್ಸ್‌ಗೆ ಹೋದಳು. 1561ರಲ್ಲಿ ತಾಯ್ನಾಡಿಗೆ ವಾಪಸ್ ಬಂದಾಗ ಸ್ಕಾಟ್ಲೆಂಡ್‌ನಲ್ಲಿ ರೋಮನ್ ಕ್ಯಾಥೊಲಿಕ್‌ರಿಗೂ ಪ್ರಾಟೆಸ್ಟೆಂಟರಿಗೂ ದೊಡ್ಡ ಕಾಳಗವೇ ನಡೆದಿತ್ತು. ಪ್ರಾಟೆಸ್ಟೆಂಟರು ಅಧಿಕ ಸಂಖ್ಯೆಯಲ್ಲಿ ಇದ್ದ ಸ್ಕಾಟ್ಲೆಂಡ್‌ನಲ್ಲಿ ರಾಣಿ ಮೇರಿಯನ್ನು ಕಂಡರೆ ಬಹಳ ಜನರಿಗೆ ಆಗುತ್ತಿರಲಿಲ್ಲ. 1565ರಲ್ಲಿ ಈಕೆ ಡಾರ್ನ್‌ಲೇ ಎನ್ನುವವನನ್ನು ಲಗ್ನವಾಗಿ ಅವನಿಂದ ಒಂದು ಮಗುವಿನ ತಾಯಿ ಆದ ನಂತರ ಡೇವಿಡ್ ಎಂಬುವವನೊಡನೆ ಸಂಬಂಧ ಬೆಳೆಸಿದಾಗ ಅವಳ ಗಂಡ ಡೇವಿಡ್‌ನನ್ನು ಕೊಂದನಂತೆ. ಈ ಕೋಪಕ್ಕೆ ಅವಳು ತನ್ನ ಗಂಡನನ್ನೇ ಜೇಮ್ಸ್ ಎನ್ನುವವನಿಂದ ಕೊಲೆ ಮಾಡಿಸಿ, ಜೇಮ್ಸ್‌ನನ್ನು ವಿವಾಹವಾದಳಂತೆ. ಈ ರೀತಿ ಕೆಟ್ಟ ನಡತೆ ಹೊಂದಿದ್ದರಿಂದಲೂ ಹಾಗೂ ಪ್ರಾಟೆಸ್ಟೆಂಟರ ವಿರುದ್ಧ ಮಾತನಾಡಿದ್ದರಿಂದಲೂ ಸ್ಕಾಟ್ಲೆಂಡ್ ಜನರು ಆಕೆಯ ಮೇಲೆ ದಂಗೆ ಎದ್ದು ಅವಳನ್ನು ಬಂದಿಯನ್ನಾಗಿ ಮಾಡಿ ಆಕೆಯನ್ನು ಜೈಲಿಗೆ ಹಾಕಿದರು. 1568ರಲ್ಲಿ ಜೈಲಿನಿಂದ ತಪ್ಪಿಸಿಕೊಂಡು ಇಂಗ್ಲೆಂಡ್‌ಗೆ ವಾಪಸ್ ಹೋದಳು. ಇಂಗ್ಲೆಂಡ್‌ನ ರಾಣಿ ಎಲಿಜಬತ್ ಆಕೆಯನ್ನು ಗೃಹ ಬಂದಿಯನ್ನಾಗಿ ಮಾಡಿದಳಂತೆ. ಗೃಹ ಬಂದಿಯಾಗಿದ್ದರೂ ಆಕೆ ಬ್ರಿಟಿಷ್ ರಾಣಿಯನ್ನೇ ಪಟ್ಟದಿಂದ ಉರುಳಿಸುವ ಸಂಚು ಮಾಡಿದಾಗ ಎಲಿಜಬೆತ್ ರಾಣಿ ಆಕೆಗೆ ಮರಣದಂಡನೆಯನ್ನು ವಿಧಿಸಿದಳಂತೆ. ಸಾಯುವ ದಿನ ಕೂಡ ಆಕೆ ಬೇಕೆಂತಲೇ ತಲೆಗೆ ಕೆಂಪು ಬಣ್ಣದ ವಿಗ್ ಒಂದನ್ನು ಹಾಕಿಕೊಂಡು ಗಲ್ಲಿಗೆ ಏರಿದಳಂತೆ. ಆಕೆಯ ಬಣ್ಣದ ಕಥೆ ಸ್ಕಾಟ್ಲೆಂಡ್‌ನ ಇತಿಹಾಸಕ್ಕೇ ಸಾಕಷ್ಟು ಬೆಳಕು ಚೆಲ್ಲುತ್ತದೆ.

ಒಟ್ಟಿನಲ್ಲಿ ಸ್ಕಾಟ್ಲೆಂಡ್ ತನ್ನ ಚರಿತ್ರೆ, ಜನ ಜೀವನ, ನಯನಮನೋಹರವಾದ ಜಾಗಗಳು, ಸಂಗೀತ ಹಾಗೂ ಕಲೆಗಳಿಗೆ ಹೆಸರುವಾಸಿಯಾಗಿದ್ದು ಜೀವನದಲ್ಲಿ ಒಮ್ಮೆ ನೋಡಲೇ ಬೇಕಾದ ಸ್ಥಳ. ಸಂಜೆಯವರೆಗೆ ಮನಸ್ಸು ಬಂದಂತೆ ಸುತ್ತಾಡಿ ಸಂಜೆ ವಿಮಾನ ನಿಲ್ದಾಣಕ್ಕೆ ಬಂದು ಬೆಲ್‌ಫಾಸ್ಟ್‌ಗೆ ಹೋಗುವ ವಿಮಾನ ಏರಿದೆವು.

ಒಂದು ವಿಷಯ ಹೇಳಲು ಮರೆತೇ ಬಿಟ್ಟಿದ್ದೆ. ನಮ್ಮ ಕೊಡಗು ಜಿಲ್ಲೆಯ ಹಲವಾರು ಜಾಗಗಳು ನೋಡಲು ಸ್ಕಾಟ್ಲೆಂಡಿನಂತೆಯೇ ಇವೆ.

20

ಉತ್ತರ ಐರ್ಲೆಂಡ್

ಸ್ಕಾಟ್ಲೆಂಡಿನ ಗ್ಲಾಸ್ಗೋ ವಿಮಾನ ನಿಲ್ದಾಣದಿಂದ ಹೊರಟ ನಮ್ಮ ವಿಮಾನ ಸಮುದ್ರದ ಮೇಲೆ ಹಾರಿ ಉತ್ತರ ಐರ್ಲೆಂಡಿನ ಬೆಲ್‌ಫಾಸ್ಟ್ ತಲುಪಿದಾಗ ಬೆಳಗಿನ ಹತ್ತು ಗಂಟೆ. ನಾವು ಹೊರ ಬಂದಾಗ ವಿಮಾನ ನಿಲ್ದಾಣದ ಮೂಲೆ ಮೂಲೆಗಳಲ್ಲಿಯೂ ಸಶಸ್ತ್ರಧಾರೀ ಪೊಲೀಸರು, ಸೈನಿಕರು, ಪೊಲೀಸ್ ನಾಯಿಗಳನ್ನು ಕಂಡಾಗ ಸ್ವರ್ಣ ಹೆದರಿ "ಏನ್ರೀ, ಇಲ್ಲಿ ಏನು ಗಲಾಟೆ ಇದೆಯಾ, ಏನು ಇಷ್ಟೊಂದು ಜನ ಪೊಲೀಸರು" ಎಂದಳು.

"ಹೌದಮ್ಮಾ ಈ ಊರು ನಮ್ಮ ದೇಶದ ಕಾಶ್ಮೀರ ಇದ್ದ ಹಾಗೆ" ಎಂದೆ.

"ನನಗರ್ಥವಾಗಲಿಲ್ಲ" ಎಂದಳು ಸ್ವರ್ಣ.

"ನೀನು ನೋಡಿರಬಹುದು, ನಮ್ಮ ವಿಮಾನ ಸ್ಕಾಟ್ಲೆಂಡಿನಿಂದ ಹಾರಿದಾಗ ನಾವು ಬ್ರಿಟಿಷ್ ನಡುಗಡ್ಡೆಗಳ ಮೇಲಿದ್ದೆವು. ಈಗ ಇರುವುದು ಬೇರೆಯೇ ನಡುಗಡ್ಡೆಯಾದ ಐರಿಷ್ ನಡುಗಡ್ಡೆಯ ಮೇಲೆ. ಈ ಐರಿಷ್ ನಡುಗಡ್ಡೆ ಒಂದು ಕಾಲದಲ್ಲಿ ಒಂದೇ ದೇಶವಾಗಿತ್ತು. 1949ರ ನಂತರ ಈ ದೇಶ ಎರಡು ಹೋಳಾಗಿ ಇದರ ಈಶಾನ್ಯ ಭಾಗವಾದ ಉಲ್‌ಸ್ಟರ್ ಎಂದು ಕರೆಯಲಾಗುವ ಪ್ರಾಂತ ಬ್ರಿಟನ್‌ಗೆ ಸೇರಿ ಯುನೈಟೆಡ್ ಕಿಂಗ್‌ಡಮ್‌ನ ಒಂದು ಅಂಗವಾಗಿ ಬಿಟ್ಟಿತು. ದಕ್ಷಿಣ ಭಾಗ ರಿಪಬ್ಲಿಕ್ ಆಫ್ ಐರ್ಲೆಂಡ್ ಎಂದು ಕರೆಯಲಾಗುವ ದೇಶವಾಗಿ ಉಳಿಯಿತು" ಎಂದೆ.

ಐರ್ಲೆಂಡ್‌ನ ಬಹುಪಾಲು ಜನ ರೋಮನ್ ಕ್ಯಾಥೊಲಿಕ್ ಪಂಥೀಯರು. ಉತ್ತರ ಐರ್ಲೆಂಡ್ ಬ್ರಿಟನ್ನಿನ ಭಾಗವಾದಾಗಲೂ ಇಲ್ಲಿನ ಜನ ಇದೇ ಪಂಥದವರೇ ಇದ್ದರು. ಆ ನಂತರ ಇಂಗ್ಲೆಂಡ್ ಹಾಗೂ ಸ್ಕಾಟ್ಲೆಂಡ್ ಪ್ರದೇಶಗಳಿಂದ ಹಲವಾರು ಜನ ವಲಸೆ ಬಂದು ಉತ್ತರ ಐರ್ಲೆಂಡ್‌ನಲ್ಲಿ ವಾಸಿಸತೊಡಗಿದಾಗ ಮೂಲ ನಿವಾಸಿಗಳಿಗೂ ವಲಸೆಗಾರರಿಗೂ ಘರ್ಷಣೆ ಪ್ರಾರಂಭ ಆಯಿತು. ವಲಸೆಗಾರರೆಲ್ಲರೂ ಪ್ರೊಟೆಂಸ್ಟೆಂಟ್ ಪಂಥಕ್ಕೆ ಸೇರಿದವರಾಗಿದ್ದು ಎರಡು ಬಣಗಳ ವೈಮನಸ್ಯ ಕೋಮು ವೈಮನಸ್ಯಕ್ಕೆ ತಿರುಗಿತು.

ಬ್ರಿಟಿಷರ ಆಳ್ವಿಕೆಯಲ್ಲಿ ಮೂಲ ನಿವಾಸಿಗಳಾದ ರೋಮನ್ ಕೆಥೊಲಿಕರಿಗೆ ಉದ್ಯೋಗ, ವಿದ್ಯಾಭ್ಯಾಸ, ವಸತಿ ಹಾಗೂ ಇತರ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಮೂಲನಿವಾಸಿಗಳಿಗೆ ಅನಿಸಿದಾಗ ಅವರಲ್ಲಿ ಕೆಲವರು ಮತ್ತೆ ಐರಿಷ್ ರಿಪಬ್ಲಿಕ್ ಜತೆ

ಸೇರಲು ಬಯಸಿದರು. ಇದರ ಫಲವಾಗಿ 1955ರ ವೇಳೆಗೆ ಈ ಪ್ರಾಂತದಲ್ಲಿ ಆತಂಕವಾದ ಹುಟ್ಟಿತು. ಐರಿಷ್ ರಿಪಬ್ಲಿಕನ್ ಆರ್ಮಿ (IRA) ಎಂದು ಕರೆಯಲಾಗುವ ಒಂದು ಗುಂಪು ಬ್ರಿಟಿಷ್ ಸರ್ಕಾರದ ವಿರುದ್ಧ ಸಮರ ಸಾರಿತು. ಅಲ್ಲೊಮ್ಮೆ ಇಲ್ಲೊಮ್ಮೆ ಸರ್ಕಾರದ ವಿರುದ್ಧ ಧಾಳಿಗಳು ಪ್ರಾರಂಭವಾಯಿತು. ಯಾವಾಗ ಅಶಾಂತಿ ಉಂಟಾಯಿತೋ, ಆಗ ಈ ಭಾಗದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಇನ್ನೂ ಕುಂಠಿತವಾದವು.

1970ರ ದಶಕದ ವೇಳೆಗೆ ಇಲ್ಲಿಯ ಮೂಲನಿವಾಸಿಗಳಿಗೆ ಬ್ರಿಟನ್‌ನ ಇತರ ಪ್ರಾಂತಗಳಾದ ಸ್ಕಾಟ್ಲೆಂಡ್, ವೇಲ್ಸ್ ಹಾಗೂ ಇಂಗ್ಲೆಂಡ್‌ಗಳಷ್ಟು ತಮ್ಮ ಪ್ರಾಂತ ಅಭಿವೃದ್ಧಿ ಹೊಂದಿಲ್ಲ ಎಂಬ ಬಲವಾದ ಭಾವನೆ ಬೇರೂರಿತು. ಆತಂಕವಾದ ತೀವ್ರವಾಯಿತು. ಆಗ ಬ್ರಿಟಿಷರು ಆತಂಕವಾದವನ್ನು ಹತ್ತಿಕ್ಕಲು ತಮ್ಮ ಸೈನ್ಯವನ್ನು ಇಲ್ಲಿಗೆ ಕಳಿಸಿದರು. IRA ಆತಂಕವಾದಿಗಳನ್ನು ಬ್ರಿಟಿಷ್ ಸೈನಿಕರು 1972ರಲ್ಲಿ ಲಂಡನ್‌ಡೆರಿಯಲ್ಲಿ (ಈ ಊರು ಇಲ್ಲೇ ಹತ್ತಿರದಲ್ಲಿದೆ) ಹತ್ಯೆ ಮಾಡಿದಾಗ ಅದರ ಪ್ರತೀಕಾರವಾಗಿ 1974 ರಲ್ಲಿ IRA ಸೈನಿಕರು ಬರ್ಮಿಂಗ್ ಹ್ಯಾಮ್‌ನಲ್ಲಿ ಬಾಂಬ್ ಹಾಕಿ 21 ಜನರನ್ನು ಕೊಂದರು. ಐರಿಷ್ ರಿಪಬ್ಲಿಕ್ ದೇಶ ಆತಂಕವಾದಿಗಳಿಗೆ ಪ್ರೋತ್ಸಾಹಿಸುತ್ತಿದೆ ಎಂದು ಬ್ರಿಟಿಷರ ಅನುಮಾನ" ಎಂದೆ.

"ಕಾಶ್ಮೀರದ ಆತಂಕವಾದಿಗಳಿಗೆ ಪಾಕಿಸ್ತಾನ ಪ್ರೋತ್ಸಾಹಿಸುತ್ತಿದೆ ಎಂದು ನಾವು ನಂಬುವುದಿಲ್ಲವೇ, ಇಲ್ಲಿಯೂ ಹಾಗೇ" ಎಂದಳು ಸ್ವರ್ಣ.

"ಹೌದು, ಆ ಮೇಲೆ ಸ್ವಲ್ಪ ದಿನ ಮಾತು ಕತೆಗಳ ಪ್ರಭಾವದಿಂದ ಪರಿಸ್ಥಿತಿ ತಿಳಿಯಾಯಿತು. ಆದರೆ ಇಂದಿಗೂ ಆತಂಕವಾದಿಗಳ ದಾಳಿಗಳು ಆಗೊಮ್ಮೆ ಈಗೊಮ್ಮೆ ಮುಂದುವರೆಯುತ್ತಲೇ ಇವೆ. ಅದಕ್ಕೇ ಈ ವಿಮಾನ ನಿಲ್ದಾಣದಲ್ಲಿ ಇಷ್ಟು ಭದ್ರತೆ ಇರುವುದು" ಎಂದೆ.

ರಾಯಲ್ ಉಲ್‌ಸ್ಟರ್ ಕಾನ್ಸ್‌ಟೇಬ್ಯುಲರಿ ಎಂದು ಕರೆಯಲಾಗುವ ಉತ್ತರ ಐರ್ಲೆಂಡ್ ಪೊಲೀಸರ ನೆರವಿನಿಂದ ನಾವು ಬೆಲ್‌ಫಾಸ್ಟ್‌ನಲ್ಲಿ ನಮಗಾಗಿ ಕಾದಿರಿಸಿದ್ದ ಹೋಟೆಲ್‌ಗೆ ಹೋದೆವು. ಒಂದು ಹಳೆಯ ಎಂಟು ಕೋಣೆಯ ಮನೆಯನ್ನೇ ಹೋಟೆಲ್ಲಾಗಿ ಪರಿವರ್ತಿಸಿದ್ದರು. ಈ ಊರಿಗೆ ಆತಂಕವಾದಿಗಳ ಹೆದರಿಕೆಯಿಂದ ಹೆಚ್ಚು ಸಂಖ್ಯೆಯ ಪರ್ಯಟಕರು ಬರುವುದಿಲ್ಲ ಎಂದು ತಿಳಿದು ಬಂತು. ಅದಕ್ಕೇ ಇಲ್ಲಿ ಪ್ರವಾಸೋದ್ಯಮ ಬೆಳೆದಿಲ್ಲ.

ನಾವು ಬಂದಿದ್ದ ಬೆಲ್‌ಫಾಸ್ಟ್ ನಗರ ಲಗನ್ ಎನ್ನುವ ನದಿ ಸಮುದ್ರ ಸೇರುವ ಜಾಗದಲ್ಲಿ ಇದೆ. 1177ರಲ್ಲಿ ಸ್ಥಾಪಿತವಾದ ಈ ನಗರದ ಇಂದಿನ ಜನಸಂಖ್ಯೆ ಕೇವಲ ಮೂರು ಲಕ್ಷ. ಉತ್ತರ ಐರ್ಲೆಂಡಿನ ಜನಸಂಖ್ಯೆ 16 ಲಕ್ಷ. ಅದರಲ್ಲಿ ಶೇಕಡಾ 58 ರಷ್ಟು ಜನ ವಲಸೆ ಬಂದಂತಹ ಪ್ರೊಟೆಸ್ಟೆಂಟ್ ಪಂಥೀಯರು. 1920ರಲ್ಲಿ ಬೆಲ್‌ಫಾಸ್ಟ್ ಉತ್ತರ ಐರ್ಲೆಂಡ್ ಪ್ರಾಂತದ ರಾಜಧಾನಿಯಾಯಿತಂತೆ.

ನಮ್ಮ ಕೋಣೆಯಲ್ಲಿ ಸೂಟ್‌ಕೇಸುಗಳನ್ನಿಟ್ಟು, ಮುಖ ತೊಳೆದು ನಮಗೆ ಬೆಲ್‌ಫಾಸ್ಟ್ ತೋರಿಸಲು ಬಂದಿದ್ದ ಪೊಲೀಸ್ ಅಧಿಕಾರಿಯ ಜತೆ ನಗರ ಪ್ರದಕ್ಷಿಣೆಗೆ ಹೊರಟೆವು. ಮೊದಲಿಗೆ ನಾವು ಹೋಗಿದ್ದು ಡಿಕ್ಸನ್ ಪಾರ್ಕಿಗೆ. ಈ ಉದ್ಯಾನವನದಲ್ಲಿ ಒಂದು ಲಕ್ಷ ಗುಲಾಬಿ ಗಿಡಗಳು ಇದ್ದು ತರಹೇವಾರಿ ಬಣ್ಣ ಹಾಗೂ ಸೈಜುಗಳ ಗುಲಾಬಿ ಹೂಗಳನ್ನು ನೋಡಬಹುದು. ಪ್ರತಿ

ವರ್ಷವೂ ಇಲ್ಲಿ ಗುಲಾಬಿ ಹೂಗಳ ಪ್ರದರ್ಶನ ಏರ್ಪಾಟಾಗುತ್ತದೆಯಂತೆ.

ಅಲ್ಲಿಂದ ಮುಂದೆ ಬೆಲ್‌ಫಾಸ್ಟ್‌ನ ಸಮುದ್ರದಂಡೆಯತ್ತ ಹೋದೆವು. ಈ ಪಟ್ಟಣ ಹಡಗುಗಳ ನಿರ್ಮಾಣಕ್ಕೆ ಬಹಳ ಪ್ರಸಿದ್ಧ ಪಡಿದಿದೆಯಂತೆ. 1890ರಲ್ಲೇ ಈ ಉದ್ದಿಮೆ ಪ್ರಾರಂಭವಾಯಿತು. ನಮ್ಮ ಗೈಡ್ ನಮ್ಮನ್ನು ಹಾರ್ಲೆಂಡ್ ಅಂಡ್ ವೂಲ್ಫ್ (Harland and Wolff) ಎಂಬ ಹಡಗು ನಿರ್ಮಾಣ ಸ್ಥಳಕ್ಕೆ ಕರೆದೊಯ್ದು "ನೋಡಿ, ಇದೇ ಸ್ಥಳದಲ್ಲಿಯೇ ಟೈಟಾನಿಕ್ ಹಡಗಿನ ನಿರ್ಮಾಣವಾಗಿದ್ದು" ಎಂದು ತೋರಿಸಿದ. ತನ್ನ ಪ್ರಥಮ ಯಾನದಲ್ಲಿಯೇ ಮುಳುಗಿದ ಈ ಹಡಗಿನ ಬಗ್ಗೆ ಆಗಷ್ಟೇ ಪ್ರದರ್ಶನವಾಗಿದ್ದ ಸಿನಿಮಾದಿಂದ ಸಾಕಷ್ಟು ಮಾಹಿತಿ ಪಡೆದಿದ್ದ ನನ್ನ ಶ್ರೀಮತಿ "ಈಗಲೂ ಹಡಗುಗಳನ್ನು ಇಲ್ಲಿ ಕಟ್ಟುತ್ತಾರೆಯೇ" ಎಂದು ಕೇಳಿದಾಗ "ಹೌದು" ಎಂದು ನಮ್ಮ ಗೈಡ್ ಉತ್ತರಿಸಿದ.

ಸಮುದ್ರ ತೀರ ಬಿಟ್ಟು ನಗರದ ಒಳಗೆ ಪ್ರವೇಶಿಸಿ ನಾವು ರಾಷ್ಟ್ರೀಯ ಉಲ್‌ಸ್ಟರ್ ಸಂಗ್ರಹಾಲಯಕ್ಕೆ ಹೋದೆವು. ಈ ಸಂಗ್ರಹಾಲಯ ಉತ್ತರ ಐರ್ಲೆಂಡಿನ ಜನಜೀವನದ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತದೆ. ಆ ತರುವಾಯ ನಾವು ನೇರವಾಗಿ ಬೆಲ್‌ಫಾಸ್ಟ್‌ನ ಪೊಲೀಸ್ ಮುಖ್ಯ ಕಛೇರಿಗೆ ಹೋದೆವು. ಅಲ್ಲಿಯ ಪೊಲೀಸರು ಆ ದೇಶದಲ್ಲಿ ತಾವು ಹೇಗೆ ಆತಂಕವಾದವನ್ನು ಎದುರಿಸುತ್ತಾ ಇದ್ದೇವೆ ಎಂದು ಒಂದು ಸ್ಲೈಡ್ ಪ್ರದರ್ಶನ ನೀಡಿದರು. ಆ ನಂತರ ಅವರು ನನ್ನ ಶ್ರೀಮತಿಯನ್ನು ಹೋಟೆಲ್‌ಗೆ ಕಳಸಿ ನನ್ನೊಬ್ಬನನ್ನೇ ಲಂಡನ್‌ಡೆರಿ ಪೊಲೀಸ್ ಠಾಣೆಗೆ ಕರೆದೊಯ್ದರು. ಆ ಪೊಲೀಸ್ ಠಾಣೆ ನೋಡಿದ ನಾನು ಆಶ್ಚರ್ಯಚಕಿತನಾದೆ. ಬಾಂಬುಗಳು ಆ ಕಟ್ಟಡದ ಮೇಲೆ ಬಿದ್ದರೆ ಅವು ಸಿಡಿಯದೆ ದೂರ ಹೋಗುವಂತೆ ಆ ಠಾಣೆಯ ಹೊರಭಾಗ ನಿರ್ಮಿಸಲಾಗಿದೆ. ಉಸುಕಿನ ಚೀಲಗಳ ಹಿಂದೆ ಮಷೀನ್‌ಗನ್‌ಗಳನ್ನು ಹಿಡಿದ ಪೊಲೀಸರು ನಿಂತಿದ್ದರು. ಇದನ್ನು ನೋಡಿದಾಗ ನನಗೆ ನಕ್ಸಲೀಯರು ಬಾಂಬ್ ಮಾಡಿದಂತಹ ಆಂಧ್ರ ಪ್ರದೇಶದ ಪೊಲೀಸ್ ಠಾಣೆಗಳು ನೆನಪಾದವು. ಲಂಡನ್ ಡೆರಿಯಿಂದ ಬುಲೆಟ್ ಪ್ರೂಫ್ ವಾಹನದಲ್ಲಿ ಆ ದೇಶದ ಸರಹದ್ದಿನವರೆಗೆ ನನಗೆ ಕರೆದೊಯ್ದರು. ಚೆಕ್‌ಪೋಸ್ಟಿನಲ್ಲಿದ್ದ ಸೈನಿಕರನ್ನು ಮಾತನಾಡಿಸಿ ನಾವು ಬೆಲ್‌ಫಾಸ್ಟ್‌ಗೆ ಆರ್‌ಮ್ಯಾಗ್ ಮೂಲಕ ವಾಪಸ್ಸಾದೆವು.

ಮಾರನೆಯ ದಿನ ಬೆಳಿಗ್ಗೆ ಬೇಗ ಎದ್ದು ಸಮುದ್ರದ ಪಕ್ಕದಲ್ಲೇ ಇರುವ ರಸ್ತೆಯ ಮೇಲೆ ವಾಕಿಂಗ್ ಮಾಡಿದೆ. ತುಂಬಾ ಆಹ್ಲಾದಕರವಾಗಿತ್ತು. ನಮ್ಮ ಹೋಟೆಲ್ಲಿನ ಬದಿಯಲ್ಲಿಯೇ ಇದ್ದ ಬೊಟಾನಿಕಲ್ ಗಾರ್ಡನ್ನಿನಲ್ಲಿ ವಿಹರಿಸಿದೆ. ಆ ಮೇಲೆ ಕೋಣೆಗೆ ಬಂದು ಸ್ನಾನಮಾಡಿ, ಉಪಾಹಾರ ಮಾಡಿ ನಾವಿಬ್ಬರೂ ಮತ್ತೆ ನಗರ ದರ್ಶನಕ್ಕೆ ಹೊರಟೆವು.

ನಮ್ಮ ಗೈಡ್ ನಮ್ಮನ್ನು ಸೆಂಟ್ ಆನ್ಸ್ ಕೆಥೆಡ್ರಿಲ್‌ಗೆ ಕರೆದೊಯ್ದ. ನಮ್ಮ ಯೂರೋಪ್ ಪ್ರವಾಸದಲ್ಲಿ ಪ್ರತಿ ಊರಿನಲ್ಲಿಯೂ ಇಂತಹ ಕೆಥೆಡ್ರಿಲ್‌ಗಳನ್ನು ನೋಡಿದ್ದರಿಂದ ನಮಗೆ ಹೊಸದನ್ನು ನೋಡುತ್ತಿದ್ದೇವೆ ಎಂದು ಅನ್ನಿಸಲಿಲ್ಲ. ಕೆಥೆಡ್ರಿಲ್‌ನಿಂದ ಹೊರಗೆ ಬಂದಾಗ ನಮ್ಮ ಗೈಡ್ "ನೋಡಿ ವಿಸ್ಕಿ ಪ್ರಪ್ರಥಮವಾಗಿ ತಯಾರಾಗಿದ್ದು ಐರ್ಲೆಂಡಿನಲ್ಲೇ, ಆದರೆ ಇದು ಸ್ಕಾಟ್ಲೆಂಡ್‌ಗೆ ಹೋಗಿ ಹೆಸರು ಗಳಿಸಿತು" ಎಂದ. ಆತ ಈ ನಗರದ ಕ್ರೌನ್ ಲಿಕ್ಕರ್ ಪಬ್ ತುಂಬಾ ಹೆಸರುವಾಸಿ ಎಂದು ದೂರದಿಂದಲೇ ಆ ಪಬ್ ತೋರಿಸಿದ.

ಅಲ್ಲಿಂದ ಮುಂದೆ ಬೆಲ್‌ಫಾಸ್ಟ್‌ನ ಟೌನ್ ಹಾಲ್ ಹಾಗೂ ಅಪೇರಾಹೌಸ್ ನೋಡಿದೆವು. ನಂತರ ನಮ್ಮ ಗೈಡ್ ನಮ್ಮನ್ನು ನಗರದ ಮಧ್ಯಭಾಗವಾದ ಡೊನೇಗಲ್ ಚೌಕಕ್ಕೆ ಕರೆತಂದ. ಲಂಡನ್ ಅಥವಾ ಗ್ಲಾಸ್ಗೋ ತರಹವೇ ಇಲ್ಲಿನ ಮಾರುಕಟ್ಟೆ ಪ್ರದೇಶ ಫ್ಯಾಷನಬಲ್ ಆಗಿಯೇ ಇದೆ. ಐರ್ಲೆಂಡ್ ಹತ್ತಿ ಬಟ್ಟೆಗಳಿಗೆ ಹೆಸರುವಾಸಿ ಎಂದು ಹೇಳಿದಾಗ ನಾವು ಕೆಲವು ಐಟಂಗಳನ್ನು ಖರೀದಿಸಿದೆವು.

ಪ್ರತಿವರ್ಷವೂ ಈ ಊರಿನಲ್ಲಿ ಬೆಲ್‌ಫಾಸ್ಟ್ ಉತ್ಸವ ಆಗುತ್ತದೆ. ನವಂಬರ್‌ನಲ್ಲಿ ವಿದೇಶಗಳ ಹೆಸರಾಂತ ನಾಟಕ ತಂಡಗಳು, ಸಂಗೀತ, ಬ್ಯಾಲೇ ತಂಡಗಳು ಬರುತ್ತವೆ ಎಂದ ನಮ್ಮ ಗೈಡ್.

ನಾವು ಬೆಲ್‌ಫಾಸ್ಟ್‌ನಲ್ಲಿ ನೋಡಬೇಕಾದ ಜಾಗಗಳನ್ನೆಲ್ಲಾ ನೋಡಿ ಆಗಿದ್ದರಿಂದ ಹೋಟೆಲ್‌ಗೆ ವಾಪಸ್ಸಾಗಿ ರೂಂ ಖಾಲಿ ಮಾಡಿ ವಿಮಾನ ನಿಲ್ದಾಣಕ್ಕೆ ಬಂದೆವು.

"ಈ ಊರು ನಿಜವಾಗಿ ಶ್ರೀನಗರ ಇದ್ದ ಹಾಗೆಯೇ ಇದೆ ತುಂಬಾ ಸುಂದರ ಆದರೆ ಆತಂಕವಾದದ ಕರೀ ಛಾಯೆಯಿಂದ ಇಲ್ಲಿ ಬರುವ ಪ್ರವಾಸಿಗರು ಕಡಿಮೆ ಅಲ್ಲವೇ" ಎಂದಳು ಸ್ವರ್ಣ.

"ಹೌದು, ನಾವು ಪುಣ್ಯವಂತರು, ಈ ಸುಂದರ ಊರನ್ನು ನೋಡಿದ ಹಲವೇ ಭಾರತೀಯ ಪರ್ಯಟಕರ ಪಂಕ್ತಿಗೆ ಸೇರಿದ್ದೇವೆ". ಎಂದು ಹೇಳುತ್ತಾ ವಿಮಾನವೇರಿದೆ.

21

ಇಂಗ್ಲೆಂಡಿನ ಕೆಲವು ಹೆಸರಾಂತ ಸ್ಥಳಗಳು

ಬೆಲ್‌ಫಾಸ್ಟ್ ವಿಮಾನ ನಿಲ್ದಾಣದಿಂದ ಗಗನಕ್ಕೇರಿನ ನಮ್ಮ ವಿಮಾನ ಬರ್ಮಿಂಗ್‌ಹ್ಯಾಂನಲ್ಲಿ ಇಳಿದಾಗ ಬೆಳಗಿನ 11 ಘಂಟೆ. ನಾವುಗಳು ಬರ್ಮಿಂಗ್ ಹ್ಯಾಂ ನೋಡಲು ಇಚ್ಚಿಸಿದ್ದು ಒಂದೇ ಕಾರಣಕ್ಕೆ - ಭಾರತಕ್ಕೂ ಈ ಊರಿಗೂ ಇರುವ ತಲೆತಲಾಂತರದ ನಂಟಿಗೆ.

ಬ್ರಿಟನ್ನಿನ ಎರಡನೇ ಅತಿ ದೊಡ್ಡ ಮಹಾನಗರವಾದ ಬರ್ಮಿಂಗ್‌ಹ್ಯಾಂ ಐದು ಶತಮಾನಗಳಿಂದ ಕೈಗಾರಿಕಾ ಕೇಂದ್ರವಾಗಿದ್ದು ಹದಿನಾರನೇ ಶತಮಾನದಲ್ಲಿ ಇಂಗ್ಲಿಷ್ ದಂಗೆಯ ಸಮಯದಲ್ಲಿ ಹದಿನಾರು ಸಾವಿರ ಖಡ್ಗಗಳನ್ನು ತಯಾರಿಸಿ ಪ್ರಸಿದ್ಧಿಯಾಗಿತ್ತು. ಆ ನಂತರ ಹಲವಾರು ಇಂಗ್ಲಿಷ್ ಅನ್ವೇಷಕರ ತವರೂರು (ಜೇಮ್ಸ್ ವ್ಯಾಟ್ ಹಾಗೂ ಜೆ. ಪ್ರಿಸ್ಟ್‌ಲೇ ಇಲ್ಲಿಯವರೇ) ಎಂದು ಹೆಸರಾಗಿ ಹತ್ತೊಂಬತ್ತನೆಯ ಶತಮಾನದಲ್ಲಿ ಮೋಟಾರ್ ವಾಹನಗಳ ತಯಾರಿಕೆಗೆ ಹೆಸರುವಾಸಿಯಾಯಿತು. ಜಾಗ್‌ವರ್ ಹಾಗೂ ರೋವರ್ ಕಾರುಗಳು, ಡನ್‌ಲಪ್ ಟೈರ್‌ಗಳು ಇದೇ ಊರಿನಿಂದಲೇ ತಯಾರಾಗುತ್ತವೆ. ಬ್ರಿಟನ್ನಿನ ಒಂದು ಕಾಲದ ಪ್ರಧಾನಿ ನೆವಿಲ್ ಚೆಂಬರ್‌ಲೇನ್ ಹುಟ್ಟಿದ ಈ ಊರು ಶಸ್ತ್ರಾಸ್ತ್ರಗಳಿಗೂ ಹೆಸರು ಪಡೆದಿವೆ. ಹೆಸರಾಂತ ಸಂಸ್ಥೆ BSA ಎಂದರೆ ಬರ್ಮಿಂಗ್‌ಹ್ಯಾಂ ಸ್ಮಾಲ್ ಆರ್ಮ್ಸ್ ಅಂತೆ! ಕೈಗಾರಿಕಾ ಕ್ರಾಂತಿ ಆದ ನಂತರ ಭಾರತೀಯ ಕಚ್ಚಾ ವಸ್ತುಗಳು ಬರ್ಮಿಂಗ್‌ಹ್ಯಾಂಗೆ ಬಂದು ಇಲ್ಲಿ ತಯಾರಿಸಿದ ವಸ್ತುಗಳಾಗಿ ಪರಿವರ್ತಿತಗೊಳ್ಳುತ್ತಿದ್ದವು.

ಬರ್ಮಿಂಗ್‌ಹ್ಯಾಂನಲ್ಲಿ ನೋಡುವಂತಹ ಜಾಗಗಳು ಹೆಚ್ಚೇನಿಲ್ಲ. ಇಲ್ಲಿಯ ರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ ಬ್ರಿಟನ್ನಿಗೇ ಅತಿ ದೊಡ್ಡದಾಗಿದ್ದು (ದೆಹಲಿಯ ಪ್ರಗತಿ ಮೈದಾನದಂತಿದೆ) ಇಲ್ಲಿ ಪ್ರತಿದಿನವೂ ಒಂದಲ್ಲಾ ಒಂದು ಪ್ರದರ್ಶನ ಇದ್ದೇ ಇರುತ್ತದೆ. ಬ್ರಿಟನ್ನಿನ ಪ್ರಪ್ರಥಮ ಶಾಂಪಿಗ್ ಮಾಲ್ "ಬುಲ್ ರಿಂಗ್ ಮಾರ್ಕೆಟ್" ಜನಪ್ರಿಯವಾಗಿದೆ. ತಯಾರಿಸಿದ ಆಭರಣಗಳನ್ನು ಮಾರುವ ಜುಯೆಲ್ಲರಿ ಕ್ವಾರ್ಟರ್‌ನಲ್ಲಿ ಚಿನ್ನ, ಬೆಳ್ಳಿ ಆಭರಣಗಳ ನೂರು ಅಂಗಡಿಗಳಿದ್ದು ತುಂಬಾ ಸಂದರ್ಶಕರು ಇಲ್ಲಿಗೆ ಹೋಗುತ್ತಾರೆ. ಬರ್ಮಿಂಗ್‌ಹ್ಯಾಂನ ಹೆಸರಾಂತ ಕ್ರಿಕೆಟ್ ಮೈದಾನ ಎಡ್‌ಬಾಸ್ಟನ್ ಕೂಡಾ ನಾವು ನೋಡಿದೆವು.

ಬರ್ಮಿಂಗ್‌ಹ್ಯಾಂನ ಹೊರವಲಯದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಹಲವು ಹತ್ತು ರಸ್ತೆಗಳು ಆರು ವಿವಿಧ ವಲಯಗಳಲ್ಲಿ ಒಂದಕ್ಕೊಂದು ಕೂಡಿ ಆಕಾಶದಿಂದ ಶಾವಿಗೆಯಂತೆ ಕಾಣುತ್ತದೆ. ಇದನ್ನು ನೋಡಲೆಂದೇ ನಮ್ಮಂತೆಯೇ ಹಲವಾರು ಪ್ರವಾಸಿಗಳು ಬಂದಿದ್ದರು.

ಸಂಜೆಯಾಗುವವುದರೊಳಗೆ ನಾವು ಬರ್ಮಿಂಗ್‌ಹ್ಯಾಂನಲ್ಲಿ ನೋಡಬೇಕಾದ ಸ್ಥಳಗಳನ್ನೆಲ್ಲಾ ನೋಡಿ ಮುಗಿಸಿದ್ದರಿಂದ ಅಲ್ಲಿಂದಲೇ ಬಸ್ಸಿನಲ್ಲಿ ಹಲ್ ಎನ್ನುವ ಊರಿಗೆ ಹೊರಟೆವು. ಇಂಗ್ಲೆಂಡಿನಲ್ಲಿ ಬಸ್‌ಗಳಲ್ಲಿನ ಪ್ರಯಾಣ ಬಹು ಅಗ್ಗ. ಹೋಗಿ ಬರುವ ಟಿಕೆಟ್ ಖರೀದಿಸಿದರೆ ಬೆಲೆ ಕಡಿಮೆ. ಶುಕ್ರವಾರ - ಶನಿವಾರ - ಭಾನುವಾರ ಪ್ರಯಾಣಿಸಿದರೆ ಮತ್ತೂ ಸೋವಿ. ಬಸ್ಸುಗಳೂ ತುಂಬಾ ಆರಾಮವಾಗಿದ್ದು ವಿಳಂಬ ಮಾಡದೇ ಚಲಿಸುತ್ತವೆ. ಬಸ್ಸಿನಲ್ಲೇ ಶೌಚಾಲಯವೂ ಇರುವುದರಿಂದ ಒಂದು ದಿನ ಆರು ನೂರು ಕಿ.ಮೀ. ದೂರ ಕೂಡಾ ಆಯಾಸವಿಲ್ಲದೇ ಕ್ರಮಿಸಬಹುದು.

ನಾವು ಹಲ್‌ಗೆ ಹೊರಟ ಉದ್ದೇಶವೆಂದರೆ ಅಲ್ಲಿನ ಪೊಲೀಸ್ ಅಧಿಕಾರಿಯೊಬ್ಬ ನನ್ನ ಹಳೆಯ ಮಿತ್ರನಾಗಿದ್ದರಿಂದ. ನಾನು ಗುಲ್ಬರ್ಗಾದಲ್ಲಿ ಎಸ್.ಪಿ. ಆಗಿದ್ದಾಗ ಆತ ನಮ್ಮಲ್ಲಿ ಒಂದು ವಾರ ತಂಗಿದ್ದ. ಹೀಗಾಗಿ ನಾವು ಇಂಗ್ಲೆಂಡ್‌ಗೆ ಹೋದಾಗ ತನ್ನ ಊರಿಗೆ ಬರುವಂತೆ ಬಲವಂತ ಮಾಡಿದ್ದ.

ನಾವು ಹಲ್‌ನಲ್ಲಿ ಇಳಿದ ಕೂಡಲೇ ನನ್ನ ಸ್ನೇಹಿತ ನಮ್ಮನ್ನು ಬಸ್ ನಿಲ್ದಾಣದಲ್ಲಿ ಎದುರುಗೊಂಡು ಆ ಊರಿನ ಪೊಲೀಸ್ ಅತಿಥಿ ಗೃಹಕ್ಕೆ ಕರೆದೊಯ್ದ. ಹಲ್ ನಗರದ ಪೂರ್ತಿ ಹೆಸರು ಕಿಂಗ್ಸ್ಟನ್ ಅಪಾನ್ ಹಲ್. 13ನೇ ಶತಮಾನದಲ್ಲಿ ಈ ನಗರವನ್ನು ಎಡ್ವರ್ಡ್ ರಾಜ ಆಕ್ರಮಿಸಿಕೊಂಡಾಗ ಈ ನಗರವು ಉಣ್ಣೆ ಉದ್ಯಮಕ್ಕೆ ಹೆಸರುವಾಸಿಯಾಗಿತ್ತು. ಅಲ್ಲಿರುವ ಹೋಲಿ ಟ್ರೀನಿಟಿ ಚರ್ಚ್ ಇಂಗ್ಲೆಂಡ್‌ನಲ್ಲಿಯೇ ಅತಿ ದೊಡ್ಡ ಪ್ಯಾರಿಷ್ ಚರ್ಚ್ ಎಂದು ಹೆಸರುವಾಸಿ.

ಹಂಬರ್ ನದಿ ಉತ್ತರೀ ಸಮುದ್ರವನ್ನು ಸೇರುವ ಜಾಗದಲ್ಲಿ ಹಲ್ ನಗರ ಇದೆ. ಸದ್ಯ ಈ ನಗರ ಎರಡು ಕಾರಣಕ್ಕೆ ಹೆಸರುವಾಸಿ. ಒಂದು - ಈ ನಗರ ಅಂತರರಾಷ್ಟ್ರೀಯ ಬಂದರು ಪಟ್ಟಣವಾಗಿದ್ದು ಇಲ್ಲಿಂದ ಪ್ರತಿ ವರ್ಷವೂ ಹತ್ತು ಲಕ್ಷ ಟನ್ ಸರಕು ಹಾಗೂ ಒಂದು ಲಕ್ಷ ಪ್ರಯಾಣಿಕರು ರೋಟರ್ ಡ್ಯಾಂಗೆ ಹೋಗುತ್ತಾರೆ ಹಾಗೂ ಎರಡನೆಯದು ಇಲ್ಲಿಯ ತೂಗು ಸೇತುವೆ.

ಹಲ್ ಪಟ್ಟಣದ ಮುಖ್ಯ ಆಕರ್ಷಣೆ ಹಂಬರ್ ಬ್ರಿಡ್ಜ್. ಹಂಬರ್ ನದಿಯ ಮೇಲೆ 1980ರಲ್ಲಿ ಕಟ್ಟಲಾದ ತೂಗು ಸೇತುವೆ 1996ರ ವರೆಗೆ ವಿಶ್ವದ ಅತಿ ದೊಡ್ಡ ತೂಗು ಸೇತುವೆ ಎಂದು ಪ್ರಖ್ಯಾತವಾಗಿತ್ತು. (1996ರ ನಂತರ ಡೆನ್‌ಮಾರ್ಕ್ ದೇಶದ ಇನ್ನೊಂದು ತೂಗು ಸೇತುವೆ ವಿಶ್ವದ ಅತಿ ದೊಡ್ಡ ತೂಗು ಸೇತುವೆ ಎಂದು ಪರಿಗಣಿಸಲ್ಪಟ್ಟಿದೆ) 2220 ಮೀಟರ್ ಉದ್ದವಿರುವ ಹಂಬರ್ ತೂಗು ಸೇತುವೆ ನಿಜಕ್ಕೂ ನಯನಮನೋಹರ. ನಾವು ದಂಪತಿಗಳಿಬ್ಬರೂ ಲಿಫ್ಟ್ ಮೂಲಕ ಸೇತುವೆ ಏರಿ ಅಲ್ಲಿಯ ಇಂಜಿನಿಯರ್‌ಗಳಿಂದ ತೂಗು ಸೇತುವೆ ನಿರ್ಮಾಣದ ಬಗ್ಗೆ ಹಲವಾರು ವಿಷಯಗಳನ್ನು ತಿಳಿದುಕೊಂಡೆವು.

ಮಾರನೇ ದಿನ ನಾವು ಹಂಬರ್‌ನಿಂದ ಯಾರ್ಕ್ ಎನ್ನುವ ಊರಿಗೆ ಹೊರಟೆವು. ಈ ಊರಿನಲ್ಲಿ ನಮ್ಮ ದೂರದ ಸಂಬಂಧಿ ಒಬ್ಬರು ಕಣ್ಣಿನ ತಜ್ಞರಾಗಿದ್ದರಿಂದ ಅವರ ಜೊತೆ ಒಂದು

ದಿನ ಕಳೆಯೋಣ ಎಂದು ಅಲ್ಲಿಗೆ ಹೊರಟೆವು. ಉತ್ತರ ಯಾರ್ಕ್ ಶೈರ್‌ನ ಈ ಮುಖ್ಯ ಊರು ಬರ್ಮಿಂಗ್‌ಹ್ಯಾಂ ನಂತೆ ಕೈಗಾರಿಕೆಗೆ ಪ್ರಸಿದ್ಧ. ಎರಡು ನದಿಗಳ ಸಂಗಮ ಸ್ಥಳದಲ್ಲಿರುವ ಯಾರ್ಕ್ ಚಾಕೊಲೇಟ್‌ಗಳ ತಯಾರಿಕೆ ಪ್ರಸಿದ್ಧಿ ಪಡೆದಿದೆ. ಎಲ್ಲಕ್ಕಿಂತ ಹೆಚ್ಚಾಗಿ ಯಾರ್ಕ್ ಮಿನ್‌ಸ್ಟರ್ ಎಂದು ಕರೆಯಲಾಗುವ ಸೇಂಟ್ ಪೀಟರ್ ಕೆಥಿಡ್ರಲ್‌ಗೆ ಈ ಊರು ಹೆಸರುವಾಸಿ. ಪ್ರಾಚೀನ ಕಾಲದ ಚರ್ಚ್‌ಗಳಲ್ಲಿ ಅತಿ ದೊಡ್ಡ ಚರ್ಚಾದ ಯಾರ್ಕ್ ಮಿನ್‌ಸ್ಟರ್ ನೋಡಲೆಂದೇ ಪ್ರತಿ ವರ್ಷವೂ ನಲವತ್ತು ಲಕ್ಷ ಜನ ಬರುತ್ತಾರೆ. ಕ್ರಿ.ಶ. 627 ರಲ್ಲಿ ಕಟ್ಟಲು ಪ್ರಾರಂಭಿಸಿದ ಈ ಚರ್ಚ್ 1069ರಲ್ಲಿ ಹಾಳಾದ ನಂತರ ಮತ್ತೆ 1225 ರಲ್ಲಿ ಪುನರ್‌ನಿರ್ಮಾಣ ಮಾಡಲಾಯಿತಂತೆ.

ಹಲ್ ನಿಂದ ಬಸ್‌ನಲ್ಲಿ ನಾವು ಯಾರ್ಕ್ ನಗರಕ್ಕೆ ಹೋಗಿ ಅಲ್ಲಿ ಇಳಿದ ಕೂಡಲೇ ನಮ್ಮ ಅತಿಥೇಯರು ನಮ್ಮನ್ನು ಬಸ್ ನಿಲ್ದಾಣದಿಂದ ಸೀದಾ ಯಾರ್ಕ್ ಮಿನ್‌ಸ್ಟರ್‌ಗೆ ಕರೆದೊಯ್ದರು. ಈ ವಿಶಾಲವಾದ ಚರ್ಚ್‌ನ ಪೂರ್ವ ಭಾಗಕ್ಕೆ ಇರುವ ಗಾಜಿನ ಕಿಟಕಿ ಬಹಳ ಪ್ರಸಿದ್ಧವಾಗಿದೆ. 1680ಚ. ಅಡಿ ದೊಡ್ಡದಾಗಿರುವ ಈ ಕಿಟಕಿ ಯೂರೋಪಿನಲ್ಲಿ ಅತಿ ದೊಡ್ಡ ಕಿಟಕಿ ಎಂದು ಹೆಸರು ವಾಸಿ. ಯಾರ್ಕ್‌ನಲ್ಲಿ ನೋಡಬೇಕಾದ ಇತರ ಸ್ಥಳಗಳು ರಾಷ್ಟ್ರೀಯ ರೈಲ್ವೇ ಮ್ಯೂಸಿಯಂ ಹಾಗೂ ಜೋರ್ವಿಕ್ ವೈಕಿಂಗ್ ಸೆಂಟರ್. 1984ರಲ್ಲಿ ತೆರೆಯಲಾದ ವೈಕಿಂಗ್ ಸಂಗ್ರಹಾಲಯ ವೈಕಿಂಗ್‌ಗಳು ಯಾರ್ಕ್ ನಗರವನ್ನು ಆಳುತ್ತಿದ್ದ ಕಾಲದಲ್ಲಿ ಈ ನಗರ ಹೇಗಿತ್ತು ಎಂದು ತೋರಿಸುತ್ತದೆ.

ಆ ರಾತ್ರಿ ಯಾರ್ಕ್‌ನಲ್ಲಿ ತಂಗಿದ್ದೆವು. ಮಾರನೇ ದಿನ ಬೆಳಗ್ಗೆ ಉಪಹಾರ ಆದ ಕೂಡಲೇ ನನ್ನ ಸ್ನೇಹಿತರು ನಮ್ಮನ್ನು ಯಾರ್ಕ್‌ನಿಂದ ಲೀಡ್ಸ್‌ಗೆ ಕರೆದೊಯ್ದರು. ಲೀಡ್ಸ್ ನಗರ ಇಂಗ್ಲೆಂಡ್‌ನ ಹೃದಯ ಭಾಗದಲ್ಲಿದ್ದು ಇದು ತನ್ನ ವಿಶ್ವವಿದ್ಯಾನಿಲಯಕ್ಕೆ ಹೆಸರುವಾಸಿಯಾಗಿದೆ. ಹೀಗಾಗಿ ಈ ನಗರಕ್ಕೆ ಹೋದ ಕೂಡಲೇ ನಾವು ಮೊದಲು ಲೀಡ್ಸ್ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದೆವು. ನಮ್ಮ ವಾರ್ತಾ ಸಚಿವರಾಗಿದ್ದ ಪ್ರೊ. ಬಿ.ಕೆ. ಚಂದ್ರಶೇಖರ್ ಇದೇ ವಿಶ್ವವಿದ್ಯಾಲಯದಲ್ಲಿ ಕಾನೂನು ಕಲಿಸುತ್ತಿದ್ದರು ಎಂದು ನಾನು ನನ್ನ ಶ್ರೀಮತಿಗೆ ತಿಳಿಸಿದೆ. ಲೀಡ್ಸ್ ನಗರದಲ್ಲಿರುವ ಸೆಂಟ್ ಜಾನ್ಸ್ ಆಸ್ಪತ್ರೆ ಇಡೀ ಯೂರೋಪ್‌ಗೇ ಅತಿ ದೊಡ್ಡ ಆಸ್ಪತ್ರೆ ಎಂದು ಹೆಸರಾಗಿದೆ. ಅದೂ ಅಲ್ಲದೆ ಈ ನಗರವು ಕಾನೂನು ಕಾರ್ಯಾಲಯಗಳಿಗೆ ಸಾಕಷ್ಟು ಪ್ರಸಿದ್ಧಿ. ಇಂಗ್ಲೆಂಡ್‌ನ ಹೆಸರಾಂತ ಶಿಲ್ಪಿ ಹೆನ್ರಿ ಮೂರ್ ಇಲ್ಲಿಯವನೇ. ಆತ ಕೆತ್ತಿದ ಶಿಲ್ಪಗಳು ಇರುವ ಮ್ಯೂಸಿಯಂ ದರ್ಶನ ಮಾಡಿದೆವು. ಲೀಡ್ಸ್ ನಗರದಲ್ಲಿ ಭಾರತೀಯರ ಸಂಖ್ಯೆ ಗಣನೀಯವಾಗಿ ಇರುವುದರಿಂದ ಅಲ್ಲಿ ಭಾರತೀಯ ರೆಸ್ಟೋರೆಂಟ್‌ಗಳು ಸಾಕಷ್ಟು ಇವೆ. ಭಾರತೀಯ ಭೋಜನವನ್ನು ಮಾಡಿ ಮುಗಿಸಿ, ಅಲ್ಲಿಂದ ಲಂಡನ್‌ಗೆ ಬಸ್ ಏರಿದೆವು.

ಲೀಡ್ಸ್ ನೋಡುವುದರೊಂದಿಗೆ ನಮ್ಮ ಯೂರೋಪ್ ಪ್ರವಾಸ ಮುಗಿದು ನಾವು ಅಮೇರಿಕಾಗೆ ಹೋಗುವ ಹಂತಕ್ಕೆ ಬಂದಿದ್ದೆವು.



ಡಿಸ್ನಿ ಲ್ಯಾಂಡಿನಲ್ಲಿ ಪ್ರತಿ ಸಂಜೆಯ ಪರೇಡ್



ಟಿಯುವಾನಾ (ಮೆಕ್ಸಿಕೋ)ದಲ್ಲಿ ಹೇಸರಕತ್ತೆಯ ಜತೆ



ಗ್ರ್ಯಾಂಡ್ ಕೆನ್ಯಾನ್ ಮುಂದೆ ಲೇಖಕ



ನಯಾಗರಾ ಜಲಪಾತ



ದುಬೈನ ಗೋಲ್ಡ್ ಸೂಕ್



ದಕ್ಷಿಣ ಆಫ್ರಿಕಾದ ಗುಡ್‌ಹೋಪ್ ಭೂಶಿರದ
ಮುಂದೆ ಲೇಖಕ



ಸಿಡ್ನಿಯ ಪ್ರಮುಖ ಕಟ್ಟಡ ಒಪೇರಾ ಹೌಸ್



ಸಿಂಗಪುರದ ಬಂದರು



ಬೆಲ್ಜಿಯಂನ ಮಿನಿ ಯೂರೋಪ್‌ನಲ್ಲಿ ಲೇಖಕ



ಪ್ಯಾರಿಸ್ಸಿನ ಸೀನ್ ನದಿಯ ದಡದಲ್ಲಿ ಹಿಂದೆ ಐಫೆಲ್ ಗೋಪುರ ಕಾಣಬಹುದು.



ಸ್ಕಾಟ್ಲೆಂಡಿನ ಎಡಿನ್ ಬರೋದಲ್ಲಿ ಲೇಖಕ



ಲಂಡನ್ನಿನ ಟವರ್ ಬ್ರಿಡ್ಜ್



ನ್ಯೂಯಾರ್ಕ್ ನಗರ - ವರ್ಲ್ಡ್ ಟ್ರೇಡ್ ಸೆಂಟರ್ ಕಟ್ಟಡಗಳು ಹಿನ್ನೆಲೆಯಲ್ಲಿ



ವಾಷಿಂಗ್ಟನ್ ಡಿ.ಸಿ. ಯಲ್ಲಿ



ಅಮೇರಿಕಾದ ಆರ್ಲ್ಯಾಂಡೋದಲ್ಲಿ ಹಿಂದೆ ರಿಪ್ಲೀಸ್ ಬಿಲೀವ್ ಇಟ್ ಆರ್ ನಾಟ್
ಮ್ಯೂಸಿಯಂ ಕೆಳಗೆ ಬೀಳುವಂತಿರುವ ಕಟ್ಟಡ ನೋಡಿ !



ಸ್ಯಾನ್ ಫ್ರಾನ್ಸಿಸ್ಕೋದ ಅತಿ ಕಡಿದಾದ ಬೀದಿ



ವರ್ಸೇಲ್ ಅರಮನೆ



ವಿಯನ್ನಾದ ಟೌನ್ ಹಾಲ್ ಮುಂದೆ ಲೇಖಕ



ವೆನಿಸ್‌ನ ಗ್ರ್ಯಾಂಡ್ ಕೆನಾಲ್



ವ್ಯಾಟಿಕನ್



ರೋಮ್‌ನ ಕಲೋಸಿಯಮ್



ಪೀಸಾದ ಓಲುಗೋಪುರದ ಮುಂದೆ ಲೇಖಕ ಪತ್ನಿಯೊಡನೆ



ಜೂರಿಕ್‌ನಲ್ಲಿ ಲೇಖಕರ ಪತ್ನಿ



ಫ್ರಾಂಕ್‌ಫರ್ಟಿನ ನದಿಯ ಸೇತುವೆ ಮೇಲೆ ಲೇಖಕ

22

ನ್ಯೂಯಾರ್ಕ್ ನೆನಪುಗಳು

ಲಂಡನ್ ಹೀಥ್ರೊ ವಿಮಾನ ನಿಲ್ದಾಣದಿಂದ ಹೊರಟ ನಮ್ಮ ಬ್ರಿಟಿಷ್ ಏರ್‌ವೇಸ್ ವಿಮಾನ ಪ್ರಶಾಂತ ಮಹಾಸಾಗರದ ಮೇಲೆ ಎಂಟು ಗಂಟೆಗಳ ಕಾಲ ಹಾರಾಡಿ ನ್ಯೂಯಾರ್ಕಿನ ಲಾ ಗಾರ್ಡಿಯಾ ನಿಲ್ದಾಣದಲ್ಲಿ ಇಳಿದಾಗ ಬೆಳಗಿನ ಹತ್ತು ಗಂಟೆ. ಇಮಿಗ್ರೇಷನ್ ಕ್ಯೂನಲ್ಲಿ ನಿಂತು ಹಲವಾರು ಪ್ರಶ್ನೆಗಳನ್ನು ಉತ್ತರಿಸಿ ಕಸ್ಟಮ್ಸ್‌ನ ಗ್ರಿನ್ ಚಾನೆಲ್‌ನಲ್ಲಿ ಹೊರಬರಲು ಹೊರಟಾಗ ಯೂನಿಫಾರ್ಮ್ ಧರಿಸಿದ್ದ ಒಬ್ಬ ದಢೂತಿ ಹೆಂಗಸು ನಮ್ಮಿಬ್ಬರನ್ನೇ ಪಕ್ಕಕ್ಕೆ ಕರೆದು ನಮ್ಮ ಸೂಟ್‌ಕೇಸುಗಳನ್ನು ತಪಾಸಿಸುವುದಾಗಿ ಹೇಳಿದಳು. ನಮ್ಮ ವಿಮಾನದಲ್ಲಿಯೇ ಬಂದಿಳಿದಿದ್ದ ಹಲವಾರು ಬಿಳಿಯರನ್ನು ಬಿಟ್ಟು ನಮ್ಮನ್ನೇ ತಪಾಸಿಸ ಹೊರಟದ್ದು ನನಗೆ ಸರಿ ಕಾಣಲಿಲ್ಲ. "ನಾವು ಭಾರತೀಯರೆಂದೇ ನಮ್ಮನ್ನು ಸಂಶಯದ ದೃಷ್ಟಿಯಿಂದ ನೋಡ್ತಾ ಇದ್ದಾರೆ" ಎಂದು ನಾನು ಸ್ವರ್ಣಳಿಗೆ ಹೇಳಿ ಆ ಹೆಣ್ಣು ಮಗಳು ತೋರಿಸಿದ ಜಾಗದಲ್ಲಿ ನಮ್ಮ ಸೂಟ್‌ಕೇಸುಗಳನ್ನಿಟ್ಟೆ. ಎಕ್ಸ್‌ರೇ ಮಶೀನ್ ಮೂಲಕ ಅವನ್ನು ಹಾಯಿಸಿದ ನಂತರ ಆಕೆಗೆ ತೃಪ್ತಿ ಆಯಿತು. ನಮ್ಮ ಕೈಚೀಲಗಳಲ್ಲಿ ಏನಿದೆ ಎಂದು ಒಮ್ಮೆ ನೋಡಿ ನಾವು ಸ್ಮಗ್ಲರ್‌ಗಳಲ್ಲ ಎಂದು ಖಾತ್ರಿ ಮಾಡಿಕೊಂಡು ನಮ್ಮನ್ನು ಹೋಗಲು ಬಿಟ್ಟಳು.

ವಿಮಾನ ನಿಲ್ದಾಣದ ಹೊರಗೆ ನನ್ನ ತಂಗಿ ಸಂಸಾರದೊಂದಿಗೆ ನಮ್ಮನ್ನೆದುರುಗೊಂಡಳು. ಆಕೆ ಹಾಗೂ ನನ್ನ ಭಾವ ನ್ಯೂಯಾರ್ಕಿನಲ್ಲಿಯೇ ನೌಕರಿ ಮಾಡ್ತಾ ಇದ್ದಾರೆ. "ಏಕೆ ಹೊರಗೆ ಬರುವುದು ಇಷ್ಟು ತಡ ಆಯ್ತು" ಎಂದಳು. ಆದ ಘಟನೆ ಹೇಳಿದೆ. "ಹೌದು, ಇಲ್ಲಿಗೆ ಬರುವ ಹಲವಾರು ಭಾರತೀಯರು ಖೋಟಾ ಪಾಸ್‌ಪೋರ್ಟ್‌ಗಳ ಮೇಲೆ ಬರ್ತಾರೆ. ಮಾದಕ ವಸ್ತುಗಳು ಹಾಗೂ ಇತರ ಬ್ಯಾನ್ ಆದ ವಸ್ತುಗಳನ್ನು ತರ್ತಾರೆ. ನಮ್ಮ ದೇಶದವರು ಈ ರೀತಿ ಪದೇ ಪದೇ ಮಾಡುವುದರಿಂದಲೇ ಎಲ್ಲ ಭಾರತೀಯುರನ್ನೂ ಸಂಶಯದ ದೃಷ್ಟಿಯಿಂದಲೇ ಇಲ್ಲಿ ನೋಡ್ತಾರೆ" ಎಂದು ಹೇಳಿದಳು. "ನಮ್ಮ ಮನೆ ಇಲ್ಲೇ ಹತ್ತಿರದಲ್ಲಿದೆ" ಎಂದವರು ನಮ್ಮನ್ನು ಮನೆಗೆ ಕರೆದೊಯ್ದರು. ದಾರಿಯಲ್ಲಿ ಬೃಹತ್ ಆಕಾರದಲ್ಲಿ ಕಾಣುತ್ತಿದ್ದ ಒಂದು ಕಟ್ಟಡ ತೋರಿಸಿ "ಅದೇ ನೋಡು ಆರ್ಥರ್ ಆ್ಯಶ್ ಸ್ಟೇಡಿಯಂ. ಅಲ್ಲೇ ಅಮೇರಿಕನ್ ಓಪನ್ ಟೆನ್ನಿಸ್ ಆಟಗಳು ನಡೆಯುವುದು" ಎಂದರು. "ಓಹೋ, ಇದು ಫ್ಲಷಿಂಗ್ ಮೆಡೋಸ್" ಎಂದಳು ಸ್ವರ್ಣ. "ಹೌದು, ನಮ್ಮ ಮನೆ ಇರುವುದು ಫ್ಲಷಿಂಗ್ ಪ್ರಾಂತ್ಯದಲ್ಲೇ ಎಂದಳು ನನ್ನ ತಂಗಿ.

ವಿಮಾನದಲ್ಲಿ ಚೆನ್ನಾಗಿ ನಿದ್ದೆ ಮಾಡಿದ್ದರಿಂದ ಜೆಟ್ ಲ್ಯಾಗ್ ಆಗಿರಲಿಲ್ಲ. ಬಿಸಿ ಬಿಸಿ ನೀರಿನಲ್ಲಿ ಸ್ನಾನ ಮುಗಿಸಿ ತಯಾರಾಗುವಷ್ಟರಲ್ಲಿ ನನ್ನ ತಂಗಿ ದೋಸೆ ಮಾಡಿದ್ದಳು. ಭಾರತ ಬಿಟ್ಟ ನಂತರ ಅಂದೇ ಮೊದಲ ಬಾರಿ ದೋಸೆ ತಿಂದದ್ದು. ಕಂಠಪೂರ್ತಿ ದೋಸೆ ತಿಂದು ಊರು ನೋಡಲು ಹೊರಟೇ ಬಿಟ್ಟವು. ಸಬರ್ಬನ್ ರೈಲ್ವೆ ಸ್ಟೇಷನ್‌ಗೆ ಹೋದೆವು. ನನ್ನ ತಂಗಿ ಕುಟುಂಬದ ಎಲ್ಲರ ಬಳಿಯೂ ರೈಲಿನಲ್ಲಿ ಓಡಾಡುವ ಸೀಸನ್ ಟಿಕೇಟುಗಳು ಇದ್ದುದ್ದರಿಂದ ನಮ್ಮಿಬ್ಬರಿಗೆಂದೇ ಒಂದು ವಾರ ಉಪಯೋಗಿಸಬಹುದಾದಂತಹ ಪಾಸ್ ಕೊಡಿಸಿದರು. ಈ ಪಾಸಿನಲ್ಲಿ ನೀವು ಬಸ್ ಅಥವಾ ರೈಲಿನಲ್ಲಿ ನ್ಯೂಯಾರ್ಕ್ ನಗರದಲ್ಲಿ ಮುಂದಿನ ಒಂದು ವಾರ ಎಷ್ಟು ಬಾರಿ ಬೇಕಾದರೂ ಪ್ರಯಾಣ ಮಾಡಬಹುದು ಎಂದರು. ನೆಲದ ಒಳಗೆ ಸಂಚರಿಸುವ ಟ್ಯೂಬ್ ರೈಲು ಬಂದ ಕೂಡಲೇ ನಾವು ಅದರಲ್ಲಿ ಆಸೀನರಾದೆವು. ಮುಂದಿನ ನಲವತ್ತು ನಿಮಿಷ ಈ ರೈಲಿನಲ್ಲೇ ಪ್ರಯಾಣ.

ನಮ್ಮ ಡಬ್ಬಿಯಲ್ಲಿ ಬಂದು ಹೋಗುವವರನ್ನೇ ನಾನು ದಿಟ್ಟಿಸಿ ನೋಡ್ತಾ ಇದ್ದೆ. ಕಾರಣ ಇಷ್ಟೇ - ಈ ನ್ಯೂಯಾರ್ಕ್ ಭೂಗತ ರೈಲುಗಳಲ್ಲಿ ಹಿಂದೊಮ್ಮೆ ಭೂಗತ ಸಾಮ್ರಾಜದ ಜನರದ್ದೇ ಕಾರುಬಾರು ಆಗಿತ್ತು. ಸುಮಾರು ಎರಡು ವರ್ಷಗಳ ಕೆಳಗೆ ನಮ್ಮ ಸಂಬಂಧಿಕರೊಬ್ಬರಿಗೆ ಹಿಗ್ಗಾ ಮುಗ್ಗಿ ಹೊಡೆದು ಆತನ ಬಳಿಯಿದ್ದ ಒಂದು ವಾಚು ಹಾಗೂ ಹದಿನೈದು ಡಾಲರ್ ನಗದನ್ನು ರೈಲು ಡಬ್ಬಿಯಲ್ಲಿ ಕಸಿದುಕೊಂಡಿದ್ದರು. ಪಾಪ ಆತ ಒಂದು ತಿಂಗಳವರೆಗೆ ಆಸ್ಪತ್ರೆಯಲ್ಲಿರಬೇಕಾಗಿತ್ತು. ನನ್ನ ಮನಸ್ಸನ್ನು ಓದಿದ ನನ್ನ ತಂಗಿ, "ಈಗ ಪರಿಸ್ಥಿತಿ ಬದಲಾಗಿದೆ ನ್ಯೂಯಾರ್ಕ್ ನಗರದ ಪೊಲೀಸರು ಎಚ್ಚೆತ್ತು ಹಲವಾರು ಕ್ರಿಮಿನಲ್‌ಗಳನ್ನು ಬಂಧಿಸಿ ಅಪರಾಧಗಳಿಗೆ ಸಾಕಷ್ಟು ಕಡಿವಾಣ ಹಾಕಿದ್ದಾರೆ. ನೀವು ಹೆದರಬೇಕಾದ್ದಿಲ್ಲ" ಎಂದಳು.

ನಮ್ಮ ಸಹಪ್ರಯಾಣಿಕರು ಎಂತಹವರು ಎಂದು ಪರಿಶೀಲಿಸಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕರಿಯರಿದ್ದರು. ಅವರು ಮಧ್ಯಮ ವರ್ಗ ಅಥವಾ ಬಡ ವರ್ಗಕ್ಕೆ ಸೇರಿದವರೆಂದು ಹೇಳಬಹುದಾಗಿತ್ತು. ಅವರನ್ನು ಬಿಟ್ಟರೆ ಲ್ಯಾಟಿನೋಗಳು, ಅಂದರೆ ದಕ್ಷಿಣ ಅಮೇರಿಕಾ ಖಂಡದ ಜನ. "ಅಮೇರಿಕಾ ದೇಶದಲ್ಲಿ ಸ್ಪಾನಿಷ್ ಭಾಷೆ ಎರಡನೆಯ ಅಧಿಕೃತ ಭಾಷೆ ಗೊತ್ತಾ ಮಾಮಾ" ಎಂದಳು ನನ್ನ ತಂಗಿಯ ಮಗಳು ಶ್ರೇಯಾ. "ಹೌದಾ" ಎಂದೆ ಅಚ್ಚರಿಯಿಂದ. ಅವರನ್ನು ಬಿಟ್ಟರೆ ಯೂರೋಪಿಯನ್ನರು. ಆ ನಂತರ ಏಷ್ಯಾ ದೇಶದವರು. ರೈಲಿನಲ್ಲಿ ಬಂದ ಹಲವಾರು ಯುವಕ ಯುವತಿಯರು ವಾಕ್‌ಮ್ಯಾನ್ ಮೂಲಕ ಸಂಗೀತ ಕೇಳುತ್ತಿದ್ದರೆ ಇತರ ಕೆಲವರು ಪೇಪರ್ ಅಥವಾ ಕಾದಂಬರಿ ಓದುತ್ತಾ ಇದ್ದರು. ನನಗೆ ಮೋಜು ಎನಿಸಿದ್ದು ನಮ್ಮ ದೇಶದಲ್ಲಿ ಇರುವ ಹಾಗೆ ಇಲ್ಲಿಯೂ ವ್ಯಾಪಾರಿಗಳ ಕಾಟ. ಟಾರ್ಚ್‌ಸೆಲ್‌ಗಳು ನೈಲಾನ್ ಕಾಲುಚೀಲ ಕನ್ನಡಕ ಹೀಗೆ ಹಲವು ಹತ್ತು ವಸ್ತುಗಳ ಮಾರಾಟಗಾರರು ರೈಲಿನಲ್ಲೇ ವ್ಯಾಪಾರ ಕುದುರಿಸುತ್ತಾರೆ. ನಾನು ಪೆನ್ನೊಂದನ್ನು ಖರೀದಿಸಲು ಹೊರಟಾಗ ನನ್ನ ತಂಗಿ "ಅಣ್ಣಾ ಇವೆಲ್ಲಾ ಡೂಪ್ಲಿಕೇಟ್ ಮಾಲು, ಇಲ್ಲ ಚೀನಾದಿಂದ ಬಂದ ವಸ್ತುಗಳು ಖರೀದಿಸಬೇಡ" ಎಂದು ತಡೆದಳು.

ನ್ಯೂಯಾರ್ಕಿನ ಗ್ರಾಂಡ್ ಸೆಂಟ್ರಲ್ ಸ್ಟೇಷನ್ನಿನಲ್ಲಿ ಇಳಿದ ನಾವು ಇನ್ನೊಂದು ರೈಲನ್ನೇರಿ ಬ್ಯಾಟರಿ ಪಾರ್ಕ್ ಸ್ಟೇಷನ್ನಿನಿಂದಿಳಿದು ಹೊರಬಂದ ಕೂಡಲೇ ನನ್ನ ತಂಗಿ "ಅಮೇರಿಕಾ ಪ್ರವಾಸವನ್ನು ನೀವು ಪ್ರಾರಂಭ ಮಾಡುವುದು ಸ್ಟಾಚ್ಯೂ ಆಫ್ ಲಿಬರ್ಟಿ ದರ್ಶನದಿಂದ - ಏಕೆ ಎಂದರೆ ವ್ಯಕ್ತಿ ಸ್ವಾತಂತ್ರಕ್ಕೆ ಹೆಚ್ಚು ಮಹತ್ವಕೊಡುವ ಈ ದೇಶಕ್ಕೆ ಯೂರೋಪಿಯನ್ ಜನ ಮೊದಲಿಗೆ ವಲಸೆ

ಬಂದಿದ್ದು ಇಲ್ಲಿನ ಪಶ್ಚಿಮ ತೀರಕ್ಕೇ. ಎದುರಿಗೆ ಕಾಣುವ ಎಲ್ಲಿಸ್ ನಡುಗಡ್ಡೆ 1892 ರಿಂದ 1954ರ ವರೆಗೆ ವಲಸೆಗಾರರು ಅಮೇರಿಕಾಗೆ ಪ್ರಪ್ರಥಮವಾಗಿ ಕಾಲಿಡುವ ಜಾಗವಾಗಿತ್ತು. ಹಲವಾರು ಬಣ್ಣಗಳು, ಭಾಷೆಗಳು. ಆಚಾರ ವಿಚಾರಗಳ ಜನರನ್ನು ತನ್ನ ಮಡಿಲಲ್ಲಿ ಹಾಕಿಕೊಂಡು ಇಂದಿಗೂ ವಿಶ್ವದ ಎಲ್ಲಾ ಭಾಗಗಳಿಂದ ಜನರನ್ನು ತನ್ನತ್ತ ಸೂಜಿಗಲ್ಲಿನಂತೆ ಸೆಳೆಯುತ್ತಿರುವ ಈ ದೇಶದಲ್ಲಿ ಏನೋ ಆಕರ್ಷಣೆ ಇದೆ" ಎಂದಳು. "ನಿನ್ನ ಲೆಕ್ಚರ್ ಮುಗಿಯಿತಾ" ಎಂದು ಕೇಳಿದ ಭಾವ ನಮ್ಮೆಲ್ಲರಿಗೂ ಫೆರ್ರಿಯಲ್ಲಿ ಹೋಗಲು ಟಿಕೆಟ್‌ಗಳನ್ನು ತಂದಿದ್ದ.

ನಾವು ಬೃಹದಾಕಾರದ ದೋಣಿಯಲ್ಲಿ ಕೂತ ಕೂಡಲೇ "ಏನು ಗುರುಪ್ರಸಾದ್ ಹೇಗಿದ್ದೀರಿ?" ಎಂಬ ಕನ್ನಡ ಮಾತು ಕೇಳಿ ಆಶ್ಚರ್ಯದಿಂದ ಹೊರಳಿ ನೋಡಿದರೆ ನಮ್ಮ ಮನೆ ಬಳಿ ಇರುವ ಡಾಕ್ಟರ್ ನಾಗೇಶ್ ಕಂಡರು. "ನಾನು ನಾಳೆಯಿಂದ ಇಲ್ಲಿ ಆರಂಭವಾಗುವ ಒಂದು ಸಮ್ಮೇಳನದಲ್ಲಿ ಭಾಗಿಯಾಗಲು ಬಂದೆ" ಎಂದರು. ಅವರು ಹಾಗೂ ಅವರ ಗೆಳೆಯ ನಮ್ಮೊಡನೆ ಕಲೆತದ್ದು ಖುಷಿಯಾಯಿತು.

ಫೆರ್ರಿ ಚಲಿಸಲಾರಂಭಿಸಿದಂತೆಯೇ ನ್ಯೂಯಾರ್ಕಿನ ಭಾರೀ ಭಾರೀ ಕಟ್ಟಡಗಳು ಗೋಚರಿಸಿದವು. ನನ್ನ ತಂಗಿ "ಎದುರಿಗೆ ಕಾಣುತ್ತಿರುವ ಕಟ್ಟಡಗಳೇ ವರ್ಡ್ ಟ್ರೇಡ್ ಸೆಂಟರ್, ಎಂಪೈರ್ ಸ್ಟೇಟ್ ಕಟ್ಟಡಕ್ಕಿಂತ ಎತ್ತರವಾಗಿದೆ. ಒಂದು ಕಾಲಕ್ಕೆ ವಿಶ್ವದ ಅತ್ಯುನ್ನತ ಕಟ್ಟಡ ಎಂದು ಹೆಸರಾಗಿತ್ತು ಈಗಿಲ್ಲ" ಎಂದು ಎದುರಿನ ದೃಶ್ಯಗಳನ್ನು ವಿವರಿಸುತ್ತಾ ಹೊರಟಳು. ಇಷ್ಟರಲ್ಲಿ ನಮ್ಮ ದೋಣಿ ಲಿಬರ್ಟಿ ದ್ವೀಪದ ದಡ ಸೇರಿತು.

ಈ ದ್ವೀಪದ ಮುಖ್ಯ ಆಕರ್ಷಣೆ ಬಿಳಿಯ ಬಣ್ಣದ ಹರಿಯುವ ಕೋಟ್ ಧರಿಸಿ. ತಲೆಗೆ ಮುಳ್ಳಿನ ಕಿರೀಟ ಧರಿಸಿರುವ ಸ್ವಾತಂತ್ರ್ಯ ದೇವತೆಯ ಮೂರ್ತಿ. ಈ ಮೂರ್ತಿಯ ಬಲಗೈಯಲ್ಲಿ ಎತ್ತಿ ಹಿಡಿದ ಉರಿಯುವ ಪಂಜು ಇದ್ದರೆ ಎಡಗೈಯಲ್ಲಿ ಜುಲೈ 4, 1776 ಎಂದು ಬರೆದಿರುವ ಪುಸ್ತಕವಿದೆ. ಮೂರ್ತಿಯ ಕಾಲಬಳಿ ಮುರಿದಿರುವ ಸಂಕೋಲೆಗಳಿವೆ. 1876ರಲ್ಲಿ ಅಮೇರಿಕಾ ಸ್ವಾತಂತ್ರ್ಯದ ಶತಮಾನೋತ್ಸವದ ಸಂದರ್ಭದಲ್ಲಿ ಫ್ರಾನ್ಸ್ ದೇಶ ತನ್ನ ಶಿಲ್ಪಿ ಫ್ರೆಡರಿಕ್ ಬರ್ಥೋಲ್ಡಿ ಎನ್ನುವವನ ಕೈಯಲ್ಲಿ ಈ ಮೂರ್ತಿಯನ್ನು ಕೆತ್ತಿಸಿ ಅಮೇರಿಕಾ ದೇಶಕ್ಕೆ ಬಳುವಳಿ ನೀಡಿತು. ಈ ಮೂರ್ತಿ ತಯಾರಿಕೆಗೆ ಆದ ಖರ್ಚನ್ನು ಫ್ರೆಂಚ್ ಜನರು ಚಂದಾ ಮೂಲಕ ತುಂಬಿಕೊಟ್ಟರು.

ಕಬ್ಬಿಣದ ಫ್ರೇಮ್‌ಗೆ ತಾಮ್ರದ ತಗಡುಗಳನ್ನು ಜೋಡಿಸಿ ಮಾಡಿರುವ ಸ್ವಾತಂತ್ರ ದೇವತೆಯ ಮೂರ್ತಿ 250 ಟನ್ ತೂಕವಿದ್ದು ಇದರ ಎತ್ತರ (ಪಂಜಿನ ತುದಿಯಿಂದ ಮೂರ್ತಿ ನಿಲ್ಲಿಸಿರುವ ಸ್ಟಾಂಡ್ ತನಕ) 93.5 ಮೀಟರ್. ಮೂರ್ತಿಯ ಎತ್ತರವೇ 46.4 ಮೀಟರ್. ಇದು ವಿಶ್ವದ ಅತಿ ದೊಡ್ಡ ಮೂರ್ತಿಗಳಲ್ಲೊಂದಾಗಿದೆ.

ಅತಿ ಸಮೀಪದಿಂದ ಸ್ವಾತಂತ್ರ ದೇವತೆ ಮೂರ್ತಿಯ ದರ್ಶನ ಪಡೆದ ನಾವು ಮತ್ತೆ ದೋಣಿಯನ್ನೇರಿ ಎಲ್ಲಿಸ್ ನಡುಗಡ್ಡೆಗೆ ಹೊರಟೆವು. ಅಮೇರಿಕಾಗೆ ಹತ್ತೊಂಬತ್ತನೇ ಶತಮಾನದಲ್ಲಿ ವಲಸೆಗಾರರು ಬಂದಾಗ ಈ ನಡುಗಡ್ಡೆ ಹೇಗಿತ್ತು. ವಲಸೆಗಾರರು ಹೇಗಿದ್ದರು ಎಂದು ನಿರೂಪಿಸುವ ಮ್ಯೂಸಿಯಂ ಇಲ್ಲಿದೆ. ಮ್ಯೂಸಿಯಂ ನೋಡಿ ಮತ್ತೆ ನ್ಯೂಯಾರ್ಕ್ ನಗರಕ್ಕೆ ದೋಣಿಯಲ್ಲಿ ವಾಪಸಾದೆವು.

23

ನ್ಯೂಯಾರ್ಕ್‌ನ ಮ್ಯಾನ್‌ಹಟನ್

ಸ್ವಾತಂತ್ರ ದೇವತೆಯ ಪ್ರತಿಮೆಯನ್ನು ನೋಡಿದ ನಂತರ ದೋಣಿಯಲ್ಲಿ ಮತ್ತೆ ನ್ಯೂಯಾರ್ಕ್ ನಗರದ ಮ್ಯಾನ್ ಹಟನ್ ಪ್ರದೇಶಕ್ಕೆ ವಾಪಸ್ಸಾದೆವು. ನ್ಯೂಯಾರ್ಕ್ ನಗರವನ್ನು ಐದು ದೊಡ್ಡಬಡಾವಣೆಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ - ಕ್ವೀನ್ಸ್, ಬ್ರೂಕ್‌ಲಿನ್, ಸ್ಟೇಟನ್ ದ್ವೀಪ, ಬ್ರಾಂಕ್ಸ್ ಹಾಗೂ ಮ್ಯಾನ್‌ಹಟನ್. ಬ್ರಾಂಕ್ಸ್ ಹೊರತುಪಡಿಸಿದರೆ ಎಲ್ಲಾ ಬಡಾವಣೆಗಳೂ ದ್ವೀಪಗಳ ಮೇಲೆಯೇ ಸ್ಥಾಪಿತವಾಗಿವೆ. ಒಂದು ದ್ವೀಪದಿಂದ ಇನ್ನೊಂದು ದ್ವೀಪಕ್ಕೆ ಹೋಗಲು ಸೇತುವೆಗಳನ್ನು ನಿರ್ಮಿಸಿದ್ದಾರೆ. ಇವುಗಳಲ್ಲಿ 1883ರಲ್ಲಿ ಈಸ್ಟ್ ನದಿಯ ಮೇಲೆ ಕಟ್ಟಲಾದ ಬ್ರೂಕ್‌ಲಿನ್ ತೂಗು ಸೇತುವೆ ಆ ಕಾಲಕ್ಕೆ ವಿಶ್ವದಲ್ಲಿಯೇ ಅತಿ ದೊಡ್ಡ ತೂಗು ಸೇತುವೆ ಎಂದು ಹೆಸರುವಾಸಿಯಾಗಿತ್ತು. ಇದರ ಉದ್ದ ಎರಡು ಕಿಲೋಮೀಟರ್‌ಗೂ ಜಾಸ್ತಿ. ಇಂದಿಗೂ ಇದರ ಮೇಲಿನ ಪ್ರಯಾಣ ಮಾಡುವಾಗ ಎಷ್ಟು ಉದ್ದ ಇದೆಯಲ್ಲಾ ಈ ಸೇತುವೆ ಎಂದು ಅನ್ನಿಸುತ್ತದೆ. ರೈಲು ಪ್ರಯಾಣಕ್ಕಾಗಿ ಸಮುದ್ರದ ಒಳಗಡೆ ಸುರಂಗ ಮಾಡಿಯೂ ದ್ವೀಪದಿಂದ ದ್ವೀಪಕ್ಕೆ ಸಂಪರ್ಕವನ್ನು ಏರ್ಪಡಿಸಲಾಗಿದೆ. ನ್ಯೂಯಾರ್ಕಿನಿಂದ ನ್ಯೂಜರ್ಸಿ ಪ್ರಾಂತಕ್ಕೆ ಹೋಗಲು ಸಮುದ್ರದಲ್ಲಿ ಮಾಡಿರುವ ಭಾರೀ ಸುರಂಗಮಾರ್ಗ ಬಹಳ ಉದ್ದವಾಗಿ ಇದ್ದು ಕಾರಿನಲ್ಲಿ ಕುಳಿತು ಇದರೊಳಗಡೆ ಪ್ರಯಾಣ ಮಾಡುವುದೇ ಒಂದು ರೋಮಾಂಚಕ ಅನುಭವ.

ಮ್ಯಾನ್‌ಹಟನ್ ನ್ಯೂಯಾರ್ಕ್‌ನ ಕೇಂದ್ರ ಸ್ಥಾನ. ನಗರದ ಸರಿ ಸುಮಾರು ಎಲ್ಲಾ ವಾಣಿಜ್ಯ ಚಟುವಟಿಕೆಗಳೂ ಇಲ್ಲೇ ಕೇಂದ್ರೀಕೃತವಾಗಿವೆ. ವಿಶ್ವದ ಅತಿ ಪ್ರಾಮುಖ್ಯ ವಾಣಿಜ್ಯ ಕೇಂದ್ರ ಎಂದು ಮ್ಯಾನ್‌ಹಟನ್ ಹೆಸರು ಪಡೆದಿದ್ದು ಇಲ್ಲಿಯ 110 ಮಹಡಿಗಳ 1350 ಅಡಿ ಎತ್ತರದ World Trade Centre ನ ಜೋಡಿ ಕಟ್ಟಡಗಳಿಂದ. ವಿಶ್ವದ ಅತಿ ಎತ್ತರದ ಕಟ್ಟಡವೆಂದು ಮೊನ್ನೆ ಮೊನ್ನೆಯವರೆಗೂ ಹೆಸರು ಪಡೆದಿದ್ದವು. (ಈ ಕೃತಿ ಪ್ರಕಟವಾಗುವ ವೇಳೆಗೆ ಭಯೋತ್ಪಾದಕರ ಧಾಳಿಯಿಂದ ಈ ಎರಡೂ ಕಟ್ಟಡಗಳು ನಾಶವಾಗಿವೆ) ನಾವುಗಳು ದೋಣಿ ಇಳಿದು ನ್ಯೂಯಾರ್ಕ್ ನಗರ ಸೇರಿದ ಕೂಡಲೇ ವರ್ಲ್ಡ್ ಟ್ರೇಡ್ ಸೆಂಟರ್ ದರ್ಶನ ಮಾಡಲು ನಡೆದೇ ಹೊರಟೆವು. ಲಿಫ್ಟ್ ಮೂಲಕ ಈ ಕಟ್ಟಡವನ್ನು ಏರಿ ನ್ಯೂಯರ್ಕ್ ನಗರದ ವಿಹಂಗಮ ನೋಟವನ್ನು ಸವಿದಾಗ ಆದ ಸಂತೋಷ ಅಷ್ಟಿಷ್ಟಲ್ಲ. ಅಲ್ಲಿಂದ ಮುಂದೆ ನನ್ನ ತಂಗಿ ನಮ್ಮನ್ನು ನ್ಯೂಯಾರ್ಕ್‌ನ ಅತಿ

ಹೆಸರಾಂತ ಡಿಪಾರ್ಟ್‌ಮೆಂಟಲ್ ಅಂಗಡಿ "ಮೇಸೀಸ್"ಗೆ ಕರೆದೊಯ್ದಳು. ಈ ಅಂಗಡಿ ನಾವು ಲಂಡನ್‌ನಲ್ಲಿ ನೋಡಿದಂತಹ ಹ್ಯಾರಡ್ಸ್ ಅಂಗಡಿಗಿಂತ ಭಾರಿ ಅನಿಸಿತು.

ಈ ಅಂಗಡಿಯಲ್ಲಿ ನಾನು ನೋಡಿದ ಒಂದು ದೃಶ್ಯವನ್ನು ಇಲ್ಲಿ ವಿವರಿಸಲೇಬೇಕು. ಅಂಗಡಿಯ ಒಂದು ಮೂಲೆಯಲ್ಲಿ ಹಲವಾರು ಜನ ಒಂದು ಟೇಬಲ್ ಮುಂದೆ ನಿಂತು ಅದರ ಮೇಲೆ ಇಟ್ಟಿದ ಪುಸ್ತಕದಲ್ಲಿ ಏನನ್ನೋ ಬರೆಯುತ್ತಿದ್ದರು. "ಅವರು ಏನು ಮಾಡುತ್ತಿದ್ದಾರೆ" ಎಂದು ವಿಚಾರಿಸಿದಾಗ ಬೆಳಕಿಗೆ ಬಂದ ಅಂಶ ಕುತೂಹಲಕಾರಿ. ಅಮೇರಿಕದಲ್ಲಿ ನಡೆಯುವ ವಿವಾಹಗಳಿಗೆ ಹೋಗುವ ಆಹ್ವಾನಿತರಿಗೆ ವಧೂವರರಿಗೆ ಏನು ಉಡುಗೊರೆ ಕೊಡಬೇಕು ಎನ್ನುವ ಜಿಜ್ಞಾಸೆ ನಮ್ಮೆಲ್ಲರಂತೆ ಆಗುವುದು ಸಹಜ. ಎಷ್ಟೋ ಬಾರಿ ಒಂದೇ ತರಹದ ಉಡುಗೊರೆಯನ್ನು ಇಬ್ಬರು - ಮೂವರು ಕೊಟ್ಟಾಗ ಅದನ್ನು ವಿಲೇವಾರಿ ಮಾಡುವುದು ಹೇಗೆ ಎನ್ನುವ ಸಮಸ್ಯೆ ನವ ದಂಪತಿಗಳಿಗೆ ಉಂಟಾಗುತ್ತದೆ. ಈ ತೊಂದರೆ ತಪ್ಪಿಸಲು ಈ ದೇಶದಲ್ಲಿ ಒಂದು ಪದ್ಧತಿ ಕಂಡು ಹಿಡಿದಿದ್ದಾರೆ. ಅದೇನೆಂದರೆ ವಧೂ-ವರರು ಮದುವೆಗೆ ಬರುವ ಆಹ್ವಾನಿತರಿಗೆ ತಮಗೆ ಕೊಡುವಂತಹ ಉಡುಗೊರೆಯನ್ನು ಇಂತಹ ಅಂಗಡಿಯಲ್ಲಿ ಖರೀದಿಸಬಹುದು ಎಂದು ಸೂಚಿಸುತ್ತಾರಂತೆ. ಆ ಅಂಗಡಿಯಲ್ಲಿ ವಧೂವರರ ಹೆಸರಿನಲ್ಲಿ ಒಂದು ಪುಸ್ತಕ ತೆರೆದು ವಧೂ ವರರಿಗೆ ಉಡುಗೊರೆ ಖರೀದಿಸಿದವರ ಹೆಸರು ಹಾಗೂ ಉಡುಗೊರೆ ಎಂತಹುದು ಎಂದು ನಮೂದಿಸುತ್ತಾರೆ. ಉಡುಗೊರೆ ಕೊಳ್ಳಲು ಹೋಗುವವರು ಮೊದಲು ಈ ಪುಸ್ತಕ ನೋಡಿ ಎಂತಹ ವಸ್ತು ಈಗಾಗಲೇ ಖರೀದಿ ಆಗಿದೆ ಎಂದು ವಿಶ್ಲೇಷಿಸಿ ಒಂದೇ ತರಹದ ಉಡುಗೊರೆ ಕೊಡುವುದನ್ನು ತಪ್ಪಿಸುತ್ತಾರೆ. ಈ ಪದ್ಧತಿಯಿಂದ ಹಲವಾರು ಉಪಯೋಗ. ಕೊಟ್ಟ ಉಡುಗೊರೆಯ ಬಗ್ಗೆ ಸರಿಯಾದ ದಾಖಲಾತಿ. ಒಂದೇ ಅಂಗಡಿಗೆ ವ್ಯಾಪಾರ. ಉಡುಗೊರೆಯ ಗುಣಮಟ್ಟ ಉತ್ತಮವಾಗಿರುವುದು ಇತ್ಯಾದಿ ಆಗುತ್ತದೆ.


"ಮೇಸೀಸ್" ಅಂಗಡಿ ನೋಡಿದ ನಂತರ ನ್ಯೂಯಾರ್ಕ್‌ನ ಹೆಸರಾಂತ ಬ್ರಾಡ್‌ವೇಗೆ ಹೋದೆವು. ನ್ಯೂಯಾರ್ಕ್‌ನಲ್ಲೇ ಅತಿ ಉದ್ದವಾದ ರಸ್ತೆಯಾದ ಬ್ರಾಡ್‌ವೇಯನ್ನು 17ನೇ ಶತಮಾನದಲ್ಲಿ ಡಚ್ಚರು ಕಟ್ಟಿದರು. ಈ ರಸ್ತೆಯಲ್ಲಿ ಸಾಧಾರಣವಾಗಿ ನ್ಯೂಯಾರ್ಕ್‌ಗೆ ಬರುವ ಎಲ್ಲಾ ವಿಶ್ವಗಣ್ಯರನ್ನೂ ಕರೆದೊಯ್ಯುತ್ತಾರೆ. ಬ್ರಾಡ್‌ವೇ ರಸ್ತೆಯಲ್ಲಿ ಇರುವಷ್ಟು ಜಗದ್ವಿಖ್ಯಾತ ಹೋಟೆಲ್‌ಗಳು, ಸಿನಿಮಾ ಮಂದಿರಗಳು. ನಾಟಕ ಗೃಹಗಳು ಹಾಗೂ ಬಾರ್ ಅಂಡ್ ರೆಸ್ಟೋರೆಂಟ್‌ಗಳು ಈ ನಗರದ ಬೇರೆ ಯಾವ ರಸ್ತೆಯಲ್ಲೂ ಇಲ್ಲ. ಬ್ರಾಡ್‌ವೇ ಹೆಸರುವಾಸಿಯಾಗಿದ್ದು ಸಂಗೀತಮಯ ನಾಟಕ ಅಂದರೆ ಮ್ಯೂಸಿಕಲ್ಸ್‌ಗಳಿಂದ (ಉದಾ: ಮೈ ಫೇರ್ ಲೇಡಿ) 19ನೇ ಶತಮಾನದ ಮಧ್ಯ ಭಾಗದಿಂದಲೇ ಬ್ರಾಡ್‌ವೇ ನಾಟಕಗಳಿಗೆ ಹೆಸರುವಾಸಿಯಾಯಿತು. ತಮ್ಮ ನಾಟಕಗಳನ್ನು ಬ್ರಾಡ್‌ವೇ ರಂಗಮಂದಿರಗಳಲ್ಲೇ ಪ್ರದರ್ಶಿಸಬೇಕು ಎಂದು ನಾಟಕ ಕರ್ತೃಗಳಿಗೆ, ನಟ ನಟಿಯರಿಗೆ ತುಂಬಾ ಆಸೆಯಂತೆ. ಬ್ರಾಡ್‌ವೇ ನಲ್ಲಿ ನಡೆಯುವ ನಾಟಕಗಳಿಗೆ ಪ್ರವೇಶ ಶುಲ್ಕ ಕೂಡ ಬಹಳ ದುಬಾರಿ. ಅಂದರೆ 25 ರಿಂದ 50 ಡಾಲರ್ (ಒಂದು ಡಾಲರ್‌ಗೆ ಈಗಿನ ಬೆಲೆ ಸುಮಾರು 47.00 ರೂ) ಎಂದು ನನ್ನ ತಂಗಿ ಹೇಳಿ ಬ್ರಾಡ್‌ವೇ ಹೊರತಾಗಿ ನ್ಯೂಯಾರ್ಕ್‌ನ ಬೇರೆಡೆ ಇರುವ ರಂಗಮಂದಿರಗಳಲ್ಲಿ ಪ್ರದರ್ಶಿತವಾಗುವ ನಾಟಕಗಳಿಗೆ ಶುಲ್ಕ ಕಡಿಮೆ ಎಂದಳು. ರಜಾ ದಿನಗಳು ಬಿಟ್ಟರೆ ಕೆಲವಾರು ಬಾರಿ ಬೆಳಗಿನ ಜಾವ ರಿಯಾಯಿತಿ

ದರದಲ್ಲೂ ಟಿಕೆಟ್‌ಗಳು ಲಭ್ಯ ಎಂದಳು. ಇಷ್ಟೊಂದು ಹಣ ತೆತ್ತು ನಾಟಕ ನೋಡುವ ಆಸೆ ನನಗಿಲ್ಲ ಎಂದೆ. ಆಗ ಅವಳು "ಹೋಗಲಿ ಬಿಡು. ನಾಟಕಗಳು ನಡೆಯುವ ರಂಗಮಂದಿರದ ಒಳ ಹೊಕ್ಕಾದರೂ ಬರುವ ಅನುಭವ ಆಗಲಿ" ಎಂದಳು. ಸರಿ ಎಂದೆ. ಅವಳು ನಮ್ಮನ್ನು ಬದಿಯಲ್ಲೇ ಇದ್ದ ರೇಡಿಯೋ ಹೌಸ್ ರಂಗಮಂದಿರಕ್ಕೆ ಕರೆದೊಯ್ದಳು. ಬೆಳಗಿನ ಸಮಯದಲ್ಲಿ ನಾವು ಹೋಗಿದ್ದರಿಂದ ನಮಗೆ ರಂಗಮಂದಿರದ ಒಳಗಡೆ ಇರುವ ಹಲವಾರು ವಿಶೇಷತೆಗಳನ್ನು ಪರಿಚಯ ಮಾಡಿಕೊಟ್ಟರು. ವೇದಿಕೆಯ ಕೆಳಗಡೆಯಿಂದ, ಮೇಲಿನಿಂದ, ಎಲ್ಲೆಡೆಯಿಂದ ಪಾತ್ರಧಾರಿಗಳು ವೇದಿಕೆಗೆ ಬರುವ ಹಾಗೆ ಮಾಡಿದ್ದಾರೆ. ತಾಂತ್ರಿಕತೆಯನ್ನು ಚೆನ್ನಾಗಿ ಅಳವಡಿಸಿಕೊಂಡು ನಾಟಕಗಳಿಗೆ ಮೆರುಗನ್ನು ನೀಡುತ್ತಾರೆ. ಬ್ರಾಡ್‌ವೇ ನಾಟಕಗಳನ್ನು ನೋಡಿದಾಗ ಆಗುವ ಅನುಭವ ವರ್ಣಿಸಲು ಸಾಧ್ಯವಿಲ್ಲ ಎಂದಳು ನನ್ನ ತಂಗಿ.

ಇದಾದ ನಂತರ ವಿಶ್ವ ಸಂಸ್ಥೆಯ ಕೇಂದ್ರ ಸ್ಥಾನವನ್ನು ನೋಡಲು ಹೊರಟೆವು. ಮ್ಯಾನ್‌ಹಟನ್ ಪ್ರದೇಶದಲ್ಲಿ ಇರುವ ವಿಶ್ವ ಸಂಸ್ಥೆಯ ಭಾರೀ ಕಟ್ಟಡದ ಮುಂದುಗಡೆ ಆ ಸಂಘಟನೆಯ ಸದಸ್ಯ ದೇಶಗಳ ಬಣ್ಣ ಬಣ್ಣದ ಭಾವುಟಗಳು ಹಾರಾಡುತ್ತಾ ಇದ್ದವು. 1952ನೇ ಇಸವಿಯಲ್ಲಿ ಕಟ್ಟಲಾದ ಈ ಕಟ್ಟಡದಲ್ಲಿ ಮೂರು ಮುಖ್ಯ ಭಾಗಗಳಿವೆ. ಜನರಲ್ ಅಸೆಂಬ್ಲಿ ಸಭಾಂಗಣದಲ್ಲಿ ವಿಶ್ವ ಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಸೇರಲು ಅವಕಾಶವಿದೆ. ಈ ಸಭಾಂಗಣ ವಿಶಾಲವಾಗಿದ್ದು ಅದನ್ನು ನೋಡಿದಾಗ ನಮ್ಮ ವಿಧಾನ ಸಭೆ ನೋಡಿದ ಹಾಗೆ ಅನಿಸಿತು. ಸೆಕ್ಯೂರಿಟಿ ಕೌನ್ಸಿಲ್ ಸಭಾಂಗಣ ಅದಕ್ಕಿಂತ ಚಿಕ್ಕದಾಗಿದೆ. ಇದರ ಒಂದು ಗೋಡೆಗೆ ಚೀನಾ ದೇಶದಿಂದ ತಂದಂತಹ ಒಂದು ವಿಶಾಲವಾದ ರತ್ನ ಕಂಬಳಿಯನ್ನು ನೇತು ಹಾಕಿದ್ದಾರೆ. ನೋಡಲು ತುಂಬಾ ಅಂದ. ವಿಶ್ವ ಸಂಸ್ಥೆಯ ಕಾರ್ಯದರ್ಶಿಯವರ ಕಛೇರಿ (ಇದು ಅಮೇರಿಕಾದಲ್ಲಿದ್ದರೂ ವಿಶ್ವ ಸಂಸ್ಥೆ ಅಧೀನ)ಯಲ್ಲಿ ವಿಶೇಷ ಲಕೋಟೆ ಖರೀದಿಸಿದೆವು.

ಮ್ಯಾನ್‌ಹಟನ್‌ನಲ್ಲೇ ಇರುವ ಟೈಮ್ಸ್ ಚೌಕದಲ್ಲಿ ಸ್ವಲ್ಪ ಹೊತ್ತು ಅಡ್ಡಾಡಿ ಆ ನಂತರ ಸೆಂಟ್ರಲ್ ಪಾರ್ಕ್‌ಗೆ ಹೋದೆವು. ನ್ಯೂಯಾರ್ಕ್ ನಗರದ ಮಧ್ಯ ಭಾಗದಲ್ಲಿ ಇರುವ ಈ ಬೃಹತ್ ಉದ್ಯಾನವನ ಇಬ್ಬರು ಹೆಸರಾಂತ ವಿನ್ಯಾಸಕಾರರಿಂದ ರೂಪಿಸಲ್ಪಟ್ಟಿದೆ. ಇದರಲ್ಲಿ ಒಂದು ಮೃಗಾಲಯ, ಒಂದು ಹೊರಾಂಗಣ ರಂಗಮಂದಿರ, ಹಲವಾರು ಸರೋವರಗಳು ಹಾಗೂ ಕಣ್ಣಿಗೆ ಮುದ ನೀಡುವ ತರಹೇವಾರಿ ಮರಗಿಡಗಳು ಇದ್ದು ಇಲ್ಲಿ ವಿಹರಿಸಿದರೆ ನಾವು ವಿಶ್ವದ ದೊಡ್ಡ ನಗರವೊಂದರ ಮಧ್ಯೆ ಇದ್ದೇವೆ ಎನ್ನುವುದನ್ನೇ ಮರೆತುಬಿಡುತ್ತೇವೆ. ಸಂಜೆ ವೇಳೆಯಲ್ಲಿ ನೂರಾರು ಪ್ರವಾಸಿಗರು ಇಲ್ಲಿ ಬರುತ್ತಾರೆ.

ಸೆಂಟ್ರಲ್ ಪಾರ್ಕಿನ ಸನಿಹದಲ್ಲಿರುವುದೇ ಫಿಫ್ತ್ ಅವಿನ್ಯೂ ರಸ್ತೆ. ಫ್ಯಾಷನ್‌ಗೆ ವಿಶ್ವದಲ್ಲೇ ಈ ರಸ್ತೆ ಹೆಸರುವಾಸಿ. ನಾವು ಅಲ್ಲಿಗೆ ಹೋಗುವಷ್ಟರಲ್ಲಿ ಕತ್ತಲಾಗಿದ್ದರಿಂದ ಅಂಗಡಿಗಳ ಝಗ ಝಗಿಸುವ ದೀಪಗಳು, ಮಾರಾಟಕ್ಕಿಟ್ಟ ತರಹೇವಾರಿ ವಸ್ತುಗಳು ನಿಜಕ್ಕೂ ಕಣ್ಣು ಕೋರೈಸುವಂತೆ ಮಾಡಿದವು. ಒಂದು ಗಂಟೆ ಅಲ್ಲೇ ಸುತ್ತಾಡಿ ಗಡಿಯಾರ ನೋಡಿಕೊಂಡಾಗ ರಾತ್ರಿ ಎಂಟಾಗಿತ್ತು. ಅಲ್ಲೇ ಹತ್ತಿರವಿರುವ ಭೂಗರ್ಭ ರೈಲು ನಿಲ್ದಾಣಕ್ಕೆ ಹೋಗಿ ರೈಲು ಏರಿ ತಂಗಿಯ ಮನೆ ಸೇರಿದೆವು.



ನ್ಯೂಯಾರ್ಕ್ ಅಕ್ಕ ಪಕ್ಕದ ನಗರಗಳು

ನ್ಯೂಯಾರ್ಕ್ ನಗರದ ನಮ್ಮ ಮೊದಲ ರಾತ್ರಿಯನ್ನು ನನ್ನ ತಂಗಿಯ ಮನೆಯಲ್ಲಿ ಕಳೆದು ಮಾಮೂಲಿನಂತೆ ಮಾರನೇ ದಿನ ಬೆಳಿಗ್ಗೆ 5.00 ಘಂಟೆಗೆ ಎದ್ದೆ. ಮನೆಯ ಬಾಲ್ಕನಿಗೆ ಬಂದು ನೋಡಿದಾಗ ನ್ಯೂಯಾರ್ಕ್ ನಗರದ ಲಾ ಗಾರ್ಡಿಯಾ ವಿಮಾನ ನಿಲ್ದಾಣ ಎದರುಗಡೆಯೇ ಭವ್ಯವಾಗಿ ಕಾಣುತ್ತಿತ್ತು. ಗಗನಕ್ಕೆ ಏರುತ್ತಿರುವ ಹಾಗೂ ಭೂಮಿಗೆ ಇಳಿಯುತ್ತಿರುವ ವಿಮಾನಗಳನ್ನು ನೋಡುತ್ತಾ ನಿಂತಿದ್ದಾಗ ನನ್ನ ತಂಗಿ ಚಹಾ ಮಾಡಿ ತಂದುಕೊಟ್ಟಳು. ಚಹಾ ಕುಡಿದು ವಾಕಿಂಗ್ ಬಟ್ಟೆ ಧರಿಸಿ ಹೊರಗೆ ಹೊರಡಲು ತಯಾರಾದೆ. “ಇಷ್ಟು ಬೆಳಿಗ್ಗೆನೇ ಎಲ್ಲಿ ಹೋಗುತ್ತೀಯಾ” ಎಂದಳು ನನ್ನ ತಂಗಿ. ಇಲ್ಲೇ ಹತ್ತಿರದಲ್ಲೇ ಕಾಣುತ್ತಿರುವ ಫ್ಲಷಿಂಗ್ ಮೆಡೋಸ್ ಟೆನ್ನಿಸ್ ಸ್ಟೇಡಿಯಂ ನೋಡಿ ಬರುತ್ತೇನೆ. ಟಿ.ವಿ.ಯಲ್ಲಿ ಇಲ್ಲಿ ನಡೆಯುವ ಅಮೇರಿಕನ್ ಓಪನ್ ಟೆನ್ನಿಸ್ ಟೂರ್ನಮೆಂಟ್ ನೋಡಿರುವುದರಿಂದ ಅಲ್ಲಿಗೆ ಹೋಗುವ ಆಸೆ ಎಂದೆ. ಸರಿ ಎಂದ ಅವಳು ಧರಿಸಲು ಒಂದು ಟೋಪಿ ಹಾಗೂ ಉಣ್ಣೆಯ ಕೋಟು ಕೊಟ್ಟಳು.

ಮನೆಯಿಂದ ಹೊರಗೆ ಹೊರಟವನೇ ಎದುರಿಗೆ ಕಂಡ ಒಂದು ಸಣ್ಣ ರಸ್ತೆಗೆ ಹೋದೆ. ಆ ರಸ್ತೆಯ ಹೆಸರು “ಹೋಲಿ ಸ್ಟ್ರೀಟ್” ಎಂದು. ರಸ್ತೆಯಲ್ಲಿ ಸ್ವಲ್ಪ ದೂರ ನಡೆಯುತ್ತಾ ಹೋದಂತೆ ಆರತಿ ಮಾಡುತ್ತಿರುವಂತೆ ಘಂಟೆಯ ಶಬ್ದ ಕೇಳಿಸಿತು. ಮುಂದೆ ಒಂದು ಗಣೇಶನ ಗುಡಿ ಕಂಡಿತು. ರಸ್ತೆಯಿಂದಲೇ ಗಣೇಶನಿಗೆ ನಮಸ್ಕಾರ ಹಾಕಿ ಮುಂದೆ ಹೋದರೆ ಅಲ್ಲಿ ರಾಘವೇಂದ್ರ ಸ್ವಾಮಿ ಮಠ ಇತ್ತು. ಅಲ್ಲಿಂದ ಮುಂದೆ ಹೋದರೆ ಕೃಷ್ಣನ ದೇವಾಲಯ ಇತ್ತು. ಒಟ್ಟಿನಲ್ಲಿ ಆ ರಸ್ತೆಯ ತುಂಬಾ ಭಾರತೀಯ ದೇವಾಲಯಗಳೇ ಕಂಡಿತು. ಹೆಸರಿಗೆ ಅನ್ವರ್ಥವಾಗಿರುವ ಬೀದಿ ಎಂದುಕೊಂಡು ಸ್ವಲ್ಪ ಮುಂದೆ ಹೋದ ಕೂಡಲೇ ಒಂದು ದೊಡ್ಡ ಉದ್ಯಾನವನ ಕಂಡಿತು.

ಉದ್ಯಾನ ವನವನ್ನು ನೋಡಿದ ಕೂಡಲೇ ಅಲ್ಲೇ ವಾಕ್ ಮಾಡಲು ಹೊರಟೆ. ಬಹಳ ವಿಶಾಲವಾದ ಬರಿ ಮರಗಿಡಗಳೇ ಇರುವ ಉದ್ಯಾನ ಅದು. ಉದ್ಯಾನದ ಮಧ್ಯ ಭಾಗದಲ್ಲಿ ಒಂದು ದೊಡ್ಡ ಸರೋವರ ಇತ್ತು. ಆ ಸರೋವರದಲ್ಲಿ ನೂರಾರು ಬಾತುಕೋಳಿಗಳು ವಿಹರಿಸುತ್ತಾ ಇದ್ದವು. ಉದ್ಯಾನದ ಒಂದು ಭಾಗದಲ್ಲಿ 30-35 ಜನ ಹಿರಿಯ ಚೀನಿಯರು ವ್ಯಾಯಾಮ ಮಾಡುತ್ತಿದ್ದರು. ಕೆಲವರು ಜಾಗಿಂಗ್ ಮಾಡುತ್ತಿದ್ದರು. ಎದುರುಗಡೆ ಒಬ್ಬ ಮಹಿಳೆ ಒಂದು ಭಾರೀ ಗಾತ್ರದ ನಾಯಿಯ ಜೊತೆ ಬರುತ್ತಿದ್ದಳು. ಆ ನಾಯಿ ಉದ್ಯಾನದಲ್ಲಿ ಮಲ ವಿಸರ್ಜನೆ

ಮಾಡಿತು. ಕೂಡಲೇ ನಾಯಿಯ ಮಾಲಕಿ ತನ್ನ ಕೈಯಲ್ಲಿ ಇದ್ದ ಒಂದು ಕಬ್ಬಿಣದ ಕೊಕ್ಕೆ ತೆಗೆದಳು. ಅದರ ತುದಿಗೆ ಒಂದು ಪ್ಲಾಸ್ಟಿಕ್ ಮೊರ ಅಳವಡಿಸಲಾಗಿತ್ತು. ಅದರ ಸಹಾಯದಿಂದ ಆಕೆ ನಾಯಿಯ ಮಲವನ್ನು ತೆಗೆದು ತನ್ನ ಜೊತೆ ತಂದಿದ್ದ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿಕೊಂಡು ಏನೂ ಆಗದಂತೆ ಮುಂದೆ ಹೋದಳು. ನನಗೆ ಅದನ್ನು ನೋಡಿ ಮೋಜು ಅನಿಸಿತು. ಸ್ವಲ್ಪ ಮುಂದೆ ಹೋದಾಗ ಒಂದು ಸಣ್ಣ ನಾಯಿಯನ್ನು ಕರೆದುಕೊಂಡು ಚೀನೀ ಮಹಿಳೆಯೊಬ್ಬಳು ಬರುತ್ತಿದ್ದಳು. ಆ ನಾಯಿಯೂ ಪಾರ್ಕಿನಲ್ಲಿ ಮಲವಿಸರ್ಜನೆ ಮಾಡಿದಾಗ ಆ ಮಹಿಳೆ ತನ್ನ ಕೈಗೆ ಒಂದು ರಬ್ಬರ್ ಗ್ಲೌಸ್ ಹಾಕಿಕೊಂಡು ಒಂದು ಪ್ಲಾಸ್ಟಿಕ್ ಚೀಲದಲ್ಲಿ ನಾಯಿಯ ಮಲವನ್ನು ತುಂಬಿಕೊಂಡು ಮುಂದೆ ಹೋದಳು. ಇದೇನಪ್ಪಾ ಈ ಊರಿನಲ್ಲಿ ಈ ರೀತಿ ಮಾಡುತ್ತಾ ಇದ್ದಾರೆ ಎಂದು ಆಶ್ಚರ್ಯಚಕಿತನಾದೆ. ಅಷ್ಟರಲ್ಲಿ ಪಾರ್ಕಿನ ಮುಂಭಾಗದ ಗೇಟ್ ಬಂತು. ಈ ಗೇಟಿನ ಪಕ್ಕದಲ್ಲಿ ಒಂದು ದೊಡ್ಡ ಬೋರ್ಡ್ ನೇತು ಹಾಕಿದ್ದರು. ಅದರಲ್ಲಿ "ಪಾರ್ಕಿಗೆ ಬರುವವರಿಗೆ ನಿಬಂಧನೆ" ಎಂದು ಬರೆದು ಪಾರ್ಕಿಗೆ ನಾಯಿಯನ್ನು ಕರೆತಂದರೆ ಅವುಗಳಿಗೆ ಸರಪಳಿ ಹಾಕಿರಬೇಕು. ಪಾರ್ಕಿನ ಹುಲ್ಲಿಗೆ ತೊಂದರೆಯಾಗುವುದರಿಂದ ನಾಯಿಗಳ ಮಲವನ್ನು ಪಾರ್ಕಿನಲ್ಲಿ ಬಿಡಬಾರದು. ಬಿಟ್ಟರೆ 50 ಡಾಲರ್ ದಂಡ ಎಂದು ಬರೆದಿತ್ತು. ಅಮೇರಿಕನ್ ಜೀವನ ಶೈಲಿಯ ಬಗ್ಗೆ ಮನಸ್ಸಿನಲ್ಲೇ ನಕ್ಕು ಪಾರ್ಕಿನ ಹೊರ ಬಂದೆ. ಪಾರ್ಕಿನ ಹೊರಗಡೆ ಗೋಲಾಕಾರದ ಗ್ಲೋಬ್ ಕಂಡಿತು. ಈ ಗ್ಲೋಬ್‌ನ ಪಕ್ಕದಲ್ಲಿ ಆರ್ಥರ್ ಆಶ್ ಟೆನ್ನಿಸ್ ಸ್ಟೇಡಿಯಂ ಎಂದು ಬರೆದಿದ್ದ ದೊಡ್ಡ ಕ್ರೀಡಾಂಗಣ ಕಂಡಿತು. ಪಕ್ಕದ ಗೇಟ್‌ನಿಂದ ಸ್ಟೇಡಿಯಂ ಒಳಗಡೆ ಹೋಗಿ ಅಮೇರಿಕನ್ ಓಪನ್ ಪಂದ್ಯಗಳು ನಡೆಯುವ ಟೆನ್ನಿಸ್ ಕೋರ್ಟ್ ನೋಡಿ ಮತ್ತೆ ಮನೆಗೆ ವಾಪಸ್ ಆದೆ.

ಬೆಳಗಿನ ಏಳು ಗಂಟೆ ಆಗುವಷ್ಟರಲ್ಲಿ ನ್ಯೂಯಾರ್ಕಿನ ಜನ ತಮ್ಮ ದೈನಂದಿನ ಚಟುವಟಿಕೆ ಪ್ರಾರಂಭಿಸಿ ಬಿಡುತ್ತಾರೆ. ರಸ್ತೆಯಲ್ಲಿ ಹಲವಾರು ಜನ ತರಾತುರಿಯಿಂದ ಆಫೀಸ್‌ಗೆಂದು ಬಸ್ ಸ್ಟಾಂಡ್‌ಗೆ ಇಲ್ಲವೇ ರೈಲ್ವೇ ನಿಲ್ದಾಣಕ್ಕೆ ಹೋಗುತ್ತಿದ್ದರು. ನನ್ನ ತಂಗಿ ಇರುವ ಬಡಾವಣೆಯಲ್ಲಿ ಚೀನೀಯರ ವಾಸ ಹೆಚ್ಚು. ಹೀಗಾಗಿ ಎಲ್ಲಿ ನೋಡಿದರೂ ಚೀನೀ ಅಂಗಡಿಗಳೇ. ನಮ್ಮಲ್ಲಿಯಂತೆ ಅಲ್ಲಿಯೂ ಫುಟ್‌ಪಾತಿನಲ್ಲಿಯೇ ತರಕಾರಿ, ಹಣ್ಣು-ಹಂಪಲು, ಸಿಗರೇಟ್ ಇತ್ಯಾದಿ ವಸ್ತುಗಳ ವ್ಯಾಪಾರ ಪ್ರಾರಂಭಿಸಿದ್ದರು.

ವಾಕಿಂಗ್ ಮುಗಿಸಿಕೊಂಡು ಬಂದು ಉಪಾಹಾರ ಸೇವಿಸಿದ ನಂತರ ನ್ಯೂ ಜೆರ್ಸಿ ನಗರ ನೋಡಲು ನಾನು ನನ್ನ ಪತ್ನಿ ಹೊರಟೆವು. ನಾವು ನನ್ನ ತಂಗಿ ಮನೆಯಿಂದ ಭೂತಳ ರೈಲಿನಲ್ಲಿ ನ್ಯೂಯಾರ್ಕ್‌ನ ಮ್ಯಾನ್ ಹಟನ್ ಪ್ರದೇಶಕ್ಕೆ ಹೋಗಿ ಅಲ್ಲಿಂದ ಒಂದು ಬಸ್ ಹಿಡಿದು ನ್ಯೂ ಜರ್ಸಿಗೆ ಹೋದೆವು. ನ್ಯೂ ಜರ್ಸಿ ರಾಜ್ಯದಲ್ಲಿ ನೋಡಬೇಕಾದ ಜಾಗಗಳು ಬಹಳ ಇಲ್ಲ ಆದರೆ ಅಲ್ಲಿ ಸಾವಿರಾರು ಭಾರತೀಯರು ವಾಸಿಸುತ್ತಾರೆ. ಕನ್ನಡಿಗರ ಸಂಖ್ಯೆಯೂ ಜಾಸ್ತಿ. ನ್ಯೂಯಾರ್ಕ್ ನಗರದ ಇತರ ಕಡೆಗಳಿಗಿಂತ ಇಲ್ಲಿ ಮನೆ ಬಾಡಿಗೆ ಕಡಿಮೆ ಇರುವುದರಿಂದ ನಮ್ಮ ಜನ ಅಲ್ಲೇ ವಾಸ ಮಾಡಿ ಕಾರ್ಯನಿಮಿತ್ತ ನ್ಯೂಯಾರ್ಕಿಗೆ ದಿನವೂ ಹೋಗಿ ಬರುತ್ತಾರೆ. ಸಂಬಂಧಿಕರ ಮನೆಯಲ್ಲಿ ಮಧ್ಯಾಹ್ನದ ಊಟ ಮುಗಿಸಿ ಅವರ ಜೊತೆ ಹತ್ತಿರವೇ ಇರುವ ಅಟ್ಲಾಂಟಿಕ್ ಸಿಟಿ ಎನ್ನುವ ಊರಿಗೆ ಹೋದೆವು.

ಈ ಊರು ಸಮುದ್ರ ತೀರದಲ್ಲಿ ಇದ್ದು ಜೂಜಾಟದ ಕೇಂದ್ರವಾಗಿ ಹೆಸರುವಾಸಿಯಾಗಿದೆ. ಎಲ್ಲರೂ ತಿಳಿದಂತೆ ಅಮೇರಿಕ ರಾಷ್ಟ್ರದಲ್ಲಿ ಲಾಸ್‌ವೆಗಾಸ್ ಎಂಬ ಊರು ಜೂಜಾಟ ಕೇಂದ್ರವಾಗಿ

ವಿಶ್ವ ವಿಖ್ಯಾತಿ. ಈ ಊರಿಗೆ ನಾವು ಭೇಟಿ ನೀಡುವ ಪ್ರೋಗ್ರಾಮ್ ಇದ್ದೇ ಇತ್ತು. ಆದರೂ ನ್ಯೂ ಜರ್ಸಿಯ ನಮ್ಮ ಸಂಬಂಧಿಕರು ತಮ್ಮ ಊರಿನ ಬಳಿ ಇರುವ ಅಟ್ಲಾಂಟಿಕ್ ಸಿಟಿ ನೋಡಲು ಬಲವಂತ ಮಾಡಿದರು. 1854ರಲ್ಲಿ ರೂಪುಗೊಂಡ ಅಟ್ಲಾಂಟಿಕ್ ಸಿಟಿ ಸುಮಾರು ವರ್ಷಗಳವರೆಗೆ ಮನರಂಜನಾ ಕೇಂದ್ರವಾಗಿ ಹೆಸರುವಾಸಿಯಾಗಿತ್ತಂತೆ. 1960-70 ರ ದಶಕದಲ್ಲಿ ಈ ಊರು ಪಾಳು ಬೀಳುವ ಹಾಗೆ ಆಗಿತ್ತಂತೆ. ಆದರೆ 1978ರಲ್ಲಿ ಜೂಜಾಟದ ಮೇಲಿರುವ ನಿಷೇಧ ತೆಗೆದದ್ದರಿಂದ ಈ ಊರು ಮತ್ತೆ ಜನರನ್ನು ಆಕರ್ಷಿಸಲು ಪ್ರಾರಂಭಿಸಿತಂತೆ. ಸಮುದ್ರ ತೀರದಲ್ಲಿ ಇರುವ ಈ ಊರಿನಲ್ಲಿ ಸುಮಾರು ಒಂದು ಡಜನ್‌ಗೂ ಹೆಚ್ಚು ಕ್ಯಾಸಿನೋಗಳಿವೆ. ಪ್ರತಿಯೊಂದು ಕ್ಯಾಸಿನೋ (ಕ್ಯಾಸಿನೋ ಎಂದರೆ ಜೂಜು ಕೇಂದ್ರ)ದಲ್ಲಿಯೂ ತರಹೇವಾರಿ ಜೂಜಾಟಗಳನ್ನು ಆಡಬಹುದು. ಜನರು ತಮ್ಮ ಕ್ಯಾಸಿನೋದಲ್ಲಿ ಬಂದು ಆಟ ಆಡಲು ಉತ್ತೇಜಿಸಲು ಅಲ್ಲಿನ ಜೂಜಿನ ಅಡ್ಡೆಗಳು 20-30 ಡಾಲರ್ ಆಟದ ಕೂಪನ್‌ಗಳನ್ನು ಪುಕ್ಕಟೆಯಾಗಿ ಕೊಡುತ್ತಾರೆ. ಅದನ್ನು ಉಪಯೋಗಿಸಿ ಆಟದ ಮೆಷಿನ್‌ಗಳ ಮೂಲಕ ಆಡಬಹುದು ಅಥವಾ ಇತರ ಟೇಬಲ್ ಆಟಗಳನ್ನು ಆಡಬಹುದು. ಒಮ್ಮೆ ಆಟ ಆಡಿದರೆ ಜನಗಳಿಗೆ ಮತ್ತಷ್ಟು ದುಡ್ಡು ಹಾಕುವ ಮನಸ್ಸು ಬರುತ್ತದೆ. ಈ ರೀತಿ ಕೂಪನ್ ಜನರನ್ನು ಆಕರ್ಷಿಸುತ್ತವೆ. ಪ್ರತಿಯೊಂದು ಕ್ಯಾಸಿನೋ ಒಳಗಡೆ ಹವಾ ನಿಯಂತ್ರಣ ಇದ್ದು ಸಾವಿರಾರು ಜನ ಅಲ್ಲಿಯ ಮೆಷಿನ್‌ಗಳಲ್ಲಿ ದುಡ್ಡು ಹಾಕಿ ಜೂಜಾಟ ಆಡುತ್ತಿದ್ದರು. ನನ್ನ ಕೂಪನ್‌ಗಳನ್ನು ಒಮ್ಮೆ ಉಪಯೋಗಿಸಿ ನನ್ನ ಅದೃಷ್ಟ ಪರೀಕ್ಷಿಸಿದೆ. ಒಂದು ಪೈಸೆಯೂ ಬರಲಿಲ್ಲ. ನನ್ನ ಹೆಂಡತಿ ಆಟ ಆಡಿದಾಗ ಒಂದು ಬಾರಿ ಸುಮಾರು 100 ಡಾಲರ್ ಲಾಭ ಬಂದಿತು. ಆ ಹಣದಲ್ಲಿ ಮತ್ತೆ ಆಡಿದಾಗ ಎಲ್ಲವೂ ಪಂಗನಾಮವಾಯಿತು. ಕೂಡಲೇ ಹೊರಗಡೆ ಬಂದು ಸಮುದ್ರದ ಹಿತಕರ ಗಾಳಿಯನ್ನು ಆಹ್ಲಾದಿಸುತ್ತಾ ನಡೆದೆವು. ಅಟ್ಲಾಂಟಿಕ್ ಸಿಟಿಯ ಸಮುದ್ರ ತೀರಕ್ಕೆ ಬೋರ್ಡ್‌ವಾಕ್ ಎನ್ನುತ್ತಾರೆ. ಇದರ ಉದ್ದ ಹತ್ತು ಕಿಲೋಮೀಟರ್‌ಗಳು. ಹಲವಾರು ಜನ ಬೀಚಿನಲ್ಲಿ ಈಜಾಟ ಮತ್ತಿತರ ಸಮುದ್ರ ಕ್ರಿಡೆಗಳಲ್ಲಿ ನಿರತರಾಗಿದ್ದರು. ಇಲ್ಲಿ ಸ್ವಲ್ಪ ಸಮಯ ಸುತ್ತಾಡಿ ನ್ಯೂಜೆರ್ಸಿಗೆ ವಾಪಸ್ಸಾದೆವು.

ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಮೊದಲ 13 ರಾಜ್ಯಗಳಲ್ಲಿ ನ್ಯೂಜೆರ್ಸಿಯೂ ಒಂದು. ಅಮೇರಿಕಾ ಸ್ವಾತಂತ್ರ ಸಂಗ್ರಾಮದಲ್ಲಿ ಈ ರಾಜ್ಯ ಬಹಳ ಹೆಸರುವಾಸಿಯಾಗಿ ಅಮೇರಿಕಾದ ಇಬ್ಬರು ಅಧ್ಯಕ್ಷರು - ಕ್ಲೀವ್‌ಲ್ಯಾಂಡ್ ಹಾಗೂ ವುಡ್ರೋ ವಿಲ್ಸನ್ ವಾಸಿಸಿದ ಪ್ರದೇಶವಾಗಿದೆ. ಈಗ ಈ ರಾಜ್ಯಕ್ಕೆ ಉದ್ಯಾನ ರಾಜ್ಯ ಎನ್ನುತ್ತಾರೆ.

ನ್ಯೂಜರ್ಸಿ ರಾಜ್ಯದಲ್ಲಿ ಐದು ಪ್ರಮುಖ ನಗರಗಳು - ರಾಜಧಾನಿ ಟ್ರೆಂಟನ್, ನೂಆರ್ಕ್, ಜೆರ್ಸಿ ನಗರ, ಎಡಿಸನ್ ಹಾಗೂ ಎಲಿಜಬೆತ್ ನಗರಗಳು. ನೂ ಆರ್ಕ್‌ನಲ್ಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನ್ಯೂಯಾರ್ಕ್ ವಿಮಾನ ನಿಲ್ದಾಣಗಳ ದಟ್ಟಣೆಗಳನ್ನು ಸಾಕಷ್ಟು ಕಡಿಮೆ ಮಾಡಿದೆ. ಯೂರೋಪಿನ ಹಲವಾರು ಏರ್‌ಲೈನ್‌ಗಳು ನೂ ಆರ್ಕ್ ವಿಮಾನ ನಿಲ್ದಾಣದಿಂದಲೇ ಸಂಚರಿಸುತ್ತವೆ.

ಅಮೇರಿಕದ ಹೆಸರಾಂತ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯ ಇಲ್ಲಿಯೇ ಇದೆ. ನಾವುಗಳು ಈ ವಿಶ್ವವಿದ್ಯಾಲಯದ ಆವರಣದಲ್ಲಿ ಅಡ್ಡಾಡಿದ ನಂತರ ನಮ್ಮ ಗೆಳೆಯರು ತಮ್ಮ ಕಾರಿನಲ್ಲಿಯೇ ನಮ್ಮನ್ನು ತಂಗಿಯ ಮನೆಗೆ ತಲುಪಿಸಿದರು.



ಫಿಲಿಡೆಲ್ಫಿಯಾ, ದಿಲಾವೇರ್, ಗ್ರೇಹೌಂಡ್ ಬಸ್ಸುಗಳು

ನ್ಯೂಯಾರ್ಕ್‌ನಲ್ಲಿದ್ದ ಮೂರೂ ದಿನಗಳು ನಾವು ಆ ಊರಿನ ಹಾಗೂ ಹತ್ತಿರದ ಊರುಗಳ ಪ್ರೇಕ್ಷಣೀಯ ಸ್ಥಳಗಳನ್ನು ಸಾಕಷ್ಟು ನೋಡಿದ್ದರಿಂದ ಅಮೇರಿಕಾದ ಇನ್ನಿತರ ಮುಖ್ಯ ಪಟ್ಟಣಗಳನ್ನು ನೋಡಲು ನಿರ್ಗಮಿಸಿದೆವು.

ಅಮೇರಿಕಾ ವಿಸ್ತೀರ್ಣದಲ್ಲಿ ಜಗತ್ತಿನ ಅತಿದೊಡ್ಡ ದೇಶಗಳಲ್ಲಿ ಒಂದಾಗಿದ್ದು ಅಟ್ಲಾಂಟಿಕ್ ಸಾಗರ ಹಾಗೂ ಫೆಸಿಫಿಕ್ ಮಹಾ ಸಾಗರಗಳ ಮಧ್ಯೆ ಇದೆ. ಫೆಸಿಫಿಕ್ ಸಾಗರದ ತಟದಲ್ಲಿರುವ ಪಟ್ಟಣಗಳಿಗೂ ಅಟ್ಲಾಂಟಿಕ್ ಸಾಗರದ ತಟದಲ್ಲಿರುವ ಪಟ್ಟಣಗಳಿಗೂ ಸುಮಾರು 3-4 ಘಂಟೆಗಳ ವೇಳೆಯ ವ್ಯತ್ಯಾಸ ಇದೆ! ಮುಖ್ಯ ನಗರಗಳು ಹಾಗೂ ಪ್ರವಾಸಿಗರು ನೋಡಬೇಕಾದ ರಮಣೀಯ ಸ್ಥಳಗಳೂ ಸಮುದ್ರ ತೀರಗಳ ಹತ್ತಿರ ಇಲ್ಲವೇ ತಟದಲ್ಲಿ ಇವೆ. ದೇಶದ ಪೂರ್ವ ಭಾಗದಲ್ಲಿ ಅಂದರೆ ಅಟ್ಲಾಂಟಿಕ್ ಸಮುದ್ರದ ಹತ್ತಿರ ಅಮೇರಿಕಾದ ರಾಜಧಾನಿ ವಾಷಿಂಗ್‌ಟನ್, ನೂಯಾರ್ಕ್ ನಗರ, ಫ್ಲಾರಿಡಾ, ಫಿಲಿಡೆಲ್ಫಿಯಾ ಇತ್ಯಾದಿ ನಗರಗಳಿದ್ದರೆ ಪಶ್ಚಿಮದಲ್ಲಿ ಫೆಸಿಫಿಕ್ ಸಾಗರದ ಬಳಿ ಸ್ಯಾಂಡಿಯಾಗೋ, ಲಾಸ್ ಎಂಜಲೀಸ್, ಸ್ಯಾನ್ ಫ್ರಾನ್ಸಿಸ್ಕೋ, ಸಿಯಟಲ್ ನಗರಗಳಿವೆ. ಲೇಕ್ ಸುಪೀರಿಯರ್ ಹಾಗೂ ಲೇಕ್ ಮೆಷಿಗನ್ ಸರೋವರಗಳ ಅಕ್ಕ ಪಕ್ಕದಲ್ಲಿ ಅಮೇರಿಕದ ಇತರ ದೊಡ್ಡ ನಗರಗಳಾದ ಡೆಟ್ರಾಯಿಟ್ ಹಾಗೂ ಶಿಕ್ಕಾಗೋಗಳಿವೆ. ಒಂದು ಊರಿನಿಂದ ಇನ್ನೊಂದು ಊರು ಸಾಕಷ್ಟು ದೂರ!

ಅಮೇರಿಕಾದಲ್ಲಿ ಮೂರು ವಿಧದ ಸಂಚಾರ ವ್ಯವಸ್ಥೆ ಇದೆ. ಗ್ರೇಹೌಂಡ್ ಹೆಸರಿನ ಬಸ್‌ಗಳು ಅಮೇರಿಕದಾದ್ಯಂತ ಸಂಚರಿಸುತ್ತವೆ. ಇವು ಅಗ್ಗದ ಬೆಲೆಯಲ್ಲಿ ಪ್ರಯಾಣಿಕರನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ಕೊಂಡೊಯ್ಯುತ್ತವೆ. ಇದು ಬೇಡದೇ ಇದ್ದರೆ ರೈಲಿನಲ್ಲಿ ಪ್ರಯಾಣಿಸಬಹುದು ಡಬ್ಬಲ್‌ಡಕ್ಕರ್ ರೈಲುಗಳೂ ಇವೆ. ಅವೂ ಬೇಡವಾದರೆ ವಿಮಾನದಲ್ಲಿ ಹೋಗಬಹುದು.

ಅಮೇರಿಕಾದ ಹಲವಾರು ನಗರಗಳನ್ನು ನೋಡುವ ಅವಕಾಶವನ್ನು ಮಾಡಿಕೊಡುವ ಉದ್ದೇಶದಿಂದ ವಿದೇಶದಿಂದ ಬಂದ ಪರ್ಯಟಕರಿಗೆ ಅಗ್ಗದ ದರದಲ್ಲಿ ವಿಮಾನ ಟಿಕೇಟ್ ಲಭ್ಯ. ಅಮೇರಿಕಾಗೆ ಹೋಗುವ ಟಿಕೇಟ್ ಜೊತೆಗೆ ಆ ದೇಶದಲ್ಲಿ ನಾವು ಯಾವ ಯಾವ ಊರುಗಳನ್ನು ನೋಡಬೇಕೋ ಆ ಊರುಗಳಿಗೆ ಹೋಗಲು ವಿಮಾನ ಟಿಕೇಟ್ ಇಲ್ಲಿಯೇ ಭಾರತೀಯ

ರೂಪಾಯಿಗಳನ್ನು ಕೊಟ್ಟು ಪಡೆಯಬಹುದು. ಸುಮಾರು 10 ಊರುಗಳನ್ನು ನೋಡಲು ವಿಮಾನ ದರ ಐದು ನೂರು ಡಾಲರ್ ಆಗುತ್ತದೆ. (ಅಮೇರಿಕಾದಲ್ಲೇ ಇಂತಹ ಟಿಕೇಟ್ ಕೊಂಡರೆ ಆದರೆ ಹತ್ತು ಪಟ್ಟು ಹಣ ತೆರಬೇಕು) Visit USA Pass ಎಂದು ಕರೆಯುವ ಈ ಟಿಕೇಟನ್ನು ಖರೀದಿಸಿ ದೂರದೂರದಲ್ಲಿರುವ ಪ್ರದೇಶಗಳಿಗೆ ಹೋಗುವುದು ಅತ್ಯಂತ ಸೂಕ್ತವಾದ ಕ್ರಮ. ಆದರೆ ಒಂದೇ ಸಮುದ್ರದ ತೀರದಲ್ಲಿ ಇರುವ ಊರುಗಳನ್ನು ನೋಡಬೇಕಾದರೆ ಅತ್ಯಂತ ಅಗ್ಗ ಹಾಗೂ ಸುಲಭ ಮಾರ್ಗ ಗ್ರೇಹೌಂಡ್ ಬಸ್ಸುಗಳು. ನಾನು ಅಮೇರಿಕಾಗೆ ಹೋದಾಗ ಕೆ.ಎಸ್.ಆರ್.ಟಿ.ಸಿ. ಯಲ್ಲಿ ನೌಕರಿ ಮಾಡುತ್ತಿದ್ದುದರಿಂದ ಅಮೇರಿಕದ ಬಸ್ಸುಗಳಲ್ಲಿ ಪ್ರಯಾಣಿಸುವ ಅನುಭವ ಆಗಬೇಕೆಂದು ನಿರ್ಧರಿಸಿದೆ.

ಅಮೇರಿಕಾದ ಬಸ್ ವ್ಯವಸ್ಥೆಯಲ್ಲಿ ಒಂದು ವಿಶೇಷತೆ ಇದೆ. ಅದೇನೆಂದರೆ ಪ್ರಯಾಣದ ಟಿಕೆಟ್ ಬೆಲೆ ಕಾಲ ಕಾಲಕ್ಕೆ ಬದಲಾಗುವುದು. ಪ್ರಯಾಣದ 30 ದಿನಗಳ ಮುಂದೆ ಟಿಕೇಟ್ ಖರೀದಿಸಿದರೆ ಭಾರೀ ಉಳಿತಾಯ. ಉದಾಹರಣೆಗೆ ನ್ಯೂಯಾರ್ಕ್ ಹಾಗೂ ವಾಷಿಂಗ್‌ಟನ್‌ಗೆ ಸಾಮಾನ್ಯ ಟಿಕೇಟ್ ದರ 40 ಡಾಲರ್ ಆದರೆ ಒಂದು ತಿಂಗಳ ಮುಂಚೆ ಅದನ್ನು ಖರೀದಿಸಿವರೆ 25 ಡಾಲರ್ ಮಾತ್ರ. ಒಂದು ವಾರದ ಮುಂಚೆ ಖರೀದಿಸಿದರೆ 30-35 ಡಾಲರ್ ಆಗಬಹುದು. ವಾರಾಂತ್ಯದ ದಿನಗಳಲ್ಲಿ ಅಂದರೆ ಶುಕ್ರವಾರ, ಶನಿವಾರ, ಭಾನುವಾರಗಳಂದು ಟಿಕೇಟ್ ಬೆಲೆ ಜಾಸ್ತಿ. ಸೋಮವಾರದಿಂದ ಗುರುವಾರದ ವರೆಗೆ ಪ್ರಯಾಣಿಸಿದರೆ ದರ ಕಡಿಮೆ. ಸರಿಯಾಗಿ ಯೋಚನೆ ಮಾಡಿ ಮುಂಚಿತವಾಗಿಯೇ ಟಿಕೇಟ್ ಖರೀದಿಸಿದರೆ ಅತಿ ಕಡಿಮೆ ವೆಚ್ಚದಲ್ಲಿ ಈ ದೇಶವನ್ನು ಸುತ್ತಬಹುದು. ನಾವು ನ್ಯೂಯಾರ್ಕ್‌ನಿಂದ ಫಿಲಿಡೆಲ್ಫಿಯಾಗೆ ಹೋಗಲು 15 ದಿನಗಳ ಹಿಂದೆಯೇ ನನ್ನ ತಂಗಿ ಟಿಕೇಟ್ ಖರೀದಿಸಿದ್ದರಿಂದ ನನ್ನ ಹೆಂಡತಿಗೆ ನನ್ನೊಡನೆ ಪುಕ್ಕಟೆಯಾಗಿ ಪ್ರಯಾಣ ಲಭಿಸಿತು!

ಗ್ರೇಹೌಂಡ್ ಬಸ್ಸುಗಳು ನಮ್ಮಲ್ಲಿಯ ವಿಮಾನಗಳಷ್ಟೇ ಸ್ವಚ್ಛವಾಗಿರುತ್ತವೆ. ಬಸ್‌ನ ಚಾಲಕ ಚಾಲನೆ ಮಾಡುವುದಲ್ಲದೆ ಕಂಡಕ್ಟರ್ ಕೆಲಸವನ್ನೂ ಮಾಡುತ್ತಾನೆ. ಪೋರ್ಟರ್ ಕೆಲಸ ಅಲ್ಲದೆ ಮಾರ್ಗದರ್ಶಿಯ ಕೆಲಸವನ್ನೂ ಮಾಡುತ್ತಾನೆ. ಪ್ರತಿಯೊಂದು ಬಸ್ಸೂ ಸಂಪೂರ್ಣ ಹವಾ ನಿಯಂತ್ರಿತವಾಗಿರುತ್ತದೆ. ಆರಾಮ ಕುರ್ಚಿಗಳು ಇರುತ್ತವೆ. ಶೌಚಾಲಯ ಕೂಡಾ ಇರುತ್ತದೆ. ಹೀಗಾಗಿ 24 ಗಂಟೆಗಳು ಪ್ರಯಾಣಿಸಿದರೂ ಆಯಾಸ ಆಗುವುದಿಲ್ಲ. ಬಸ್ಸಿನ ಚಾಲಕ ತನ್ನ ಮುಂದೆ ಇರುವ ಮೈಕ್‌ನಿಂದ ಪ್ರಯಾಣಿಕರಿಗೆ ಬೇಕಾದ ಉಪಯುಕ್ತ ಮಾಹಿತಿಯನ್ನು ನೀಡುತ್ತಿರುತ್ತಾನೆ. 5 ಗಂಟೆಗಳಿಗೊಮ್ಮೆ ಒಂದು ಜಾಗದಲ್ಲಿ ಬಸ್ ನಿಲ್ಲಿಸಿ ಪ್ರಯಾಣಿಕರಿಗೆ ವಿರಮಿಸಲು ಅನುಕೂಲ ಮಾಡಿ ಕೊಡುತ್ತಾನೆ. ಪ್ರತಿಯೊಂದು ಕುರ್ಚಿಯ ಬಳಿ ಒಂದು ಪ್ಲಾಸ್ಟಿಕ್ ಚೀಲ ಇಟ್ಟಿರುತ್ತಾರೆ. ನಾವು ಬಿಸಾಕಬೇಕಾದ ವಸ್ತುಗಳನ್ನು ಅದರಲ್ಲಿಯೇ ಹಾಕಬೇಕು.

ಫಿಲಿಡೆಲ್ಫಿಯಾ ನ್ಯೂಯಾರ್ಕ್‌ಗೆ ಬಹಳ ಸಮೀಪ. ಅಮೇರಿಕಾದ 5ನೇ ಅತಿದೊಡ್ಡ ನಗರವಾಗಿರುವ ಈ ಊರು ನ್ಯೂಯಾರ್ಕ್ ಹಾಗೂ ವಾಷಿಂಗ್‌ಟನ್‌ಗಳ ಮಧ್ಯಭಾಗದಲ್ಲಿ ಇದೆ. ಇದು ಅಮೇರಿಕಾದ ದೊಡ್ಡ ಬಂದರು ನಗರ ಎಂದು ಹೆಸರು ಪಡೆದಿದೆ. ಅಮೇರಿಕಾದ ದೊಡ್ಡ ಕೈಗಾರಿಕಾ ನಗರ ಎಂದೂ ಹೆಸರುವಾಸಿ. ಹೀಗಾಗಿ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದನಾ ಘಟಕಗಳು ಇವೆ. ಬಹಳಷ್ಟು ಮಂದಿ ಭಾರತೀಯರು ಈ ನಗರದಲ್ಲಿ ವಾಸಿಸುತ್ತಾರೆ. ಭಾರತೀಯರಲ್ಲದೆ ಈ ಊರಿಗೆ ಯೂರೋಪಿನ ಇತರ ದೇಶಗಳ ಜನರೂ ವಲಸೆ ಬಂದಿದ್ದಾರೆ.

ಫಿಲಿಡೆಲ್ಫಿಯಾ ಅಮೇರಿಕಾದ ಚರಿತ್ರೆಯಲ್ಲಿ ಹಲವಾರು ಘಟನೆಗಳ ಜೊತೆ ಲೀನವಾಗಿರುವುದರಿಂದ ಇಲ್ಲಿ ನೋಡಬೇಕಾದ ಸ್ಥಳಗಳೆಲ್ಲವೂ ಅಮೇರಿಕನ್ ಚರಿತ್ರೆಗೆ ಸಂಬಂಧಿಸಿದವೇ ಆಗಿವೆ. ಇದೇ ನಗರದಲ್ಲೇ ಅಮೇರಿಕಾ ದೇಶದ ಸಂವಿಧಾನವನ್ನು ರೂಪಿಸಿದ್ದು. ಹೀಗಾಗಿ ಈ ನಗರಕ್ಕೆ ಪ್ರಾಮುಖ್ಯತೆ. ಈ ನಗರದಲ್ಲಿ ಮೂರು ಶತಮಾನಗಳ ಹಿಂದಿನ ಕಟ್ಟಡಗಳು ಇತ್ತೀಚಿನ ನವೀನ ಕಟ್ಟಡಗಳ ಅಕ್ಕಪಕ್ಕದಲ್ಲೇ ಇರುವುದು ವಿಶೇಷತೆ. ಫಿಲಿಡೆಲ್ಫಿಯಾ ನಗರ ಮ್ಯೂಸಿಯಂಗಳಿಗೆ ಹೆಸರುವಾಸಿಯಾಗಿದೆ. ನಾವು ಈ ಊರಿನ ಪೆನ್ಸಿಲ್ವೇನಿಯಾ ಅಕಾಡಮಿ ಆಫ್ ಫೈನ್ ಆರ್ಟ್ಸ್ ಮ್ಯೂಸಿಯಂ ನೋಡಿದೆವು. ಈ ಊರಿನ ಇಂಡಿಪೆಂಡೆನ್ಸ್ ಹಾಲ್, ಕಾರ್ಪೆಂಟರ್ಸ್ ಹಾಲ್. ಲೈಬ್ರರಿ ಹಾಲ್ ಇತ್ಯಾದಿ ಕಟ್ಟಡಗಳು ವಾಸ್ತು ಶಿಲ್ಪಕ್ಕೆ ಸಾಕಷ್ಟು ಹೆಸರುವಾಸಿಯಾಗಿವೆ. 1876ರಲ್ಲಿ ಅಮೇರಿಕ ದೇಶದ ಶತಮಾನೋತ್ಸವ ಇದೇ ಊರಿನ ಫೇರ್ ಮೌಂಡ್ ಉದ್ಯಾನದಲ್ಲಿ ನಡೆಯಿತಂತೆ. ಈ ಸಂಬಂಧ ಕಟ್ಟಲಾಗಿರುವ ದೊಡ್ಡ ಗೋಪುರ ನಗರದ ಎಲ್ಲಾ ಕಡೆಯಿಂದಲೂ ಕಾಣಿಸುತ್ತದೆ. ಉದ್ಯಾನ ವನಗಳಿಗೆ ಹೆಸರು ವಾಸಿಯಾಗಿರುವ ಫಿಲಿಡೆಲ್ಫಿಯಾದಲ್ಲಿ 150 ಉದ್ಯಾನಗಳಿವೆ. ನಮ್ಮ ಸ್ನೇಹಿತರ ಜೊತೆ ಈ ನಗರದ ಹಲವಾರು ಭಾಗಗಳನ್ನು ಒಮ್ಮೆ ನೋಡಿ ಆ ರಾತ್ರಿ ಅವರಲ್ಲೇ ಕಳೆದು ಮಾರನೇ ದಿನ ಮತ್ತೆ ಬಸ್ ಏರಿ ದಿಲಾವೇರ್ ಎನ್ನುವ ಊರಿಗೆ ಹೋದೆವು.

ದಿಲಾವೇರ್ ರಾಜ್ಯ ಫಿಲಿಡೆಲ್ಫಿಯಾದ ದಕ್ಷಿಣ ಭಾಗದಲ್ಲಿ ಇದ್ದು ಈ ರಾಜ್ಯಕ್ಕೆ ಅಮೇರಿಕಾ ಸಂಸ್ಥಾನಗಳ ಮೊದಲ ರಾಜ್ಯವೆಂದು ಹೇಳುತ್ತಾರೆ. ಏಕೆಂದರೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಮೊದಲ ರಾಜ್ಯವಿದು. ಈ ರಾಜ್ಯದಲ್ಲಿ ಕರಗಳು ಬಹಳ ಕಡಿಮೆ ಇರುವುದರಿಂದ ಹಲವಾರು ಪ್ರಮುಖ ಕಂಪನಿಗಳ ಕೇಂದ್ರ ಕಛೇರಿಗಳು ಇದೇ ರಾಜ್ಯದಲ್ಲಿ ಇವೆ. ನಾವು ದಿಲಾವೇರ್‌ನ ಅತಿ ದೊಡ್ಡ ಶಹರಾದ ವಿಲ್‌ಮಿಂಗ್‌ಟನ್ ಬಸ್ ನಿಲ್ದಾಣದಲ್ಲಿ ಇಳಿದ ಕೂಡಲೇ ನನ್ನ ಪತ್ನಿಯ ಚಿಕ್ಕಮ್ಮನ ಮಗಳು ರಜನಿ ತನ್ನ ಗಂಡನೊಂದಿಗೆ ನಮ್ಮನ್ನು ಎದುರುಗೊಂಡಳು. ಅವರೊಡನೆ ನಗರದ ಹೊರಭಾಗದಲ್ಲಿರುವ ಅವರ ಮನೆಗೆ ಹೋಗಿ ಸ್ನಾನ, ಉಪಾಹಾರ ಮುಗಿಸಿ ಅವರ ಊರಿನ ಬಳಿ ಇರುವ ಹೆಸರಾಂತ ಲಾಂಗ್‌ವುಡ್ ಉದ್ಯಾನವನಕ್ಕೆ ಹೋದೆವು. 1920ರಲ್ಲಿ ಪಿಯರ್ ಎಸ್ ಡೂಪಾಂಟ್ ಎನ್ನುವವನು ತನ್ನ ವೈಯುಕ್ತಿಕ ಖುಷಿಗಾಗಿ ರೂಪಿಸಿದ ಲಾಂಗ್‌ವುಡ್ ಉದ್ಯಾನವನ ನನ್ನ ಮಟ್ಟಿಗೆ ವಿಶ್ವದ ಅತಿ ಸುಂದರ ಉದ್ಯಾನವನಗಳಲ್ಲಿ ಒಂದು. ದಿಲಾವೇರ್ ರಾಜ್ಯ ವಿಶ್ವಕ್ಕೇ ಹೆಸರಾಂತ ರಾಸಾಯನಿಕ ಕಂಪನಿ ಡೂಪಾಂಟ್‌ಗೆ ಕೇಂದ್ರ ಸ್ಥಾನ. 1798ರಲ್ಲಿ ಡೂಪಾಂಟ್ ಸಹೋದರರು ಅಮೇರಿಕೆಗೆ ಬಂದು ನೆಲೆಸಿ ಅಲ್ಲೆ ಇದ್ದು ಒಂದು ಸಣ್ಣ ಜಾಗದಲ್ಲಿ ತೋಟಗಾರಿಕೆ ಮಾಡಲು ಪ್ರಾರಂಭಿಸಿದರು. 1870ರ ನಂತರ ಪಿಯರ್ ಡ್ಯೂಪಾಂಟ್ ತನ್ನ ಕಂಪನಿ ಹಾಗೂ ಜನರಲ್ ಮೋಟಾರ್ಸ್ ಮುಖ್ಯಸ್ಥನಾಗಿ ತೋಟಗಾರಿಕೆ ಉದ್ಯಾನವನಗಳನ್ನು ಇನ್ನಷ್ಟು ವಿಸ್ತಾರ ಮಾಡಿದನಂತೆ. ಉದ್ಯಾನವನದ ಸೌಂದರ್ಯವನ್ನು ಪ್ರತಿಯೊಬ್ಬರೂ ಸವಿಯುವಂತೆ ಆಗಬೇಕೆಂದು ಆತ ತನ್ನ ಈ ಆಸ್ತಿಯನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡಿಬಿಟ್ಟನಂತೆ. ಅಂದಿನಿಂದ ಈ ಉದ್ಯಾನವನ್ನು ಒಂದು ಸಮಿತಿ ನಡೆಸುತ್ತದೆ.

150 ಎಕರೆ ವಿಶಾಲವಾಗಿರುವ ಈ ಉದ್ಯಾನದಲ್ಲಿ ಇರದಂತಹ ಗಿಡಗಳೇ ಇಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು. ಇಲ್ಲಿ ನೋಡಬೇಕಾದ ಮುಖ್ಯ ಉದ್ಯಾನ ಎಂದರೆ ಕನ್ಸರ್‌ವೇಟರಿ. ಜಗತ್ತಿನ ಉಷ್ಣ ವಲಯದಲ್ಲಿ ಇರುವಂತಹ ತರಹೇವಾರಿ ರೀತಿಯ ಸಸ್ಯಗಳನ್ನು ಹಾಗೂ ಹೂ ಗಿಡಗಳನ್ನು ಇಲ್ಲಿ ಬೆಳೆಸಲಾಗಿದೆ. ಗುಲಾಬಿ ಹೂವುಗಳಿಗೆಂದೇ ಬೇರೆ ಉದ್ಯಾನ ಇದೆ. ಎತ್ತರದ

ಹಸಿರು ಮರಗಳಿಗೆಂದೇ ಬೇರೆ ಜಾಗ. ಒಂದು ಜಾಗ ಇನ್ನೊಂದು ಜಾಗಕ್ಕಿಂತ ವಿಭಿನ್ನ. ಇಲ್ಲಿನ ಇಟಾಲಿಯನ್ ಜಲ ಉದ್ಯಾನ ಹಾಗೂ ಕಾರಂಜಿ ಉದ್ಯಾನ ಅತಿ ಸುಂದರವಾಗಿದೆ. ಉದ್ಯಾನದ ಒಂದು ಮೂಲೆಯಲ್ಲಿ ಈ ಉದ್ಯಾನದ ಕರ್ತೃ ಡೂಪಾಂಟ್‌ನ ಮನೆ ಹಿಂದೆ ಇದ್ದ ಹಾಗೆಯೇ ಸಂರಕ್ಷಿಸಲಾಗಿದೆ. ಮಕ್ಕಳಿಗೆಂದೇ ಬೇರೆ ಉದ್ಯಾನ ಮಾಡಿದ್ದಾರೆ. ಅಲ್ಲಿ ಕ್ರಿಸ್‌ಮಸ್ ವೇಳೆಯಲ್ಲಿ ವಿಶೇಷ ಪ್ರದರ್ಶನಗಳನ್ನು ಮಾಡುತ್ತಾರಂತೆ. ಈ ಉದ್ಯಾನ ನೋಡುತ್ತಾ ನೋಡುತ್ತಾ ನಾವು ಸಂಪೂರ್ಣವಾಗಿ ಮೈ ಮರೆತು ಕತ್ತಲಾದದ್ದೇ ಗೊತ್ತಾಗಲಿಲ್ಲ. ಉದ್ಯಾನದ ನೌಕರರು ಮನೆಗೆ ಹೋಗುವ ವೇಳೆಯಾಯಿತು ಏಳಿ ಎಂದು ಹೇಳುವವರೆಗೆ ನಾವು ಅಲ್ಲಿಯ ಸೌಂದರ್ಯವನ್ನು ಸವಿಯುತ್ತಾ ಇದ್ದು ನಂತರ ರಜನಿ ಮನೆಗೆ ಹೋಗಿ ವಾಸ್ತವ್ಯ ಮಾಡಿದೆವು.

26 ವಾಷಿಂಗ್‌ಟನ್ ಡಿ.ಸಿ

ರಜನಿ ಮನೆಯಿಂದ ಬೆಳಗ್ಗೆ ಬೇಗ ಎದ್ದು ಅವರ ಕಾರಿನಲ್ಲೇ ವಾಷಿಂಗ್‌ಟನ್‌ಗೆ ಹೊರಟೆವು. ಕಾರಣ ಇಷ್ಟೇ. ವಾಷಿಂಗ್‌ಟನ್ ನಗರಕ್ಕೆ ಪ್ರತಿ ದಿನ ಸಾವಿರ ಗಟ್ಟಲೆ ಪ್ರಯಾಣಿಕರು ಬರುವುದರಿಂದ ಬೇಗನೆ ಆ ಊರಿಗೆ ಹೋಗದಿದ್ದರೆ ನಮ್ಮ ವಾಹನವನ್ನು ನಿಲ್ಲಿಸಲು ಸೂಕ್ತವಾದ ಸ್ಥಳ ಸಿಗುವುದಿಲ್ಲ ಎಂದು. ಪೋಟೋಮ್ಯಾಕ್ ಹಾಗೂ ಅನಾಕೋಸ್ಟಿಯಾ ನದಿಗಳ ಸಂಗಮದ ಬಳಿ ಇರುವ ಈ ನಗರವನ್ನು 1800ರಲ್ಲಿ ಅಮೇರಿಕಾದ ರಾಜಧಾನಿಯಾಗಿ ಮಾಡಲಾಯಿತು. ಈ ಊರಿನ ಜನ ಸರ್ಕಾರಿ ಉದ್ಯೋಗ ಹಾಗೂ ಪರ್ಯಟನೆಯ ಮೇಲೆಯೇ ಅವಲಂಬಿತರಾಗಿದ್ದಾರೆ. ಪ್ರತಿ ವರ್ಷ ಈ ಊರನ್ನು ನೋಡಲು ಎರಡು ಕೋಟಿ ಜನ ಬರುತ್ತಾರಂತೆ. ವಾಷಿಂಗ್‌ಟನ್ ತಲುಪುತ್ತಿದ್ದಂತೆ ನಮಗೆ ಕಂಡದ್ದು ಈ ನಗರದ ಮಧ್ಯ ಭಾಗದಲ್ಲಿ ಬಹಳ ವಿಶಾಲವಾದ ಹಸಿರು ಹುಲ್ಲಿರುವ ಖುಲ್ಲಾ ಜಾಗ, ಇದಕ್ಕೆ ಮಾಲ್ ಎಂದು ಕರೆಯುತ್ತಾರೆ. ಈ ಮಾಲ್‌ನ ಪೂರ್ವ ಮೂಲೆಯಲ್ಲಿ ಕ್ಯಾಪಿಟಲ್ ಹಿಲ್ ಇದ್ದರೆ, ಪಶ್ಚಿಮ ಮೂಲೆಯಲ್ಲಿ ಲಿಂಕನ್ ಸ್ಮಾರಕವಿದೆ. ಮಾಲ್‌ನ ಎರಡೂ ಬದಿಗಳಲ್ಲಿ ಈ ಊರಿನ ವಿಶ್ವ ವಿಖ್ಯಾತ ಸಂಗ್ರಹಾಲಯಗಳು ಇವೆ.

ಊರಿನ ಮಧ್ಯಭಾಗ ತಲುಪಿ ಒಂದು ಖಾಲಿ ಜಾಗದಲ್ಲಿ ನಾವು ನಮ್ಮ ವಾಹನವನ್ನು ಪಾರ್ಕ್ ಮಾಡಿದೆವು. ಪಕ್ಕದಲ್ಲಿಯೇ ಇದ್ದದ್ದು ರಾಷ್ಟ್ರೀಯ ವಾಯು ಹಾಗೂ ಬಾಹ್ಯಾಕಾಶ ವಸ್ತು ಸಂಗ್ರಹಾಲಯ. ಈ ವಸ್ತು ಸಂಗ್ರಹಾಲಯದಲ್ಲಿ ಬಾಹ್ಯಾಕಾಶ ಹಾಗೂ ವಿಮಾನಯಾನಕ್ಕೆ ಸಂಬಂಧಪಟ್ಟ ಎಲ್ಲಾ ತರಹದ ವಸ್ತುಗಳು ಇವೆ. ಮೊದಲಿಗೆ ವಿಮಾನ ಹೇಗೆ ತಯಾರಾಯಿತು. ಹಿಂದಿನ ಕಾಲದ ವಿಮಾನ ಯಾನ ಹೇಗಿತ್ತು, ಮಾನವ ಬಾಹ್ಯಾಕಾಶಕ್ಕೆ ಹೇಗೆ ಹೋದ, ಅಮೇರಿಕನ್ನರು ಚಂದ್ರನ ಮೇಲೆ ಇಳಿದಾಗ ಕಂಡು ಬಂದ ದೃಶ್ಯಗಳು ಹೀಗೆ ತರಹೇವಾರು ಘಟನೆಗಳ ಪ್ರದರ್ಶನ ಅಲ್ಲಿದೆ. ಈ ಸಂಗ್ರಹಾಲಯದಲ್ಲಿಯೇ ಒಂದು ವಿಶಾಲವಾದ Imax ಚಿತ್ರಮಂದಿರ ಇದೆ. ಬೃಹತ್ ಪರದೆಯ ಮೇಲೆ ಚಿತ್ರಗಳನ್ನು ತೋರಿಸುತ್ತಾರೆ. ಇಲ್ಲಿ ಚಿತ್ರ ವೀಕ್ಷಿಸುವುದೇ ಒಂದು ಅವಿಸ್ಮರಣೀಯ ಅನುಭವ. ನಾವೇ ಬಾಹ್ಯಾಕಾಶದಲ್ಲಿ ವಿಹರಿಸುತ್ತಿದ್ದೇವೇನೋ ಎನ್ನುವ ಭಾವನೆ ಮೂಡುತ್ತದೆ.

ಈ ಸಂಗ್ರಹಾಲಯಗಳನ್ನು ನೋಡಿದ ನಂತರ ನಾವು ರಾಷ್ಟ್ರೀಯ ಕಲಾ ಗ್ಯಾಲರಿಗೆ ಹೋದೆವು. ರಾಷ್ಟ್ರೀಯ ಕಲಾ ಗ್ಯಾಲರಿಯಲ್ಲಿ ಎರಡು ಬೇರೆ ಬೇರೆ ಕಟ್ಟಡಗಳು ಇದ್ದು ಪೂರ್ವ ಕಟ್ಟಡದಲ್ಲಿ ಯೂರೋಪಿಯನ್ ಹಾಗೂ ಅಮೇರಿಕನ್ ಪೈಂಟಿಂಗ್‌ಗಳು ಮತ್ತು ಶಿಲ್ಪಗಳು ಇವೆ. ಪಶ್ಚಿಮ ಕಟ್ಟಡದಲ್ಲಿ 20ನೇ ಶತಮಾನದ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಲಾಗಿದೆ. ಜಗತ್ತಿನ ಅತ್ಯಂತ ಅಮೂಲ್ಯವಾದ ಪೇಂಟಿಂಗ್‌ಗಳಲ್ಲದೆ ಹೆಸರಾಂತ ಚಿತ್ರಕಾರರ ಕೃತಿಗಳು ಈ ಸಂಗ್ರಹಾಲಯದಲ್ಲಿ ಲಭ್ಯವಿದೆ. ನಮ್ಮ ಜೊತೆ ಇದ್ದ ರಜನಿ ನಮ್ಮನ್ನು ಅವಸರಿಸದೆ ಇದ್ದರೆ ನಾವು ಆ ಸಂಗ್ರಹಾಲಯದಲ್ಲೇ ಪೂರ್ತಿ ದಿನ ಕಳೆದುಬಿಡುತ್ತಿದ್ದೇವೇನೋ. ಈ ಸಂಗ್ರಹಾಲಯದ ಇನ್ನೊಂದು ಪಕ್ಕದಲ್ಲಿ ಖನಿಜಗಳಿಗೆ ಸಂಬಂಧಿಸಿದ ಸಂಗ್ರಹಾಲಯ ಇದೆ. ವಿಶ್ವದ ಪ್ರಖ್ಯಾತ ವಜ್ರಗಳು, ಕಲ್ಲುಗಳು ರತ್ನಗಳು ಇತ್ಯಾದಿ ಇಲ್ಲಿವೆ. ಇಲ್ಲಿಗೆ ಹೋಗುವ ಯಾವುದೇ ಮಹಿಳೆಯೂ ಸುಲಭವಾಗಿ ವಾಪಸ್ ಬರುವುದಿಲ್ಲ. ಈ ಸಂಗ್ರಹಾಲಯವನ್ನು ಪೂರ್ತಿಯಾಗಿ ನೋಡಲು ಆಗದಿದ್ದರೂ ರಾತ್ರಿಯಾಗುವುದರ ಒಳಗಡೆ ವಾಷಿಂಗ್‌ಟನ್ ನಗರದ ಪ್ರಾಮುಖ್ಯ ಸ್ಥಳಗಳನ್ನು ನಾವು ನೋಡಲೇ ಬೇಕಾದ್ದರಿಂದ ನಾವು ಅಲ್ಲಿಂದ ಹೊರಗಡೆ ಬಂದು ಲಿಂಕನ್ ಸ್ಮಾರಕದತ್ತ ಹೆಜ್ಜೆ ಹಾಕಿದೆವು.

ಲಿಂಕನ್ ಸ್ಮಾರಕ ನನಗಂತೂ ತುಂಬಾ ಹಿಡಿಸಿತು. ದೇಗುಲದಂತೆ ಕಟ್ಟಿರುವ ಈ ಸ್ಮಾರಕದಲ್ಲಿ ಲಿಂಕನ್ ಮಹಾಶಯನ ಅಮೃತ ಶಿಲೆಯ ದೊಡ್ಡ ಪ್ರತಿಮೆ ಇದೆ. 197 ಅಡಿ ಎತ್ತರ ಇರುವ ಈ ಪ್ರತಿಮೆಯನ್ನು ಡೇನಿಯಾ ಫ್ರಿಂಟ್ ಎಂಬ ಒಬ್ಬ ಶಿಲ್ಪಿ ಕೆತ್ತಿದನಂತೆ. ಪ್ರತಿಮೆಯ ಹಿಂದುಗಡೆ ಇರುವ ಗೋಡೆ ಮೇಲೆ ಕೆಳಕಂಡ ವಾಕ್ಯ ಬರೆದಿದ್ದಾರೆ: "ಯಾವ ರೀತಿ ತನ್ನ ಜನಗಳಿಗಾಗಿ ರಾಷ್ಟ್ರವನ್ನು ರಕ್ಷಿಸಿದನು ಎಂದು ಜನಗಳ ಹೃದಯದಲ್ಲಿ ಭಾವನೆಗಳು ಮೂಡಿವೆಯೋ ಅದೇ ರೀತಿ ಈ ದೇಗುಲದಲ್ಲಿ ಅಬ್ರಹಾಂ ಲಿಂಕನ್‌ನ ನೆನಪು ಚಿರಸ್ಥಾಯಿಯಾಗಿದೆ" ಹಿಂದಿನ ಕಾಲದ ಗ್ರೀಕ್ ದೇಗುಲದ ಮಾದರಿಯಲ್ಲಿ ಅಮೇರಿಕನ್ ವಿನ್ಯಾಸಕಾರ ಹೆನ್ರಿ ಬೇಕನ್ ಈ ಕಟ್ಟಡವನ್ನು 1914ರಲ್ಲಿಯೇ ಕಟ್ಟಲು ಪ್ರಾರಂಭಿಸಿ 1922ರಲ್ಲಿ ಮುಗಿಸಿದನಂತೆ. ಕಟ್ಟಡದ ಹೊರಗಡೆ 36 ಭಾರೀ ಕಂಬಗಳು ಇದ್ದು ಲಿಂಕನ್ ಸತ್ತ ಕಾಲಕ್ಕೆ ಅಮೇರಿಕಾದಲ್ಲಿ ಇದ್ದ 36 ರಾಜ್ಯಗಳನ್ನು ಈ ಕಂಬಗಳು ಪ್ರತಿಬಿಂಬಿಸುತ್ತವೆ. ಈ ಸ್ಮಾರಕದ ಉತ್ತರ ಹಾಗೂ ದಕ್ಷಿಣ ಭಾಗದಲ್ಲಿ ಅಬ್ರಹಾಂ ಲಿಂಕನ್ ಮಾಡಿದ ಪ್ರಮುಖ ಭಾಷಣಗಳನ್ನು ಕೆತ್ತಿದ್ದಾರೆ. ಅದರಲ್ಲಿ ಮುಖ್ಯವಾದುದು ಲಿಂಕನ್ ಮಾಡಿದ ಗೆಟಿಸ್ ಬರ್ಗ್ ಭಾಷಣ. ಸ್ವತಂತ್ರತೆಯ ತಿರುಳನ್ನು ನಿರೂಪಿಸಿರುವ ಭಾಷಣ ಎಂದು ಪ್ರತೀತಿ ಇರುವ ಇದೇ ಭಾಷಣದಲ್ಲೇ "ಜನರ, ಜನರಿಂದ, ಜನರಿಗಾಗಿ ನಮ್ಮ ಸರ್ಕಾರ" ಎಂಬ ಪ್ರಜಾಪ್ರಭುತ್ವದ ಮೂಲ ತತ್ವದ ವಾಕ್ಯ ಇವೆ. ಈ ಭಾಷಣ ಓದುತ್ತಿದ್ದಂತೆ ಕಣ್ಣುಗಳಲ್ಲಿ ನೀರೇ ಬಂತು. ಲಿಂಕನ್ ಪ್ರತಿಮೆ ಕೆಳಗೆ ನಿಂತು ಫೋಟೋ ತೆಗೆಸಿಕೊಂಡ ನಂತರ ಅಲ್ಲೇ ಪಕ್ಕದಲ್ಲಿದ್ದ ವಿಯಟ್ನಾಂ ಸೈನಿಕರ ಸ್ಮಾರಕಕ್ಕೆ ಹೋದೆವು.


ಅಮೇರಿಕಾ ದೇಶ ವಿಯಟ್ನಾಂ ಯುದ್ಧದಲ್ಲಿ ಭಾಗಿಯಾಗಿ ತನ್ನ ಹಲವಾರು ಸೈನಿಕರನ್ನು ಬಲಿ ಕೊಟ್ಟಿತು. ಯುದ್ಧದಲ್ಲಿ ಮಡಿದ ಸೈನಿಕರಿಗಾಗಿ ಒಂದು ಸ್ಮಾರಕವನ್ನು ಕಟ್ಟಿ ಈ ಸ್ಮಾರಕದಲ್ಲಿ ಹುತಾತ್ಮರ ಹೆಸರುಗಳನ್ನು ಕೆತ್ತಲಾಗಿದೆ. ಎಷ್ಟೋ ಜನ ಪ್ರವಾಸಿಗರು ಅಲ್ಲಿ ಬಂದು ತಮ್ಮ ಕುಟುಂಬದವರ ಹೆಸರುಗಳನ್ನು ಹುಡುಕಿ ಆ ಹೆಸರಿನ ಮೇಲೆ ಪುಷ್ಪಗುಚ್ಛವನ್ನು ಇಡುತ್ತಿದ್ದುದನ್ನು ಕಂಡೆ. ಅಮೇರಿಕಾ ದೇಶ ವಿಯಾಟ್ನಾಂ ಯುದ್ಧದಲ್ಲಿ ಭಾಗವಹಿಸಬಾರದಾಗಿತ್ತು ಎನ್ನುವ ನನ್ನ ನಂಬಿಕೆಗೆ ಈ ಹುತಾತ್ಮರ ಸ್ಮಾರಕ ಪುಷ್ಟಿ ಕೊಟ್ಟಿತು.

ಹುತಾತ್ಮರ ಸ್ಮಾರಕ ನೋಡಿದ ಬಳಿಕ ಪಕ್ಕದಲ್ಲಿದ್ದ ವಾಷಿಂಗ್‌ಟನ್ ಸ್ಮಾರಕಕ್ಕೆ ಹೋದೆವು. ಅಮೇರಿಕ ರಾಷ್ಟ್ರದ ಮೊದಲ ಪ್ರಧಾನಿ ಜಾರ್ಜ್ ವಾಷಿಂಗ್‌ಟನ್ ನೆನಪಿಗಾಗಿ ಉದ್ದನೆಯ ದೊಡ್ಡ ಗೋಪುರ ಕಟ್ಟಲಾಗಿದೆ. ರಾಬರ್ಟ್ ಮಿಲ್ಸ್ ಎಂಬ ವಿನ್ಯಾಸಕಾರ ರೂಪಿಸಿದ ಒಳಗಡೆ ಟೊಳ್ಳಾಗಿರುವ ಈ ಕಟ್ಟಡ 555 ಅಡಿ ಎತ್ತರ ಇದೆ. ಕಟ್ಟಡದ ಹೊರಭಾಗವನ್ನು ಬಿಳಿ ಬಣ್ಣದ ಅಮೃತ ಶಿಲೆಯಿಂದ ಕೆತ್ತಲಾಗಿದೆ. ಲಿಫ್ಟಿನ ಮೂಲಕ ಗೋಪುರದ ಮೇಲೆ ಏರಬಹುದು.

ವಾಷಿಂಗ್‌ಟನ್ ನಗರದ ಅತ್ಯಂತ ಹೆಸರಾಂತ ಕಟ್ಟಡ ಎಂದರೆ ಕ್ಯಾಪಿಟಲ್. ಒಂದು ಗುಡ್ಡದ ಮೇಲೆ ಕಟ್ಟಲಾಗಿರುವ ಈ ಭವ್ಯ ಕಟ್ಟಡದಲ್ಲಿಯೇ ಅಮೇರಿಕಾದ ಪಾರ್ಲಿಮೆಂಟ್ ಸಭೆ ಸೇರುವುದು. ಈ ಕಟ್ಟಡ ನಿರ್ಮಾಣ 1793ರಲ್ಲಿ ಪ್ರಾರಂಭವಾಯಿತು. 1800 ರಿಂದ ಇಲ್ಲಿಯೇ ಅಮೇರಿಕದ ಸೆನೆಟ್ ಹಾಗೂ ಹೌಸ್ ಆಫ್ ರೆಪ್ರೆಸೆಂಟಿಟಿವ್ ಸಭೆ ಸೇರುವುದು. ಈ ಕಟ್ಟಡದ ಮಧ್ಯ ಭಾಗದಲ್ಲಿರುವ ಹೆಸರಾಂತ ಗೋಪುರ 180 ಅಡಿ ಎತ್ತರವಿದ್ದು ಭವ್ಯವಾಗಿ ಕಂಡು ಬರುತ್ತದೆ. ಕ್ಯಾಪಿಟಲ್ ಕಟ್ಟಡದ ಮುಂದುಗಡೆಯೇ ಅಮೇರಿಕಾದ ಸುಪ್ರಿಮ್ ಕೋರ್ಟ್ ಕಟ್ಟಡ ಇದೆ. ಇದರ ಹತ್ತಿರದಲ್ಲಿಯೇ ಹೆಸರಾಂತ ಲೈಬ್ರರಿ ಆಫ್ ಕಾಂಗ್ರೆಸ್ ಗ್ರಂಥಾಲಯ ಇದೆ. ಇದೆಲ್ಲವನ್ನೂ ನೋಡುವಷ್ಟರಲ್ಲಿ ನನ್ನ ಹೆಂಡತಿ ಅಮೇರಿಕಾ ಅಧ್ಯಕ್ಷರ ಮನೆಯನ್ನು ನೋಡಲೇಬೇಕು ಎಂದು ಆತುರ ಮಾಡಿದಳು. ಹೀಗಾಗಿ ನಾವು ಕಾರಿನಲ್ಲಿ ಕುಳಿತು ವೈಟ್ ಹೌಸ್ ಎಂದು ಕರೆಯುವ ಅಮೇರಿಕಾ ಅಧ್ಯಕ್ಷರ ಮನೆ ಹತ್ತಿರ ಕಾರು ನಿಲ್ಲಿಸಿದೆವು. ಅಮೇರಿಕಾ ಅಧ್ಯಕ್ಷರ ಮನೆಯನ್ನು ನೂರಾರು ಬಾರಿ ಟೆಲಿವಿಜನ್‌ನಲ್ಲಿ ನೋಡಿದ್ದರಿಂದ ನನಗೆ ಹೊಸತೇನನ್ನೂ ನೋಡುತ್ತಿದ್ದೇನೆ ಎನಿಸಲಿಲ್ಲ. ಆದರೂ ಮನೆ ಒಳಗೆ ಒಮ್ಮೆ ಹೋಗಿ ವಿಶ್ವದ ಅತಿ ಶ್ರೀಮಂತ ರಾಷ್ಟ್ರದ ಅಧ್ಯಕ್ಷರು ಯಾವ ರೀತಿ ಜೀವನ ನಡೆಸುತ್ತಾರೆಂದು ನೋಡುವ ಆಸೆಯಾಯಿತು. ಕಟ್ಟಡದ ಒಳಗೆ ಸಾರ್ವಜನಿಕರಿಗೆ ಪ್ರವೇಶ ಇದೆ ಎಂದು ತಿಳಿದು ಪ್ರವೇಶ ದ್ವಾರದ ವರೆಗೆ ಹೋದರೆ, ಪ್ರವೇಶದ ವೇಳೆ ಮುಗಿದಿದೆ ಎಂದು ಗೊತ್ತಾಯಿತು. ವಾರಕ್ಕೆ ಎರಡು ಬಾರಿ ಮಾತ್ರ ಈ ಮನೆಗೆ ಸಾರ್ವಜನಿಕರಿಗೆ ಪ್ರವೇಶ ಇದೆಯಂತೆ.

ಮನೆ ಒಳಗೆ ಹೋಗಲು ಆಗಲಿಲ್ಲವಲ್ಲಾ ಎಂದು ಬೇಜಾರು ಮಾಡಿಕೊಂಡು ನಾವು ಅಲ್ಲೆ ನಿಂತಿದ್ದಾಗ, ಆ ಕಟ್ಟಡದ ಹಿಂದಿನ ಭಾಗದ ಗೇಟಿನಲ್ಲಿ ಪೊಲೀಸರು ಜಮಾಯಿಸಿದ್ದನ್ನು ರಜನಿ ನೋಡಿದವಳೇ ಒಬ್ಬ ಪೋಲಿಸನನ್ನು ನೀವು ಏಕೆ ಇಲ್ಲಿದ್ದೀರಿ ಎಂದು ಕೇಳಿದಾಗ ಆತ ಅಧ್ಯಕ್ಷರ ಪತ್ನಿ ಹೊರಗೆ ಹೋಗುತ್ತಿದ್ದಾರೆ ಎಂದ. ಕೂಡಲೇ ನಾವೆಲ್ಲರೂ ಶ್ವೇತಭವನದ ಪಕ್ಕದಲ್ಲಿ ನಿಂತುಕೊಂಡೆವು. ಮನೆ ಒಳಗಿನಿಂದ ಒಂದು ಭವ್ಯವಾದ ಕರಿ ಬಣ್ಣದ ಕಾರು ಬಂದೊಡನೆ ವಿಶಾಲವಾದ ಗೇಟ್ ತೆರೆಯಿತು. ಆ ಕಾರು ಅರ್ಧ ನಿಮಿಷ ನಮ್ಮ ಮುಂದೆ ನಿಂತಿತು. ಅದರಲ್ಲಿ ಹಿಲೇರಿ ಕ್ಲಿಂಟನ್ ಕುಳಿತಿದ್ದರು. ಆಕೆ ನಮ್ಮತ್ತ ಕೈ ಬೀಸಿ ಕಾರಿನಲ್ಲಿ ಹೊರಟು ಹೋದರು. ಅಂತೂ ಶ್ವೇತ ಭವನವ ಒಳಗೆ ಹೋಗದಿದ್ದರೂ ಅಮೇರಿಕಾದ ಪ್ರಥಮ ಮಹಿಳೆಯ ದರ್ಶನ ಮಾಡಿದೆವಲ್ಲಾ ಎಂದು ತೃಪ್ತಿ ಪಟ್ಟುಕೊಂಡೆವು. ಅಲ್ಲಿಂದ ಮುಂದೆ ಶ್ವೇತ ಭವನದ ಮುಂಭಾಗಕ್ಕೆ ಹೋಗಿ ಗೇಟ್ ಮುಂದೆ ನಿಂತು ಫೋಟೋ ತೆಗೆಸಿಕೊಂಡೆವು. ನಮ್ಮ ದೇಶದ ಪ್ರಧಾನ ಮಂತ್ರಿಗಳ ಮನೆಯ ಅರ್ಧ ಕಿ.ಮೀ. ದೂರದಲ್ಲಿಯೂ ಯಾರನ್ನೂ ಸೇರಿಸುವುದಿಲ್ಲ. ಆದರೆ ಅಮೇರಿಕಾ ಅಧ್ಯಕ್ಷರ ಮನೆ ಮುಂದೆ ಯಾರು ಬೇಕಾದರೂ ನಿಂತು ಫೋಟೋ ತೆಗೆಸಿಕೊಳ್ಳಬಹುದು. ಅಧ್ಯಕ್ಷರ ಮನೆ ಮುಂದೆ

ಇರುವ ಮುಖ್ಯ ರಸ್ತೆಯಲ್ಲಿ ವಾಹನ ಸಂಚಾರ ನಿಷೇಧ. ಹೀಗಾಗಿ ಆ ರಸ್ತೆಯಲ್ಲಿ ಹಲವಾರು ಜನ ಯುವಕ ಯುವತಿಯರು ಸ್ಕೇಟಿಂಗ್ ಮಾಡುತ್ತಾ ಕುಣಿದು ಕುಪ್ಪಳಿಸುತ್ತಿದ್ದರು. ಶ್ವೇತ ಭವನದ ಸೌಂದರ್ಯವನ್ನು ಅಸ್ವಾದಿಸುವುದರಲ್ಲಿ ವೇಳೆ ಮುಗಿಯುತ್ತಾ ಬಂದಿತ್ತು. ವಾಷಿಂಗ್‌ಟನ್‌ನಲ್ಲಿ ನೋಡಬೇಕಾದ ಸ್ಥಳಗಳನ್ನೆಲ್ಲಾ ನೋಡಿದ ತೃಪ್ತಿಯಿಂದ ನಾವು ರಜನಿ ಮನೆಗೆ ವಾಪಸ್ಸಾಗಲು ಕಾರನ್ನು ಏರಿದೆವು.



ಅಮೇರಿಕದ "ಸೂರ್ಯಕಿರಣ" ರಾಜ್ಯ ಫ್ಲಾರಿಡಾ

ಅಮೇರಿಕಾದ ಪೂರ್ವ ಭಾಗದ ದಕ್ಷಿಣ ತುದಿಯಲ್ಲಿರುವ ಫ್ಲಾರಿಡಾ ರಾಜ್ಯ ಒಂದು ಪರ್ಯಾಯ ದ್ವೀಪ. ಇದರ ಪೂರ್ವ ಬದಿಯಲ್ಲಿ ಅಟ್ಲಾಂಟಿಕ್ ಮಹಾ ಸಾಗರವಿದ್ದರೆ ಪಶ್ಚಿಮದಲ್ಲಿ ಗಲ್ಫ್ ಆಫ್ ಮೆಕ್ಸಿಕೋ ಇದೆ. ಫ್ಲಾರಿಡಾದ ದಕ್ಷಿಣ ಭಾಗದಲ್ಲಿ ಕ್ಯೂಬಾ ಹಾಗೂ ಜಮೈಕಾ ದ್ವೀಪಗಳು ಇವೆ. ಅಮೇರಿಕಾ ದೇಶದಲ್ಲಿರುವ ರಾಜ್ಯಗಳಲ್ಲಿ ಅತಿ ಹೆಚ್ಚು ಪರ್ಯಟಕರನ್ನು ಆಕರ್ಷಿಸುವ ರಾಜ್ಯ ಫ್ಲಾರಿಡಾ ಆಗಿರುವುದರಿಂದ ಈ ರಾಜ್ಯವನ್ನು ನೋಡಲೇ ಬೇಕೆಂದು ತೀರ್ಮಾನಿಸಿ ನಾವು ದಿಲಾವೇರ್‌ನಿಂದ ಬಸ್ ಮೂಲಕ ಆರ್ಲಾಂಡೋಗೆ ಹೊರಟೆವು.

ಫ್ಲಾರಿಡಾ ರಾಜ್ಯ ಸಮುದ್ರ ಮಟ್ಟದಲ್ಲೇ ಇದ್ದು. ಇಲ್ಲಿನ ಅತಿ ಎತ್ತರದ ಪ್ರದೇಶ ಸಮುದ್ರ ಮಟ್ಟಕ್ಕಿಂತ ಕೇವಲ 100 ಅಡಿ ಎತ್ತರದಲ್ಲಿದೆ. ಸುಮಾರು ಎರಡು ಸಾವಿರ ಕಿ.ಮೀ. ಸಮುದ್ರದ ತೀರ ಇರುವ ಫ್ಲಾರಿಡಾಗೆ ಮೋಜು ಮಾಡಲೆಂದೇ ವಿಶ್ವದ ಎಲ್ಲೆಡೆಯಿಂದ ಪರ್ಯಟಕರು ಬರುತ್ತಾರೆ. ಫ್ಲಾರಿಡಾದಲ್ಲಿ ನೋಡಬೇಕಾದ ಮುಖ್ಯ ಸ್ಥಳಗಳು ನಾಲ್ಕು - ಅವುಗಳೆಂದರೆ, ಆರ್ಲಾಂಡೋ, ಕೇಪ್ ಕೆನೆವಿರಾಲ್, ಮಿಯಾಮಿ ಬೀಚ್ ಹಾಗೂ ಟಾಂಪಾ. ಈ ರಾಜ್ಯದಲ್ಲಿ ವರ್ಷದ ಬಹಳಷ್ಟು ದಿನಗಳು ಹದವಾದ ಉಷ್ಣ ಹವ ಇರುವುದರಿಂದ ಮತ್ತು ಈ ರಾಜ್ಯದಲ್ಲಿ ಸೂರ್ಯನ ಬೆಳಕು ಯಥೇಚ್ಛವಾಗಿ ದೊರೆಯುವುದರಿಂದ ಈ ರಾಜ್ಯಕ್ಕೆ Sun Shine ರಾಜ್ಯ ಎಂದು ಕರೆಯುತ್ತಾರೆ ಎಂದು ಬಸ್ಸಿನಲ್ಲಿ ನಮ್ಮ ಜೊತೆ ಪ್ರಯಾಣಿಸುತ್ತಿದ್ದ ಇಂಗ್ಲೆಂಡಿನ ಸಹ ಪ್ರಯಾಣಿಕ ತಿಳಿಸಿದ.

ನಮ್ಮ ಬಸ್ ಆರ್‌ಲ್ಯಾಂಡೋ ಮುಟ್ಟಿದಾಗ ಘಂಟೆ ಆರಾಗಿತ್ತು. ನಾವು ಟ್ಯಾಕ್ಸಿ ಮಾಡಿಕೊಂಡು ಮೊದಲೇ ಕೋಣೆ ಕಾಯ್ದಿರಿಸಿದ್ದ ಹೋಟೆಲ್‌ಗೆ ಹೋದೆವು. ಅಲ್ಲಿಯ ಸ್ವಾಗತಕಾರ ನಮ್ಮನ್ನೆದುರುಗೊಂಡು "ಈ ಊರಿನಲ್ಲಿ ನೋಡಬೇಕಾದದ್ದು ಮೂರು ಮುಖ್ಯ ಥೀಮ್ ಪಾರ್ಕುಗಳು ಇವೆ. (ಥೀಮ್ ಪಾರ್ಕ್ ಎಂದರೆ ಒಂದೇ ವಿಷಯದ ಬಗ್ಗೆ ಕೇಂದ್ರಿಕೃತವಾದ ಮನರಂಜನಾ ಕೇಂದ್ರ - ಡಿಸ್ನಿ ಲ್ಯಾಂಡ್ ವಾಲ್ಟ್ ಡಿಸ್ನಿ ರಚಿಸಿದ ಕಾಮಿಕ್ ಹಾಗೂ ಸಿನಿಮಾಗಳ ಬಗ್ಗೆ ರೂಪಿತವಾಗಿದ್ದರೆ ಸೀ ವರ್ಡ್‌ನಲ್ಲಿ ಸಮುದ್ರದ ಜಂತುಗಳ ಬಗ್ಗೆಯೇ ಪ್ರದರ್ಶನ ಇರುತ್ತದೆ) ಆ ಮೂರು ಯಾವುವೆಂದರೆ ಯೂನಿವರ್ಸಲ್ ಸ್ಟುಡಿಯೋ, ಎಪ್‌ಕಾಟ್ ಸೆಂಟರ್ ಹಾಗೂ ಡಿಸ್ನಿ ವರ್ಲ್ಡ್. ಈ ಮೂರು ಜಾಗಗಳಿಗೆ ಇಲ್ಲಿಂದಲೇ ಉಚಿತ ಬಸ್ ವ್ಯವಸ್ಥೆ ಇದೆ" ಎಂದು ಹೇಳಿ ಮೂರು ಪಾರ್ಕುಗಳ ಪ್ರವೇಶಕ್ಕೆ ಡಿಸ್ಕೌಂಟ್ ಕೂಪನ್ನುಗಳನ್ನು ನೀಡಿದ.

ನಾವು ರೂಮಿಗೆ ಹೋಗಿ ಯಾವ ಥೀಮ್ ಪಾರ್ಕ್ ನೋಡವುದೆಂದು ವಿಚಾರ ಮಾಡಿದೆವು. ಮುಂದೆ ನಮ್ಮ ಪ್ರಯಾಣದಲ್ಲಿ ನಾವು ಕ್ಯಾಲಿಫೋರ್ನಿಯಾದ ಡಿಸ್ನಿಲ್ಯಾಂಡ್ ನೋಡಲು ಉದ್ದೇಶ ಹೊಂದಿದ್ದರಿಂದ ಹಾಗೂ ಆರ್ಲಾಂಡೋನಲ್ಲಿ ಕೇವಲ ಎರಡು ದಿನ ಇರಲು ಬಂದಿದ್ದರಿಂದ ಯೂನಿವರ್ಸಲ್ ಸ್ಟೂಡಿಯೋ ಮಾತ್ರ ನೋಡಲು ತೀರ್ಮಾನಿಸಿದೆವು.

ಸ್ನಾನ ಮುಗಿಸಿ ಹೋಟೆಲ್ ಬಾಗಿಲಲ್ಲಿ ಯೂನಿವರ್ಸಲ್‌ಗೆ ಹೋಗುವ ಬಸ್ ಕಾಯುತ್ತಿದ್ದಾಗ ನಮ್ಮ ಹೋಟೆಲ್ ಪಕ್ಕದ ಮೈದಾನದಲ್ಲಿ ಬಂಗಿ ಜಂಪಿಂಗ್ ನಡೆಯುತ್ತಾ ಇದ್ದುದನ್ನು ನೋಡಿ ತಲ್ಲೀನರಾಗಿ ಅಲ್ಲೇ ನಿಂತೆವು. ಬಂಗಿ ಜಂಪಿಂಗ್ ಎಂದರೆ ಕಾಲುಗಳಿಗೆ ಹಗ್ಗ ಕಟ್ಟಿಕೊಂಡು ಎತ್ತರದ ಕಟ್ಟೆಯಿಂದ ಹಾರುವುದು. ಕಾಲಿಗೆ ಕಟ್ಟಿರುವ ಹಗ್ಗ ನೆಲಕ್ಕೆ ಬೀಳುವುದನ್ನು ತಡೆಯುತ್ತದೆ!

ಅಷ್ಟರಲ್ಲಿ ಅಲ್ಲಿಗೆ ಬಂದ ಬಸ್ ನಮ್ಮನ್ನು ಯೂನಿವರ್ಸಲ್ ಸ್ಟುಡಿಯೋಗೆ ಕರೆದೊಯ್ದಿತು. ಅದರ ಹೆಸರೇ ಸೂಚಿಸುವಂತೆ ಈ ಥೀಮ್ ಪಾರ್ಕಿನಲ್ಲಿ ಚಲನಚಿತ್ರಕ್ಕೆ ಸಂಬಂಧಿಸಿದಂತೆ ಹಲವಾರು ಆಕರ್ಷಣೆಗಳು ಇವೆ. ಯೂನಿವರ್ಸಲ್ ಸ್ಟುಡಿಯೋ ಹಾಲಿವುಡ್‌ನ ಹೆಸರಾಂತ ಚಿತ್ರ ತಯಾರಿಕಾ ಸಂಸ್ಥೆ. ಜಾಸ್, ಕಿಂಗ್ ಕಾಂಗ್ ಮುಂತಾದ ಚಿತ್ರಗಳನ್ನು ಈ ಸಂಸ್ಥೆ ತಯಾರಿಸಿದೆ. ಆರ್ಲಾಂಡೋದ ಥೀಮ್ ಪಾರ್ಕ್‌ನಲ್ಲಿ ಈ ಸಂಸ್ಥೆ ತಯಾರಿಸಿದ ಹೆಸರಾಂತ ಚಿತ್ರಗಳ ಸನ್ನಿವೇಶಗಳನ್ನು ಅಳವಡಿಸಿ. ಅವುಗಳಲ್ಲಿ ನೋಡುಗರು ಬೆರಗುಗೊಳ್ಳುವಂತೆ ಮಾಡಲಾಗಿದೆ. ಉದಾಹರಣೆಗೆ ನಮ್ಮನ್ನು ಒಂದು ಸಣ್ಣ ರೈಲಿನಲ್ಲಿ ಕೂರಿಸಿ ಒಂದು ದೊಡ್ಡ ಸುರಂಗ ಮಾರ್ಗದಲ್ಲಿ ಒಯ್ಯುತ್ತಾರೆ. ಮಾರ್ಗ ಮಧ್ಯದಲ್ಲಿ ಸಿನಿಮಾದ ಭಯಾನಕ ಪಾತ್ರಗಳು ಇದಕ್ಕಿದ್ದಂತೆ ಎದುರಾಗಿ ಭಯ ಮೂಡುವಂತೆ ಮಾಡುತ್ತವೆ. ನಮ್ಮನ್ನು ದೋಣಿಯಲ್ಲಿ ಒಯ್ಯುವಾಗ ಆ ದೋಣಿಗೆ "ಜಾಸ್" ಸಿನಿಮಾದಲ್ಲಿ ಬಂದಂತಹ ಶಾರ್ಕ್ ಮೀನು ಆಟ್ಯಾಕ್ ಮಾಡುತ್ತದೆ. ಇದೇ ರೀತಿ ಹಲವು ಹತ್ತು ಸ್ಥಳಗಳಲ್ಲಿ ಸಿನಿಮಾಗಳಲ್ಲಿ ನಡೆದ ಘಟನೆಗಳನ್ನು ನಾವೇ ಅನುಭವಿಸಬಹುದು. ಇದಲ್ಲದೆ ಸಿನಿಮಾ ಚಿತ್ರೀಕರಣ ಹೇಗೆ ಮಾಡಲಾಗುತ್ತದೆ. ಎನ್ನುವುದನ್ನು ತೋರಿಸುತ್ತಾರೆ. ಆಲ್‌ಫ್ರಿಡ್ ಹಿಚ್ ಕಾಕ್ ಚಿತ್ರಗಳಲ್ಲಿ ಸಸ್‌ಪೆನ್ಸ್ ದೃಶ್ಯಗಳನ್ನು ಹೇಗೆ ತೆಗೆಯಲಾಯಿತು ಎನ್ನುವುದನ್ನು ತೋರಿಸುತ್ತಾರೆ. ಸಿನಿಮಾದಲ್ಲಿ ಭೂಕಂಪ ದೃಶ್ಯಗಳನ್ನು ಹೇಗೆ ಮಾಡುತ್ತಾರೆ ಅಥವಾ ಬಿರುಗಾಳಿಯ ದೃಶ್ಯಗಳನ್ನು ಹೇಗೆ ಅಳವಡಿಸುತ್ತಾರೆ ಎಂದೂ ತೋರಿಸುತ್ತಾರೆ. ಯೂನಿವರ್ಸಲ್ ಸ್ಟುಡಿಯೋ ನೋಡಲು ಪೂರ್ತಿ ಒಂದು ದಿನ ಬೇಕು. ಚಿತ್ರೀಕರಣದ ಹಲವಾರು ವಿಷಯಗಳ ಬಗ್ಗೆ ಹೆಚ್ಚಿನ ಜ್ಞಾನ ಪಡೆದು ನಾವು ಕತ್ತಲಾಗುತ್ತಲೇ ಹೋಟೆಲ್‌ಗೆ ವಾಪಸ್ ಬಂದೆವು.

ಮಾರನೇ ದಿನ ಆರ್ಲಾಂಡೋ ಶಾಪಿಂಗ್ ಮಾಡಿದೆವು. ಅಲ್ಲಿ ನಾವು ನೋಡದೇ ಬಿಟ್ಟ ಇನ್ನೊಂದು ಥೀಮ್ ಪಾರ್ಕ್ ಎಪ್‌ಕಾಟ್ ಸೆಂಟರ್. ಈ ಎಪ್‌ಕಾಟ್ ಸೆಂಟರ್‌ನಲ್ಲಿ ವೈಜ್ಞಾನಿಕ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಪಟ್ಟ ವಸ್ತು ಪ್ರದರ್ಶನ ವರ್ಷವಿಡೀ ನಡೆಯುತ್ತದೆ. ಅದನ್ನು ನೋಡಲು ಒಂದು ದಿನ ಬೇಕು. ಹತ್ತಿರದಲ್ಲೇ ಇರುವ ಇನ್ನೊಂದು ಜಾಗ ಕೇಪ್ ಕೆನವರಾಲ್. ಈ ಜಾಗದಿಂದಲೇ ಅಂತರಿಕ್ಷ ನೌಕೆಗಳನ್ನು ಅಂತರಿಕ್ಷಕ್ಕೆ ಉಡಾಯಿಸುತ್ತಾರೆ. ನಾವು ಆರ್ಲಾಂಡೋಗೆ ಹೋದ ಸಮಯದಲ್ಲಿ ಯಾವುದೇ ಬಾಹ್ಯಾಕಾಶ ನೌಕೆಯ ಉಡಾವಣೆ ಆಗದೇ ಇದ್ದುದರಿಂದ ಆ ಜಾಗಕ್ಕೆ ನಾವು ಹೋಗಲಿಲ್ಲ. ಉಡಾವಣೆ ಇಲ್ಲದಿದ್ದರೂ ಆ ಜಾಗ ನೋಡಬೇಕಾದ ಪ್ರದೇಶವೆಂದು ಹಲವಾರು ಜನ ನಮಗೆ ಆ ನಂತರ ತಿಳಿಸಿ ಆ ಜಾಗ ನೋಡದೇ ಇದ್ದುದಕ್ಕೆ ಮೂದಲಿಸಿದರು.

ಆ ಸಂಜೆ ಆರ್ಲ್ಯಾಂಡೋದಿಂದ ವಿಮಾನದ ಮೂಲಕ ಮಿಯಾಮಿ ಬೀಚ್‌ಗೆ ತೆರಳಿದೆವು ಮಿಯಾಮಿ ಬೀಚ್ ಜಗತ್ತಿನ ಅತಿ ಪ್ರಸಿದ್ಧ ಬೀಚುಗಳಲ್ಲಿ ಒಂದು. ಸಮುದ್ರ ವಿಹಾರಕ್ಕೆ ಬೇಕಾದಂತಹ ಪ್ರತಿಯೊಂದು ಆಕರ್ಷಣೆಯೂ ಇಲ್ಲಿದೆ. ಮಿಯಾಮಿಯಿಂದಲೇ ಅತಿ ದೊಡ್ಡ ವಿಹಾರ ನೌಕೆಗಳು ಸಮುದ್ರದಲ್ಲಿ ವಿಹರಿಸುತ್ತವೆ. (ವಿಹಾರ ನೌಕೆ ಹೇಗಿರುತ್ತದೆ ಎನ್ನುವುದನ್ನು ಮನ್, ಕಹೋ ನಾ ಪ್ಯಾರ್ ಹೈ, ಸಿನಿಮಾಗಳಲ್ಲಿ ನೀವು ನೋಡಿರಬಹುದು) ಮಿಯಾಮಿ ಬೀಚ್‌ನಲ್ಲಿ ನಾವು ಸಮುದ್ರ ತೀರಕ್ಕೆ ಹೋದ ನಂತರ ಒಂದು ದೋಣಿಯಲ್ಲಿ ಸಮುದ್ರ ವಿಹಾರ ಮಾಡಿದೆವು. ದೋಣಿ ಚಲಿಸುತ್ತಿದ್ದಂತೆ ದೋಣಿಯ ನಾವಿಕ ನಮಗೆ ಸಮುದ್ರದ ಮಧ್ಯ ಇರುವ ಒಂದು ನಡುಗಡ್ಡೆಯನ್ನು ತೋರಿಸಿ ಆ ನಡುಗಡ್ಡೆಯಲ್ಲೇ ವಿಶ್ವದ ಅತಿ ಶ್ರೀಮಂತ ಜನರು ಮನೆ ಮಾಡಿಕೊಂಡಿದ್ದಾರೆಂದು ಹೇಳಿದ. ನಮ್ಮ ದೋಣಿ ಈ ನಡುಗಡ್ಡೆಯನ್ನು ಒಂದು ಸುತ್ತು ಹಾಕಿತು. ಒಂದಕ್ಕಿಂತ ಒಂದು ಭಾರೀ ಮನೆಗಳು. ಎಲ್ಲಾ ಮನೆಗಳಲ್ಲೂ ತಮ್ಮದೇ ಆದ ದೋಣಿಗಳು, ಸ್ವಿಮ್ಮಿಂಗ್ ಪೂಲ್‌ಗಳು. ವಿಶಾಲವಾದ ಉದ್ಯಾನವನಗಳು ಇದ್ದವು. ಒಂದು ಮನೆಯಲ್ಲಂತೂ ಹೆಲಿಪ್ಯಾಡ್ ಕೂಡಾ ಇತ್ತು. ಆ ಮನೆಯ ಮಾಲೀಕ ತನ್ನ ಮನೆಗೆ ಹೆಲಿಕಾಪ್ಟರ್ ಮೂಲಕ ಬರುತ್ತಾನಂತೆ. ಮನೆಯ ಮಾಲೀಕರ ಹೆಸರು ಕೇಳುತ್ತಿದ್ದರೆ ವಿಶ್ವದ ಅತಿ ಶ್ರೀಮಂತ ವ್ಯಕ್ತಿಗಳ ಪಟ್ಟಿಯನ್ನೇ ಕೇಳುತ್ತಿದ್ದಂತೆ ಅನಿಸಿತು.

ದೋಣಿ ವಿಹಾರ ಮಾಡಿದ ನಂತರ ಮಿಯಾಮಿ ಬೀಚಿನ ಅತ್ಯಂತ ನಯನ ಮನೋಹರವಾದ ಸೌತ್‌ಬೀಚ್ ಸಮುದ್ರ ತೀರದಲ್ಲಿ ವಿಹರಿಸಿದೆವು. ಸಮುದ್ರ ತೀರಕ್ಕೆ ಹೊಂದಿಕೊಂಡಂತೆ ಇರುವ ರಸ್ತೆ ಫ್ಯಾಷನ್‌ಗೆ ಹೆಸರುವಾಸಿ. ವಿಶ್ವದ ಹೆಸರಾಂತ ಫ್ಯಾಷನ್ ವಸ್ತುಗಳ ಷೋ ರೂಂಗಳು ಇಲ್ಲಿವೆ. ಮುಂಬೈನ ಮೆರೀನ್ ಡ್ರೈವ್‌ನಂತೆ ಇರುವ ಈ ರಸ್ತೆಯಲ್ಲಿ ನೂರಾರು ರೆಸ್ಟೋರೆಂಟ್‌ಗಳು ಇವೆ. ಇಲ್ಲಿ ಎಲ್ಲಾ ರೀತಿಯ ತಿಂಡಿ ತಿನಿಸುಗಳು ದೊರೆಯುತ್ತವೆ. ನಾವು ಹೋದಲ್ಲೆಲ್ಲಾ ಜಿನ್, ವೈನ್, ಅಥವಾ ಬಿಯರ್ ಹೀರುತ್ತಾ ಅಬ್ಬರದ ಸಂಗೀತದ ತಾಳಕ್ಕೆ ತಕ್ಕಂತೆ ಡ್ಯಾನ್ಸ್ ಮಾಡುತ್ತಾ ಇದ್ದ ಪ್ರವಾಸಿಗಳನ್ನು ನೋಡಿದೆವು.

ಮಿಯಾಮಿ ಬೀಚ್ ವಿಶ್ವದ ಶ್ರೀಮಂತರ ವಿಹಾರಿ ತಾಣವೆಂದು ಹೆಸರು ಪಡೆದಿದೆ. ಇಲ್ಲಿರುವ ನೈಟ್ ಕ್ಲಬ್‌ಗಳು ವಿಶ್ವದಲ್ಲೇ ಹೆಸರು ವಾಸಿ. ಈ ಊರು 1870ರಲ್ಲಿ ಜೌಗು ಪ್ರದೇಶದ ಕೊಂಪೆಯಾಗಿತ್ತಂತೆ. 1920ರಲ್ಲಿ ಈ ಪಟ್ಟಣದ ಅಭಿವೃದ್ಧಿ ಪ್ರಾರಂಭವಾಯಿತಂತೆ. ಸೌತ್ ಬೀಚ್ ಪ್ರದೇಶದಲ್ಲಿ ಆರ್ಟ್ ಡಿಕೋ ಡಿಸ್ಟ್ರಿಕ್ಸ್ ಎಂಬ ಜಾಗ ಇದೆ. ಆರ್ಟ್ ಡಿಕೋ ಎಂದರೆ ಒಂದು ರೀತಿಯ ವಿನ್ಯಾಸ ಶೈಲಿ. ಈ ವಿನ್ಯಾಸ ಶೈಲಿ 1925ರಲ್ಲಿ ಪ್ರಸಿದ್ಧಿಗೆ ಬಂತು. ಈ ಶೈಲಿಯ 800 ಕಟ್ಟಡಗಳು ಮಿಯಾಮಿ ಬೀಚ್‌ನಲ್ಲಿರುವುದು ಒಂದು ವಿಶೇಷ.

ರಾತ್ರಿ ಬಹಳ ಹೊತ್ತಿನವರೆಗೆ ನಾವು ಮಿಯಾಮಿ ಬೀಚ್ ಪ್ರದೇಶದಲ್ಲಿ ಅಡ್ಡಾಡಿದೆವು. ನಮ್ಮನ್ನು ಮಿಯಾಮಿ ಬೀಚ್‌ನಲ್ಲಿ ಎದುರುಗೊಂಡಿದ್ದ ನಮ್ಮ ಸಂಬಂಧಿಕ ದೀಪಕ್ ನಮ್ಮನ್ನು ಕಾರಿನಲ್ಲಿ ಕೂರಿಸಿಕೊಂಡು ಹತ್ತಿರದಲ್ಲೇ ಇದ್ದ ತಮ್ಮ ಊರಿಗೆ ಕರೆದೊಯ್ದ.

ಮಾರನೇ ದಿನ ಆತ ನಮ್ಮನ್ನು ಅವರ ಊರಾದ ಫೋರ್ಟ್ ಲಾಡರ್ ಡೇಲ್ ಬಳಿ ಇರುವ ಮೂರು ವಿಶೇಷ ಪ್ರದೇಶಗಳಿಗೆ ಕರೆದೊಯ್ದ. ಮೊದಲನೆಯದು ನಮ್ಮ ಬನ್ನೇರುಘಟ್ಟ ಉದ್ಯಾನ ವನದಂತಹ ಸಫಾರಿ ಪಾರ್ಕ್. ಈ ಜಾಗದಲ್ಲಿ ನಾವು ಕಾರ್ ಒಳಗೇ ಕುಳಿತುಕೊಂಡು ವನ್ಯ ಪ್ರಾಣಿಗಳಾದ ಸಿಂಹ. ಆನೆ, ಜಿರಾಫೆ ಇತ್ಯಾದಿಗಳನ್ನು ಬಹಳ ಹತ್ತಿರದಿಂದ ನೋಡಿದೆವು.

ಎರಡನೇ ಜಾಗ ಫ್ಲಾರಿಡಾದ ಸಸ್ಯ ಸಂಪತ್ತು ತೋರಿಸುವಂತಹ ಒಂದು ದೊಡ್ಡ ಉದ್ಯಾನ. (ಫ್ಲಾರಿಡಾ ರಾಜ್ಯ ಕಿತ್ತಳೆ ಹಣ್ಣಿಗೆ ವಿಶ್ವದಲ್ಲೇ ಹೆಸರು ವಾಸಿ) ಮೂರನೇ ಜಾಗ ಫ್ಲಾರಿಡಾದ ಜೌಗು ಪ್ರದೇಶದಲ್ಲಿರುವ ಮೊಸಳೆಗಳ ತಾಣ. ಒಂದು ವಿಶೇಷ ರೀತಿಯ ಮೋಟಾರ್ ದೋಣಿ ಮೇಲೆ ಕೂರಿಸುತ್ತಾರೆ. ಆ ದೋಣಿ ನೀರಿನ ಮೇಲೆ ತಟ್ಟೆಯಂತೆ ಸಂಚರಿಸುತ್ತದೆ. ಅದರಲ್ಲಿ ಕುಳಿತು ಮೊಸಳೆಗಳು ಇರುವ ಪ್ರದೇಶ ನೋಡಿದ್ದು ಅವಿಸ್ಮರಣೀಯ ಅನುಭವ.

ಇತ್ತೀಚೆಗೆ ಅಮೇರಿಕಾ ಅಧ್ಯಕ್ಷ ಚುನಾವಣೆ ಸಂಬಂಧ ಫ್ಲಾರಿಡಾ ಹೆಸರು ಪಡೆದರೂ ವಿಶ್ವದಲ್ಲಿ ಇದು ಹೆಸರಾಂತ ಪ್ರವಾಸಿ ತಾಣ ಎಂದೇ ಖ್ಯಾತಿ ಪಡೆದಿದೆ.

28 ಹಾಲಿವುಡ್

ಫ್ಲಾರಿಡಾ ರಾಜ್ಯದ ಮುಖ್ಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ ನಂತರ ಲಾಸ್ ಎಂಜಲೀಸ್ ನಗರಕ್ಕೆ ಹೋಗಲು ವಿಮಾನ ಏರಿದೆವು.

ಪೆಸಿಫಿಕ್ ಸಾಗರದ ದಡದಲ್ಲಿ ಇರುವ ಲಾಸ್ ಎಂಜಲೀಸ್‌ಗೂ ಫ್ಲಾರಿಡಾಗೂ ಸುಮಾರು ಮೂರು ಗಂಟೆಗಳಷ್ಟು ಸಮಯದ ವ್ಯತ್ಯಾಸ. ಹೀಗಾಗಿ ನಾವು ಮುಂಜಾನೆಯೇ ಮಿಯಾಮಿ ಬಿಟ್ಟಿದ್ದರೂ ಲಾಸ್ ಎಂಜಲೀಸ್ ತಲುಪುವ ವೇಳೆಗೆ ಸಂಜೆ ಆಗಿತ್ತು. ಕ್ಯಾಲಿಫೋರ್ನಿಯಾ ರಾಜ್ಯ ಆ ದೇಶದ ಬೇರಿತರ ರಾಜ್ಯಗಳಿಗಿಂತ ಹೊರದೇಶದ ಜನರನ್ನು ಅದರಲ್ಲೂ ಏಷ್ಯಾ ಖಂಡದವರನ್ನು ಸೂಜಿಗಲ್ಲಿನಂತೆ ಆಕರ್ಷಿಸಿದೆ. ಜಪಾನ್, ಕೊರಿಯಾ, ಚೈನಾ ದೇಶಗಳು ಪೆಸಿಫಿಕ್ ಸಾಗರದ ಬಳಿಯೇ ಇರುವುದರಿಂದ ಈ ದೇಶಗಳಿಂದ ಪಶ್ಚಿಮ ದಿಕ್ಕಿನತ್ತ ಪ್ರಯಾಣ ಮಾಡಿದರೆ ಮೊದಲು ಸಿಗುವುದೇ ಕ್ಯಾಲಿಫೋರ್ನಿಯಾ. ಕ್ಯಾಲಿಫೋರ್ನಿಯಾ ಮೆಕ್ಸಿಕೋ ದೇಶದ ಗಡಿ ಭಾಗದಲ್ಲಿ ಇರುವುದರಿಂದ ಇಲ್ಲಿಗೆ ಮೆಕ್ಸಿಕೋದಿಂದಲೂ ಸಾಕಷ್ಟು ಜನ ವಲಸೆ ಬರುತ್ತಾರೆ. ಇಲ್ಲಿ ವಿವಿಧ ಸಂಸ್ಕೃತಿಗಳ ಜನರನ್ನು ಕಾಣಬಹುದು. ಎಲೆಕ್ಟ್ರಾನಿಕ್ ಉದ್ಯಮಕ್ಕೆ ಹೆಸರಾದ ಸಿಲಿಕಾನ್ ವ್ಯಾಲಿ ಇರುವುದು ಕ್ಯಾಲಿಫೋರ್ನಿಯಾದಲ್ಲೇ. ಈ ಕಾರಣಕ್ಕೆ ಕರ್ನಾಟಕದಿಂದ ಹಾಗೂ ಭಾರತದಿಂದ ಹೆಚ್ಚು ಎಲೆಕ್ಟ್ರಾನಿಕ್ ಹಾಗೂ ಕಂಪ್ಯೂಟರ್ ತಜ್ಞರು ಹೋಗಬಯಸುವುದು ಕ್ಯಾಲಿಫೋರ್ನಿಯಾಕ್ಕೆ.

ಚಿನ್ನದ ರಾಜ್ಯ ಎಂದು ಕರೆಯಲಾಗುವ ಕ್ಯಾಲಿಫೋರ್ನಿಯಾ ಅಮೇರಿಕದ ಮೂರನೇ ಅತಿ ದೊಡ್ಡ ರಾಜ್ಯ. ಈ ರಾಜ್ಯದಲ್ಲಿ ಮರುಭೂಮಿಯೂ ಇದೆ. ಸಮುದ್ರ ತೀರವೂ ಇದೆ. ಬೆಟ್ಟ ಗುಡ್ಡಗಳೂ ಇವೆ. ಕೊಲ್ಲಿ-ಕೊಳ್ಳಗಳೂ ಇವೆ. ಸಮಶೀತೋಷ್ಣಾಂಶ ಹವಾಮಾನ ಇರುವ ಈ ರಾಜ್ಯದಲ್ಲಿ ವಿಶ್ವದ ಅತಿ ಎತ್ತರದ ಮರಗಳು ಬೆಳೆಯುತ್ತವೆ. ಆದರೆ ಈ ರಾಜ್ಯಕ್ಕೆ ದೃಷ್ಟಿಬೊಟ್ಟಿಟ್ಟಂತೆ ಇಲ್ಲಿ ಆಗಿಂದಾಗ್ಗೆ ಭೂಕಂಪ ಆಗುತ್ತಿರುತ್ತದೆ. 1994ರಲ್ಲಿ ಲಾಸ್ ಎಂಜಲೀಸ್‌ನಲ್ಲಿ ನಡೆದ ಭೂಕಂಪ ಕೋಟ್ಯಂತರ ಡಾಲರ್‌ಗಳ ನಷ್ಟ ಉಂಟುಮಾಡಿತಂತೆ.

ನಮ್ಮ ವಿಮಾನ ಲಾಸ್ ಎಂಜಲೀಸ್ ವಿಮಾನ ನಿಲ್ದಾಣದಲ್ಲಿ ಇಳಿಯಲು ಸಾಕಷ್ಟು ಸಮಯ ತೆಗೆದುಕೊಂಡಿತು. ಈ ನಿಲ್ದಾಣದಲ್ಲಿ ಇಳಿಯಲು ವಿಮಾನಗಳು ಆಕಾಶದಲ್ಲಿ ಕ್ಯೂ ನಿಂತಿದ್ದವು.

ನಮ್ಮ ವಿಮಾನ ಲಾಸ್ ಎಂಜಲೀಸ್ ನಗರವನ್ನು ಸುತ್ತುತ್ತಿದ್ದಂತೆ ನಮ್ಮ ಪೈಲೆಟ್ ಲಾಸ್ ಎಂಜಲೀಸ್ ಅಮೇರಿಕದ ಎರಡನೇ ಅತಿ ಹೆಚ್ಚು ಜನಸಂಖ್ಯೆಯ ನಗರ ಎಂದು ತಿಳಿಸಿದ.

ನಾವು ವಿಮಾನದಿಂದ ಇಳಿದು ನಮ್ಮ ಲಗೇಜ್ ಹೊರತಂದರೂ ನಮ್ಮನ್ನು ಎದುರುಗೊಳ್ಳಬೇಕಾದ ಗೆಳೆಯ ರವಿ ಬಂದಿರಲಿಲ್ಲ. ವಿಮಾನ ನಿಲ್ದಾಣದಿಂದ ಅವನಿಗೆ ಫೋನ್ ಮಾಡಿದಾಗ ಆತ ಮನೆ ಬಿಟ್ಟಿದ್ದ ಎಂದು ತಿಳಿಯಿತು. ಅವನು ಬರುವವರೆಗೆ ವಿಮಾನ ನಿಲ್ದಾಣದಲ್ಲಿ ಇದ್ದ ಪರ್ಯಟಕರ ಬೂತ್‌ಗೆ ಹೋಗಿ ಲಾಸ್ ಎಂಜಲೀಸ್‌ನ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಇಟ್ಟಿದ್ದ ಮಡಿಕೆ ಪತ್ರಗಳನ್ನು ಓದತೊಡಗಿದೆ. ಲಾಸ್ ಎಂಜಲೀಸ್ ಎರಡು ಕಾರಣಕ್ಕೆ ಬಹಳ ಪ್ರಸಿದ್ಧಿ. ಮೊದಲನೆಯದು ಅಲ್ಲಿಯ ಸಿನಿಮಾ ಮತ್ತು ಟೆಲಿವಿಜನ್ ಕೈಗಾರಿಕೆಗಾಗಿ ಹಾಗೂ ಎರಡನೆಯದಾಗಿ ಅಲ್ಲಿನ ಸ್ಮಾಗ್‌ಗೆ (ಸ್ಮಾಗ್ ಎಂದರೆ ಒಂದು ರೀತಿಯ ಮೋಡದ ತೆರೆ, ಕೈಗಾರಿಕಾ ಕಶ್ಮಲಗಳು ಸೇರಿದಾಗ ಉಂಟಾಗುವ ಹೊಗೆ) ಐದು ಅಡಿ ಮುಂದಿರುವ ದೃಶ್ಯವೂ ಕಣ್ಣಿಗೆ ಗೋಚರಿಸುವುದಿಲ್ಲವಂತೆ ಕೆಲವೊಮ್ಮೆ.


ಗೆಳೆಯ ರವಿ ಬಂದ ನಂತರ ಅವನೊಡನೆ ಅವನ ಮನೆಯತ್ತ ಹೊರಟೆವು. ಕ್ಯಾಲಿಫೋರ್ನಿಯಾ ಹೆದ್ದಾರಿಗಳಲ್ಲಿ ತುಂಬಾ ಹೆಚ್ಚಿನ ಸಂಖ್ಯೆಯ ವಾಹನಗಳು ಓಡಾಡುತ್ತವೆ. ಹೀಗಾಗಿ ಆಫೀಸ್‌ಗೆ ಹೋಗುವ ವೇಳೆ ಹಾಗೂ ಬರುವ ವೇಳೆಯಲ್ಲಿ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೋಗಲು ಗಂಟೆಗಟ್ಟಲೆ ವೇಳೆ ತಗಲುತ್ತದೆ ಎಂದ ರವಿ, ಕಡಿಮೆ ದಟ್ಟಣೆ ಇರುವ ಲೇನ್‌ನಲ್ಲಿ ಕಾರನ್ನು ಚಲಿಸಲಾರಂಭಿಸಿದ. ಈ ಲೇನ್‌ನಲ್ಲಿ ಹೋಗಬೇಕಾದರೆ ವಾಹನದಲ್ಲಿ ಕಡಿಮೆ ಎಂದರೂ ಮೂರು ಜನ ಪ್ರಯಾಣಿಕರು ಇರಲೇಬೇಕಂತೆ. ಇಲ್ಲವಾದರೆ ಫೈನ್ ಹಾಕುತ್ತಾರಂತೆ. ಆದಕ್ಕೇ ಆ ಲೇನ್‌ನಲ್ಲಿ ವಾಹನಗಳು ಕಡಿಮೆ ಇದ್ದವು. ಏಕೆ ಹೀಗೆ ಎಂದು ಕೇಳಿದಾಗ ಕ್ಯಾಲಿಫೋರ್ನಿಯಾದ ಬಹಳಷ್ಟು ಜನರು ಎರಡು ಮೂರು ಕಾರುಗಳನ್ನು ಹೊಂದಿದ್ದು ಒಂದು ಕಾರಿನಲ್ಲಿ ಒಬ್ಬನೇ ವ್ಯಕ್ತಿ ಪ್ರಯಾಣಿಸುವುದರಿಂದ ವಾಹನ ದಟ್ಟಣೆ ಜಾಸ್ತಿಯಾಗುತ್ತದೆ. ಇದನ್ನು ತಪ್ಪಿಸಲು ಒಂದು ವಾಹನದಲ್ಲಿ ಹೆಚ್ಚಿನ ಜನರು ಹೋಗಲು ಪ್ರೇರೇಪಿಸಲು ಈ ರೀತಿ ನಿಯಮ ಮಾಡಿದ್ದಾರಂತೆ.

ಹಲವಾರು ಸೇತುವೆಗಳನ್ನು ದಾಟಿ ರವಿ ಮನೆ ತಲುಪಿದೆವು. ಆತ ತನ್ನ ಮನೆಯ ಮುಂದೆ ಕಾರ್ ನಿಲ್ಲಿಸಿದ ಕೂಡಲೇ ಸ್ವರ್ಣ ಈ ಮನೆಯನ್ನು ಎಲ್ಲೋ ನೋಡಿದ ಹಾಗೆ ಕಾಣುತ್ತದೆಯಲ್ಲ ಎಂದಳು. ರವಿ ನಕ್ಕು "ಹೌದು ನಮ್ಮ ಮನೆಯಲ್ಲೇ 'ಅಮೇರಿಕಾ ಅಮೇರಿಕಾ' ಚಿತ್ರದ ಶೂಟಿಂಗ್ ಆಗಿದ್ದು. ಆ ಚಿತ್ರದ ನಾಯಕ ಹಾಗೂ ನಾಯಕಿ ಅಮೇರಿಕಾದಲ್ಲಿ ವಾಸಿಸುವ ಮನೆ ಇದೇ" ಎಂದು ಹೇಳಿ ಸುಮಾರು ಹದಿನೈದು ದಿನಗಳು ಇಲ್ಲೇ ಶೂಟಿಂಗ್ ಮಾಡಿದರು ಎಂದ. ಅಷ್ಟರಲ್ಲೇ ಕತ್ತಲಾದ್ದರಿಂದ ಅವರ ಮನೆಯಲ್ಲೇ ವಿರಮಿಸಿದೆವು. ಮಾರನೇ ದಿನ ಬೆಳಿಗ್ಗೆ ಎಲ್ಲಿಗೆ ಕರೆದುಕೊಂಡು ಹೋಗಲಿ ಎಂದು ರವಿ ಕೇಳಿದಾಗ ನನ್ನ ಶ್ರೀಮತಿ ಹಾಲಿವುಡ್‌ಗೆ ಹೋಗಲು ಇಷ್ಟಪಟ್ಟರೆ ನಾನು ಸ್ಯಾನ್‌ಫ್ರಾನ್ಸಿಸ್ಕೋದ ಗೋಲ್ಡನ್ ಗೇಟ್ ನೋಡಲು ಇಚ್ಛಿಸಿದೆ. ಮೊದಲಿಗೆ ಹಾಲಿವುಡ್‌ಗೆ ಹೋಗಲು ತೀರ್ಮಾನಿಸಿದೆವು.

ಮಾರನೇ ದಿನ ಬೆಳಿಗ್ಗೆ ಹಾಲಿವುಡ್ ತಲುಪಿ ನೇರವಾಗಿ ಯೂನಿವರ್ಸಲ್ ಸ್ಟುಡಿಯೋಗೆ ಹೋದೆವು. ನಾವು ಈಗಾಗಲೇ ಈ ಸ್ಟುಡಿಯೋವನ್ನು ಆರ್‌ಲ್ಯಾಂಡೋದಲ್ಲಿ ನೋಡಿದ್ದೇವೆ ಮತ್ತೆ ಅಲ್ಲಿಗೇ ಏಕೆ ಎಂದಾಗ, ಪರವಾಗಿಲ್ಲ ಆರ್‌ಲ್ಯಾಂಡೋಗೂ ಹಾಲಿವುಡ್‌ಗೂ ಇರುವ ವ್ಯತ್ಯಾಸ

ತಿಳಿದುಕೊಳ್ಳಿ ಎಂದ ರವಿ. ಆರ್‌ಲ್ಯಾಂಡೋದಲ್ಲಿ ಇದ್ದ ಸ್ಟುಡಿಯೋಗೂ ಇಲ್ಲಿಗೂ ಇದ್ದ ಮುಖ್ಯ ವ್ಯತ್ಯಾಸ ಎಂದರೆ ಹಾಲಿವುಡ್‌ನಲ್ಲಿ ಚಿತ್ರೀಕರಣ ನಡೆಯುತ್ತದೆ ಅಲ್ಲಿ ಶೂಟಿಂಗ್ ಇಲ್ಲ. ಹೀಗಾಗಿ ನಾವು ಹಲವಾರು ಸಿನಿಮಾ ಹಾಗೂ ಟಿವಿ ತಾರೆಯರನ್ನು ನೋಡುವ ಅವಕಾಶ ಸಿಗುತ್ತದೆ. ಶೂಟಿಂಗ್ ನಡೆಯುವಾಗ ಸಿನಿಮಾದ ನಿರ್ದೇಶಕರು ಅನುಮತಿ ಕೊಟ್ಟರೆ ಶೂಟಿಂಗ್ ನೋಡಲು ಒಳಗೆ ಬಿಡುತ್ತಾರೆ. ನಮಗೆ ಶೂಟಿಂಗ್ ನೋಡಲೂ ಆಗಲಿಲ್ಲ. ಆದರೆ ವೆಸ್ಟರ್ನ್ ಸಿನಿಮಾಗಳಲ್ಲಿ ಮಾಡುವ ಸ್ಟಂಟ್-ಹೊಡೆದಾಟಗಳನ್ನು ಹೇಗೆ ಮಾಡುತ್ತಾರೆ ಎಂದು ಪ್ರದರ್ಶನ ಮಾಡಿ ತೋರಿಸಿದರು. ಯೂನಿವರ್ಸಲ್ ಸ್ಟುಡಿಯೋ ನೋಡಿ ಮುಗಿಸುವ ಹೊತ್ತಿಗೆ ಊಟದ ಸಮಯವಾಗಿತ್ತು. ಅಲ್ಲೇ ಊಟ ಮುಗಿಸಿ ನಂತರ ಇಂಗ್ಲಿಷ್ ಸಿನಿಮಾದ ನಟ-ನಟಿಯರು ವಾಸಿಸುವ ಜಾಗವನ್ನು ನೋಡೋಣವೆಂದು ರವಿ ನಮ್ಮನ್ನು ಹಾಲಿವುಡ್‌ನ ಮೂರು ಮುಖ್ಯ ರಸ್ತೆಗಳಾದ ಸನ್‌ಸೆಟ್ ಬುಲ್ವಾ, ಹಾಲಿವುಡ್ ಬೂಲ್ವಾ ಹಾಗೂ ವೈನ್‌ಸ್ಟ್ರೀಟ್‌ಗೆ ಕರೆದೊಯ್ದ. ಅಲ್ಲಿ ಒಂದು ರಸ್ತೆಯಲ್ಲಿ ಫುಟ್‌ಪಾತ್ ಮೇಲೆ ದೊಡ್ಡ ದೊಡ್ಡ ಕೆಂಪು ನಕ್ಷತ್ರಗಳನ್ನು ಅಳವಡಿಸಿದ್ದಾರೆ. ಒಂದೊಂದು ನಕ್ಷತ್ರದ ಮೇಲೆ ಒಬ್ಬೊಬ್ಬ ಹೆಸರಾಂತ ಸಿನಿಮಾ ನಟ ಅಥವಾ ನಟಿಯ ಹೆಸರನ್ನು ಕೆತ್ತಲಾಗಿದೆ. ಆ ನಟ-ನಟಿಯರು ಆ ರಸ್ತೆಯಲ್ಲಿ ಓಡಾಡಿದರು ಎನ್ನುವ ಗುರುತಾಗಿ ಈ ರೀತಿ ಮಾಡಿದ್ದಾರೆ. ಹಾಲಿವುಡ್ ರಸ್ತೆಯಲ್ಲಿರುವ ಅಂಗಡಿಗಳನ್ನು ನೋಡಿ ನಿಜವಾಗಿ ಚಕಿತಗೊಂಡೆವು. ನಮ್ಮ ಯೂರೋಪ್ ಪ್ರವಾಸದಲ್ಲಿ ನಾವು ಜಗತ್ತಿನ ಅತಿ ವಿಖ್ಯಾತ ಫ್ಯಾಷನ್ ಕೇಂದ್ರಗಳಾದ ಮಿಲಾನೋ, ಪ್ಯಾರಿಸ್, ಲಂಡನ್, ನ್ಯೂಯಾರ್ಕ್‌ನ ಅಂಗಡಿಗಳನ್ನು ನೋಡಿದ್ದೆವು. ಆದರೆ ಹಾಲಿವುಡ್‌ನ ಅಂಗಡಿಗಳು ಅವುಗಳಿಗಿಂತಲೂ ವೈಭವವಾಗಿವೆ. ಎಲ್ಲಿ ನೋಡಿದರೂ ಬೆಲೆಬಾಳುವ ಮರ್ಸಿಡೆಸ್ ಬೆನ್ಜ್ ಹಾಗೂ BMW ಕಾರ್‌ಗಳೇ ಕಾಣುತ್ತದೆ.

ಶ್ರೀಮಂತರೂ, ವಿಖ್ಯಾತರೂ, ಹಾಲಿವುಡ್‌ನಲ್ಲಿ ಹೇಗೆ ವಾಸಿಸುತ್ತಾರೆ ಎಂದು ತಿಳಿಯುವ ಆಸೆಯಾಯಿತು. ರವಿ ನಿಧಾನವಾಗಿ ಅಲ್ಲಿಯ ಮನೆಗಳ ಮುಂದೆ ಒಂದು ಸುತ್ತು ಹಾಕಿದ. ಒಂದೊಂದು ಮನೆಯೂ ವಿಭಿನ್ನ. ಈ ಮನೆಗಳಲ್ಲಿ ಸ್ವಿಮ್ಮಿಂಗ್ ಪೂಲ್, ಟೆನ್ನಿಸ್ ಕೋರ್ಟ್, ಹೆಲಿಪ್ಯಾಡ್ ಕೂಡ ಇವೆಯಂತೆ. ಮನೆಗಳ ಮುಂದೆ ಹಾಕಿದ್ದ ಬೋರ್ಡ್‌ಗಳನ್ನು ನೋಡಿದರೆ ಇಂಗ್ಲಿಷ್ ಚಲನಚಿತ್ರ ಉದ್ಯಮದ ದಿಗ್ಗಜರ ಎಲ್ಲಾ ಹೆಸರುಗಳೂ ಅಲ್ಲೇ ಇರುವಂತೆ ಭಾಸವಾಯಿತು. ಅಂದ ಹಾಗೆ ಹಾಲಿವುಡ್‌ನಲ್ಲಿ ಮೊದಲ ಚಲನಚಿತ್ರ ತೆಗೆದಿದ್ದು 1911ರಲ್ಲಿ. ಸಿನಿಮಾ ಪ್ರಪಂಚದ ಇಣುಕನ್ನು ಪಡೆದು ನಾವು ಹಾಲಿವುಡ್ ಗುಂಗಿನಲ್ಲೇ ಮನೆಗೆ ವಾಪಸ್ಸಾದೆವು.



29 ಸ್ಯಾನ್‌ಫ್ರಾನ್ಸಿಸ್ಕೊ ಮತ್ತು ಡಿಸ್ನಿ ಲ್ಯಾಂಡ್

ಕ್ಯಾಲಿಫೋರ್ನಿಯಾ ಪ್ರಾಂತ್ಯಕ್ಕೆ ಭೇಟಿ ಮಾಡುವವರೆಲ್ಲರೂ ತಪ್ಪದೆ ನೋಡಬೇಕಾದ ಜಾಗಗಳು ಡಿಸ್ನಿ ಲ್ಯಾಂಡ್ ಮತ್ತು ಸ್ಯಾನ್‌ಫ್ರಾನ್ಸಿಸ್ಕೊ. ಈ ನಿಯಮಕ್ಕೆ ತಪ್ಪದಂತೆ ನಾವು ಗೆಳೆಯ ರವಿಯೊಂದಿಗೆ ಸ್ಯಾನ್‌ಫ್ರಾನ್ಸಿಸ್ಕೊಗೆ ಹೋದೆವು. ಈ ನಗರ ಪರ್ಯಾಯ ದ್ವೀಪವೊಂದರ ಉತ್ತರ ಭಾಗದಲ್ಲಿ ಇದ್ದು ಪಶ್ಚಿಮ ಅಮೇರಿಕಾದ ಅತಿ ಪ್ರಾಮುಖ್ಯ ವಾಣಿಜ್ಯ ಕೇಂದ್ರವಲ್ಲದೆ ಇತ್ತೀಚಿನ ದಿನಗಳಲ್ಲಿ ಕೈಗಾರಿಕೆಗಳಿಗೆ ಹಾಗೂ ಬಂದರು ಚಟುವಟಿಕೆಗಳಿಗೆ ಹೆಸರಾಗಿದೆ. ಸ್ಯಾನ್‌ಫ್ರಾನ್ಸಿಸ್ಕೊ ನಗರದ ಮಧ್ಯ ಭಾಗದಲ್ಲಿ ಹಲವಾರು ಬೆಟ್ಟಗಳು ಇದ್ದು ನಗರದ ಮುಖ್ಯ ಭಾಗ ಮಾರ್ಕೆಟ್ ಸ್ಟ್ರೀಟ್ ಆಗಿದೆ. ಈ ಊರಿಗೆ ಬರುವವರು ಮೊದಲು ನೋಡಲು ಬಯಸುವುದು ಫಿಷರ್‌ಮ್ಯಾನ್ ವಾರ್ಫ್ ಎಂದ ರವಿ ನಮ್ಮನ್ನು ಅಲ್ಲಿಗೆ ಕರೆದೊಯ್ದ. ಸಮುದ್ರ ತೀರದಲ್ಲಿರುವ ಈ ಜಾಗ ನೋಡಲು ಅತ್ಯಂತ ಸುಂದರವಾಗಿದ್ದು ಇದರ ಅಕ್ಕ ಪಕ್ಕ ದಲ್ಲಿ ರಾಷ್ಟ್ರೀಯ ನೌಕಾ ಮ್ಯೂಸಿಯಂ ಇದೆ ಹಾಗೂ ಅಲ್ಲಿಯ ಹತ್ತಿರದ ಬಂದರಿನಲ್ಲಿ ಚಾರಿತ್ರಿಕ ಹಡಗುಗಳನ್ನು ನೋಡಬಹುದು. ಸ್ಯಾನ್‌ಫ್ರಾನ್ಸಿಸ್ಕೊದ ಪ್ರಾಮುಖ್ಯ ಮ್ಯೂಸಿಯಂ ಎಂದರೆ ಎಕ್ಸ್ ಪ್ಲೋರೇಟೋರಿಯಂ ಎಂದು ಕರೆಯುವ ವಿಜ್ಞಾನದ ಮ್ಯೂಸಿಯಂ.

ಫಿಷರ್‌ಮ್ಯಾನ್ ವಾರ್ಫ್ ಅಕ್ಕಪಕ್ಕದಲ್ಲಿರುವ ಅಂಗಡಿಗಳನ್ನು ಪ್ರೇಕ್ಷಣೀಯ ಸ್ಥಳಗಳನ್ನೂ ನೋಡಿದ ನಾವು ಅಲ್ಲೇ ಇದ್ದ ಕೇಬಲ್ ಕಾರನ್ನು ಏರಿದೆವು. ರಸ್ತೆಯ ಮಧ್ಯ ಭಾಗದಲ್ಲಿ ಕಲ್ಕತ್ತಾದ ಟ್ರಾಮ್‌ಗಳಂತೆ ಓಡಾಡುವ ಈ ಕೇಬಲ್ ಕಾರ್‌ಗಳು ಎಷ್ಟು ನಿಧಾನವಾಗಿ ಚಲಿಸುತ್ತವೆಂದರೆ ಬೇಕಾದಾಗ ಏರಬಹುದು ಬೇಕಾದಾಗ ಇಳಿಯಬಹುದು. ಕೇಬಲ್ ಕಾರಿನಲ್ಲಿ ನಾವೂ ಸ್ವಲ್ಪ ದೂರ ಪ್ರಯಾಣಿಸಿ ನಮ್ಮ ಕಾರ್ ನಿಲ್ಲಿಸಿದ್ದ ಜಾಗಕ್ಕೆ ಬಂದೆವು. ಅಲ್ಲಿಂದ ಮುಂದೆ ಲೊಂಬಾರ್ಡ್ ಸ್ಟ್ರೀಟ್ ಎನ್ನುವ ಬೀದಿಗೆ ಹೋದೆವು. ಈ ಬೀದಿ ಬೆಟ್ಟದ ತುದಿಯಿಂದ ಪ್ರಾರಂಭವಾಗಿ ತಳದವರೆಗೆ ಇದೆ. ಕೆಂಪು ಇಟ್ಟಿಗೆಗಳಿಂದ ಮಾಡಿರುವ ಈ ರಸ್ತೆಯಲ್ಲಿ ಎಂಟು ತೀಕ್ಷ್ಣ ತಿರುವುಗಳು ಇದ್ದು ಈ ಬೀದಿಗೆ ವಿಶ್ವದ ಅತಿ ತಿರುವುಳ್ಳ ಬೀದಿ ಎಂದು ಕರೆಯಲಾಗುತ್ತದೆ. ಪರ್ಯಟಕರು ಮೋಜಿಗಾಗಿ ಈ ಬೀದಿಯಲ್ಲಿ ಕಾರನ್ನು ಚಲಿಸುತ್ತಾರಂತೆ.

ಅದನ್ನು ನೋಡಿದ ನಂತರ ನಾವು ಇನ್ನೊಂದು ಗುಡ್ಡ ಹತ್ತಿ ಸ್ಯಾನ್‌ಫ್ರಾನ್ಸಿಸ್ಕೊದ ವಿಹಂಗಮ ನೋಟವನ್ನು ಸವಿದು ಅಲ್ಲಿಂದ ಗೋಲ್ಡನ್ ಗೇಟ್ ಸೇತುವೆಗೆ ಹೋದೆವು. 1937 ರಲ್ಲಿ ಕಟ್ಟಿದ ಸ್ಯಾನ್‌ಫ್ರಾನ್ಸಿಸ್ಕೊದ ಗೋಲ್ಡನ್ ಗೇಟ್ ಸೇತುವೆ ವಿಶ್ವದ ಅತಿ ಸುಂದರ ಸೇತುವೆಗಳಲ್ಲಿ ಒಂದು. ಇದನ್ನು ನಾವೆಲ್ಲರೂ ಸಿನಿಮಾದಲ್ಲೋ ಅಥವಾ ಪತ್ರಿಕೆಗಳಲ್ಲೋ ನೋಡೇ ಇರುತ್ತೇವೆ. ಬಹಳ ಜನ ಈ ಸೇತುವೆಯಿಂದ ನೀರಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದು ರವಿ ತಿಳಿಸಿದ.

ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ಸಾಕಷ್ಟು ಉದ್ಯಾನವನಗಳು ಇವೆ. ಗೋಲ್ಡನ್ ಗೇಟ್ ಸೇತುವೆಯ ಪಕ್ಕದಲ್ಲೇ ಇದ್ದ ಒಂದು ಉದ್ಯಾನವನದಲ್ಲಿ ಮನೆಯಿಂದ ಕಟ್ಟಿಕೊಂಡು ಬಂದಿದ್ದ ಊಟವನ್ನು ಮಾಡಿ ಆ ನಂತರ ಸ್ಯಾನ್‌ಫ್ರಾನ್ಸಿಸ್ಕೊದ ಹೆಸರಾಂತ ಚೈನಾಟೌನ್‌ಗೆ ಹೋದೆವು. ಏಷ್ಯಾ ಖಂಡವನ್ನು ಬಿಟ್ಟರೆ ಅತ್ಯಂತ ಹೆಚ್ಚು ಸಂಖ್ಯೆಯ ಚೀನೀಯರು ವಾಸ ಮಾಡುವುದು ಸ್ಯಾನ್‌ಫ್ರಾನ್ಸಿಸ್ಕೊದ ಚೈನಾಟೌನ್‌ನಲ್ಲಿಯೇ ಎಂದು ರವಿ ತಿಳಿಸಿದ. ಈ ಬಡಾವಣೆಯ ಒಳಗಡೆ ಹೋದಾಗ ಚೀನಾ ದೇಶದಲ್ಲಿ ಇದ್ದೇವೆ ಎನ್ನುವ ಭಾವನೆಯಾಯಿತು. ಅಷ್ಟರಲ್ಲಿ ಸಂಜೆಯಾದ್ದರಿಂದ ಮನೆಗೆ ಹೊರಟೆವು.

ಸಂಜೆ ಮನೆಗೆ ಹೋದ ನಂತರವೇ ರವಿಯ ಶ್ರೀಮತಿ ಬೆಳಗ್ಗೆ ಮಾಡಿದ್ದ ಅಡುಗೆಯನ್ನು ಮೈಕ್ರೋ ಓವನ್‌ನಲ್ಲಿಟ್ಟು ಬಿಸಿ ಬಿಸಿಯಾಗಿ ಊಟ ಬಡಿಸಿದರು. ಅಮೇರಿಕೆಯಲ್ಲಿ ಸರ್ವೇ ಸಾಧಾರಣವಾಗಿ ಗಂಡ ಹೆಂಡರಿಬ್ಬರೂ ಕೆಲಸ ಮಾಡುತ್ತಾರೆ. ಬೆಳಗ್ಗೆ ಎದ್ದು ತಯಾರಾಗಿ ಕಾರ್ನ್‌ಫ್ಲೇಕ್ ಹಾಗೂ ಬ್ರೆಡ್ ಟೋಸ್ಟ್ ತಿಂದು ಹಾಲು ಕುಡಿದು 8 ಘಂಟೆಗೆ ಕಛೇರಿಗೆ ಹೊರಟು ಹೋಗುತ್ತಾರೆ. ಕಛೇರಿಗಳಲ್ಲಿ ಸಾಕಷ್ಟು ಬಾರಿ ಕಾಫಿ/ಚಹಾ ಸೇವಿಸುತ್ತಾರಂತೆ. ಮಧ್ಯಾಹ್ನದ ಊಟಕ್ಕೆ ಮನೆಯಿಂದಲೇ ತಂದಿದ್ದ ಸ್ಯಾಂಡ್‌ವಿಚ್ ತಿನ್ನುತ್ತಾರೆ. ಅಥವಾ ಕಛೇರಿಯಲ್ಲೇ ಇರುವ ಕ್ಯಾಂಟೀನ್‌ನಲ್ಲಿ ಕೊಡುವ ತಿಂಡಿಗಳನ್ನು ತಿನ್ನುತ್ತಾರೆ. ಸಾಯಂಕಾಲ 7 ಘಂಟೆಗೆ ಮನೆಗೆ ಬರುವ ವೇಳೆಗೆ ಗಂಡ ಹೆಂಡತಿ ಇಬ್ಬರಿಗೂ ಸಾಕಷ್ಟು ಸುಸ್ತಾಗಿರುತ್ತದೆ. ಹಸಿವೆಯೂ ಆಗಿರುತ್ತದೆ. ಈ ಹಿಂದೆಯೇ ಮಾಡಿ ತಯಾರಿಸಿ ಇಟ್ಟಿದ್ದ ಊಟವನ್ನೇ ಫ್ರಿಡ್ಜ್‌ನಿಂದ ತೆಗೆದು ಮೈಕ್ರೋ ಓವನ್‌ನಲ್ಲಿ ಎರಡು ನಿಮಿಷ ಇಟ್ಟರೆ ಅದೇ ಊಟ ಬಿಸಿ ಬಿಸಿ ಆಗುತ್ತದೆ. ನೌಕರಿಗೆ ಹೋಗುವ ಹೆಣ್ಣುಮಕ್ಕಳು ಒಂದು ವಾರಕ್ಕೆ ಬೇಕಾಗುವ ಅಡಿಗೆಯನ್ನು ರಜಾದಿನವಾದ ಶನಿವಾರ ಅಥವಾ ಭಾನುವಾರ ತಯಾರಿಸಿ ಮುಂದಿನ ಐದು ದಿನಗಳವರೆಗೆ ಅದೇ ಊಟವನ್ನು ಬಿಸಿ ಮಾಡಿಕೊಂಡು ತಿನ್ನುತ್ತಾರಂತೆ. ರಾತ್ರಿ ಭೋಜನದ ನಂತರ ಟಿ.ವಿ. ನೋಡುವುದಾಗಲೀ ಅಥವಾ ಅಂಗಡಿಗೆ ಹೋಗುವುದಾಗಲೀ ಮಾಡುತ್ತಾರೆ. ಶನಿವಾರ ಅಥವಾ ಭಾನುವಾರಗಳಂದು ಒಂದು ದಿನವನ್ನು ಮನೆ ಕೆಲಸಕ್ಕೆ ಮೀಸಲಿಡುತ್ತಾರೆ. ಹಿಂದಿನ ವಾರದಲ್ಲಿ ಉಪಯೋಗಿಸಿ ಹೊಲಸಾಗಿರುವ ಬಟ್ಟೆಗಳನ್ನು ವಾಷಿಂಗ್ ಮಿಷಿನ್‌ಗೆ ಹಾಕಿ ಶುಚಿ ಮಾಡುತ್ತಾರೆ. ಮನೆಯ ಯಜಮಾನ ವ್ಯಾಕ್ಯೂಮ್ ಕ್ಲೀನರ್‌ನಿಂದ ಮನೆಯನ್ನು ಸ್ವಚ್ಛಗೊಳಿಸುತ್ತಾನೆ. ಸಣ್ಣ ಪುಟ್ಟ ರಿಪೇರಿ ಕೆಲಸಗಳು ಮತ್ತಿತರ ವೈಯಕ್ತಿಕ ಕೆಲಸಗಳನ್ನು ಮಾಡಿ ಮುಗಿಸುತ್ತಾರೆ. ಇನ್ನೊಂದು ರಜಾ ದಿನದಲ್ಲಿ ಪಿಕ್‌ನಿಕ್ ಹೋಗುತ್ತಾರೆ ಇಲ್ಲವೇ ಸಿನಿಮಾಗೆ ಅಥವಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೋಗುತ್ತಾರೆ. ಇಲ್ಲವೇ ಕನ್ನಡ ಸಂಘಗಳ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಮತ್ತೆ ಸೋಮವಾರ ಆಫೀಸ್ ದಿನಚರಿಗೆ ವಾಪಸ್ಸಾಗುತ್ತಾರೆ.

ಹೀಗಾಗಿ ಅಮೇರಿಕಾದಲ್ಲಿ ಗಂಡ ಹೆಂಡಿರಿಬ್ಬರೂ ನೌಕರಿ ಮಾಡುತ್ತಿರುವಂತಹವರ ಮನೆಯಲ್ಲಿ ಉಳಿಯಬೇಕಾದರೆ ಬಹಳ ಯೋಚನೆ ಮಾಡಬೇಕು. ಮನೆಯ ಒಡತಿ ಕೆಲಸ ಮಾಡುತ್ತಿದ್ದರೆ

ಆಕೆಗೆ ಮನೆಗೆಲಸದಲ್ಲಿ ನೆರವಾಗಲೇಬೇಕು. ಅದೂ ಅಲ್ಲದೆ ವಾರದ ದಿನಗಳಲ್ಲಿ ನಮ್ಮನ್ನು ಹೊರಗೆ ಕರೆದೊಯ್ಯಲು ಕೇಳಲೇ ಬಾರದು. ಆದಷ್ಟೂ ನಾವೇ ಸ್ವತಂತ್ರವಾಗಿ ಓಡಾಡಬೇಕು. ಈ ರೀತಿ ಮಾಡದಿದ್ದರೆ ನಾವು ನಮ್ಮ ಅತಿಥೇಯರಿಗೆ ನಿಜವಾಗಲೂ ಹೊರೆ ಆಗುತ್ತೇವೆ. ಅಮೇರಿಕಾದಲ್ಲಿ ಸಣ್ಣ ಪುಟ್ಟ ಉಡುಗೊರೆ ಕೊಡುವ ಸಂಪ್ರದಾಯ ಇದೆ. ಭಾರತೀಯರೂ ಈ ಸಂಪ್ರದಾಯವನ್ನು ಅನುಸರಿಸುತ್ತಾರೆ. ಯಾರದಾದರೂ ಮನೆಗೆ ಊಟಕ್ಕೆ ಕರೆದರೆ ಸಣ್ಣದೊಂದು ಉಡುಗೊರೆ ಕೊಡದೆ ಊಟ ಮಾಡಿದರೆ ನಾವು ಮೂದಲಿಕೆಗೆ ಗುರಿಯಾಗಬಹುದು.

ಮಾರನೇ ದಿನ ಬೆಳಗ್ಗೆ ಬೇಗನೇ ಎದ್ದು ಡಿಸ್ನಿ ಲ್ಯಾಂಡ್ ನೋಡಲು ಅನಹೇಮ್ ಎನ್ನುವ ಊರಿಗೆ ಹೋದೆವು. 1859ರಲ್ಲಿ ಸ್ಥಾಪಿತಗೊಂಡ ಅನಹೇಮ್ ಪಟ್ಟಣವು ಮೊದಲಿಗೆ ದ್ರಾಕ್ಷಿ ಹಾಗೂ ಕಿತ್ತಳೆಗೆ ಪ್ರಸಿದ್ಧಿಯಾಗಿತ್ತಂತೆ. ಈಗ ಇದು ವಿಶ್ವ ವಿಖ್ಯಾತ ಡಿಸ್ನಿ ಲ್ಯಾಂಡ್‌ಗೆ ಹೆಸರುವಾಸಿ. 1955ನೇ ಇಸವಿಯಲ್ಲಿ ಹಿಂದಿನ ವ್ಯಂಗ್ಯ ಚಿತ್ರಕಾರ ವಾಲ್ಟ್ ಡಿಸ್ನಿ ಈ ಊರನಲ್ಲಿ ಡಿಸ್ನಿ ಲ್ಯಾಂಡ್‌ನ್ನು ಸ್ಥಾಪಿಸಿದ. ಅವನ ಉದ್ದೇಶ ಜನರು ತಾನು ಬರೆದ ಕಾರ್ಟೂನ್‌ಗಳೇ ಇರುವಂತಹ ಜಾಗದಲ್ಲಿ ಓಡಾಡಿ ಮನರಂಜನೆ ಪಡೆಯಲಿ ಎಂದಿತ್ತು. ಉದ್ದೇಶವಂತೂ ತುಂಬಾ ಸಫಲವಾಗಿದೆ. ಪ್ರತಿ ದಿನವೂ ಸಾವಿರಾರು ಜನ ಪ್ರವಾಸಿಗರು ವಿಶ್ವದ ಬೇರೆ ಬೇರೆ ಊರುಗಳಿಂದ ಇಲ್ಲಿಗೆ ಬಂದು ಮುದಗೊಳ್ಳುತ್ತಾರೆ.

ಡಿಸ್ನಿ ಲ್ಯಾಂಡ್‌ನ್ನು ಹತ್ತು ಹನ್ನೆರಡು ಬಗೆಯ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಒಂದು ಭಾಗದಲ್ಲಿ ಹಿಂದಿನ ಕಾಲದಲ್ಲಿ ನಾವಿಕರು ವಿಶ್ವ ಪರ್ಯಟನೆ ಮಾಡುವ ಬಗ್ಗೆ ತೋರಿಸಿದರೆ ಇನ್ನೊಂದರಲ್ಲಿ ಮನಸ್ಸಿಗೆ ಹೆದರಿಕೆ ಉಂಟಾಗುವ ಭೂತ ಪ್ರೇತಗಳ ಬಗ್ಗೆ ತೋರಿಸುತ್ತಾರೆ. ಮೂರನೇ ಕಡೆ ಸಮುದ್ರದ ತಳದಲ್ಲಿ ಪ್ರವಾಸ ಮಾಡಿದಾಗ ಹೇಗೆ ಇರುತ್ತದೆ ಎನ್ನುವುದನ್ನು ಮೂಡಿಸಿದರೆ ಮತ್ತೊಂದು ಕಡೆ ಆಗಸದಲ್ಲಿ ರಾಕೆಟ್‌ನಲ್ಲಿ ಸಂಚರಿಸಿದರೆ ಎಂತಹ ಅನುಭವ ಆಗುತ್ತದೆ ಎಂದು ತೋರಿಸುತ್ತಾರೆ. ಯಾರು ಯಾರಿಗೆ ಯಾವ ರೀತಿ ಥ್ರಿಲ್ ಬೇಕೋ ಅಂತಹ ಎಲ್ಲಾ ರೀತಿಯ ಥ್ರಿಲ್‌ಗಳನ್ನು ಇಲ್ಲಿ ಅಳವಡಿಸಲಾಗಿದೆ. ಪಾರ್ಕ್‌ನಲ್ಲಿ ಮುದುಕರು ಮಕ್ಕಳಾದಿಯಾಗಿ ಕಪ್ಪು ಸಾಸರ್ ಇರುವ ಮೆರಿಗೋ ರೌಂಡ್‌ನಲ್ಲಿ ಕೂತು ಖುಷಿ ಪಡೆಯುತ್ತಾರೆ. ವಾಲ್ಟ್ ಡಿಸ್ನಿ ಕಾರ್ಟೂನ್ ಪಾತ್ರಧಾರಿಗಳು, ಮಿಕ್ಕಿಮೌಸ್ ಇತ್ಯಾದಿಗಳ ಜೊತೆ ಕುಣಿಯುತ್ತಾರೆ. ವಿಹಾರವನ್ನೂ ಮಾಡುತ್ತಾರೆ.

ಸಂಪೂರ್ಣ ಡಿಸ್ನಿ ಲ್ಯಾಂಡ್ ನೋಡಲು ಮಾನೋ ರೈಲ್ ವ್ಯವಸ್ಥೆ ಇದೆ. ನೆಲದಿಂದ 30 ಅಡಿ ಮೇಲಕ್ಕೆ ಸಂಚರಿಸುವ ಈ ರೈಲು ಇಡೀ ಪಾರ್ಕನ್ನೇ ಸುತ್ತು ಹಾಕುತ್ತದೆ. ಈ ಪಾರ್ಕ್‌ನಲ್ಲಿ ಇರುವ ಎಲ್ಲಾ ಜಾಗಗಳನ್ನೂ ನೋಡಬೇಕಾದರೆ ಕಡಿಮೆ ಎಂದರೆ ಒಂದು ವಾರ ಬೇಕಾಗಬಹುದು. ಡಿಸ್ನಿ ಲ್ಯಾಂಡ್‌ನಲ್ಲಿ ತರಹೇವಾರಿ ಅಂಗಡಿಗಳು ಇವೆ. ಅಲ್ಲಿ ಸೊವೆನೀರ್‌ಗಳನ್ನು ಖರೀದಿ ಮಾಡಬಹುದು. ತರಹೇವಾರಿ ರೆಸ್ಟೋರೆಂಟ್‌ಗಳೂ ಇವೆ. ಎಲ್ಲಾ ತರಹದ ಊಟವೂ ಲಭ್ಯ. ಮುಸ್ಸಂಜೆಯ ಹೊತ್ತಿಗೆ ಡಿಸ್ನಿ ಲ್ಯಾಂಡ್‌ನಲ್ಲಿ ಒಂದು ಭಾರೀ ಪೆರೇಡ್ ನಡೆಯುತ್ತದೆ. ಬ್ಯಾಂಡ್ ಬಾಜಾ ಜೊತೆ ಬರುವ ಈ ಮೆರವಣಿಗೆಯಲ್ಲಿ ಡಿಸ್ನಿ ರೂಪಿಸಿದ ಹಲವಾರು ಕಾರ್ಟೂನ್ ಪಾತ್ರಗಳು ಕುಣಿದು ಕುಪ್ಪಳಿಸಿ ಮುಂದೆ ಹೋಗುತ್ತವೆ. ನಮ್ಮ ದಸರಾ ಮೆರವಣಿಗೆಯಂತೆ ಬಹಳ ಪ್ರೇಕ್ಷಣೀಯವಾಗಿರುತ್ತದೆ ಈ ಮೆರವಣಿಗೆ.

ಮನರಂಜನೆಗೆಂದೇ ಮೀಸಲಾಗಿರುವ ಡಿಸ್ನಿ ಲ್ಯಾಂಡ್‌ನಲ್ಲಿ ಪ್ರವೇಶ ಶುಲ್ಕ ದುಬಾರಿ ಎನಿಸಿತು. ಒಬ್ಬೊಬ್ಬರಿಗೆ ತಲಾ 50 ಡಾಲರ್ ಎಂದರೆ 2500 ರೂ. ಇಷ್ಟು ಹಣ ಕೊಟ್ಟು ಒಳಗೆ ಹೋದರೆ ಅಲ್ಲಿ ಯಾವ ಜಾಗಕ್ಕೆ ಹೋದರೂ ಪ್ರತ್ಯೇಕ ಟಿಕೇಟ್ ಪಡೆಯಬೇಕಾಗಿಲ್ಲ. ಆದರೆ ಊಟ ಉಪಹಾರಕ್ಕೆ ಬೇರೆ ಬೆಲೆ. ಏನೇ ಆದರೂ ಡಿಸ್ನಿ ಲ್ಯಾಂಡ್‌ನ ಅನುಭವವೇ ಚಿರಸ್ಮರಣೀಯ.

ನಮಗೆ ತುಂಬಾ ಮನರಂಜಿಸಿದ್ದ ಸ್ಯಾನ್‌ಫ್ರಾನ್ಸಿಸ್ಕೊ ಹಾಗೂ ಡಿಸ್ನಿ ಲ್ಯಾಂಡ್ ತೋರಿಸಿದ್ದಕ್ಕೆ ರವಿಗೆ ಥ್ಯಾಂಕ್ಸ್ ಹೇಳಿ ಕಾರನ್ನೇರಿದೆವು.

30

ಸ್ಯಾನ್‌ಡಿಯಾಗೊ ಮತ್ತು ಟಿಹುವಾನಾ

ಸ್ಯಾನ್‌ಫ್ರಾನ್ಸಿಸ್ಕೊ ಪ್ರವಾಸ ಮುಗಿಸಿದ ನಾವು ಕ್ಯಾಲಿಫೋರ್ನಿಯಾ ರಾಜ್ಯದಲ್ಲೇ ಮೆಕ್ಸಿಕೊ ದೇಶದ ಗಡಿಯಲ್ಲಿರುವ ಸ್ಯಾನ್‌ಡಿಯಾಗೊ ನಗರಕ್ಕೆ ಹೊರಟೆವು. ಹಡಗು ನಿರ್ಮಾಣ ಕೈಗಾರಿಕೆಗೆ ಪ್ರಸಿದ್ಧವಾಗಿರುವ ಸ್ಯಾನ್‌ಡಿಯಾಗೊ ಮೀನುಗಾರಿಕೆ ಬಂದರು ಎಂದೂ ಪ್ರಸಿದ್ಧಿ ಪಡೆದಿದೆ. ಇಲ್ಲೇ ಅಮೇರಿಕಾ ನೌಕಾದಳದ ನೆಲೆಯೂ ಇದ್ದು ಅಮೇರಿಕನ್ ನಾವಿಕರಿಗೆ ತರಬೇತಿ ನೀಡುವ ಕೇಂದ್ರವೂ ಇದೆ. ವರ್ಷದ ಉದ್ದಕ್ಕೂ ಉತ್ತಮ ಹವಾಮಾನ ಇರುವುದರಿಂದ ಹಾಗೂ ಈ ನಗರದಲ್ಲಿನ ಉದ್ದನೆಯ ಸಮುದ್ರ ತೀರಗಳು ಸುಂದರವಾಗಿರುವುದರಿಂದ ಇಲ್ಲಿಗೆ ಸಾಕಷ್ಟು ಪರ್ಯಟಕರು ಬರುತ್ತಾರೆ. ಆದರೆ ನಾವು ಸ್ಯಾನ್‌ಡಿಯಾಗೊಗೆ ಹೋಗಿದ್ದ ಕಾರಣವೇ ಬೇರೆ. ನಮ್ಮ ಹತ್ತಿರದ ಸಂಬಂಧಿಕರಾದ ಪಾಪಣ್ಣ - ತ್ರಿವೇಣಿ ಇದೇ ಊರಿನಲ್ಲಿ ಇದ್ದು ಅವರನ್ನು ನೋಡಬೇಕು ಎನ್ನುವ ಇಚ್ಛೆ ಒಂದು ಕಡೆ ಇದ್ದರೆ ಸ್ಯಾನ್‌ಡಿಯಾಗೊದಿಂದ ಮೆಕ್ಸಿಕೋಗೆ ಹೋಗಿ ಆ ದೇಶದ ಜನ ಜೀವನ ನೋಡುವ ಇಚ್ಛೆ ಇನ್ನೊಂದೆಡೆ.

ಬಸ್‌ಸ್ಟಾಂಡ್‌ನಲ್ಲಿ ನಾವು ಇಳಿಯುವ ವೇಳೆಗೆ ತ್ರಿವೇಣಿ ನಮ್ಮನ್ನು ಎದುರುಗೊಂಡು ತನ್ನ ಮನೆಗೆ ಕರೆದೊಯ್ದಳು. ಅವರ ಮನೆಗೆ ಹೋಗುತ್ತ ಕಿಟಕಿಯಿಂದ ಕಂಡ ದೃಶ್ಯ ನೋಡಿ ಸ್ಯಾನ್‌ಡಿಯಾಗೊ ಯೂರೋಪಿನ ನಗರಗಳು ಇದ್ದ ಹಾಗೇ ಇದೆ ಎಂದುಕೊಂಡೆ. ಏಕೆಂದರೆ ಈ ಊರಿನ ಹಲವಾರು ಕಟ್ಟಡಗಳು ಯೂರೋಪಿನ ಕಟ್ಟಡಗಳನ್ನೇ ಹೋಲುತ್ತವೆ. ಬೆಟ್ಟ ಗುಡ್ಡಗಳು ಸಮುದ್ರ ತೀರ ಇರುವ ಈ ಊರು ಸ್ವಲ್ಪ ಮಟ್ಟಿಗೆ ನಮ್ಮ ಗೋವಾದ ವಾಸ್ಕೊಡಗಾಮಾದಂತೆಯೂ ಇದೆ ಎನ್ನಿಸಿತು.

ತ್ರಿವೇಣಿ ಮನೆಯಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ನಾವು ನಗರದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೊರಟುಬಿಟ್ಟೆವು. 1542 ರಲ್ಲಿ ಸ್ಯಾನ್‌ಡಿಯಾಗೊ ಬಂದರಿಗೆ ಮೊದಲಿಗೆ ಬಂದದ್ದು ಪೋರ್ಚುಗೀಸ್ ನಾವಿಕ ಕ್ಯಾಬ್ರಿಲೊ. 1602 ರಲ್ಲಿ ಸ್ಪಾನಿಷ್ ನಾವಿಕ ಸೆಬಾಸ್ಟಿಯನ್ ಈ ಊರಿನ ಬಂದರಿಗೆ ಬಂದು ತನ್ನ ನೌಕೆಯ ಹೆಸರಾದ "ಸ್ಯಾಂಡಿಯಾಗೋ" ಎಂತಲೇ ಈ ಊರನ್ನು ಕರೆದ ನಂತರ ಊರಿಗೆ ಅದೇ ಹೆಸರು ಬಂತು. ಮುಂದೆ 1769 ರಲ್ಲಿ ಕೆಲವು ಸ್ಪಾನಿಷ್ ಪಾದ್ರಿಗಳು ಕ್ರೈಸ್ತ ಧರ್ಮವನ್ನು ಸ್ಥಾಪಿಸಲು ಇಲ್ಲಿಗೆ ಬಂದ ನಂತರ ಈ ನಗರಕ್ಕೆ ಸ್ವಲ್ಪ ಖ್ಯಾತಿ

ಬಂದಿತಂತೆ. 1840 ರವರೆಗೆ ಸ್ಯಾಂಡಿಯಾಗೊ ಮೆಕ್ಸಿಕೊ ದೇಶದ ಅಧೀನದಲ್ಲಿತ್ತಂತೆ. ಈ ನಗರವನ್ನು ವೇಲ್‌ಗಳನ್ನು ಹಿಡಿಯುವ ಮೀನುಗಾರಿಕಾ ಬಂದರನ್ನಾಗಿ ಮಾಡಿದರಂತೆ. 1940ರ ನಂತರ ಅಮೇರಿಕಾದ ನೌಕಾ ನೆಲೆ ಇಲ್ಲಿಗೆ ಬಂದ ನಂತರ ಈ ನಗರ ಪ್ರವರ್ಧಮಾನಕ್ಕೆ ಬಂದಿತು.

ಈ ನಗರದ ಅತಿ ಮುಖ್ಯ ಸ್ಥಳವಾದ ಬಲ್ಬೋವ ಪಾರ್ಕಿಗೆ ನಾವು ಹೋದೆವು. ಇಲ್ಲಿ ಪರ್ಯಟಕರು ನೋಡಬೇಕಾದ ಹಲವಾರು ಜಾಗಗಳು ಇವೆ. ಹೆಸರಾಂತ ಸ್ಯಾಂಡಿಯಾಗೊ ಮೃಗಾಲಯವಿದೆ. ಕಲಾ ಮ್ಯೂಸಿಯಂ ಇದೆ. ಅಂತರಿಕ್ಷ ಯಾನ ಮ್ಯೂಸಿಯಂ ಇದೆ. ಕ್ರೀಡಾ ಮ್ಯೂಸಿಯಂ ಕೂಡಾ ಇದೆ. ಒಂದೆರಡು ಮ್ಯೂಸಿಯಂ ನೋಡಿದ ನಂತರ ನಾವು ತ್ರಿವೇಣಿ ಮಗಳು ಅಭ್ಯಾಸ ಮಾಡುತ್ತಿದ್ದ ಸಂಗೀತ ಶಾಲೆಗೆ ಹೋದೆವು. ಈ ನಗರ ಸಂಗೀತ ಹಾಗೂ ಬ್ಯಾಲೇಗೆ ಹೆಸರುವಾಸಿಯಾಗಿದ್ದು ಹಲವಾರು ಸಂಗೀತ ಶಾಲೆಗಳು ಇವೆ.

ಸಾಯಂಕಾಲದ ಹೊತ್ತಿಗೆ ನಾವು ಸಮುದ್ರ ತೀರಕ್ಕೆ ಹೋದೆವು. ಸ್ಯಾಂಡಿಯಾಗೊ ಸಮುದ್ರ ತೀರದ ವಿಶೇಷತೆ ಎಂದರೆ ಅಲ್ಲಿ ಸೀ ಲಯನ್ ಎಂದು ಕರೆಯುವ ಪ್ರಾಣಿಗಳು ಸಮುದ್ರ ತೀರದಲ್ಲಿ ವಿಶ್ರಾಂತಿ ಪಡೆಯುತ್ತಾ ಇರುತ್ತವೆ. ನೀರಾನೆ ತರಹದ ಈ ಪ್ರಾಣಿಗಳು ಮನುಷ್ಯರನ್ನು ಕಂಡರೆ ಓಡಿ ಹೋಗುವುದಿಲ್ಲ. ಬಹಳ ಹತ್ತಿರದಿಂದ ಇವನ್ನು ಅವುಗಳ ನೈಸರ್ಗಿಕ ಪರಿಸರದಲ್ಲಿ ನೋಡಿ ಆನಂದವಾಯಿತು. ಸಮುದ್ರ ತೀರಕ್ಕೆ ಹೊಂದಿಕೊಂಡಂತೆ ಮುಖ್ಯ ರಸ್ತೆ ಇದೆ. ಈ ರಸ್ತೆಯಲ್ಲಿ ಹಲವಾರು ಅಂಗಡಿಗಳು ಇದ್ದು ತರಹೇವಾರಿ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ಸಣ್ಣಪುಟ್ಟ ವಸ್ತುಗಳನ್ನು ಖರೀದಿಸಿ ವಾಪಸ್ಸಾದೆವು.

ಮಾರನೇ ದಿನ ಬೆಳಗ್ಗೆ ಸ್ಯಾಂಡಿಯಾಗೊ ನಗರದ ಅತಿ ಪ್ರಮುಖ ಆಕರ್ಷಣೆಯಾದ ಸೀ ವರ್ಲ್ಡ್ ಎನ್ನುವ ಥೀಮ್ ಪಾರ್ಕ್‌ಗೆ ಹೋದೆವು. ಸೀ ವರ್ಲ್ಡ್ ಎನ್ನುವುದು ಸಮುದ್ರಕ್ಕೆ ಸಂಬಂಧಿಸಿದ ಅತಿ ದೊಡ್ಡ ಪಾರ್ಕ್. ಈ ರೀತಿಯ ಥೀಮ್ ಪಾರ್ಕ್ ಫ್ಲಾರಿಡಾದಲ್ಲಿ ಕೂಡಾ ಇದೆ. ಆದರೆ ನಾವು ಅಲ್ಲಿಗೆ ಹೋಗಿರಲಿಲ್ಲ. ಸೀ ವರ್ಲ್ಡ್‌ನಲ್ಲಿ ಎರಡು ಬಗೆಯ ಪ್ರದರ್ಶನಗಳು ಇದ್ದು ಒಂದು ಸಮುದ್ರ ಪ್ರಾಣಿಗಳು ಮಾಡುವಂತಹ ಪ್ರದರ್ಶನಗಳು ಹಾಗೂ ಎರಡನೆಯದು ಸಮುದ್ರ ಪ್ರಾಣಿಗಳು ಇರುವ ಅಕ್ವೇರಿಯಂ. ಇಲ್ಲಿನ ಅಕ್ವೇರಿಯಂನಲ್ಲಿ ತರಹೇವಾರಿ ಸಮುದ್ರವಾಸಿಗಳು ಇವೆ. ಒಂದು ಕಡೆ ಆರ್ಕ್‌ಟಿಕ್ ಪ್ರದೇಶದಂತೆ ಮುಂಜು ಗೆಡ್ಡೆಗಳನ್ನು ಮಾಡಿದ್ದು ಅಲ್ಲಿ ಪೆಂಗ್ವಿನ್ ಪಕ್ಷಿಗಳು ಇದ್ದವು. ಸಮುದ್ರದ ಕೆಳಗಡೆ ಇರುವಂತಹ ಹಲವಾರು ಪ್ರಾಣಿಗಳನ್ನು ನೋಡಲು ಗಾಜಿನ ಕೇಸ್‌ಗಳನ್ನು ಮಾಡಿ ಪ್ರಾಣಿಗಳನ್ನು ಅವುಗಳ ನೈಸರ್ಗಿಕ ಪರಿಸರದಲ್ಲಿ ನಾವು ನೋಡುವಂತೆ ಮಾಡಿದ್ದಾರೆ. ಇದೇ ಜಾಗದಲ್ಲಿ ನಾವು ಪೋಲಾರ್ ಕರಡಿಗಳು ಹಾಗೂ ಮನಾಟಿ ಎನ್ನುವ ಪ್ರಾಣಿಗಳನ್ನೂ ನೋಡಿದೆವು.

ಸೀ ವರ್ಲ್ಡ್‌ನ ಮುಖ್ಯ ಆಕರ್ಷಣೆ ಪ್ರಾಣಿಗಳು ಮಾಡುವ ಪ್ರದರ್ಶನ. ಮೂರು ರೀತಿಯ ಪ್ರದರ್ಶನಗಳಿವೆ. ಮೊದಲನೆಯದು ಶಾಮು ಪ್ರದರ್ಶನ. ಈ ಪ್ರದರ್ಶನದಲ್ಲಿ ಶಾಮು ಎಂಬ ವೇಲ್ ಮೃಗ ಅದರ ತರಬೇತುದಾರ ಹೇಳಿಕೊಟ್ಟಂತಹ ಹಲವಾರು ಸರ್ಕಸ್‌ಗಳನ್ನು ಮಾಡುತ್ತದೆ. ಒಂದು ಭಾರೀ ಸರೋವರದ ಸುತ್ತಲೂ ಸಾವಿರಾರು ಕುರ್ಚಿಗಳನ್ನು ಹಾಕಿರುತ್ತಾರೆ. ಈ ಕುರ್ಚಿಗಳಲ್ಲಿ ಕುಳಿತು ಶಾಮು ಹಾಗೂ ಅದರ ಜೊತೆಯ ಇತರ ವೇಲ್‌ಗಳು ನೀಡುವ ಪ್ರದರ್ಶನ ನೋಡುವುದೇ ಅವಿಸ್ಮರಣೀಯ. ಈ ವೇಲ್ ಎಷ್ಟು ದೊಡ್ಡದಾಗಿದೆ ಎಂದರೆ ಒಮ್ಮೆ ಅದು ಮೇಲೆ ಹಾರಿ ನೀರಿಗೆ

ಜಗಿದರೆ ಸುತ್ತಲೂ ಕುಳಿತವರ ಬಟ್ಟೆಯೆಲ್ಲಾ ಒದ್ದೆಯಾಗುತ್ತದೆ. ಇದೇ ಕಾರಣಕ್ಕೇ ಈ ಪ್ರದರ್ಶನ ನೋಡಲು ಪುಕ್ಕಟೆಯಾಗಿ ರೈನ್ ಕೋಟ್ ಕೊಡುತ್ತಾರೆ. ಶಾಮು ಪ್ರದರ್ಶನವಲ್ಲದೆ ಡಾಲ್ಫಿನ್ ಹಾಗೂ ಸೀ ಲಯನ್ ಮಾಡುವ ಪ್ರದರ್ಶನಗಳನ್ನೂ ನೋಡಿದೆವು. ದುರಾದೃಷ್ಟವಶಾತ್ ನಾವು ಸೀ ವರ್ಲ್ಡ್‌ಗೆ ಹೋದ ದಿನ ಮಳೆ ಬಂದದ್ದರಿಂದ ಅಲ್ಲಿ ಇರುವ ಎಲ್ಲಾ ಪ್ರದರ್ಶನಗಳನ್ನೂ ನೋಡಲಾಗಲಿಲ್ಲ. ಒಟ್ಟಿನಲ್ಲಿ ಸಮುದ್ರ ಪ್ರಾಣಿಗಳು ಯಾವ ರೀತಿ ವರ್ತಿಸುತ್ತವೆ ಎಂದು ಮನದಟ್ಟು ಮಾಡಿಕೊಂಡೆವು.

ಮಾರನೇ ದಿನ ಮೆಕ್ಸಿಕೋ ದೇಶವನ್ನು ನೋಡಲು ಅಮೇರಿಕಾದ ಗಡಿಯ ಚೆಕ್ ಪೋಸ್ಟ್‌ಗೆ ಹೋದೆವು. ಸ್ಯಾಂಡಿಯಾಗೊದ ಗಡಿ ಭಾಗದ ಮೆಕ್ಸಿಕನ್ ಊರಿನ ಹೆಸರು ಟಿಹುವಾನ. ನಾವು ಗಡಿ ನಿಯಂತ್ರಣ ಜಾಗಕ್ಕೆ ಹೋದಾಗ ಮೆಕ್ಸಿಕೊ ದೇಶದಿಂದ ಸಾವಿರಾರು ಜನ ಅಮೇರಿಕಾಗೆ ಬರಲು ಸರತಿಯಲ್ಲಿ ನಿಂತಿದ್ದನ್ನು ನೋಡಿದೆವು. ಏಕೆ ಹೀಗೆ ಎಂದು ವಿಚಾರಿಸಿದರೆ ಮೆಕ್ಸಿಕೊ ದೇಶದಲ್ಲಿ ಬಡತನ ಜಾಸ್ತಿಯಾಗಿದ್ದು. ಅಲ್ಲಿನ ಹಲವಾರು ಜನರು ಅಮೇರಿಕಾಗೆ ವಲಸೆ ಬಂದು ಕೂಲಿ ಕೆಲಸ ಮಾಡುತ್ತಾರೆಂದೂ, ಹೆಚ್ಚಾಗಿ ತೋಟಗಾರಿಕೆ ಉದ್ಯಮದಲ್ಲಿದ್ದಾರೆಂದು ತಿಳಿಯಿತು. ಕೆಲವರು ಅಮೇರಿಕಾ ದೇಶದಿಂದ ಆಕರ್ಷಿತರಾಗಿ ತಮ್ಮ ಊರಿಗೆ ಮರಳಿ ಹೋಗಲು ಇಷ್ಟ ಪಡದೆ ಕಾನೂನು ಬಾಹಿರವಾಗಿ ಅಮೇರಿಕಾದಲ್ಲೇ ಇದ್ದುಬಿಡುತ್ತಾರಂತೆ. ಹೀಗಾಗಿ ಅಮೇರಿಕಾಗೆ ಬರುವ ಮೆಕ್ಸಿಕನ್ನರ ಮೇಲೆ ಸಾಕಷ್ಟು ನಿಗಾ ಇಟ್ಟುಕೊಳ್ಳುತ್ತಾರೆ. ಹಗಲು ರಾತ್ರಿ ನಾಯಿಗಳ ಜೊತೆ ಪೋಲೀಸರು ಗಡಿ ಉದ್ದಕ್ಕೂ ಗಸ್ತು ತಿರುಗುತ್ತಾರೆ. ಅಮೇರಿಕಾದ ಗಡಿ ದಾಡಿ ಮೆಕ್ಸಿಕೊ ದೇಶದ ಟಿಹುವಾನ ನಗರಕ್ಕೆ ಹೋದ ಕೂಡಲೇ ನಮಗೆ ಒಮ್ಮೆಲೇ ಬೇರೆ ದೇಶಕ್ಕೆ ಬಂದ ಅನುಭವವಾಯಿತು. ಕಾರಣ ಇಷ್ಟೇ, ಕ್ಯಾಲಿಫೋರ್ನಿಯಾದ ಜೀವನಕ್ಕೆ ಹೋಲಿಸಿದಾಗ ಈ ಊರಿನ ಜನ ಬಹಳ ದಾರಿದ್ರ್ಯದಿಂದ ಇದ್ದಾರೆ ಎನಿಸಿತು. ರಸ್ತೆಗಳಲ್ಲಿ ಡಾಂಬರು ಹಾಳಾಗಿತ್ತು. ಮಳೆ ಬಂದು ರಸ್ತೆ ಎಲ್ಲಾ ಹೊಲಸಾಗಿತ್ತು. ಗಡಿ ಭಾಗದಲ್ಲಿಯೇ ಮೆಕ್ಸಿಕಾನ್ ಟ್ಯಾಕ್ಸಿವಾಲಾ ಒಬ್ಬ ನಮಗೆ ಎದುರಾಗಿ ನಗರವನ್ನು ತೋರಿಸುತ್ತೇನೆಂದು ನಮ್ಮನ್ನು ಟ್ಯಾಕ್ಸಿಯಲ್ಲಿ ಕುಳ್ಳಿರಿಸಿಕೊಂಡು ನಾವು ಕೊಡುವ ಅಮೇರಿಕನ್ ಡಾಲರ್ ಆಸೆಯಿಂದ ಟ್ಯಾಕ್ಸಿ ಶುಲ್ಕ ಇಳಿಸಿದ. ನಗರದ ಮಧ್ಯ ಭಾಗಕ್ಕೆ ಹೋದಾಗ ದೊಡ್ಡ ಅಂಗಡಿಗಳ ಸಾಲೇ ಕಂಡಿತು. ಅಂಗಡಿಗಳಲ್ಲಿ ಮೆಕ್ಸಿಕೊದ ಕರ ಕುಶಲ ವಸ್ತುಗಳನ್ನು ಮಾರುತ್ತಿದ್ದರು. ನಮ್ಮನ್ನು ಫುಟ್‌ಪಾತಿನ ಮೇಲೆ ನೋಡಿದ ಕೂಡಲೆ ಅಂಗಡಿಯವರು ಬಲವಂತವಾಗಿ ಕೈ ಹಿಡಿದು ಎಳೆದುಕೊಂಡು ತಮ್ಮ ತಮ್ಮ ಅಂಗಡಿ ಒಳಗೆ ಹೋಗಲು ಪ್ರೇರೇಪಿಸುತ್ತಾ ಇದ್ದರು. ಅವರು ನಮ್ಮನ್ನು ಸಂಬೋಧಿಸುತ್ತಿದ್ದ ರೀತಿಯೂ ಮೋಜು ತರಿಸುತ್ತಿತ್ತು. ಕೆಲವರು ಸಲಾಮ್ ಅಲೇಕುಮ್ ಎಂದರೆ ಇನ್ನು ಕೆಲವರು ನಮಸ್ತೆ ಎನ್ನುತ್ತಿದ್ದರು, ಕೆಲವರು ಜೈಹಿಂದ್ ಎಂದರೆ ಇತರರು ಸತ್ ಶ್ರೀ ಅಕಾಲ್ ಎಂದರು. ಒಬ್ಬ ಅಂಗಡಿಯವನಂತೂ ನಾವು ದಕ್ಷಿಣ ಭಾರತೀಯರು ಎಂದು ಗುರುತು ಹಿಡಿದು ವಣಕ್ಕಮ್ ಸತ್ಯಸಾಯಿಬಾಬ ಎಂದು ತನ್ನ ಅಂಗಡಿ ಒಳಗೆ ಎಳೆದೊಯ್ದ. ಈ ಊರಿನಲ್ಲಿ ಹತ್ತಿ ರೇಷ್ಮೆ ಬಟ್ಟೆಗಳು ಹಾಗೂ ಚರ್ಮದ ವಸ್ತುಗಳು ಸಾಕಷ್ಟು ಸಿಗುತ್ತವೆ. ಮೆಕ್ಸಿಕೋದಲ್ಲಿ ನಮ್ಮ ಮುಂಬೈನಂತೆ ಅವರು ಹೇಳಿದ ದರಕ್ಕಿಂತ ಮುಕ್ಕಾಲು ಪಟ್ಟು ಕಡಿಮೆ ದರ ಕೇಳಬೇಕು. ನಮಗೆ ಮೆಕ್ಸಿಕೊನಲ್ಲಿ 10 ಡಾಲರ್ ಎಂದು ಹೇಳಿದ ವಸ್ತುವನ್ನು ಒಂದು ಡಾಲರ್‌ಗೆ ಮಾರಿದ್ದನ್ನು ನೋಡಿ ನನ್ನ ಜೊತೆ ಇದ್ದ ತ್ರಿವೇಣಿ ಗಂಡ ಮೂಗಿನ ಮೇಲೆ ಬೆರಳು ಇಟ್ಟುಕೊಂಡ. ಏಕೆಂದರೆ ಅಮೇರಿಕೆಯಲ್ಲಿ ಚೌಕಾಸಿ ಮಾಡುವಂತಿಲ್ಲ.

ಅಮೇರಿಕಾದಿಂದ ಬರುವಂತಹ ಪರ್ಯಟಕರಿಗಾಗಿಯೆ ಟಿಹುವಾನಾದಲ್ಲಿ ಹಲವಾರು ಮನರಂಜನೆಗಳಿವೆ. ಹೇಸರಗತ್ತೆಯ ಬಂಡಿಯಲ್ಲಿ ನಗರದ ಮಧ್ಯ ಭಾಗದಲ್ಲೆಲ್ಲಾ ಓಡಾಡಬಹುದು. ಇಲ್ಲಾ ಹೇಸರಗತ್ತೆಯ ಜೊತೆ ಫೋಟೊ ತೆಗೆಸಿಕೊಳ್ಳಬಹುದು. ಗಿಳಿ ಶಾಸ್ತ್ರ ಕೇಳಬಹುದು. ಪಬ್‌ಗಳಲ್ಲಿ ದೊಡ್ಡ ಪರದೆಯ ಮೇಲೆ ಫುಟ್‌ಬಾಲ್ ಪಂದ್ಯಗಳನ್ನು ನೋಡಬಹುದು.

ಸಂಜೆಯವರೆಗೂ ಟಿಹುವಾನದಲ್ಲಿ ಸಾಕಷ್ಟು ವ್ಯಾಪಾರವನ್ನು ಮಾಡಿ ನಾವು ಅಮೇರಿಕಾ ಪ್ರವೇಶಿಸಿದಾಗ ನನ್ನ ಹೆಂಡತಿ - ಟಿಹುವಾನ ಸೇರಿಸಿ ನಾವು ಇಲ್ಲಿಯವರೆಗೆ 13 ದೇಶ ನೋಡಿದ ಹಾಗೆ ಆಯಿತು ಎಂದಳು. ಇನ್ನೂ ಅಮೇರಿಕಾದಲ್ಲಿ ಎರಡು - ಮೂರು ಊರು ನೋಡಬೇಕು. ಆ ನಂತರ ಆರು ದೇಶ ನೋಡುವುದಿದೆ ಎಂದು ಮನೆಯತ್ತ ಹೊರಟೆವು.

31 ಲಾಸ್ ವೇಗಾಸ್

ಸ್ಯಾನ್‌ಡಿಯಾಗೊದಿಂದ ಲಾಸ್ ವೇಗಾಸ್‌ಗೆ ಹೋಗುವುದೆಂದು ನಾನು ನಿರ್ಧರಿಸಿದಾಗ ನನ್ನ ಶ್ರೀಮತಿ "ಥೂ.... ಆ ಜೂಜುಗಾರರ ನಗರಕ್ಕೆ ಯಾರ್ರಿ ಹೋಗ್ತಾರೆ. ನಾನು ಬರುವುದಿಲ್ಲ. ನೀವೇ ಬೇಕಾದರೆ ಹೋಗಿ" ಎಂದಳು. ಆಗ ತ್ರಿವೇಣಿ ಅವಳಿಗೆ ಲಾಸ್ ವೇಗಾಸ್ ಜೂಜುಗಾರರ ಸ್ವರ್ಗ ಮಾತ್ರ ಅಲ್ಲ. ಜಗತ್ತಿನ ಹೆಸರಾಂತ ಮನೋರಂಜನಾ ಕೇಂದ್ರವೂ ಹೌದು. ಅದನ್ನ ನೋಡದೇ ಹೋದರೆ ಖಂಡಿತಾ ಒಳ್ಳೆ ಜಾಗ ಮಿಸ್ ಮಾಡಿದ ಹಾಗಾಗೊತ್ತೆ ಅಂದಳು. ಪಾಪಣ್ಣ ಕೂಡಾ ದನಿಕೂಡಿಸಿ "ಸ್ವರ್ಣಾ ಇಷ್ಟು ದೂರ ಬಂದು ಅಲ್ಲಿಗೆ ಹೋಗದಿದ್ದರೆ ಹೇಗೆ. ಒಂದು ವೇಳೆ ನಮ್ಮ ತಂದೆ ತರಹ ನಿನಗೂ ಲಕ್ ಇದ್ದರೆ ನೀನೂ ಹತ್ತು ಸಾವಿರ ಡಾಲರ್ ಗೆಲ್ಲಬಹುದು. ನಿಮ್ಮ ವಿಶ್ವಪರ್ಯಟನೆ ಖರ್ಚೆಲ್ಲಾ ಅದರಲ್ಲೇ ಭರಿಸಬಹುದು" ಎಂದ.

ಹೆಚ್ಚು ಮಾತನಾಡದೇ ಸ್ಯಾನ್‌ಡಿಯಾಗೋ ಬಸ್ ಸ್ಟಾಂಡಿನಿಂದ ಲಾಸ್ ವೇಗಾಸ್‌ಗೆ ಹೋಗುವ ಗ್ರೇಹೌಂಡ್ ಬಸ್ಸನ್ನು ಏರಿದೆವು. ವೇಗಾಸ್‌ನ ಕ್ಯಾಸಿನೋದಲ್ಲಿ ಹಣ ಗೆಲ್ಲುವ ಕನಸು ಕಾಣುತ್ತಾ ನಾನು ನಿದ್ದೆ ಮಾಡಿಬಿಟ್ಟೆ. ಬೆಳಿಗ್ಗೆ ಏಳುವ ಹೊತ್ತಿಗೆ ಫ್ರೇಮಾಂಟ್ ಸ್ಟ್ರೀಟ್ ಬಸ್ ನಿಲ್ದಾಣದಲ್ಲಿ ಬಸ್ ಬಂದು ನಿಲ್ಲುತ್ತಾ ಇತ್ತು. ಬಸ್ ನಿಲ್ದಾಣದಲ್ಲೇ ಹಲವಾರು ಸ್ಲಾಟ್ ಮಶೀನುಗಳು ಇದ್ದವು. ಸ್ಲಾಟ್ ಮಶೀನ್ ಎಂದರೆ ಮಶೀನಿನಲ್ಲಿ ನಾವು ಒಂದು ಡಾಲರ್ರೋ ಅಥವಾ ಕಡಿಮೆ ನಾಣ್ಯವನ್ನೋ ಹಾಕಿ ಬಟನ್ ಒತ್ತಿದರೆ ಆ ಮಶೀನ್ ಚಾಲೂ ಆಗುತ್ತದೆ. ಒಂದು ವೇಳೆ ಮೂರು ಸಂಖ್ಯೆಗಳು, ಮೂರು ಹಣ್ಣಿನ ಚಿತ್ರಗಳು ಇತ್ಯಾದಿ ಒಂದೇ ಸಾಲಿನಲ್ಲಿ ಬಂದರೆ ಮಶೀನಿನ ಬಾಯಿಯಿಂದ ತಪತಪನೆ ಹಣ ಉದುರುತ್ತದೆ. ಸಾಮಾನ್ಯವಾಗಿ ಒಂದು ಡಾಲರ್ ಹಾಕಿ ಗೆದ್ದರೆ ಎಂಟು ಡಾಲರ್ ಬರುತ್ತದೆ. ನೂರಾರು ತರಹದ ಜೂಜಾಟಗಳನ್ನು ಈ ಮಶೀನುಗಳ ಮೂಲಕ ಆಡಬಹುದು.

ಬಸ್ ಸ್ಟಾಂಡಿನಿಂದ ಹೊರಬರುತ್ತಲೇ ಟ್ಯಾಕ್ಸಿಯೊಂದು ಕಂಡಿತು. ಅದನ್ನು ನಿಲ್ಲಿಸಿದಾಗ ಅದರ ಚಾಲಕ "ನಿಮ್ಮದು ಯಾವ ದೇಶ" ಎಂದ. ನಾವು ಭಾರತ ಎಂದ ಕೂಡಲೇ ಅವನ ಮುಖ ಅರಳಿತು "ಧರ್ಮೇಂದ್ರ - ಹೇಮಾಮಾಲಿನಿ ಲಗ್ನ ಆಯಿತೇ" ಎಂದ. "ಆಗಲೇ ಆಯಿತಲ್ಲಪ್ಪ. ಆಕೆಗೆ ಇಬ್ಬರು ಪುತ್ರಿಯರೂ ಇದ್ದಾರೆ" ಎಂದಾಗ ಅವನು ಶೋಲೆ ಚಿತ್ರದ ಸಂಭಾಷಣೆಗಳನ್ನು

ಪಟಪಟನೆ ಹೇಳಿದ. ರಾಜಕಪೂರನ ಚಿತ್ರಗಳ ಹಾಡುಗಳನ್ನು ಗುಣಗುಣಿಸಲಾರಂಭಿಸಿದ. ನನಗೂ ಖುಷಿ ಆಯಿತು. "ನಿನ್ನದು ಯಾವ ಊರು" ಎಂದೆ. "ವೆಸ್ಟ್ ಇಂಡೀಸ್" ಎಂದು "ನೀವು ಎಲ್ಲಿಗೆ ಹೋಗಬೇಕು ಎಂದು ಹೇಳಲಿಲ್ಲವಲ್ಲ" ಎಂದ. ನಾವು ಹೋಗಬೇಕಾದ ಹೋಟೆಲ್ ಹೆಸರು ಹೇಳಿ ಈ ಊರಿನ ಬಗ್ಗೆ ಸ್ವಲ್ಪ ಮಾಹಿತಿ ನೀಡು ಎಂದು ಕಾರಿನಲ್ಲಿ ಕುಳಿತೆವು.

"ಸಾರ್, ವೇಗಾಸ್ ಐವತ್ತು ವರ್ಷದ ಹಿಂದೆ ದೊಡ್ಡ ಮರಳುಗಾಡಾಗಿತ್ತು. 1930 ರ ಸಮಯದಲ್ಲಿ ಇಲ್ಲೇ ಹತ್ತಿರದಲ್ಲಿರುವ ಕೊಲರೆಡೋ ನದಿಗೆ ಅಣೆಕಟ್ಟು ಕಟ್ಟುವುದನ್ನು ಪ್ರಾರಂಭಿಸಿದರು. ಹೂವರ್ ಡ್ಯಾಂ ಆ ಅಣೆಕಟ್ಟು. 1931 ರಲ್ಲಿ ನೆವಾಡಾ ರಾಜ್ಯದಲ್ಲಿ ಜೂಜಾಟದ ಮೇಲಿನ ನಿರ್ಬಂಧ ತೆಗೆದ ನಂತರ ಈ ನಗರದ ಪ್ರಥಮ ಕ್ಯಾಸಿನೋ 1946 ರಲ್ಲಿ ತೆರೆದರಂತೆ. ಅಲ್ಲಿಂದ ಮುಂದಿನ 25 ವರ್ಷಗಳು ಈ ನಗರ ಜೂಜಾಟ ಹಾಗೂ ಮನರಂಜನಾ ಕೇಂದ್ರವಾಗಿಯೇ ಅಭಿವೃದ್ಧಿ ಹೊಂದಿತು. ಕಳೆದ ಹತ್ತು ವರ್ಷದಲ್ಲಿ ಈ ಊರಿನಲ್ಲಿ ಕಟ್ಟಡಗಳ ಉದ್ಯಮ ಸಾಕಷ್ಟು ಬೆಳವಣಿಗೆ ಆಗಿದೆ. ಈಗ ಈ ನಗರ ರಿಸಾರ್ಟ್ ನಗರ ಎಂತಲೂ ಹೆಸರಾಗಿದೆ. ದೂರದಲ್ಲಿ ನೀವು ಕಾಣ್ತಿದ್ದೀರಲ್ಲಾ ಬೆಟ್ಟಗಳು. ಅದರ ಅಕ್ಕ ಪಕ್ಕದಲ್ಲೇ ಹಲವಾರು ಮಿಲಿಟರಿ ನೆಲೆಗಳು ಇವೆ. ಈ ಊರು ಬೆಟ್ಟಗಳ ಮಧ್ಯೆ ಒಂದು ಪಾತ್ರೆಯಂತೆ ಇದೆ" ಎಂದ.

ಲಾಸ್ ವೇಗಾಸ್‌ನಲ್ಲಿ ನಾವೇನು ನೋಡಬೇಕು ಎಂದು ಅವನ ಸಲಹೆ ಕೇಳಿದಾಗ "ನಿಮಗೆ ಜೂಜಾಟ ರುಚಿಸದಿದ್ದರೆ ಎದುರಿಗೆ ಕಾಣ್ತಾ ಇದೆಯಲ್ಲಾ "ಸ್ಟ್ರಿಪ್" (Strip) ಎಂಬ ಜಾಗ, ಅಲ್ಲಿ ಸುತ್ತಾಡಿ. ಪುಕ್ಕಟೆ ಮನರಂಜನೆ ದೊರೆಯುತ್ತದೆ" ಎಂದ. ಅಷ್ಟರಲ್ಲಿ ನಾವು ಇಳಿದುಕೊಳ್ಳಬೇಕಾದ ಹೋಟೆಲ್ ಬಂದಿತು. ಸೂಟ್‌ಕೇಸ್ ಕೈಯಲ್ಲಿಟ್ಟುಕೊಂಡು ಸ್ವಾಗತಕಾರನ ಬಳಿ ಹೋದೆವು. ಬೇರೆ ಎಲ್ಲಾ ಹೋಟೆಲ್‌ಗಳಲ್ಲಿ ಸ್ವಾಗತಕಾರನ ಕೌಂಟರ್ ಮುಂದೆ ಲೌಂಜ್ ನೋಡಿದ್ದೆವು. ಆದರೆ ಇಲ್ಲಿ ಆ ರೀತಿ ವಿಶಾಲವಾದ ಹಜಾರ ಇರಲಿಲ್ಲ. ಇದ್ದಷ್ಟು ಜಾಗ ಸ್ಲಾಟ್ ಮಶೀನುಗಳಿಂದ ತುಂಬಿ ಹೋಗಿತ್ತು. ಉದ್ದನೆಯ ಪ್ಲಾಸ್ಟಿಕ್ ಲೋಟಾಗಳಲ್ಲಿ ನಾಣ್ಯಗಳನ್ನು ತುಂಬಿಕೊಂಡ ಜನರು ಮಶೀನುಗಳಲ್ಲಿ ಆಟ ಆಡುತ್ತಾ ಇದ್ದರು. ರೂಮಿನೊಳಗೆ ಹೋಗಿ ಬೇಗ ಬೇಗನೇ ಸ್ನಾನ ಮುಗಿಸಿ ಹೊರಗೆ ಬಂದು, ಆಟ ಆಡಲು ಜೇಬಿಗೆ ಕೈ ಹಾಕಿದೆ. ಚಿಲ್ಲರೆ ಇರಲಿಲ್ಲ. ಅಲ್ಲೇ ಇದ್ದ ವ್ಯಕ್ತಿಯೊಬ್ಬ ಎದುರಿಗೆ ಇದ್ದ ಒಂದು ಮಶೀನೊಂದನ್ನು ತೋರಿಸಿ. ಅಲ್ಲಿ ನಿಮ್ಮ ನೋಟು ಹಾಕಿ ಎಂತಹ ಚಿಲ್ಲರೆ ಬೇಕು ಎಂಬ ಬಟನ್ ಒತ್ತಿ, ಚಿಲ್ಲರೆ ಬರುತ್ತದೆ ಎಂದ. ಅದೇ ರೀತಿ ಚಿಲ್ಲರೆ ಪಡೆದು ಪಕ್ಕದಲ್ಲೇ ಇದ್ದ ಒಂದು ಮಶೀನಿನ ಮುಂದೆ ಕುಳಿತೆ. ಅದರ ಮೇಲೆ ಅಮೇರಿಕನ್ ಇಂಡಿಪೆಂಡೆನ್ಸ್ ಎಂದು ಬರೆದಿತ್ತು. ಒಂದು ಡಾಲರ್ ಹಾಕಿದೆ. ಮಶೀನು ಅದನ್ನು ನುಂಗಿಯೇ ಬಿಟ್ಟಿತು. ಮುಂದಿನ ನಾಣ್ಯ ಹಾಕಿದಾಗ ಎಂಭತ್ತು ಡಾಲರ್ ಜೋರಾಗಿ ಶಬ್ದ ಮಾಡುತ್ತಾ ಟಪಟಪನೇ ಕೆಳಗೆ ಬಿದ್ದವು. ಎಲ್ಲವನ್ನೂ ಆಯ್ದುಕೊಳ್ಳುವಷ್ಟರಲ್ಲಿ ಸ್ವರ್ಣ ಬಂದಳು. ಇನ್ನಷ್ಟು ಆಡಲೇ ಎಂದೆ. ಬೇಡ ಊರು ನೋಡಿಕೊಂಡು ಬರೋಣ ಎಂದಳು.

ಹೊರಗಡೆ ಬರುವಷ್ಟರಲ್ಲೇ ಟ್ಯಾಕ್ಸಿಯೊಂದು ಎದುರಿಗೇ ಬಂದಿತು. ಅದರಲ್ಲಿ ಕುಳಿತು ಈ ಊರಿನ ವಿಶೇಷತೆಗಳನ್ನು ತೋರಿಸಪ್ಪಾ ಎಂದೆವು. "ಸಾರ್ ಈ ಊರನ್ನು ಸವಿಯಬೇಕಾದ್ದು ಕತ್ತಲಾದ ನಂತರವೇ. ಆದರೂ ನಿಮಗೆ ಹೊರಗಿನಿಂದಲೇ ಇಲ್ಲಿಯ ಹೋಟೆಲ್‌ಗಳನ್ನು ತೋರಿಸ್ತೇವೆ" ಎಂದು ಟ್ಯಾಕ್ಸಿ ಸ್ಟಾರ್ಟ್ ಮಾಡಿದ. ಮೊದಲಿಗೆ "ಲಕ್ಸರ್" ಎಂಬ ಹೋಟೆಲ್ ಮುಂದೆ ಹೋದೆವು.

ಇದನ್ನು ನೋಡಿದರೆ ನಾವು ಈಜಿಪ್ಟ್‌ನಲ್ಲಿದ್ದಂತೆ ಭಾಸವಾಯಿತು. ಪಿರಮಿಡ್ ಆಕಾರದಲ್ಲಿರುವ ಈ ಹೋಟೆಲ್ಲಿನ ಮುಂದೆ 190 ಅಡಿಯ ಎತ್ತರದ ಓಬಿಲಿಸ್ಕ್ (Obelisk) ಅಂದರೆ ಗೋಪುರ ಇದ್ದು ನೂರು ಅಡಿ ಎತ್ತರದ ಸ್ಪಿಂಕ್ಸ್ (Sphinx) ಇದೆ. ಅಲ್ಲಿಂದ ಮುಂದೆ ಹೋದರೆ ಫಿರಂಗಿ ಶಬ್ದ ಕೇಳಿಸಿತು. ಎದುರುಗಡೆ ಒಂದು ಹಳೇ ಕಾಲದ ನೌಕೆಯಲ್ಲಿ ಇದ್ದ ನಾವಿಕರು ತಮ್ಮ ಮುಂದೆ ಇದ್ದ ಇನ್ನೊಂದು ನೌಕೆಯತ್ತ ಗುಂಡುಗಳನ್ನು ಹಾರಿಸಿ ಯುದ್ಧ ಮಾಡುತ್ತಿದ್ದರು. "ಟ್ರೆಷರ್ ಐಲಾಂಡ್" ಎಂದು ಕರೆಯುವ ಈ ಜಾಗದಲ್ಲಿ ಸಮುದ್ರ ಕಳ್ಳರು ಯಾವ ರೀತಿ ದೋಣಿಗಳನ್ನು ಅಟ್ಯಾಕ್ ಮಾಡ್ತಾ ಇದ್ದರು ಎಂದು ತೋರಿಸ್ತಾ ಇದ್ದಾರೆ, ಎಂದ ನಮ್ಮ ಚಾಲಕ ಇದು "ಷೋಬೋಟ್" ಹೋಟೆಲ್ಲಿನ ಆಕರ್ಷಣೆ. ಪ್ರತಿ ಒಂದು ಗಂಟೆಗೆ ಈ ಪ್ರದರ್ಶನ ಇದೆ.

ಮುಂದೆ ನಾವು ನೋಡಿದ ಹೋಟೆಲ್ "ಸೀಜರ್ಸ್ ಪ್ಯಾಲೇಸ್" ನಮ್ಮ ಟ್ಯಾಕ್ಸಿ ಈ ಹೋಟೆಲ್ಲಿನ ಕಾಂಪೌಂಡಿನ ಒಳಗೆ ಹೋದಾಗ ನಾವು ಮತ್ತೆ ರೋಮ್‌ಗೆ ಹೋದ ಹಾಗೆ ಅನ್ನಿಸಿತು. ಎಲ್ಲಿ ನೋಡಿದರೂ ರೋಮನ್ ಕಾರಂಜಿಗಳು. ದೊಡ್ಡ ದೊಡ್ಡ ದ್ವಾರಗಳು. ದ್ವಾರಗಳಲ್ಲಿ ಗ್ಲೇಡಿಯೇಟರ್‌ಗಳ ಪೋಷಾಕು ಧರಿಸಿದ ದ್ವಾರಪಾಲಕರು! ಅಲ್ಲಿಂದ ಮುಂದೆ ಹೋದರೆ "ಸರ್ಕಸ್" ಹೋಟೆಲ್ ಕಂಡಿತು. ಈ ಹೋಟೆಲ್ಲಿನಲ್ಲಿ ವರ್ಷದ 365 ದಿನಗಳೂ ಸರ್ಕಸ್ ಪ್ರದರ್ಶನಗಳು ನಡೆಯುತ್ತವಂತೆ. ಹೋಟೆಲ್ ಮುಂದೆ 123 ಅಡಿ ಎತ್ತರದ ಜೋಕರ್ ನಿಲ್ಲಿಸಿದ್ದಾರೆ.

ಜೇಮ್ಸ್ ಬಾಂಡ್ ಕಾದಂಬರಿಗಳಲ್ಲಿ ನಾನು ಓದಿದ್ದ "ಗೋಲ್ಡನ್ ನಗೆಟ್" ಹೋಟೆಲ್ ಕಂಡಾಗ ಮೋಜೆನಿಸಿತು. ಈ ಹೋಟೆಲ್ ನಮ್ಮನ್ನು ಯೋರೋಪಿಗೆ ಕೊಂಡೊಯ್ಯುತ್ತದೆ. ಯುರೋಪಿಯನ್ ಜೀವನ ಶೈಲಿಯ ಪ್ರತಿಬಿಂಬ ಇಲ್ಲಿದೆ. ಮುಂದೆ ಹೋದರೆ "ಸ್ಟಾಟೋಸ್ಪಿಯರ್" (Stratosphere) ಹೋಟೆಲ್ ಕಂಡಿತು. ಈ ಹೋಟೆಲ್ ಲಾಸ್ ವೇಗಾಸ್‌ನ ಅತಿ ಎತ್ತರದ ಕಟ್ಟಡ. 1200 ಅಡಿ ಎತ್ತರದ ಈ ಹೋಟೆಲ್ ಮೇಲಿಂದ ಲಾಸ್ ವೇಗಾಸ್‌ನ ವಿಹಂಗಮ ನೋಟ ಲಭಿಸುತ್ತದಂತೆ. "ಮಿರಾಜ್" ಎಂದು ಕರೆಯುವ ಹೋಟೆಲ್‌ಗೆ ಹೋದರೆ ಅಮೆಜಾನ್ ತೀರದ ಕಾಡಿಗೆ ಬಂದಂತೆ ಅನಿಸುತ್ತದೆ. ಇಲ್ಲಿ ಜಲಪಾತಗಳು, ಸರೋವರಗಳು, ಡಾಲ್ಫಿನ್‌ಗಳು ಅಲ್ಲದೆ ಜೀವಂತ ಬಿಳಿ ಹುಲಿಗಳೂ ಇವೆ!

ಲಾಸ್ ವೇಗಾಸ್‌ನ ಅತಿ ದೊಡ್ಡ ಹೋಟೆಲ್ ಎಂದರೆ "ಎಂ.ಜಿ.ಎಂ. ಗ್ರಾಂಡ್". 112 ಎಕರೆ ವಿಸ್ತೀರ್ಣದಲ್ಲಿ ಕಟ್ಟಲಾಗಿರುವ ಈ ಹೋಟೆಲ್‌ಗೆ ಹೋದರೆ ಹಾಲಿವುಡ್‌ಗೆ ಹೋದಂತೆಯೇ ಭಾವನೆ ಬರುತ್ತದೆ. ಇದೇ ವಿಶ್ವದ ಇತಿ ದೊಡ್ಡ ಹೋಟೆಲ್ ಅಂತೆ. 1980 ರಲ್ಲಿ ಈ ಹೋಟೆಲ್‌ಗೆ ಬೆಂಕಿ ಬಿದ್ದು 84 ಜನ ಸತ್ತ ನಂತರ ಈ ಹೋಟೆಲ್‌ನ ಪುನರ್ ನಿರ್ಮಾಣ 1993 ರಲ್ಲಿ ಆಯಿತಂತೆ. ಇದನ್ನು ಕಟ್ಟಲು ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಖರ್ಚಾಯಿತಂತೆ.

"ಹೋಟೆಲ್ ಕಟ್ಟಿಸಲೇ ಸಾವಿರ ಕೋಟಿ ಆದರೆ ರೂಂ ಬಾಡಿಗೆ ಎಷ್ಟು" ಎಂದಳು ನನ್ನ ಶ್ರೀಮತಿ. ಟ್ಯಾಕ್ಸಿ ಚಾಲಕ ಉತ್ತರಿಸಿದ "ಮೇಡಂ, ಲಾಸ್ ವೇಗಾಸ್‌ನಲ್ಲಿ ದಿನಕ್ಕೆ ನೂರು ಡಾಲರ್‌ನಿಂದ ಹಿಡಿದು ಏಳೂವರೆ ಸಾವಿರ ಡಾಲರ್‌ಗಳವರೆಗೂ ರೂಂ ಬಾಡಿಗೆ ಎಂದು ಹೇಳಿ ನಿಮ್ಮ ರೂಪಾಯಿ ಲೆಕ್ಕದಲ್ಲಿ ಏಳೂವರೆ ಸಾವಿರ ಡಾಲರ್ ಎಂದರೆ ಎಷ್ಟು" ಎಂದ. "ಸುಮಾರು ಮೂರು ಲಕ್ಷ ಅರವತ್ತು ಸಾವಿರ ರೂಪಾಯಿ" ಎಂದೆ. "ಖಂಡಿತಾ ನಮ್ಮಂತಹವರಿಗಲ್ಲ, ಅಂಬಾನಿಯಂತಹವರಿಗೂ ಇದು ದುಬಾರಿ ಇರಬೇಕು" ಎಂದಳು ನನ್ನ ಹೆಂಡತಿ. "ಈ ಎಲ್ಲ

ಹೋಟೆಲ್‌ಗಳ ಕ್ಯಾಸಿನೋಗಳಲ್ಲೂ ಹೋಟೆಲ್‌ಗಳ ವಿಶೇಷತೆಗಳನ್ನೇ ಅಳವಡಿಸಲಾಗಿದೆ. ಉದಾಹರಣೆಗೆ ಹಾರ್ಡ್ ರಾಕ್ ಹೋಟೆಲ್ಲಿನ ಕ್ಯಾಸಿನೋದಲ್ಲಿ ಜೂಜಾಟದ ಟೇಬಲ್ಲುಗಳೂ ಗಿಟಾರ್ ರೂಪದಲ್ಲೇ ಇವೆ" ಎಂದು ಹೇಳಿದ ನಮ್ಮ ಚಾಲಕ.

ನಾವಿಳಿದುಕೊಂಡಿದ್ದ ಹೋಟೆಲ್ಲಿಗೆ ವಾಪಸ್ ಬಂದು ಭೋಜನ ಮುಗಿಸಿ ಮತ್ತೆ ಪಕ್ಕದ ಹೋಟೆಲ್ಲಿನ ಕ್ಯಾಸಿನೋಗೆ ಹೋದೆವು. ಅಲ್ಲಿ ನಾನು ಗೆದ್ದಿದ್ದ ಹಣದಿಂದ ಇನ್ನೊಂದು ಬಾರಿ ನನ್ನ ಅದೃಷ್ಟ ಪರೀಕ್ಷಿಸಿದಾಗ ಇನ್ನೂರು ಡಾಲರ್ ಗೆದ್ದೆ. ಅದೇ ಹಣದಲ್ಲೇ ಲಾಸ್ ವೇಗಾಸ್‌ನ ಇತರ ಆಕರ್ಷಣೆಗಳನ್ನು ಅನುಭವಿಸೋಣ ಎಂದುಕೊಂಡು ಬ್ರಾಡ್‌ವೇ ಮ್ಯೂಸಿಕಲ್ ನಾಟಕವೊಂದನ್ನು ನೋಡಿದೆವು. ಮನರಂಜನೆಗಾಗಿ ವೇಗಾಸ್‌ನಲ್ಲಿ ನಾಟಕಗಳು ಇವೆ; ಕ್ಯಾಬರೇ ನೃತ್ಯಗಳು ಇವೆ; ಮ್ಯೂಸಿಯಂ ಇವೆ (ಹಾಲಿವುಡ್ ಮ್ಯೂಸಿಯಂ ಚಲನಚಿತ್ರಗಳ ಇತಿಹಾಸವನ್ನೇ ಮೆಲುಕು ಹಾಕಿಸುತ್ತದೆ); ವೆಟ್ ಅಂಡ್ ವೈಲ್ಡ್ ವಾಟರ್ ಪಾರ್ಕ್ (ನೀರಿನಲ್ಲಿರುವ ಹಲವಾರು ಮೋಜಿನ ಆಟಗಳ ಪಾರ್ಕ್) ಇದೆ; ಸರ್ಕಸ್ ಇದೆ; ರೋಲರ್ ಕೋಸ್ಟರ್ ಎಂದರೆ ಎತ್ತರದಿಂದ ಕೆಳಗೆ ಬರುವ ರೈಲುಬಂಡಿ ಪಯಣ ಇದೆ. ಸಂಗೀತದಿಂದಲೇ ಲಾಸ್ ವೇಗಾಸ್‌ನ ಮನರಂಜನೆ ಪ್ರಾರಂಭವಾದದ್ದು. ರಾಕ್ ಎಂಡ್ ರೋಲ್ ಸಂಗೀತದ ಸಾಮ್ರಾಟ ಎಲ್‌ವಿಸ್ ಪ್ರಿಸ್ಲೆಗೆ ಹಾಗೂ ಸುಮಧುರ ಕಂಠದ ಜನಪದ ಗಾಯಕ ಫ್ರಾಂಕ್ ಸಿನಾತ್ರಾಗೆ ಹೆಸರು ತಂದುಕೊಟ್ಟ ಜಾಗವೇ ವೇಗಾಸ್.

ರಾತ್ರಿಯಾಯಿತೆಂದರೆ ಲಾಸ್ ವೇಗಾಸ್‌ಗೆ ಹೊಸಾ ರೂಪವೇ ಬಂದುಬಿಡುತ್ತದೆ. ಎಲ್ಲೆಲ್ಲಿ ನೋಡಿದರೂ ಬಣ್ಣ ಬಣ್ಣದ ಝುಗಝುಗಿಸುವ ದೀಪಗಳು. ನಿಯಾನ್ ಸೈನುಗಳು. ಯಾವುದೋ ಒಂದು ಮಾಯಾನಗರಿಗೆ ಬಂದ ಅನುಭವ. ಇಲ್ಲಿನ ಕ್ಯಾಸಿನೋಗಳಲ್ಲಿ ಗಡಿಯಾರಗಳೇ ಇಲ್ಲ. ಅಲ್ಲಿ ಬಂದು ಜೂಜಾಡುವವರಿಗೂ ವೇಳೆಯ ಪರಿವೆಯೇ ಇರುವುದಿಲ್ಲ. ಕ್ಯಾಸಿನೋಗಳಲ್ಲಿ ಅತಿ ಕಡಿಮೆ ಬೆಲೆಗೆ ಊಟ ಲಭ್ಯ. ಮದ್ಯವಂತೂ ಪುಕ್ಕಟೆ! ಎಷ್ಟು ಬೇಕಾದರೂ ಕುಡಿಯಬಹುದು. ಜೂಜುಗಾರ ಕುಡಿದಷ್ಟೂ ಲಾಭವಾಗುವುದು ಜೂಜುಗಟ್ಟೆಗೇ ತಾನೇ.

ರಾತ್ರಿ ಊಟ ಮುಗಿಸಿ ನಾವು ರೂಮಿಗೆ ತೆರಳುವಾಗ ನಮ್ಮ ಅದೃಷ್ಟ ಮತ್ತೊಮ್ಮೆ ಪರೀಕ್ಷಿಸುವಾ ಎಂದು ಇನ್ನೂರು ಡಾಲರ್ ಸ್ಲಾಟ್ ಮಶೀನಿನಲ್ಲಿ ಆಡಿದೆ. ಒಂದು ಪೈಸೆಯೂ ಬರಲಿಲ್ಲ! ಸ್ವಂತ ಹಣ ಹೋಗಲಿಲ್ಲವಲ್ಲಾ ಎಂದುಕೊಂಡು ರೂಮಿಗೆ ವಾಪಸ್ ಆದೆವು.

32

ಗ್ರಾಂಡ್ ಕೆನ್ಯಾನ್; ಹೂವರ್ ಡ್ಯಾಂ

ಲಾಸ್ ವೇಗಾಸ್‌ನಿಂದ ಗ್ರಾಂಡ್ ಕೆನ್ಯಾನ್ ಹಾಗೂ ಹೂವರ್ ಡ್ಯಾಂಗೆ ಬಸ್ಸಿನಲ್ಲಿ ಒಂದು ದಿನದ ಸೈಟ್ ಸೀಯಿಂಗ್ ಪ್ರವಾಸಕ್ಕೆ ನಾವು ಟಿಕೆಟ್ ಖರೀದಿಸಿ ವೇಗಾಸ್ ಬಿಟ್ಟಾಗ ಗಂಟೆ ಏಳೂವರೆ. ಲಾಸ್ ವೇಗಾಸ್‌ನ ಹೊರವಲಯದಲ್ಲಿರುವ ಗುಡ್ಡಗಳನ್ನೇರಿ ಸ್ವಲ್ಪ ದೂರ ನೇರ ರಸ್ತೆಯಲ್ಲಿ ಚಲಿಸಿ ಮತ್ತೆ ಗುಡ್ಡವೇರತೊಡಗಿದೆವು. "ವೆಲ್‌ಕಂ ಟು ಹೂವರ್ ಡ್ಯಾಂ" ಎಂದು ಬರೆದಿದ್ದ ಫಲಕಗಳು ರಸ್ತೆಗಳ ಪಕ್ಕ ಕಂಡ ಕೂಡಲೆ ನಮ್ಮ ಚಾಲಕ ಬಸ್ ನಿಲ್ಲಿಸಿ "ಈಗ ಬಸ್ಸಿನಲ್ಲಿನ ವೀಡಿಯೋದಲ್ಲಿ ಹತ್ತು ನಿಮಿಷದ ಚಿತ್ರ - ಹೂವರ್ ಡ್ಯಾಂ ಬಗ್ಗೆ - ತೋರಿಸುತ್ತೀನಿ ಅದನ್ನು ನೋಡಿದ ನಂತರ ನೀವೆಲ್ಲಾ ಇಳಿಯಿರಿ. ನಾನು ನಿಮಗೆ ಈ ಡ್ಯಾಂನ ಮುಖ್ಯ ಸ್ಥಳಗಳ ಬಗ್ಗೆ ಪರಿಚಯ ಮಾಡಿಕೊಡ್ತೀನಿ" ಎಂದ.

ನೆವಾಡಾ ಹಾಗೂ ಅರಿಜೋನಾ ರಾಜ್ಯಗಳ ಗಡಿ ಪ್ರದೇಶದಲ್ಲಿರುವ ಹೂವರ್ ಅಣೆಕಟ್ಟು ಬ್ಲಾಕ್ ಕೆನ್ಯಾನ್ ಎಂಬ ಹೆಸರಿನ ಕೊಳ್ಳದಲ್ಲಿ ಹರಿಯುವ ಕೊಲರೆಡೋ ನದಿಯ ಮೇಲಿದೆ. ಎರಡು ಭಾರೀ ಬೆಟ್ಟಗಳ ನಡುವೆ ಕಟ್ಟಿರುವ ಈ ಅಣೆಕಟ್ಟಿನ ಎತ್ತರ 726 ಅಡಿ, ಹಾಗೂ ಉದ್ದ ಕೇವಲ 1200 ಅಡಿ. 1931 ರಲ್ಲಿ ಈ ಅಣೆಕಟ್ಟು ಕಟ್ಟಲು ಪ್ರಾರಂಭಿಸಿ ಐದು ವರ್ಷದ ನಂತರ ನಿರ್ಮಾಣ ಮುಗಿಯಿತು. ಅಮೇರಿಕಾದ ಅಧ್ಯಕ್ಷ ಹರ್ಬರ್ಟ್ ಹೂವರ್‌ನ ಹೆಸರಿನ ಈ ಅಣೆಕಟ್ಟಿಗೆ ಸ್ವಲ್ಪ ಕಾಲ ಬೌಲ್ಡರ್ ಡ್ಯಾಂ ಎಂದೂ ಕರೆದರಂತೆ. ಈ ಅಣೆಕಟ್ಟಿನಿಂದಾಗಿ ಉಂಟಾದ ಜಲಾಶಯಕ್ಕೆ ಲೇಕ್ ಮೀಡ್ ಎಂದು ಕರೆಯುತ್ತಾರೆ. ಈ ಜಲಾಶಯದ ವಿಸ್ತೀರ್ಣ 250 ಚದರ ಮೈಲಿ ಇದ್ದು ಇದು ವಿಶ್ವದ ಅತಿದೊಡ್ಡ ಮಾನವ ನಿರ್ಮಿತ ಸರೋವರ. ಹೂವರ್ ಅಣೆಕಟ್ಟಿನಲ್ಲಿ ಜಲವಿದ್ಯುತ್ ಕಾರ್ಯಾಗಾರವಿದ್ದು ಇಲ್ಲಿ ಒಂದೂವರೆ ದಶಲಕ್ಷ ಕಿಲೋವ್ಯಾಟ್ ವಿದ್ಯುತ್‌ಶಕ್ತಿ ಉತ್ಪಾದಿಸಲಾಗುತ್ತದೆ. ಅರಿಜೋನಾ, ನೆವಾಡಾ ಹಾಗೂ ದಕ್ಷಿಣ ಕ್ಯಾಲಿಫೋರ್ನಿಯಾ ರಾಜ್ಯಗಳಿಗೆ ಇಲ್ಲಿಂದಲೇ ವಿದ್ಯುತ್ ಸರಬರಾಜಾಗುವುದು ಎಂದು ವಿಡಿಯೋ ಪ್ರದರ್ಶನದಲ್ಲಿ ತೋರಿಸಿದರು.

ಹೂವರ್ ಅಣೆಕಟ್ಟನ್ನು ನೋಡಿದ ನಾವು ಮತ್ತೆ ಬಸ್ಸನ್ನೇರಿ ಲೇಕ್ ಮೀಡ್ ನೋಡಲು ತೆರಳಿದೆವು. ಲೇಕ್ ಮೀಡ್ ಸುತ್ತಮುತ್ತಲಿನ ಪ್ರದೇಶವನ್ನು ಮನರಂಜನಾ ಕೇಂದ್ರವಾಗಿ ಮಾಡಿದ್ದಾರೆ. ನೀಲಿ ಬಣ್ಣದ ಲೇಕ್ ಮೀಡ್ ಸರೋವರದ ಹಿಂದೆ ಕಂದು, ಕರಿ, ಬೂದಿ ಬಣ್ಣದ ಮರುಭೂಮಿ

ಪರ್ವತಗಳಿದ್ದು ಈ ನೋಟವೇ ಆಹ್ಲಾದದಾಯಕ. ಸರೋವರದಲ್ಲಿ ಹಲವಾರು ಜಲಕ್ರೀಡೆಗಳು ಲಭ್ಯವಿದೆ. ಇಲ್ಲಿ ತೇಲುದೋಣಿಯಾನ ಮಾಡಬಹುದು. ಸ್ಕೂಬಾ ಡೈವಿಂಗ್ ಮಾಡಬಹುದು. ವಾಟರ್ ಸ್ಕೀ ಮಾಡಬಹುದು. ಏನೂ ಬೇಡವಿದ್ದರೆ ಸರೋವರದ ಸುತ್ತಲೂ ಇರುವ ರಸ್ತೆಯಲ್ಲಿ ಡ್ರೈವ್ ಮಾಡುವುದೇ ಒಂದು ಸುಂದರ ಅನುಭವ.

ಸುಮಾರು ಒಂದು ಗಂಟೆಕಾಲ ಈ ಪ್ರದೇಶದಲ್ಲಿ ಅಡ್ಡಾಡಿ ಮತ್ತೆ ಬಸ್ಸನ್ನು ಏರಿದಾಗ ನಮ್ಮ ಚಾಲಕ "ಇಲ್ಲಿಂದ ಗ್ರಾಂಡ್ ಕೆನ್ಯಾನ್‌ಗೆ ಹೋಗಲು ಇನ್ನೂ ಒಂದೂವರೆ ಗಂಟೆ ಬೇಕು. ಹೊರಗಡೆಯಿರುವ ರಸ್ತೆ ಮರುಭೂಮಿ ರಸ್ತೆ. ಯಾವ ಸುಂದರ ದೃಶ್ಯವೂ ಇಲ್ಲ" ಎಂದು ಒಂದು ವೀಡಿಯೋ ಚಿತ್ರ ಚಾಲೂ ಮಾಡಿದ. "ಕಮಿಂಗ್ ಟು ಲಾಸ್ ವೇಗಾಸ್" ಎಂಬ ಚಿತ್ರ ಅದು. ಒಂದು ಪುಟ್ಟ ಸಂಸಾರ, ಗಂಡ - ಹೆಂಡತಿ - ಬೆಳೆದ ಮಗ - ಬೆಳೆದ ಮಗಳು, ಪ್ರವಾಸಕ್ಕೆ ಲಾಸ್ ವೇಗಾಸ್‌ಗೆ ಬರುತ್ತಾರೆ. ಗಂಡ ಕ್ಯಾಸಿನೋದಲ್ಲಿ ಜೂಜಾಡುವುದರಲ್ಲೇ ನಿರತನಾಗಿರುತ್ತಾನೆ. ಇದರಿಂದ ಬೇಸರಗೊಂಡ ಅವನ ಹೆಂಡತಿ ನಾಟಕವೊಂದನ್ನು ನೋಡಲು ಹೋಗಿ ಅಲ್ಲಿದ್ದ ಒಬ್ಬ ಪುರುಷನ ಜತೆ ಸಖ್ಯ ಬೆಳೆಸುತ್ತಾಳೆ. ಹಾಡುಗಾರಿಕೆಯಲ್ಲಿ ಆಸಕ್ತಿಯಿದ್ದ ಮಗಳು ಒಂದು ಹೋಟೆಲ್‌ನಲ್ಲಿ ಇದ್ದ ಬ್ಯಾಂಡ್ ಸೇರಿಕೊಂಡು ಅಲ್ಲಿನ ಒಬ್ಬ ಯುವಕನಲ್ಲಿ ಅನುರಕ್ತಳಾಗುತ್ತಾಳೆ. ಮಗ ಬರೀ ಬಾರುಗಳಲ್ಲೇ ಕಾಲ ಕಳೆಯುತ್ತಾನೆ. ಐದು ದಿನಗಳ ನಂತರ ಮನೆ ಯಜಮಾನ ತನ್ನ ಎಲ್ಲ ಹಣವನ್ನೂ ಕಳೆದುಕೊಂಡು ಪಾಪರ್ ಆಗ್ತಾನೆ. ಇದರಿಂದ ಬೇಸತ್ತ ಅವನ ಹೆಂಡತಿ ಅವನನ್ನು ತ್ಯಜಿಸಿ ತನ್ನ ಬಾಯ್ ಫ್ರೆಂಡ್ ಜತೆ ಹೋಗಲು ಸಿದ್ಧಳಾಗುತ್ತಾಳೆ. ಇಷ್ಟರಲ್ಲಿ ಮಗಳು ಪ್ರೀತಿಸಿದ್ದ ವ್ಯಕ್ತಿ ಇನ್ನೊಬ್ಬಳಿಗಾಗಿ ಅವಳನ್ನು ಬಿಟ್ಟು ಬಿಟ್ಟದ್ದರಿಂದ ಅವಳು ದುಃಖದಲ್ಲಿರುತ್ತಾಳೆ. ಬ್ಯಾಂಡ್ ಸೇರಿ ತಾನು ಸಂಪಾದಿಸಿದ್ದ ಹಣದ ಸ್ವಲ್ಪ ಭಾಗವನ್ನು ಆಕೆ ಜೂಜಿನ ಟೇಬಲ್ಲಿಗೆ ಹಾಕುತ್ತಾಳೆ. ಅವಳ ಅದೃಷ್ಟಕ್ಕೆ ಅವಳು ಒಂದು ಮಿಲಿಯನ್ ಡಾಲರ್ ಗೆಲ್ಲುತ್ತಾಳೆ. ಈ ಹಣದಿಂದ ತಂದೆ ಮಾಡಿದ ಸಾಲ ತೀರಿಸಿ ಹೋಟೆಲ್ಲಿನ ಬಿಲ್ ಚುಕ್ತಾ ಮಾಡಿ ಇಡೀ ಸಂಸಾರ ಮತ್ತೆ ಒಂದುಗೂಡಿ ತಮ್ಮ ಊರಿಗೆ ವಾಪಸ್ಸಾಗುತ್ತಾರೆ. "ನೋಡಿದೆಯಾ ಲಾಸ್ ವೇಗಾಸ್ ಪ್ರಭಾವ" ಎಂದು ಉದ್ಗರಿಸಿದಾಗ ನನ್ನ ಹೆಂಡತಿ "ಹೌದು ರೀ, ನಮ್ಮ ಜೀವನದಲ್ಲಿ ದುಡ್ಡೇ ದೊಡ್ಡಪ್ಪನಾಗಿ ಹೇಗೆ ಮಾನವ ಮೌಲ್ಯಗಳು ನಶಿಸಿ ಹೋಗ್ತಾ ಇದೆ ಅಲ್ಲವೆ? ಅಂತೂ ಅಮೇರಿಕನ್ ಜೀವನ ಶೈಲಿಯನ್ನು ಈ ಚಿತ್ರ ಬಹು ಚೆನ್ನಾಗಿ ನಿರೂಪಿಸಿದೆ" ಎಂದಳು.

ಅಷ್ಟರಲ್ಲಿ "ವೆಲ್‌ಕಂ ಟು ಗ್ರಾಂಡ್ ಕೆನ್ಯಾನ್ ನ್ಯಾಷನಲ್ ಪಾರ್ಕ್" ಎಂದು ಬರೆದಿದ್ದ ಕಮಾನಿನ ಕೆಳಗೆ ನಮ್ಮ ಬಸ್ ಪ್ರವೇಶಿಸಿತ್ತು. ಸ್ವಲ್ಪ ದೂರ ಸಂಚರಿಸಿದ ನಂತರ ಪಕ್ಕದಲ್ಲೇ ಇದ್ದ ಭಾರೀ ಹೋಟೆಲ್‌ನ ಕಾಂಪೌಂಡಿನಲ್ಲಿ ನಿಂತಿತು. ಚಾಲಕ "ನಿಮಗಿಲ್ಲೇ ಮಧ್ಯಾಹ್ನದ ಊಟದ ವ್ಯವಸ್ಥೆ, ಅರ್ಧ ಗಂಟೆಯ ಒಳಗೆ ಊಟ ಮುಗಿಸಿ ಬಸ್ಸಿಗೆ ಬನ್ನಿ" ಎಂದ. ನಾವೆಲ್ಲಾ ಗಡಿಬಿಡಿಯಿಂದ ಆ ಹೋಟೆಲ್ ಒಳ ಹೊಕ್ಕು ಬಫೆ ಊಟ ಮುಗಿಸಿದೆವು. ಊಟದ ನಂತರ ಬಸ್ಸಿನ ಚಾಲಕನಿಗಾಗಿ ಕಾಯ್ತಾ ಇದ್ದಾಗ ಸ್ವರ್ಣ ಗ್ರಾಂಡ್ ಕೆನ್ಯಾನ್ ಎಂದರೆ ಏನು ಎಂದು ಕೇಳಿದಳು. ಸಿಂಪಲ್ ಉತ್ತರ ಹೇಳಬೇಕೆಂದರೆ "ಭಾರಿ ಕೊರಕಲು" ಎಂದೆ. ಅವಳಿಗೆ ಅರ್ಥವಾಗಲಿಲ್ಲ.

ಅರಿಜೋನಾ ರಾಜ್ಯದ ವಾಯುವ್ಯ ಭಾಗದಲ್ಲಿ ಸಮುದ್ರ ಮಟ್ಟಕ್ಕಿಂತ ಸುಮಾರು ಆರೇಳು ಸಾವಿರ ಅಡಿ ಮೇಲೆ ಒಂದು ಭಾರೀ ಬಯಲು ಭೂಮಿ (Plateau) ಇದೆ ಇದು ಬಂಜರು

ಪ್ರದೇಶ. ಈ ಬಯಲು ಭೂಮಿಯನ್ನು ಕೊಲರೆಡೋ ನದಿ ತೀವ್ರವಾಗಿ ಕೊರೆದಿರುವುದರಿಂದ ಅತಿ ಆಳವಾದ ಕೊರಕಲು ಉಂಟಾಗಿದೆ. ನದಿಯ ಕೊರೆತವಲ್ಲದೆ ಭೂಗರ್ಭದಲ್ಲಿ ಆಗಿರುವ ಹಲವಾರು ಬೆಳವಣಿಗೆಗಳಿಂದ, ಅಂದರೆ ಬಯಲು ಭೂಮಿ ಮೇಲಕ್ಕೆ ಉಬ್ಬಿರುವುದರಿಂದಲೂ ಕೊರಕಲು ಆಗಲವಾಗಿದೆ. ನೆಲದ ಭಾಗದಿಂದ ಸುಮಾರು ಒಂದೂವರೆ ಕಿಲೋಮೀಟರ್ ಕೆಳಗೆ ನದಿ ಹರಿಯುತ್ತದೆ. ಕೊರಕಲಿನ ಒಂದು ಭುಜದಿಂದ ಇನ್ನೊಂದರ ದೂರ ಎಂಟರಿಂದ ಇಪ್ಪತ್ತೊಂಭತ್ತು ಕಿಲೋಮೀಟರ್‌ಗಳು! ಗ್ರಾಂಡ್ ಕೆನ್ಯಾನ್‌ನ ಉದ್ದ 443 ಕಿಲೋಮೀಟರ್‌ಗಳು!

ಗ್ರಾಂಡ್ ಕೆನ್ಯಾನ್ ಅನ್ನು ಹಲವಾರು ಜನ ವಿಶ್ವದ ಅದ್ಭುತಗಳಲ್ಲಿ ಒಂದು ಎಂದು ಪರಿಗಣಿಸುತ್ತಾರೆ. ಈ ಕೊರಕಲಿನ ಸೊಬಗನ್ನು ಬಣ್ಣಿಸಲು ಶಬ್ದಗಳೇ ಬರುವುದಿಲ್ಲ. ಒಂದೊಂದು ಕೋನದಿಂದ ನೋಡಿದರೆ ಒಂದೊಂದು ಥರಹ ದೃಶ್ಯ ಕಾಣುತ್ತದೆ. ಸೂರ್ಯಾಸ್ತದಲ್ಲಿ ಕಂಡ ಜಾಗ ಸೂರ್ಯೋದಯದಲ್ಲಿ ನೋಡಿದಾಗ ಬೇರೆ ರೀತಿ ಕಾಣುತ್ತದೆ. ವಿಧವಿಧವಾದ ಕೊಳ್ಳಗಳಿವೆ. ಆದರೆ ಇಲ್ಲಿ ಬೆಳೆಯುವ ಮರಗಿಡಗಳು ಮರುಭೂಮಿಯವು. ಗ್ರಾಂಡ್ ಕೆನ್ಯಾನ್ ಭಾಗದಲ್ಲಿ ಅತಿ ಕಡಿಮೆ ಮಣ್ಣು ಇರುವುದು ಇದಕ್ಕೆ ಕಾರಣವಂತೆ.

ಇಷ್ಟು ಹೇಳುವಷ್ಟರಲ್ಲಿ ನಮ್ಮ ಬಸ್ ಚಾಲಕ ಬಸ್ ಸ್ಟಾರ್ಟ್ ಮಾಡಿದ. ಹತ್ತು ನಿಮಿಷದ ನಂತರ ನಾವು ಗ್ರಾಂಡ್ ಕೆನ್ಯಾನ್‌ನ ಬಸ್ ನಿಲ್ದಾಣಕ್ಕೆ ಬಂದೆವು. ನಮ್ಮ ಮುಂದೆಯೇ ಒಂದು ಸಣ್ಣ ರೈಲ್ವೇ ಸ್ಟೇಷನ್ ಕಂಡಿತು. ಒಂದು ಪುಟ್ಟ ರೈಲಿನಲ್ಲಿ ಕುಳಿತು ಗ್ರಾಂಡ್ ಕೆನ್ಯಾನ್ ನೋಟಗಳನ್ನು ನೋಡಬಹುದಂತೆ. ನಾವು ಮುಂದೆ ಹೋಗಿ ಅಲ್ಲೇ ಇದ್ದ "ಸೀನಿಕ್ ಪಾಯಿಂಟ್" ಗೆ ಹೋದೆವು. ನಾವು ಇದ್ದ ಜಾಗಕ್ಕೆ ನಾರ್ತ್ ರಿಮ್ ಎಂದು ಕರೆಯುತ್ತಾರಂತೆ. ಇಲ್ಲಿಂದ ಎದುರಿಗೆ ಕಾಣುತ್ತಿದ್ದ ಸೌತ್ ರಿಮ್ ಮಧ್ಯೆ ಇರುವ ಅಗಲ 29 ಕಿ.ಮೀ.! ನಾವಿದ್ದ ಜಾಗದಲ್ಲಿ ವಿಪರೀತ ಮಂಜು ಬೀಳುವುದರಿಂದ ಅಕ್ಟೋಬರ್‌ನಿಂದ ಮೇ ವರೆಗೂ ಪ್ರವಾಸಿಗರಿಗೆ ಪ್ರವೇಶ ಬಂದ್.

ರಿಮ್ ಮೇಲು ಭಾಗದಿಂದ ನದಿ ವರೆಗೆ ಇಳಿದು ಹೋಗಲು ಕಾಲು ದಾರಿಗಳಿವೆ. ಹಲವಾರು ಚಾರಣಿಗರು ಕೆಳಗೆ ಇಳಿಯುತ್ತಾ ಇದ್ದರು. ನದಿಯವರೆಗೆ ಇಳಿದು ಮೇಲೆ ಬರಲು ಅರ್ಧ ದಿನವೇ ಬೇಕಂತೆ. ಒಂದು ಕಾಲ್ದಾರಿ, ಅಂದರೆ ಕೈಬಾಬ್ (Kaibab) ದಾರಿಯಲ್ಲಿ ಹೋದರೆ ಸೌತ್ ರಿಮ್ ತಲುಪಬಹುದು ಎಂದರು. ಮೋಜಿಗಾಗಿ ನಾವೂ ಒಂದು ಕಾಲುದಾರಿ ಹಿಡಿದು ಸುಮಾರು ಕಾಲು ಕಿಲೊ ಮೀಟರ್ ನಡೆದೆವು. ಕೆಳಗೆ ಇಳಿಯುತ್ತಾ ಇದ್ದಂತೆ ಚಳಿ ಜಾಸ್ತಿ ಆಯಿತು.

ಸ್ವಲ್ಪ ಮುಂದೆ ಹೋದ ಮೇಲೆ ಒಂದು ವ್ಯೂ ಪಾಯಿಂಟ್ ಬಂದಿತು. ಅಲ್ಲಿ ದೊಡ್ಡದೊಂದು ನಕ್ಷೆ ಹಾಕಿದ್ದು ಎದುರಿಗೆ ಕಾಣುವ ದೃಶ್ಯಗಳ ವಿವರಣೆ ನೀಡಿದ್ದರು. ಗ್ರಾಂಡ್ ಕೆನ್ಯಾನ್ 60 ದಶಲಕ್ಷ ವರ್ಷಗಳ ಹಿಂದೆ ಉಂಟಾಯಿತು ಎಂದು ಭೂಗರ್ಭಶಾಸ್ತ್ರಜ್ಞರು ಹೇಳುತ್ತಾರೆ. ಈ ಕೊರಕಲಿನಲ್ಲಿ ಏಳು ವಿಧದ ಶಿಲೆಗಳು ಇವೆಯಂತೆ. ಎಲ್ಲಕ್ಕಿಂತ ಮೇಲ್ಭಾಗದಲ್ಲಿ ಸುಣ್ಣದ ಕಲ್ಲು ಇದೆಯಂತೆ.

ಗ್ರಾಂಡ್ ಕೆನ್ಯಾನ್ ಅನ್ನು ಮೊದಲ ಬಾರಿಗೆ ಜನ ನೋಡಿದ್ದು 1540 ರಲ್ಲಿ ಎನ್ನುತ್ತಾರೆ! ಸ್ಪೇನ್ ದೇಶದ ಫ್ರಾನ್ಸಿಸ್ಕೋ ಕೊರೋನಾಡೇ ಎಂಬ ನಾವಿಕ ಮೆಕ್ಸಿಕೋ ದೇಶದಿಂದ ಪ್ರಯಾಣ ಮಾಡುತ್ತಾ ತನ್ನ ಗುಂಪಿನೊಡನೆ ಇಲ್ಲಿಗೆ ಬಂದರೂ 1850 ರಲ್ಲಿ ಅಮೇರಿಕನ್ ಸೈನಿಕರು ಈ ಜಾಗವನ್ನು ಪೂರ್ತಿಯಾಗಿ ಸುತ್ತಿ ವಿಶ್ವಕ್ಕೆ ಇದರ ಬಗ್ಗೆ ಮಾಹಿತಿ ನೀಡಿದರು ಎಂದು ಹೇಳಲಾಗುತ್ತದೆ.

ಒಂದು ಗಂಟೆಯ ತರುವಾಯ ನಾವು ನಮ್ಮ ಬಸ್ಸನ್ನು ಏರಿ, ಗ್ರಾಂಡ್ ಕೆನ್ಯಾನ್‌ನ ಇನ್ನೊಂದು ಭಾಗಕ್ಕೆ ಹೋಗಿ ಅಲ್ಲಿಂದ ಸೂರ್ಯಾಸ್ತ ದರ್ಶನ ಮಾಡಿದೆವು. ಸೂರ್ಯನ ಹೊಂಗಿರಣಗಳು ಈ ಕೊರಕಲಿನ ಕೆಂಪು ಗುಡ್ಡಗಳಿಗೆ ಬಡಿದಾಗ ಉಂಟಾಗುವ ದೃಶ್ಯ ವರ್ಣಿಸಲೇ ಆಗದಷ್ಟು ಸುಂದರ.

ಗ್ರಾಂಡ್ ಕೆನ್ಯಾನ್ ಪ್ರದೇಶಕ್ಕೆ ಬರುವ ಪರ್ಯಟಕರ ಅನುಕೂಲಕ್ಕೆ ಹಾಗೂ ಈ ಭಾಗದ ಸಂರಕ್ಷಣೆಗೆ ಸರ್ಕಾರ ಗ್ರಾಂಡ್ ಕೆನ್ಯಾನ್ ರಾಷ್ಟ್ರೀಯ ಉದ್ಯಾನವನ್ನು ಸ್ಥಾಪಿಸಿದೆ. ಲೇಕ್ ಮೀಡ್‌ನ ಮನರಂಜನಾ ಭಾಗವನ್ನೂ ಸೇರಿಸಿ ಇಡೀ ಗ್ರಾಂಡ್ ಕೆನ್ಯಾನ್ ಪ್ರದೇಶವನ್ನೆಲ್ಲಾ ಆವರಿಸಿರುವ ಈ ಉದ್ಯಾನ ಅಲ್ಲಿರುವ ಸಸ್ಯ ಹಾಗೂ ಪ್ರಾಣಿ ಜೀವಿಗಳ ಸಂರಕ್ಷಣೆಗೆ ಬದ್ಧವಾಗಿವೆ. ಈ ಪ್ರದೇಶದಲ್ಲಿ ತರಹೇವಾರೀ ಜಿಂಕೆಗಳು ಹಾಗೂ ಒಂದು ರೀತಿಯ ಬೆಟ್ಟದ ಕುರಿ ಇವೆ. ಉದ್ಯಾನದ ಪೂರ್ವದಲ್ಲಿ ಹವಾಸುವೆಲ್ ಎಂಬ ಬುಡಕಟ್ಟಿನ ಜನರ ವಸತಿ ಇದೆ. ಗ್ರಾಂಡ್ ಕೆನ್ಯಾನ್‌ನಲ್ಲೇ ಇರಲು ವಸತಿ ಸೌಕರ್ಯವೂ ಇದೆ. ಬೇಸಿಗೆಯಲ್ಲಿ ಇಲ್ಲಿಗೆ ಭಾರೀ ಸಂಖ್ಯೆಯ ಪರ್ಯಟಕರು ಬರುತ್ತಾರಂತೆ.

ಸೂರ್ಯಾಸ್ತದ ದೃಶ್ಯ ನೋಡಿ ಕತ್ತಲಾಗುತ್ತಿದ್ದಂತೆ ನಾವು ಲಾಸ್ ವೇಗಾಸ್‌ಗೆ ಹಿಂದಿರುಗಿದೆವು.

33

ಕೆನಡಾದ ಕನ್ನಡಿಗರೊಡನೆ

ಲಾಸ್ ವೇಗಾಸ್ ನಿಂದ ನಾವು ಕ್ಯಾಲಿಫೋರ್ನಿಯಾಗೆ ಬಸ್ಸಿನಲ್ಲಿ ಮರಳಿ ಅಲ್ಲಿಂದ ವಿಮಾನವನ್ನೇರಿ ನ್ಯೂಯಾರ್ಕ್‌ಗೆ ಬಂದೆವು. ನ್ಯೂಯಾರ್ಕ್‌ನಲ್ಲಿ ವಿಮಾನ ಬದಲಿಸಿ ಸುಮಾರು ಒಂದು ಗಂಟೆಯ ಪ್ರಯಾಣದ ನಂತರ ಕೆನಡಾ ದೇಶದ ರಾಜಧಾನಿ ಆಟಾವಾ ತಲುಪಿದೆವು. ಆಟಾವಾ ವಿಮಾನ ನಿಲ್ದಾಣದ ಇಮಿಗ್ರೇಷನ್ ಅಧಿಕಾರಿ ಒಬ್ಬ ಮಹಿಳೆ. ಬಹಳ ಆದರದಿಂದ ನಮ್ಮಿಬ್ಬರನ್ನು ಬರಮಾಡಿಕೊಂಡು, ಸಮಾಧಾನದಿಂದ ಪ್ರಶ್ನೆಗಳನ್ನು ಕೇಳಿ ನಮ್ಮ ಪಾಸ್‌ಪೋರ್ಟಿಗೆ ಮೊಹರು ಹಾಕಿದಳು. "ನಮ್ಮ ವಿದೇಶ ಪ್ರವಾಸದಲ್ಲಿ ಇದೇ ಮೊದಲ ಸಲ ನಮ್ಮನ್ನು ಇಷ್ಟು ಆತ್ಮೀಯತೆಯಿಂದ ಬೇರೊಂದು ದೇಶದ ಇಮಿಗ್ರೇಷನ್ ಅಧಿಕಾರಿ ಬರಮಾಡಿಕೊಂಡಿದ್ದು - ಅಮೇರಿಕಾಗೂ ಕೆನಡಾಗೂ ಎಷ್ಟು ವ್ಯತ್ಯಾಸ ನೋಡಿ" ಎಂದು ನನ್ನ ಶ್ರೀಮತಿ ಅಂದಾಗ ತಲೆದೂಗಿದೆ.

ಕಸ್ಟಂ ಕ್ಲಿಯರೆನ್ಸ್ ಮುಗಿಸಿ ಹೊರಬಂದಕೂಡಲೇ ನನ್ನ ಭಾವಮೈದ (ಅಂದರೆ ಶ್ರೀಮತಿಯ ಅಣ್ಣ) ಚಂದ್ರಶೇಖರ್ ತನ್ನ ಪತ್ನಿ - ಪುತ್ರಿಯ ಜತೆ ನಮ್ಮನ್ನು ಎದುರುಗೊಂಡು ಅವನ ಮನೆಗೇ ಸೀದಾ ಕರೆದೊಯ್ದ. ಕಾರಿನಲ್ಲಿ ಕೂತು ಸ್ವಲ್ಪ ದೂರ ಹೊರಟ ನಂತರ "ಏನು ಶೇಖರ್, ನಿಮ್ಮ ಊರು ಬರೀ ಬಯಲು ಬಯಲಾಗಿ ಕಾಣುತ್ತಿದೆ. ಇಲ್ಲಿ ಹೆಚ್ಚು ಜನ ವಾಸಿಸೊಲ್ಲವೇ" ಎಂದೆ. "ಹೌದು ಸಾರ್, ಈ ಊರಿನ ಜನಸಂಖ್ಯೆ ಕೇವಲ ಮೂರೂವರೆ ಲಕ್ಷ. ಈ ಊರು ದೇಶದ ರಾಜಧಾನಿಯಾಗಿರುವುದರಿಂದ ಇಲ್ಲಿ ಸರ್ಕಾರೀ ಕೆಲಸಕಾರ್ಯಗಳಿಗೆ ಸಂಬಂಧಿಸಿದ ಜನರೇ ಹೆಚ್ಚಾಗಿ ವಾಸಿಸುವುದು. ಸಂಪರ್ಕ ಉಪಕರಣಗಳು ಹಾಗೂ ಎಲೆಕ್ಟ್ರಾನಿಕ್ ಉದ್ಯಮ ಸಾಕಷ್ಟು ಬೆಳೆದಿರುವುದರಿಂದ ಅದಕ್ಕೆ ಸಂಬಂಧಿಸಿದ ಜನರೂ ಇದ್ದಾರೆ. ಈ ಊರಿನಲ್ಲಿ ಕಾರ್ಲಟನ್ ಹಾಗೂ ಆಟಾವಾ ವಿಶ್ವವಿದ್ಯಾಲಯಗಳು ಇರುವುದರಿಂದ ವಿದ್ಯಾರ್ಥಿಗಳೂ, ಶಿಕ್ಷಕರೂ ವಾಸ ಮಾಡ್ತಾರೆ. ಮಾಂಟ್ರಿಯಲ್ ಟೊರಾಂಟೋ, ಎಡ್‌ಮಂಟನ್ ಹಾಗೂ ಇತರ ನಗರಗಳಲ್ಲಿ ಇಲ್ಲಿಗಿಂತ ಜನಸಂಖ್ಯೆ ಜಾಸ್ತಿ" ಎಂದ.

ಅಷ್ಟರಲ್ಲಿ ಶೇಖರ್ - ಶೀಲಾ ಮನೆ ತಲುಪಿದೆವು. ಬೇಗ ಬೇಗನೇ ಸ್ನಾನ, ಉಪಾಹಾರ ಮುಗಿಸಿ ಊರು ನೋಡಲು ತಯಾರಾದೆವು. "ನೀವು ಕೆನಡಾ ದೇಶದ ರಾಜಧಾನಿಗೆ ಬಂದಿರುವುದರಿಂದ ಮೊಟ್ಟಮೊದಲಿಗೆ ನಿಮಗೆ ಈ ದೇಶದ ಪಾರ್ಲಿಮೆಂಟ್ ಭವನ ತೋರಿಸ್ತೀವಿ"

ಎಂದು ಹೇಳಿದ ಶೇಖರ್ ಅಲ್ಲಿಗೆ ಕರೆದೊಯ್ದ. ಗೋಥಿಕ್ ಶೈಲಿನಲ್ಲಿ ಕಟ್ಟಲಾಗಿರುವ ಪಾರ್ಲಿಮೆಂಟ್ ಭವನ ಪಾರ್ಲಿಮೆಂಟ್ ಹಿಲ್ ಎಂದು ಕರೆಯುವ ಒಂದು ಗುಡ್ಡದ ಮೇಲಿದೆ. ಈ ಭವನದ ಒಳಗೆ ಹೋಗಲು ಮುಕ್ತ ಪ್ರವೇಶ. ಸೆಕ್ಯೂರಿಟಿ ಅಧಿಕಾರಿಯ ಕ್ಯಾಬಿನ್ನಿಗೆ ಹೋದರೆ ಅಲ್ಲಿ ನಮ್ಮನ್ನು ಗುಂಪುಗಳಾಗಿ ಮಾಡಿ ನಮಗೆ ಬೇಕಾದ ಭಾಷೆ ಮಾತನಾಡುವ ಗೈಡ್ ಅನ್ನು ಜತೆ ಮಾಡಿ ಪಾರ್ಲಿಮೆಂಟ್ ತೋರಿಸ್ತಾರೆ.

ಕೆನಡಾ ದೇಶ ಎರಡು ಭಾಷೆಗಳ ನಗರ. ಇಂಗ್ಲಿಷ್ ಹಾಗೂಫ್ರೆಂಚ್ ಇವೆರಡೂ ಅಧಿಕೃತ ಭಾಷೆಗಳು. ನಾವು ಇಂಗ್ಲಿಷ್ ಮಾತನಾಡುವ ಗೈಡ್ ಜತೆ ಪಾರ್ಲಿಮೆಂಟ್ ಭವನ ನೋಡಲು ಹೋದೆವು. "ಈ ಬೃಹತ್ ಕಟ್ಟಡವನ್ನು 1859 ರಲ್ಲಿ ಕಟ್ಟಲಾರಂಭಿಸಿ 1865 ರಲ್ಲಿ ಮುಗಿಸಿದರು" ಎಂದು ಹೇಳಿದ ಗೈಡ್ ನಮಗೆ ಪಾರ್ಲಿಮೆಂಟಿನ ಎರಡೂ ಸಭಾ ಗೃಹಗಳಿಗೆ ಕರೆದೊಯ್ದಳು. ನಮ್ಮಲ್ಲಿನ ಹಾಗೆ ಇಲ್ಲಿಯೂ ಮೇಲ್ಮನೆ ಹಾಗೂ ಕೆಳಮನೆಗಳಿವೆ. ಆದರೆ ಸದಸ್ಯರ ಸಂಖ್ಯೆ ಕಡಿಮೆ ಇರುವುದರಿಂದ ನಮ್ಮ ಹಾಗೆ ವಿಶಾಲವಾದ ಸಭಾ ಭವನಗಳಿಲ್ಲ. ಆಳುವ ಪಕ್ಷದವರು ಹಾಗೂ ವಿರೋಧ ಪಕ್ಷದವರು ಎದುರು - ಬದುರು ಕೂರುತ್ತಾರೆ. ಇಲ್ಲಿಯ ವಿಶೇಷತೆಯೆಂದರೆ ಮೇಲ್ಮನೆಯಲ್ಲಿ ಬ್ರಿಟಿಷ್ ರಾಣಿಗೆಂದೇ ಒಂದು ಕುರ್ಚಿ ಇದೆ. ಏಕೆ ಹೀಗೆ ಎಂದು ಕೇಳಿದರೆ "ಇಂದಿಗೂ ಕೆನಡಾ ದೇಶ ಬ್ರಿಟನ್ನಿನ ರಾಣಿಯನ್ನೇ ತನ್ನ ದೇಶದ ನಾಯಕಿ" ಎಂದು ಭಾವಿಸಿದ್ದಾರೆ ಎಂದಳು ನಮ್ಮ ಗೈಡ್.

ಎರಡೂ ಭವನಗಳನ್ನು ನೋಡಿದ ನಂತರ ನಮ್ಮ ಗೈಡ್ ಆ ಕಟ್ಟಡದ ವಿಶೇಷ ಎಂದು ಅಲ್ಲಿನ ಗ್ರಂಥಾಲಯಕ್ಕೆ ಕರೆದೊಯ್ದಳು. ಓಕ್ ಮರದ ಪ್ಯಾನೆಲಿಂಗ್ ಇರುವ ಈ ಗ್ರಂಥಾಲಯದ ವಿಶೇಷವೇನೆಂದರೆ 1916 ರಲ್ಲಿ ಪಾರ್ಲಿಮೆಂಟ್ ಭವನಕ್ಕೆ ಬೆಂಕಿ ಬಿದ್ದು ಅರ್ಧಕ್ಕರ್ಧ ಸುಟ್ಟಾಗ ಗ್ರಂಥಾಲಯದ ಬಹುಪಾಲು ಸುಡದೇ ಉಳಿಯಿತಂತೆ. ಪಾರ್ಲಿಮೆಂಟ್ ಭವನವನ್ನು 1916ರ ನಂತರ ಮರು ನಿರ್ಮಾಣ ಮಾಡಲಾಯಿತಂತೆ. ಈ ಭವನದ ಮೇಲ್ಚಾವಣೆಯಲ್ಲಿ ಒಂದು ಭಾರೀ ಗಂಟೆಯಿದೆ. ಅದನ್ನು ನೋಡಿದ ನಂತರ ಪಾರ್ಲಿಮೆಂಟ್ ಭವನದ ಮೇಲಿಂದ ಆಟಾವಾ ನಗರದ ವಿಹಂಗಮ ನೋಟ ಸವಿದೆವು.

ಪಾರ್ಲಿಮೆಂಟ್ ಭವನದ ಹಿಂದೆಯೇ ಆಟಾವಾ ನದಿ ಹರಿಯುತ್ತದೆ. ನದಿಯ ಇನ್ನೊಂದು ದಡದ ಮೇಲೆ 'ಹಲ್' ಎಂಬ ನಗರವಿದೆ. ಪಾರ್ಲಿಮೆಂಟ್ ನೋಡಿ ಹೊರಗಡೆ ಬಂದ ನಂತರ ಆ ಭವನದ ಸುತ್ತಲೂ ಅಡ್ಡಾಡಿದೆವು. ಒಂದು ಜಾಗದಲ್ಲಿ ಪೊಲೀಸ್ ಹುತಾತ್ಮರಿಗಾಗಿ ಸ್ಮಾರಕ ಮಾಡಿದ್ದಾರೆ. ಅಲ್ಲಿ ನಾನು ವಂದಿಸಿದ ನಂತರ ಮತ್ತೆ ಕಾರಿನಲ್ಲಿ ಕುಳಿತು ಸಸೆಕ್ಸ್ ಡ್ರೈವ್ ಎಂಬ ಬೀದಿಗೆ ಹೋದೆವು.

ಆ ಬೀದಿಗೆ ಹೋಗುತ್ತಿದ್ದಂತೆ ನನಗೆ ದೆಹಲಿಯ ಚಾಣಕ್ಯಪುರಿ ನೆನಪಾಯಿತು. ಏಕೆಂದರೆ ಇಲ್ಲೇ ಎಲ್ಲಾ ದೇಶಗಳ ರಾಯಭಾರಿ ಕಛೇರಿಗಳೂ ಹಾಗೂ ರಾಯಭಾರಿಗಳ ನಿವಾಸಗಳೂ ಕೇಂದ್ರಿಕೃತವಾಗಿವೆ. ಇದೇ ಜಾಗದಲ್ಲಿಯೇ ಕೆನಡಾದ ಗವರ್ನರ್ ಜನರಲ್‌ರ ಅಧಿಕೃತ ನಿವಾಸ, ರಿಡೋ ಹಾಲ್, ಹಾಗೂ ಅದರ ಬಳಿಯೇ ಕೆನಡಾದ ಪ್ರಧಾನ ಮಂತ್ರಿಗಳ ನಿವಾಸವೂ ಇವೆ.

ಇವನ್ನು ನೋಡುವಷ್ಟರಲ್ಲಿ ಸಂಜೆಯಾದ್ದರಿಂದ ಮನೆಗೆ ಮರಳಿದೆವು. ಅದೇ ರಾತ್ರಿ ಶೀಲಾ ನಡೆಸುತ್ತಿರುವ ನೃತ್ಯ ಶಾಲೆಯ ವಾರ್ಷಿಕೋತ್ಸವದಲ್ಲಿ ಭಾಗವಹಿಸಿದೆವು. ಈ ಸಂದರ್ಭದಲ್ಲಿ ಶೀಲಾಳ ವಿದ್ಯಾರ್ಥಿನಿಯರ ತಂದೆ ತಾಯಿಯರ ಪರಿಚಯ ಮಾಡಿಕೊಂಡೆವು. ಆಟಾವಾದಲ್ಲಿ ಸಾಕಷ್ಟು ಕನ್ನಡಿಗರಿದ್ದಾರೆ, ಇಲ್ಲಿನ ಕರ್ನಾಟಕ ಸಂಘದ ವತಿಯಿಂದ ಪ್ರತಿ ಭಾನುವಾರ ಕನ್ನಡ ಶಾಲೆ ಕೂಡಾ ನಡೆಸಲಾಗುತ್ತಿದೆ ಎಂದು ತಿಳಿದು ಆಶ್ಚರ್ಯವಾಯಿತು. ಈ ಸಮಾರಂಭಕ್ಕೆ ಬಂದಿದ್ದ ಶ್ರೀಮತಿ ನಂಜಮ್ಮ ಎನ್ನುವವರನ್ನು ನನಗೆ ಪರಿಚಯಿಸಿದ ಶೇಖರ್ "ಇವರು ಕೊಡವರು. ಕೆನಡಾ ಸರ್ಕಾರದಲ್ಲಿ ಭಾರೀ ದೊಡ್ಡ ಹುದ್ದೆಯಲ್ಲಿದ್ದು ನಮ್ಮ ಕನ್ನಡಿಗರಿಗೆ ಹೆಮ್ಮೆ ತಂದಿದ್ದಾರೆ" ಎಂದ.

ಶ್ರೀಮತಿ ನಂಜಮ್ಮ ನನ್ನೊಡನೆ ಮಾತನಾಡುತ್ತಾ "ಇತ್ತೀಚಿನ ದಿನಗಳಲ್ಲಿ ಆಟಾವಾಗೂ ಬೆಂಗಳೂರಿಗೂ ಭಾರೀ ನಂಟು ಬೆಳೆದಿದೆ. ನಮ್ಮ ಇನ್ಫೋಸಿಸ್, ವಿಪ್ರೋ ಕಂಪನಿಗಳ ಹಲವಾರು ಎಂಜನೀಯರುಗಳು ಇಲ್ಲಿಗೆ ಬಂದು ಇಲ್ಲಿಯ ಕಂಪನಿಗಳಿಗೆ ಸಹಕಾರ ನೀಡುತ್ತಾ ಇದ್ದಾರೆ" ಎನ್ನುವಷ್ಟರಲ್ಲಿ ನಮ್ಮ ಬೆಂಗಳೂರಿನ ರೂಪಾ ಎದುರಾಗಿ "ಹಲೋ ಅಂಕಲ್" ಎಂದಳು. "ಅರೇ ನೀನೇನು ಇಲ್ಲಿ" ಎಂದಾಗ "ಅಂಕಲ್, ನನ್ನ ಹಾಗೆ ಇಲ್ಲಿ ಕಡಿಮೆಯೆಂದರೂ ಒಂದು ನೂರು ಭಾರತೀಯ ಸಾಫ್ಟ್‌ವೇರ್ ಜನ ಇದ್ದಾರೆ. ನಮ್ಮ ಬೆಂಗಳೂರಿನವರೇ ಇಪ್ಪತ್ತು ಜನ ಇದ್ದೇವೆ. ಕಂಪನಿಯಿಂದ ಒಂದು ಬಾಡಿಗೆ ಮನೆ ಕೊಟ್ಟಿದ್ದಾರೆ. ನಾನು ಹಾಗೂ ಇನ್ನೂ ಮೂರು ಜನ ಹುಡುಗೀರು, ಒಬ್ಬಳು ಮಂಡ್ಯದ ಪಿ.ಇ.ಎಸ್. ಕಾಲೇಜ್‌ನವಳು, ಅಲ್ಲಿದ್ದು ನಾವೇ ಅಡಿಗೆ ಮಾಡ್ಕೋತೀವಿ" ಎಂದಳು.

ಸಮಾರಂಭ ಮುಗಿದ ನಂತರ "ಡಿನ್ನರ್ ರೆಡಿ" ಎಂದಳು ಶೀಲಾ. ಊಟ ಮಾಡಲು ಸಜ್ಜುಗೊಳಿಸಿದ ಕೋಣೆಗೆ ಹೋದಾಗ ನನಗೆ ಇನ್ನೊಂದು ಆಶ್ಚರ್ಯ ಕಂಡಿತು. ಶೀಲಾಳ ವಿದ್ಯಾರ್ಥಿನಿಯರ ಮನೆಯಿಂದಲೇ ಅಡಿಗೆ ತಯಾರಾಗಿತ್ತು. 'ನಮ್ಮ ದೇಶದಲ್ಲಿ ಹೀಗೇ, ನಾವು ಯಾವಾಗ ಪಂಕ್ತಿ ಭೋಜನ ಮಾಡಿದರೂ ನಮ್ಮ ನಮ್ಮ ಮನೆಯಿಂದಲೇ ಅಡಿಗೆ ತಯಾರು ಮಾಡ್ಕೊಂಡು ಬರ್ತೀವಿ ಯಾರು ಯಾರು ಏನು ಅಡಿಗೆ ಮಾಡಬೇಕು ಅಂತ ಮೊದಲೇ ನಿರ್ಧರಿಸಿ ತರಹೇವಾರಿ ತಿಂಡಿ ತಿನಿಸು ಮಾಡ್ತೀವಿ' ಎಂದಳು ಶೀಲಾ. "ಸಂಸಾರಸ್ಥರಲ್ಲದವರು ಏನು ಮಾಡ್ತಾರೆ" ಎಂದು ನನ್ನ ಶ್ರೀಮತಿ ಕೇಳಿದಾಗ ರೂಪಾ "ಆಂಟಿ ನಾವು ಪ್ಲಾಸ್ಟಿಕ್ ಪ್ಲೇಟು, ಗ್ಲಾಸು, ಬೀಡಾ ಇತ್ಯಾದಿ ತರ್ತೀವಿ" ಎಂದಳು.

ಅಷ್ಟರಲ್ಲಿ ಶೇಖರ್ ಒಬ್ಬರನ್ನು ನನ್ನ ಬಳಿ ಕರೆತಂದು "ಗುರುಪ್ರಸಾದ್ ಇವರು ಗುಲ್ಬರ್ಗಾದವರು, ಜಾಗೀರ್‌ದಾರ್ ಅಂತ" ಎಂದು ಪರಿಚಯಿಸಿ "ಇವರ ಹೆಗ್ಗಳಿಕೆ ಏನು ಗೊತ್ತಾ? ಇವರು ಇತ್ತೀಚೆಗೆ ಇಲ್ಲಿನ ಲಾಟರಿಯಲ್ಲಿ ಒಂದು ಮಿಲಿಯನ್ ಡಾಲರ್ ಬಹುಮಾನ ಹೊಡೆದಿದ್ದಾರೆ. ಜಾಗೀರ್‌ದಾರ್ ಒಬ್ಬ ಕನ್ಸಲ್ಟೆಂಟ್ ಎಂಜನೀಯರ್. ಅವರ ಪತ್ನಿ ಮೈಸೂರಿನವರು" ಎಂದು ಹೇಳಿದ. ನಾನು ನನ್ನ ಬಹುಪಾಲು ವೃತ್ತಿ ಜೀವನವನ್ನು ಗುಲ್ಬರ್ಗಾದಲ್ಲಿ ಕಳೆದಿರುವುದರಿಂದ ತುಂಬಾ ಹೊತ್ತು ಅವರೊಡನೆ ಹರಟುತ್ತಾ ಇದ್ದೆ.

ಆಟಾವಾದಲ್ಲಿನ ಕನ್ನಡಿಗರು ತುಂಬಾ ಒಗ್ಗಟ್ಟಾಗಿದ್ದಾರೆ. ಸರಿಸುಮಾರು ಎಲ್ಲಾ ಸಮಾರಂಭಗಳನ್ನೂ, ಹಬ್ಬ ಹರಿದಿನಗಳನ್ನೂ ಒಟ್ಟಾಗಿ ಆಚರಿಸುತ್ತಾರೆ ಎಂದರು ಜಾಗೀರದಾರ.

"ನಾರ್ತ್ ಅಮೇರಿಕಾದ ವಿಶೇಷತೆ ಎಂದರೆ ನಾವು ಪ್ರತಿಯೊಂದು ಹಬ್ಬ ಹರಿದಿನದ ಆಚರಣೆಯನ್ನೂ ವೀಕ್ ಎಂಡ್, ಅಂದರೆ ಶನಿವಾರ - ಭಾನುವಾರದಂದೇ ಮಾಡುವುದು. ಭಾರತದಂತೆ ನಮಗೆ ಹಬ್ಬದ ದಿನ ರಜಾ ಸಿಗುವುದಿಲ್ಲವಲ್ಲ, ಅದಕ್ಕೇ" ಎಂದರು.

ಕೆನಡಾದ ಪ್ರವಾಸದ ಮೊದಲ ದಿನವೇ ಸಾಕಷ್ಟು ವಿಷಯಗಳ ಪರಿಚಯ ಆಯಿತು ಎಂದುಕೊಂಡು ಬೀಡಾ ಸೇವನೆ ನಂತರ ಶೇಖರ್-ಶೀಲಾಗೆ ಸಭಾಂಗಣದ ಸ್ವಚ್ಛತೆ ಮಾಡಲು ನೆರವಾದೆವು.

34

ಕೆನಡಾ ರಾಜಧಾನಿಯ ವಿಶೇಷತೆಗಳು

"ಏನ್ರೀ, ನಾವು ನೋಡಿದ ಜಾಗಗಳ ವಿವರಣೆ ನೀಡುವ ಬದಲು ನೀವು ಅನಿವಾಸಿ ಭಾರತೀಯರ ಬಗ್ಗೆ ಬರೆಯಲು ಹೊರಟರಲ್ಲಾ" ಎಂದಳು ನನ್ನ ಶ್ರೀಮತಿ. ನಮ್ಮ ದೇಶದ, ನಮ್ಮ ನಾಡಿನ ಜನರು ಬೇರೆ ದೇಶಕ್ಕೆ ವಲಸೆ ಹೋದಾಗ ಅವರ ಜೀವನ ಹೇಗೆ ಎಂದು ತಿಳಿಯುವ ಕುತೂಹಲ ನಮಗೆ ಇರುವುದರಿಂದ ಪ್ರವಾಸ ಕಥನದಲ್ಲಿ ಈ ಅಂಶ ಇರುವುದು ಅತಿ ಮುಖ್ಯ ಎಂದು ನನ್ನ ನಂಬಿಕೆ. ಇರಲಿ.

ಶೀಲಾಳ ನೃತ್ಯ ಶಾಲೆಯ ಸಮಾರಂಭದ ಭೋಜನ ಕೂಟದ ನಂತರ ಉತ್ಪಾದನೆಯಾದ ಕಸ, ಅಥವಾ ಗಾರ್ಬೇಜ್ ಅನ್ನು ಕರೀ ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ಅವಕ್ಕೇ ಮೀಸಲಾದ ಜಾಗದಲ್ಲಿ ಎಸೆದು ಮನೆಗೆ ಹೋದೆವು.

ವಿದೇಶದಲ್ಲಿ ಸಿಕ್ಕಿದ ಕಡೆ ತ್ಯಾಜ್ಯ ವಸ್ತುಗಳನ್ನು ಎಸೆಯುವ ಹಾಗಿಲ್ಲ. ಸಾಮಾನ್ಯವಾಗಿ ತ್ಯಾಜ್ಯ ವಸ್ತುಗಳನ್ನು ಎರಡು ಭಾಗವಾಗಿ ವಿಂಗಡಿಸುತ್ತಾರೆ - ರೀ ಸೈಕಲ್ ಅಂದರೆ ಪುನರ್ಬಳಕೆ ಮಾಡುವಂತಹವು ಹಾಗೂ ಮಾಡದೇ ಇರುವಂತಹವು. ಕಾಗದ, ಪ್ಲಾಸ್ಟಿಕ್ ವಸ್ತು, ಟಿನ್ ಕ್ಯಾನ್‌ಗಳನ್ನು ಮರುಬಳಕೆ ಮಾಡಬಹುದಾದ ವಸ್ತುಗಳು ಎಂದು ಪರಿಗಣಿಸುತ್ತಾರೆ. ಮನೆಯಾಗಲೀ, ಸಭೆ ಸಮಾರಂಭವಾಗಲೀ ಅಲ್ಲಿ ಉತ್ಪಾದನೆ ಆಗುವ ಕಸವನ್ನು ಬೇರೆ ಬೇರೆ ವಿಂಗಡಿಸಿ ಕರೀ ಬಣ್ಣದ ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ಅವನ್ನು ರಸ್ತೆಯ ಮೇಲೆ ಇಡಬೇಕು. ಮುನಿಸಿಪಾಲಿಟಿ ವ್ಯಾನ್ ಬಂದು ಅವನ್ನು ಒಯ್ಯುತ್ತವೆ.

ಮಾರನೆಯ ದಿವಸ ಶೇಖರ್ ನಮ್ಮನ್ನು ರಾಷ್ಟ್ರೀಯ ಗ್ಯಾಲರಿಗೆ ಕರೆದೊಯ್ದ. 1913 ರಲ್ಲಿ ಸ್ಥಾಪಿತವಾದ ಈ ಗ್ಯಾಲರಿಯನ್ನು 1988 ರಲ್ಲಿ ನವೀಕರಿಸಲಾಯಿತಂತೆ. ಇಲ್ಲಿ ಕೆನಡಾ ದೇಶದ ಬಗ್ಗೆ, ಅದರ ಚರಿತ್ರೆ, ಕಲೆಯ ಬಗ್ಗೆ ಸಾಕಷ್ಟು ಮಾಹಿತಿ ಸಿಗುತ್ತದೆ. ಇದೇ ಗ್ಯಾಲರಿಯಲ್ಲೇ ಇರುವ ಐಮಾಕ್ಸ್ (IMAX) ಥಿಯೇಟರ್‌ನಲ್ಲಿ ವಿಶಾಲ ಪರದೆಯ ಮೇಲೆ ಎವರೆಸ್ಟ್ ಬಗೆಗಿನ ಸಿನಿಮಾ ನೋಡಿದೆವು. IMAX ತಂತ್ರಜ್ಞಾನ ಉಪಯೋಗಿಸಿ ಚಲನಚಿತ್ರ ತೋರಿಸಿದರೆ ಆ ಚಿತ್ರದಲ್ಲಿ ಪ್ರೇಕ್ಷಕರೂ ಭಾಗಿಗಳು ಎನ್ನುವ ಅನುಭವ ಆಗುತ್ತದೆ. ನಮ್ಮ ದೇಶದಲ್ಲಿ ಈ ರೀತಿಯ ಸಿನಿಮಾ ಮಂದಿರ ಇತ್ತೀಚೆಗಷ್ಟೇ, ಅಂದರೆ 2001ನೇ ಇಸವಿಯಲ್ಲಿ ಮುಂಬಯಿಗೆ ಬಂದಿದೆ.

ಕಲಾ ಗ್ಯಾಲರಿಯ ಪಕ್ಕದಲ್ಲೇ ಕೆನಡಾದ ರಾಷ್ಟ್ರೀಯ ಟಂಕಸಾಲೆ ಇರುವುದು. ಕೆನಡಾ ದೇಶ ಚಿನ್ನಕ್ಕೆ ಬಹಳ ಹೆಸರುವಾಸಿ. ಇಲ್ಲಿ ಚಿನ್ನದ ನಾಣ್ಯಗಳನ್ನು ಯಾರು ಬೇಕಾದರೂ ಖರೀದಿಸಬಹುದು. ನಿಜವಾಗಲೂ ಅಪ್ಪಟ ಚಿನ್ನ. ಭಾರತಕ್ಕಿಂತಲೂ ಕಡಿಮೆ ದರದಲ್ಲಿ ಚಿನ್ನ ಲಭ್ಯ. ಅಲ್ಲಿಗೆ ಹೋದ ಕುರುಹಾಗಿ ಟಂಕಸಾಲೆಯಿಂದ ನಾವೂ ಒಂದು ಚಿನ್ನದ ನಾಣ್ಯ ಖರೀದಿಸಿದೆವು.

ಅಲ್ಲಿಂದ ಮುಂದೆ ಶೇಖರ್ ನಮ್ಮನ್ನು ಕಾರ್ಲ್‌ಟನ್ ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಕರೆದೊಯ್ದು. 1942 ರಲ್ಲಿ ಸ್ಥಾಪಿತವಾದ ಕಾರ್ಲ್‌ಟನ್ ವಿ.ವಿ. ಬಹಳ ಹೆಸರುವಾಸಿಯಾಗಿದೆ. ಇಲ್ಲಿಯ ಕ್ಯಾಂಪಸ್ ನೋಡಿದಾಗ ನನಗೆ ನಾನು ಕಲಿತ ಕರ್ನಾಟಕ ವಿ.ವಿ. ದ ಕ್ಯಾಂಪಸ್ ನೆನಪಾಯಿತು. ಕಾರ್ಲ್‌ಟನ್ ವಿ.ವಿ. ಕ್ಯಾಂಪಸ್ ನೋಡಿದ ಕೂಡಲೇ ನಾವು ಆಟಾವಾ ನದಿ ದಾಟಿ ನದಿಯ ಆಚೆ ದಡದಲ್ಲಿರುವ ಹಲ್ ಪಟ್ಟಣಕ್ಕೆ ಪ್ರವೇಶಿಸಿದೆವು. ಆ ಊರಿಗೆ ಹೋಗುತ್ತಿದ್ದಂತೆ ನಮಗೆ ಮತ್ತೊಮ್ಮೆ ಪ್ಯಾರಿಸ್ಸಿಗೆ ಹೋದ ಅನುಭವವೇ ಆಯಿತು! ಏಕೆಂದರೆ ಹಲ್ ಪಟ್ಟಣ ಸಂಪೂರ್ಣವಾಗಿ ಫ್ರೆಂಚ್ ಭಾಷೆ ಪ್ರಾಮುಖ್ಯವಾಗಿರುವ ಕ್ವಿಬೆಕ್ ಪ್ರಾಂತದಲ್ಲಿ ಇದೆ. ಈ ಊರಿನಲ್ಲೂ ಹಲವಾರು ಸರ್ಕಾರೀ ಕಛೇರಿಗಳು ಇವೆ. ಆಟಾವಾಗಿಂತ ಹಲ್ ಎಲ್ಲ ರೀತಿಯಲ್ಲೂ ಭಿನ್ನ. ಎಲ್ಲಿ ನೋಡಿದರೂ ಫ್ರೆಂಚ್ ಭಾಷೆಯಲ್ಲಿ ಬರೆದಿರುವ ಫಲಕಗಳು, ರಾತ್ರಿ ಪೂರ್ತಿ ತೆಗೆದಿರುವ ನೈಟ್ ಕ್ಲಬ್‌ಗಳು, ರಸ್ತೆ ಬದಿಯ ಕೆಫೆಗಳು, ಜನರಾಡುವ ಭಾಷೆ ಎಲ್ಲವೂ ನಾವು ಕೆನಡಾದಲ್ಲಿ ಇದ್ದೀವೇ ಎಂದು ಸಂಶಯ ಬರಿಸುತ್ತದೆ. ಕೆನಡಾ ದೇಶಕ್ಕೆ ಮೊದಲು ವಲಸೆ ಬಂದಿದ್ದೇ ಫ್ರೆಂಚರಂತೆ. 1603 ರಲ್ಲೇ ಅವರು ತಮ್ಮ ಕಾಲೋನಿಯನ್ನು ಸ್ಥಾಪಿಸಿದ್ದರಂತೆ. 1670 ರಲ್ಲಿ ಇಂಗ್ಲೀಷರು ಕೆನಡಾದಲ್ಲಿ ಫರ್ (ಉಣ್ಣೆ) ಕಾರ್ಖಾನೆಯೊಂದನ್ನು ತೆರೆದು ಕಾಲಕ್ರಮೇಣ ಕೆನಡಾದಲ್ಲಿ ತಮ್ಮ ಆಧಿಪತ್ಯ ಸ್ಥಾಪಿಸಿದರು. ಆದರೆ ಇಂದಿಗೂ ಫ್ರೆಂಚ್ ಕೆನಡಿಯನ್ನರು (ಇವರು ರೋಮನ್ ಕ್ಯಾಥೋಲಿಕರು) ಹಾಗೂ ಇಂಗ್ಲಿಷ್ ಕೆನಡಿಯನ್ನರ (ಇವರು ಪ್ರೊಟೆಸ್ಟೆಂಟರು) ಮಧ್ಯೆ ವಿರಸವಿದ್ದೇ ಇದೆ. ಹಲ್ ನಗರ ಮರದ ಕೈಗಾರಿಕೆಗೆ ಪ್ರಸಿದ್ಧಿಯಾಗಿದೆ. ಇಲ್ಲಿನ ಜನರಲ್ಲಿ ಬಹುಪಾಲು ಸರ್ಕಾರೀ ನೌಕರರು.

ಹಲ್ ನಗರದ ಒಂದು ಪ್ರದಕ್ಷಿಣೆ ಮುಗಿಸಿ ನಾವು ಮತ್ತೆ ಆಟಾವಾಗೆ ವಾಪಸ್ಸಾದೆವು. ಶೇಖರ್ ನಮ್ಮನ್ನು ರೀಡೋ ಜಲಪಾತಕ್ಕೆ ಕರೆದೊಯ್ದು. ರೀಡೋ ನದಿ ಆಟಾವಾ ನದಿ ಸೇರುವ ಜಾಗದಲ್ಲಿ ಈ ಜಲಪಾತವಿದೆ. ಈ ಜಲಪಾತದಿಂದ ವಿದ್ಯುತ್ತನ್ನು ಉತ್ಪಾದನೆ ಮಾಡುತ್ತಾರೆ. ಅಲ್ಲಿಂದ ಮುಂದೆ ನಾವು ರೀಡೋ ಕಾಲುವೆ ನೋಡಿದೆವು. ರೀಡೋ ಕಾಲುವೆ ಆಟಾವಾದಿಂದ ಹರಿದು ಸುಮಾರು ಇನ್ನೂರು ಕಿ.ಮೀ. ದೂರದಲ್ಲಿರುವ ಅಂಟಾರಿಯೋ ಸರೋವರವನ್ನು ಕಿಂಗ್‌ಸ್ಟನ್ ಎಂಬಲ್ಲಿ ಸೇರುತ್ತದೆ. ಚಳಿಗಾಲದಲ್ಲಿ ಇಡೀ ರೀಡೋ ಕಾಲುವೆ ಬರ್ಫವಾಗಿ ಪರಿವರ್ತಿತಗೊಂಡು ಇದರ ಮೇಲೆ ಜನ ಸ್ಕೇಟಿಂಗ್ ಮಾಡ್ತಾರಂತೆ. ಚಳಿಗಾಲದಲ್ಲಿ ರೀಡೋ ಕಾಲುವೆಯನ್ನು ವಿಶ್ವದ ಅತಿ ದೊಡ್ಡ ಸ್ಕೇಟಿಂಗ್ ರಿಂಕ್ ಎಂದು ಕರೆಯುತ್ತಾರಂತೆ.

ಕೆನಡಾದಲ್ಲಿ ತುಂಬಾ ಚಳಿ ಎಂದು ಹೇಳಿದ ಶೇಖರ್, "ಚಳಿಗಾಲದಲ್ಲಿ ಹೊರಗಿನ ಉಷ್ಣಾಂಶ ಮೈನಸ್ 12 ಡಿಗ್ರಿ ಸೆಲ್ಷಿಯಸ್‌ವರೆಗೆ ಇಳಿಯುತ್ತದೆ. ಜನವರಿ - ಫೆಬ್ರವರಿ ತಿಂಗಳುಗಳಲ್ಲಿ ಅರವತ್ತು ಕಿ.ಮೀ. ವೇಗದಲ್ಲಿ ಚಳಿಗಾಳಿ ಸುರ್ರೆಂದು ಬೀಸುತ್ತದೆ. ಆದರೂ ಆಟಾವಾದ ಜನ ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡು ಏನೂ ಆಗದ ಹಾಗೆ ಇರುತ್ತಾರೆ" ಎಂದ. ಮನೆಗಳು,

ಅಂಗಡಿಗಳು, ಕಛೇರಿಗಳು, ಕಾರುಗಳು, ಬಸ್ಸುಗಳಲ್ಲಿ ಹೀಟರ್‌ಗಳನ್ನು ಅಳವಡಿಸಿರುವುದರಿಂದ ಚಳಿಯ ತೀವ್ರತೆ ಅಷ್ಟು ಕಾಣುವುದಿಲ್ಲ ಎಂದ. ಬರ್ಫನ್ನು ರಸ್ತೆಯಿಂದ ತೆಗೆಯಲು ಭಾರೀ ಮಶೀನುಗಳು ಇವೆ ಎಂದು ಹೇಳಿ ಫೆಬ್ರವರಿಯಲ್ಲಿ ಆಟಾವದಲ್ಲಿ ಚಳಿಗಾಲದ ಉತ್ಸವ ನಡೆಯುತ್ತದೆ ಈ ಉತ್ಸವದ ಸಮಯದಲ್ಲಿ ಜನರು ಭರ್ಫದಿಂದ ಬೊಂಬೆಗಳನ್ನು ಮಾಡುತ್ತಾರೆ. ಉತ್ತಮವಾಗಿ ಮಾಡಿದ ಬೊಂಬೆಗಳಿಗೆ ಬಹುಮಾನ ನೀಡುತ್ತಾರೆ ಎಂದ.

ನಾವು ಕೆನಡಾಗೆ ತೆರಳಿದ್ದು ಅಕ್ಟೋಬರ್‌ನಲ್ಲಿ - ಅಮೇರಿಕನ್ನರು "ಫಾಲ್" ಎಂದು ಕರೆಯುವ ಋತು ಇದು. ಎಲ್ಲ ಮರಗಳ ಎಲೆಗಳೂ ಉದುರಿ ನೆಲದ ಮೇಲೆ ಬೀಳುವುದರಿಂದ ಈ ಋತುವಿಗೆ ಫಾಲ್ ಎನ್ನುತ್ತಾರಂತೆ. ಇದೇ ಸಮಯದಲ್ಲಿ ಮರಗಳ ಎಲೆಗಳು ಹಸಿರು ಬಣ್ಣದಿಂದ, ಕಂದು ಅಥವಾ ಚಿನ್ನದ ಬಣ್ಣಕ್ಕೆ ತಿರುಗುತ್ತವೆ. ಉದ್ಯಾನವನಕ್ಕೆ ಹೋದರಂತೂ ಕಣ್ಣಿಗೆ ಹಬ್ಬ. ಈ ಸೀಸನ್‌ನಲ್ಲಿಯೇ ಕೆನಡಾ ಅತ್ಯಂತ ಸುಂದರವಾಗಿ ಕಾಣುತ್ತದೆ ಎಂದ ಶೇಖರ್.

ರೀಡೋ ಕಾಲುವೆ ನೋಡಿದ ನಮ್ಮನ್ನು ಅಲ್ಲೇ ಹತ್ತಿರ ಇದ್ದ ಬಯಲು ಜಾಗವೊಂದಕ್ಕೆ ಕರೆದೊಯ್ದು ಒಂದು ಸ್ಮಾರಕವನ್ನು ತೋರಿಸಿದ. ಏರ್ - ಇಂಡಿಯಾದ ಕಾನಿಷ್ಕಾ ವಿಮಾನಕ್ಕೆ ಕೆನಡಾದಲ್ಲಿ ಬಾಂಬ್ ಇಟ್ಟಾಗ ಆ ವಿಮಾನದಲ್ಲಿದ್ದ ಎಲ್ಲರೂ ಮೃತಪಟ್ಟಿದ್ದರು. (ಇತ್ತೀಚೆಗೆ ಈ ಕುಕೃತ್ಯ ಮಾಡಿದ ಆರೋಪಿಗಳನ್ನು ಕೆನಡಿಯನ್ ಪೊಲೀಸರು ಬಂಧಿಸಿದ್ದಾರೆ). ಆ ಮೃತರ ಸ್ಮಾರಕಾರ್ಥ, ಒಂದು ಕಲ್ಲಿನ ಮೇಲೆ ಮೃತರ ಹೆಸರು ಬರೆಸಿ ನೆಲಕ್ಕೆ ನೆಟ್ಟಿದ್ದಾರೆ. ಸ್ಮಾರಕಕ್ಕೆ ನಾವು ಒಂದು ಪುಷ್ಪ ಇಟ್ಟು ಮೃತರಿಗೆ ಗೌರವ ಸಲ್ಲಿಸಿದೆವು.

ಅದೇ ದಿನ ಸಂಜೆ ನಾವು ಷಾಪಿಂಗ್ ಮಾಡಲು ರಿಡೋ ಸೆಂಟರ್‌ಗೆ ತೆರಳಿದೆವು. ಅಮೇರಿಕಾದಲ್ಲಿರುವಂತೆಯೇ ಇಲ್ಲಿನ ಷಾಪಿಂಗ್ ಮಾಲ್‌ಗಳೂ ದೊಡ್ಡವು. ಹಲವಾರು ವಸ್ತುಗಳು ಅಮೆರಿಕೆಗಿಂತ ಅಗ್ಗದ ದರದಲ್ಲಿ ಸಿಗುತ್ತವೆ ಎಂದು ನಮಗೆ ಅನಿಸಿತು.

ಮಹಿಳೆಯರು ಷಾಪಿಂಗ್ ಮಾಡ್ತಾ ಇದ್ದಾಗ ನಾನು ಆಟಾವಾದ ಪೊಲೀಸ್ ಕಮಿಷನರ್ ಕಛೇರಿಗೆ ಭೇಟಿ ನೀಡಿದೆ. "ನಿಮ್ಮ ಊರಿನಲ್ಲಿ ಅತಿ ಹೆಚ್ಚು ಘಟಿಸುವ ಕ್ರಿಮಿನಲ್ ಪ್ರಕರಣ ಯಾವುದು" ಎಂದು ನಾನು ಕೇಳಿದಾಗ ಅಲ್ಲಿಯ ಡಿ.ಸಿ.ಪಿ. "ನಮಗೆ ಅತ್ಯಂತ ತಲೆನೋವಿನ ಪ್ರಕರಣ ಮದ್ಯಪಾನ ಮಾಡಿ, ವೇಗವಾಗಿ ವಾಹನ ಚಲಾಯಿಸಿ ಆಗುವಂತಹ ಅಪಘಾತಗಳು, ನಮ್ಮಲ್ಲಿ ಮನೆಕಳ್ಳತನ, ಕೊಲೆ ಇತ್ಯಾದಿ ತೀರಾ ವಿರಳ" ಎಂದರು. ಆಟಾವಾದ ಪೊಲೀಸ್ ಅಧಿಕಾರಿಗಳಿಗೆ ರಿವಾಲ್ವರ್/ಪಿಸ್ತೂಲು ಚಲಾಯಿಸುವುದರಲ್ಲಿ ನಿಪುಣತೆ ತರಿಸಲು ಅವರ ಕಛೇರಿಯಲ್ಲೇ ಒಳಾಂಗಣ ಫೈರಿಂಗ್ ರೇಂಜ್ ಇದೆ. ಈ ಮಿನಿ ಒಳಾಂಗಣ ರೇಂಜ್‌ನಲ್ಲಿ, ಕಂಪ್ಯೂಟರ್ ಮೂಲಕ ಪರದೆಯೊಂದರ ಮೇಲೆ ಚಿತ್ರಗಳನ್ನು ಬಿಂಬಿಸಿ ಅದರಲ್ಲಿ ಪೊಲೀಸರು ನೈಜ ಜೀವನದಲ್ಲಿ ಎದುರಿಸುವ ಘಟನೆಗಳನ್ನು ತೋರಿಸಿ ಪಿಸ್ತೂಲಿನಿಂದ ದರೋಡೆಕೋರರು/ಇತರ ಕ್ರಿಮಿನಲ್‌ಗಳಿಗೆ ಗುಂಡು ಹಾರಿಸುವುದನ್ನು ಕಲಿಸುತ್ತಾರೆ. ಆದರೆ ನಮ್ಮ ಕೈಗೆ ಕೊಡುವ ಪಿಸ್ತೂಲಿನಲ್ಲಿ ಗುಂಡಿನ ಬದಲು ಇನ್‌ಫ್ರಾರೆಡ್ ಕಿರಣ ಇರುತ್ತದೆ. ಈ ಕಿರಣ ಗುರಿ ಮುಟ್ಟಬೇಕು. ಪೊಲೀಸ್ ಹೆಡ್‌ಕ್ವಾರ್ಟರ್ಸ್‌ನ ದರ್ಶನ ಮುಗಿಸಿ ಪೊಲೀಸ್ ಕಾರಿನಲ್ಲಿಯೇ ಶೇಖರ್ ಮನೆಗೆ ವಾಪಸ್ ಬಂದೆ.

35

ಕೆನಡಾದ ಮಹಾನಗರ ಮಾಂಟ್ರಿಯಲ್

ನಾವು ಕೆನಡಾಗೆ ಹೋದ ಎರಡನೇ ವಾರಾಂತ್ಯದ ಶನಿವಾರ ಬೆಳಿಗ್ಗೆ ಮೂರು ಗಂಟೆಗೇ ಎದ್ದು, ಸರಿಯಾಗಿ ನಾಲ್ಕು ಗಂಟೆಗೆ ಆಟಾವಾ ಬಿಟ್ಟು ಪೂರ್ವ ದಿಕ್ಕಿನ ಹೆದ್ದಾರಿ ಹಿಡಿದೆವು. ಹಿಂದಿನ ಸೀಟಿನಲ್ಲಿ ಶೇಖರ್ ಹೆಂಡತಿ ಶೀಲಾ, ಅವರ ಮಗಳು ತನಯಾ, ಸ್ವರ್ಣ ನಿದ್ದೆ ಮಾಡಿದರೆ, ಶೇಖರ್ ಪಕ್ಕ ನಾನು ಭೂಪಟ ನೋಡಿ ದಾರಿ ಹೇಳುವ ನ್ಯಾವಿಗೇಟರ್ ಕೆಲಸ ಮಾಡತೊಡಗಿದೆ. ವಿದೇಶಗಳಲ್ಲಿ ಡ್ರೈವಿಂಗ್ ಬಹು ಸುಲಭ. ನಾವು ಹೋಗಬೇಕಾದ ಜಾಗದ ಬಗ್ಗೆ ರಸ್ತೆ ಭೂಪಟ ಖರೀದಿಸಿದರೆ ಸಾಕು. ಭೂಪಟದಲ್ಲಿ ರಸ್ತೆಯ ಸಮಗ್ರ ಚಿತ್ರಣವಿರುತ್ತದೆ. ಹೋಗುವ "ರೂಟ್" ತೀರ್ಮಾನಿಸಿ ಆರಾಮವಾಗಿ ಡ್ರೈವ್ ಮಾಡಬಹುದು. ರಸ್ತೆಯ ಮೇಲಿರುವ ಫಲಕಗಳಲ್ಲಿರುವ ಚಿಹ್ನೆಗಳನ್ನು ಗಮನಿಸಿಬೇಕು ಅಷ್ಟೇ. ಇದೇ ಕೆಲಸವನ್ನೇ ನಾನು ಮಾಡಹೊರಟಿದ್ದೆ.

ರಸ್ತೆಯಲ್ಲಿರುವ ಲೇನ್‌ಗಳ ಮಧ್ಯದಲ್ಲೇ ಹೋಗಬೇಕು. ನಿಧಾನವಾಗಿ ಗಾಡಿ ಓಡಿಸುವವರು ರಸ್ತೆಯ ಬಲಬದಿಗೆ, ಮಧ್ಯಮ ವೇಗದವರು ಮಧ್ಯದಲ್ಲಿ ಇತ್ಯಾದಿ. ಸಾಮಾನ್ಯವಾಗಿ ಮಧ್ಯ ಲೇನ್‌ನಲ್ಲಿ ಭೂತಾಕಾರದ ಟ್ರೇಲರ್ ಟ್ರಕ್ಕುಗಳು ಚಲಿಸುತ್ತದೆ. ಬೆಳಗಿನ "ಜೋಷ್" ನಲ್ಲಿ ಇದ್ದ ಶೇಖರ್ ವೇಗವಾಗಿಯೇ ಗಾಡಿ ಓಡಿಸ್ತಾ ಇದ್ದ. ಶೇಖರ್ ಸ್ಪೀಡ್ ಲಿಮಿಟ್‌ಗಿಂತ ಜಾಸ್ತಿ ಆಯಿತು ಅಂತ ನಾನು ಹೇಳುತ್ತಿದ್ದಂತೆ ರಸ್ತೆಯ ಬದಿಯಲ್ಲೇ ಅವಿತುಕೊಂಡಿದ್ದ ಪೊಲೀಸ್ ವಾಹನವೊಂದು ಸೈರನ್ ಕೂಗಿಸುತ್ತಾ ನಮ್ಮ ಕಾರಿನ ಹಿಂದೆ ಬಂದು ನಿಲ್ಲಿಸಲು ಸಿಗ್ನಲ್ ಮಾಡಿತು. ನಾವು ನಿಂತ ಕೂಡಲೇ ಪೊಲೀಸ್‌ನೊಬ್ಬ ಕೆಳಗಿಳಿದು ವಾಹನವನ್ನು ಅತಿ ವೇಗವಾಗಿ ಓಡಿಸಿದ್ದಕ್ಕೆ "ಟಿಕೆಟ್" ಹರಿದ. ಅಷ್ಟರಲ್ಲಿ ನನ್ನ ಹೆಂಡತಿ "ಸಾರ್, ಇದೇ ಮೊದಲ ಸಲ ನಮ್ಮ ಅಣ್ಣ ವೇಗವಾಗಿ ಓಡಿಸಿದ್ದು, ಮೊದಲನೆಯ ಬಾರಿ ಎಂದು ಬಿಟ್ಟುಬಿಡಿ" ಎಂದು ಅಂಗಲಾಚಿದಳು. ಶೇಖರ್ ಕೆಕ್ಕರಗಣ್ಣು ಮಾಡಿ ತಂಗಿಯತ್ತ ನೋಡಿ ಟಿಕೆಟ್ ಪಡೆದ. "ದಂಡಿನಲ್ಲಿ ಸೋದರ ಮಾವನೇ" ಎಂಬ ಗಾದೆ ಮಾತನ್ನು ನಾನು ಹೇಳ್ತಾ ಇದ್ದಂತೆ ಪೊಲೀಸಪ್ಪ ಹೊರಟು ಹೋದ.

ಅಮೇರಿಕಾ, ಕೆನಡಾಗಳಲ್ಲಿ ಹೆದ್ದಾರಿಗಳಲ್ಲಿ ವೇಗವಾಗಿ ವಾಹನ ಓಡಿಸಿ, ಅಥವಾ ಮದ್ಯಪಾನ ಮಾಡಿ ಗಾಡಿ ಓಡಿಸಿ ಅಪಘಾತ ಎಸಗುವವರ ಬಗ್ಗೆ ತೀವ್ರ ನಿಗಾ ಇಡಲಾಗುತ್ತದೆ. ಸ್ಪೀಡ್ ರಾಡಾರ್ ಉಪಕರಣವಿರುವ ಪೊಲೀಸ್ ಕಾರಿನ ಮುಂದೆ ನಮ್ಮ ವಾಹನ ಹೋದ ಕೂಡಲೇ

ನಮ್ಮ ವಾಹನದ ವೇಗ ರಾಡಾರ್‌ನಲ್ಲಿ ನಮೂದಾಗುತ್ತದೆ. ಅದನ್ನು ರೆಕಾರ್ಡ್ ಮಾಡಿಕೊಂಡ ಪೊಲೀಸರು ನಮ್ಮ ಹಿಂದೆಯೇ ಬಂದು ಫೈನ್ ಟಿಕೆಟ್ ನೀಡ್ತಾರೆ.

ಎಪ್ಪತ್ತೈದು ಕಿ.ಮೀ. ದೂರ ಕ್ರಮಿಸಿದ ನಂತರ ಮ್ಯಾಕ್ ಡೊನಾಲ್ಡ್ ಚಿನ್ಹೆ ಗೋಚರಿಸಿತು. ನಾವು ರಸ್ತೆಯಲ್ಲಿಂದ ಹೊರಬಂದು ಆ ಉಪಹಾರಗೃಹದ ಪಾರ್ಕಿಂಗ್ ಜಾಗದಲ್ಲಿ ಕಾರು ನಿಲ್ಲಿಸಿದ್ದೆವು. ವಿದೇಶದಲ್ಲಿ ಪ್ರತಿದಿನವೂ ಹೆದ್ದಾರಿಯಲ್ಲಿ ಐನೂರು - ಆರುನೂರು ಕಿ.ಮೀ. ವರೆಗೆ ವಾಹನ ಓಡಿಸಬಹುದು, ಏನೂ ಆಯಾಸವಿಲ್ಲದೆ. ಸಾಮಾನ್ಯವಾಗಿ ಇನ್ನೂರು ಮುನ್ನೂರು ಕಿ.ಮೀ. ವಾಹನ ಓಡಿಸಿ "ಬ್ರೇಕ್" ಅಂದರೆ ವಿಶ್ರಾಂತಿ ಪಡೆಯಲು ರಸ್ತೆ ಬದಿಯ ರೆಸ್ಟೋರೆಂಟ್‌ಗಳಲ್ಲಿ ಉಪಹಾರ ಸೇವಿಸಿ, ಮುಖ ತೊಳೆದು ಮುಂದೆ ಹೋಗ್ತಾರೆ.

ಮ್ಯಾಕ್ ಡೊನಾಲ್ಡ್‌ನಲ್ಲಿ ಉಪಹಾರ ಮಾಡಿ ನಾವು ಮತ್ತೆ ಮುಂದೆ ಹೋದೆವು, ಅಷ್ಟರಲ್ಲಿ ಬೆಳಕಾಗಿತ್ತು. ಒಂದು ಗಂಟೆಯ ಪ್ರಯಾಣದ ನಂತರ ಮಾಂಟ್ರಿಯಲ್ ನಗರದ ಹೊರವಲಯಕ್ಕೆ ಬಂದೇ ಬಿಟ್ಟೆವು. ಸೇಂಟ್ ಲಾರೆನ್ಸ್ ಮತ್ತು ಆಟಾವಾ ನದಿಗಳು ಕೂಡುವ ಜಾಗದಲ್ಲಿರುವ ಮಾಂಟ್ರಿಯಲ್ ಜನಸಂಖ್ಯೆಯಲ್ಲಿ ಕೆನಡಾದ ಎರಡನೇ ದೊಡ್ಡನಗರ. ಕ್ವಿಬೆಕ್ ಪ್ರಾಂತದಲ್ಲಿರುವ ಈ ನಗರದ ಬಹುಪಾಲು ಜನ ಫ್ರೆಂಚ್ ಭಾಷೆಯನ್ನೇ ಮಾತನಾಡುತ್ತಾರೆ.

1545 ರಲ್ಲಿ ಫ್ರೆಂಚ್ ಪರ್ಯಟಕ ಜಾಕ್ವೆಸ್ ಕಾರ್ಟಿಯರ್ ಈ ನಗರಕ್ಕೆ ಮೊದಲಿಗೆ ಬಂದು ನಗರದ ಮಧ್ಯಭಾಗದಲ್ಲಿರುವ ಬೆಟ್ಟವೊಂದಕ್ಕೆ ಮಾಂಟ್ರಿಯಲ್ (ಫ್ರೆಂಚ್ ಭಾಷೆಯಲ್ಲಿ ಅರಸರ ಬೆಟ್ಟ) ಎಂದು ಹೆಸರಿಟ್ಟ. ಆ ಬೆಟ್ಟದ ಅಕ್ಕಪಕ್ಕದಲ್ಲೇ ಮೊದಲಿಗೆ ಬಂದ ವಲಸೆಗಾರರು ತಮ್ಮ ವಸತಿ ಸ್ಥಾಪಿಸಿದರು. ಕಾಲಕ್ರಮೇಣ ಅಮೇರಿಕನ್ನರು ಇಲ್ಲಿಗೆ ಬಂದರು. 18ನೆಯ ಶತಮಾನದಲ್ಲಿ ಮಾಂಟ್ರಿಯಲ್ ಫರ್ (Fur) ಉಣ್ಣೆಯ ಕೇಂದ್ರವಾಯಿತು. 19ನೆಯ ಶತಮಾನದಲ್ಲಿ ಈ ಪಟ್ಟಣ ಇನ್ನೂ ಪ್ರವರ್ಧಮಾನಕ್ಕೆ ಬಂದು ಈ ನಗರ ಕೈಗಾರಿಕಾ ಹಾಗೂ ವಾಣಿಜ್ಯ ಕೇಂದ್ರವಾಗಿ ರೂಪುಗೊಂಡಿತು.

ಮಾಂಟ್ರಿಯಲ್‌ನ ಹೃದಯ ಭಾಗದಲ್ಲಿ ಅಂದರೆ ಮೌಂಟ್ ರಾಯಲ್ ಹಾಗೂ ಸೇಂಟ್ ಲಾರೆನ್ಸ್ ನದಿಯ ಮಧ್ಯವಿರುವ ಜಾಗದಲ್ಲೇ ವಾಣಿಜ್ಯ ಕೇಂದ್ರವಿರುವುದು. ನಾವು ಇಲ್ಲಿನ ಸೇಂಟ್ ಕ್ಯಾಥರೀನ್ ಸ್ಟ್ರೀಟ್ ಎಂಬ ರಸ್ತೆಗೆ ಹೋದ ಕೂಡಲೇ ನ್ಯೂಯಾರ್ಕಿಗೆ ಹೋದ ಹಾಗೆಯೇ ಭಾಸವಾಯಿತು. ಭಾರೀ ಡಿಪಾರ್ಟ್‌ಮೆಂಟ್ ಅಂಗಡಿಗಳು ಇಲ್ಲಿವೆ. ಎರಡು ಮೂರು ಅಂಗಡಿಗಳಿಗೆ ಹೋಗಿ ಸಣ್ಣಪುಟ್ಟ ವಸ್ತುಗಳನ್ನು ಖರೀದಿಸಿದೆವು. ಅಮೇರಿಕಾಗೆ ಹೋಲಿಸಿದರೆ ಇಲ್ಲಿ ಬೆಲೆ ಕಡಿಮೆ. ಆದರೆ ಎಲ್ಲರೂ ಫ್ರೆಂಚ್ ಭಾಷೆ ಮಾತನಾಡುವುದರಿಂದ ವ್ಯಾಪಾರ ಮಾಡುವುದು ಕಷ್ಟವಾಯಿತು.

ಅಲ್ಲಿಂದ ಮುಂದೆ ನಾವು ಒಲಂಪಿಕ್ ಪಾರ್ಕಿಗೆ ಹೋದೆವು. 1976 ರಲ್ಲಿ ಮಾಂಟ್ರಿಯಲ್‌ನಲ್ಲಿ ಒಲಿಂಪಿಕ್ ಕ್ರೀಡೆಗಳು ನಡೆದವು. ಈ ಸಂದರ್ಭದಲ್ಲಿ ಹಲವಾರು ಸ್ಟೇಡಿಯಂಗಳು ನಿರ್ಮಾಣಗೊಂಡವು. ಇವೆಲ್ಲವೂ ಇರುವ ಜಾಗಕ್ಕೆ ಒಲಿಂಪಿಕ್ ಪಾರ್ಕ್ ಅನ್ನುತ್ತಾರೆ ಈ ಉದ್ಯಾನ ಕೇಂದ್ರಬಿಂದುವೇ ಒಲಿಂಪಿಕ್ ಸ್ಟೇಡಿಯಂ. ಈ ವಿಶಾಲ ಕ್ರೀಡಾಂಗಣದ ಒಳಗಡೆ ಒಂದು ಸುತ್ತು ಹಾಕಿ ಇತರ ಕೆಲವು ಕ್ರೀಡಾಂಗಣಗಳನ್ನು ನೋಡಿದೆವು.

ಇದರ ನಂತರ ಸೇಂಟ್ ಲಾರೆನ್ಸ್ ನದೀ ತೀರಕ್ಕೆ ಬಂದೆವು. ಇಲ್ಲಿ ಬಂದ ಕೂಡಲೇ ನನಗೆ ಯೂರೋಪಿಗೆ ಬಂದ ಅನುಭವ ಆಯಿತು. ಈ ಭಾಗಕ್ಕೆ ಹಳೇ ಮಾಂಟ್ರಿಯಲ್ ಎಂದು ಕರೆಯುತ್ತಾರೆ ಎಂದು ಶೀಲಾ ಹೇಳಿದಳು. ಶತಮಾನಗಳ ಹಿಂದೆ ವಲಸೆಗಾರರು ಮಾಂಟ್ರಿಯಲ್‌ಗೆ ಬಂದು ಕಟ್ಟಿಕೊಂಡ ಕಟ್ಟಡಗಳು ಇಂದಿಗೂ ಹಾಗೆ ಇವೆ. ಇವುಗಳಲ್ಲಿ ಬಹುತೇಕ ಕಟ್ಟಡಗಳು ಫ್ರೆಂಚ್ ಶೈಲಿಯಲ್ಲಿವೆ. ಕ್ವಿಬೆಕ್ ಪ್ರಾಂತ್ಯದ ಹಳ್ಳಿಯ ಶೈಲಿಯ ಮನೆಗಳೂ ಇವೆ. 1668ರಲ್ಲಿ ಕಟ್ಟಲಾದ ಮೇಸನ್ ಸೇಂಟ್ ಗೇಬ್ರಿಯಲ್ ಕಟ್ಟಡ ಒಂದು ಪುರಾತನ ಕಟ್ಟಡ. ಅದರ ಬಳಿಯಲ್ಲೇ ಇರುವ ಮತ್ತೊಂದು ಹಳೇ ಕಟ್ಟಡ ಚಾಟೋ-ಡೀ-ರಾಮೇಜೀನಲ್ಲಿ ಒಂದು ಕಲಾ ಗ್ಯಾಲರಿ ತೆರೆಯಲಾಗಿದೆ. 1705 ರಲ್ಲಿ ಈ ಕಟ್ಟಡ ಗವರ್ನರ್ ಜನರಲ್‌ನ ಮನೆಯಾಗಿತ್ತಂತೆ.

ನದೀ ತೀರವಂತೂ ನೋಡಲು ತುಂಬಾ ಚೆನ್ನಾಗಿದೆ. ಹಲವಾರು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ರಸ್ತೆ ಬದಿಯಲ್ಲಿ ಸಣ್ಣಪುಟ್ಟ ವಸ್ತುಗಳು, ತಿಂಡಿ ತಿನಿಸುಗಳನ್ನು ಮಾರುತ್ತಾರೆ. ಕಲಾವಿದರು ಹಲವಾರು ನಿಮಿಷಗಳಲ್ಲೇ ನಮ್ಮ ಚಿತ್ರ ಚಿತ್ರಿಸಿ ಕೊಡುತ್ತಾರೆ. ಸ್ವಲ್ಪ ಬೆಲೆಗೆ. ಇಲ್ಲಿಯ ರಸ್ತೆಗಳೂ ಹಳೇ ಕಾಲದ ರಸ್ತೆಗಳು ಪ್ಯಾರಿಸ್ಸಿನಂತೆಯೇ. ರಸ್ತೆ ಬದಿಯಲ್ಲಿ ಕೆಫೆಗಳು ಇವೆ.

ಮಾಂಟ್ರಿಯಲ್‌ನಲ್ಲಿ ನೋಡಬೇಕಾದ ಇನ್ನೊಂದು ಮುಖ್ಯಸ್ಥಳ ನೋತ್ರದಾಮ್-ಡೀ-ಬಾನ್-ಸೆಕೋರ್ಸ್. 1657ರಲ್ಲಿ ಕಟ್ಟಲಾದ ಈ ಮಂದಿರವನ್ನು 1829ರಲ್ಲಿ ಪುನರ್ ನಿರ್ಮಾಣ ಮಾಡಲಾಯಿತು ಎನ್ನುತ್ತಾರೆ. ಈ ಮಂದಿರದ ಬಗ್ಗೆ ಜನಕ್ಕೆ ಎಷ್ಟು ನಂಬಿಕೆ ಇದೆ ಎಂದರೆ, ಈ ದೇವಾಲಯದ ಮೇಲಿನ ಭಕ್ತಿಯಿಂದ ಕುಂಟರಿಗೆ ಕಾಲು ಬರುತ್ತದೆ ಎಂದು ತಿಳಿಯುತ್ತಾರೆ. ಹಲವಾರು ಜನ ಊರುಗೋಲುಗಳ ನೆರವಿನಿಂದ ಈ ದೇವಾಲಯದ ಮೆಟ್ಟಿಲವರೆಗೆ ಬಂದು, ಊರುಗೋಲುಗಳನ್ನೆಸೆದು ಮೆಟ್ಟಿಲುಗಳನ್ನು ನಡೆದುಕೊಂಡೇ ಏರುತ್ತಾರೆ ಎಂದು ತಿಳಿಸಿದರು ನಮಗೆ. ಇದರ ಕುರುಹಾಗಿ ಈ ಮಂದಿರದ ಕೆಳಭಾಗದಲ್ಲಿ ನೂರಾರು ಊರುಗೋಲುಗಳನ್ನು ನಮಗೆ ತೋರಿಸಿದರು.

ಗುಡ್ಡದ ಮೇಲಿರುವ ಈ ಮಂದಿರದ ಹೊರಭಾಗದಿಂದ ಮಾಂಟ್ರಿಯಲ್‌ನ ವಿಹಂಗಮ ನೋಟ ಲಭ್ಯ. ನೋತ್ರದಾಮ್ ಮಂದಿರಕ್ಕಿಂತ ಹಳೆಯದಾದ ಇನ್ನೊಂದು ಮಂದಿರವೆಂದರೆ ಸೇಂಟ್ ಸಲ್‌ಪೈಸ್ ಸೆಮಿನರಿ. ಇದು ಕ್ರಿಶ್ಚಿಯನ್ನರ ಧರ್ಮ ಬೋಧನೆಯ ಕಾಲೇಜು. ಈ ಕಟ್ಟಡವನ್ನು 1683 ರಲ್ಲೇ ಕಟ್ಟಿ ಮುಗಿಸಿದರು ಎನ್ನುತ್ತಾರೆ. (ನೋತ್ರದಾಮ್ ಪುನರ್ ನಿರ್ಮಾಣ ಹತ್ತೊಂಬತ್ತನೇ ಶತಮಾನವಾದ್ದರಿಂದ ಇದೇ ಪುರಾತನವಾದದ್ದು ಎನ್ನುತ್ತಾರೆ).

ಈ ಎಲ್ಲ ಕಟ್ಟಡಗಳನ್ನು ನೋಡಿ ಮುಗಿಸುವ ವೇಳೆಗೆ ಕತ್ತಲಾಗಿತ್ತು. ನಾವು ನಗರದ ಮಧ್ಯಭಾಗಕ್ಕೆ ಮತ್ತೆ ತೆರಳಿ ಇಲ್ಲಿನ ವಿಶೇಷ ಅಂಡರ್‌ಗ್ರೌಂಡ್ ಷಾಪಿಂಗ್ ಏರಿಯಾಗೆ ಹೋದೆವು. ಇದು ದೆಹಲಿಯ ಪಾಲಿಕಾ ಬಜಾರನ್ನು ನೆನಪಿಗೆ ತರಿಸಿತು. ಕೆನಡಾದಲ್ಲಿ ಚಳಿ ಜಾಸ್ತಿಯಾದ್ದರಿಂದ ಭೂಮಿಯ ಕೆಳಗೆ ಈ ವ್ಯಾಪಾರೀ ಸ್ಥಳವನ್ನು ಕಟ್ಟಿದ್ದಾರಂತೆ. ಇಲ್ಲಿ 1600 ಅಂಗಡಿಗಳೂ, 200 ಕ್ಕೂ ಹೆಚ್ಚು ಉಪಾಹಾರ ಗೃಹಗಳಿವೆ.

ಉಪಹಾರ ಗೃಹವೊಂದರಲ್ಲಿ ರಾತ್ರಿ ಊಟ ಮುಗಿಸಿ ನಾವುಗಳು ಒಂದು ಹೋಟೆಲ್‌ಗೆ ತೆರಳಿ ಕೊಠಡಿ ಬಾಡಿಗೆಗೆ ಪಡೆದು ಪವಡಿಸಿದೆವು.

36

ಟೊರಾಂಟೋ ಹಾಗೂ ನಯಾಗಾರ ಜಲಪಾತ

ಮಾಂಟ್ರಿಯಲ್ ನಿಂದ ಬೆಳಿಗ್ಗೆಯೇ ಹೊರಟ ನಾವು ಕೆನಡಾದ ಅತಿ ದೊಡ್ಡ ನಗರ ಟೊರಾಂಟೋ ದಾಟಿ ನಯಾಗಾರ ಜಲಪಾತ ತಲುಪಿದಾಗ ಬೆಳಗಿನ ಹತ್ತು ಗಂಟೆ. ಹೋಟೆಲೊಂದರಲ್ಲಿ ರೂಮ್ ಪಡೆದು ನಮ್ಮ ಲಗೇಜನ್ನು ಅಲ್ಲಿಟ್ಟು ಜಲಪಾತದತ್ತ ಹೆಜ್ಜೆಹಾಕಿದೆವು. ಕುದುರೆ ಲಾಳದ ಆಕಾರದಲ್ಲಿ ಭೋರ್ಗರೆಯುತ್ತಾ ಕೆಳಗೆ ಬೀಳುತ್ತಿದ್ದ ಜಲಧಾರೆ ನೋಡಿ ಮನಸ್ಸು ಪುಳಕಿತವಾಯಿತು. ನಾವು ಇದುವರೆವಿಗೆ ಹಲವಾರು ದೇಶಗಳಲ್ಲೂ, ನಮ್ಮ ದೇಶದಲ್ಲೂ ಕಂಡಿದ್ದ ರಮಣೀಯ ನೈಸರ್ಗಿಕ ದೃಶ್ಯಗಳಿಗಿಂತ ನಯಾಗಾರ ಸೌಂದರ್ಯ ಚೆನ್ನಾಗಿದೆ ಅನ್ನಿಸಿತು. ನಾವು ಈಗಾಗಲೇ ನೋಡಿದ್ದ ಗ್ರಾಂಡ್ ಕೆನ್ಯಾನ್ ಬಿಟ್ಟರೆ ಇನ್ಯಾವ ದೃಶ್ಯವೂ ನಯಾಗಾರದ ರಮಣೀಯತೆಗೆ ಸಾಟಿಯೇ ಇಲ್ಲ ಎನಿಸಿತು.

ಅಮೇರಿಕಾದ ನ್ಯೂಯಾರ್ಕ್ ರಾಜ್ಯ ಹಾಗೂ ಕೆನಡಾದ ಓಂಟಾರಿಯೋ ರಾಜ್ಯವನ್ನು ನಯಾಗಾರ ನದಿ ಬೇರ್ಪಡಿಸಿ ಹರಿಯುತ್ತಾ ಎರಡು ಹೋಳಾಗಿ ಅಮೇರಿಕಾ ಹಾಗೂ ಕೆನಡಾ ಎರಡೂ ದೇಶಗಳಲ್ಲಿ ಜಲಪಾತಗಳಾಗಿ ಕೆಳಗೆ ಬೀಳುತ್ತದೆ. ಅಮೇರಿಕಾದ ಜಲಪಾತ 167 ಅಡಿ ಎತ್ತರದಿಂದ 1001 ಅಡಿ ಅಗಲವಾಗಿ ಬಿದ್ದರೆ, ಕೆನಡಾದ ಕುದುರೆ ಲಾಳ ಆಕಾರದ ಜಲಪಾತ 161 ಅಡಿ ಎತ್ತರದಿಂದ 2592 ಅಡಿ ಅಗಲವಾಗಿ ಕೆಳಗೆ ಭೋರ್ಗರೆಯುತ್ತಾ ಬೀಳುತ್ತದೆ. ಒಂದು ಸೆಕೆಂಡಿಗೆ 55 ಲಕ್ಷ ಲೀಟರ್ ನೀರು ಕೆಳಗೆ ಬೀಳುವುದರಿಂದ ನಯಾಗಾರ ಜಲಪಾತ ಕೆನಡಾ ದೇಶದ ಕಡೆಯಿಂದಲೇ ಚೆನ್ನಾಗಿ ಕಾಣುವುದು. ಕೆನಡಾಗೆ ಬರಲು ವೀಸಾ ದೊರಕದವರು ಮಾತ್ರ ಅಮೇರಿಕಾ ದೇಶದ ಕಡೆಯ ಚಿಕ್ಕ ಜಲಪಾತ ನೋಡಿ "ನಾವೂ ನಯಾಗಾರ ವೀಕ್ಷಿಸಿದೆವು" ಎಂದು ತೃಪ್ತಿ ಪಡಬೇಕಾಗುತ್ತದೆ.

ನಯಾಗಾರ ನೋಡಲು ಹಲವಾರು ವೀಕ್ಷಕರ ಸ್ಥಳಗಳನ್ನು ಮಾಡಿದ್ದಾರೆ. ಕುದುರೆ ಲಾಳದ ಎದುರುಗಡೆ ಭೂಮಿ ಮಟ್ಟದಲ್ಲಿ ಇರುವ ಕಟ್ಟೆಯ ಹಿಂದೆ ನಿಂತು ಜಲಪಾತವನ್ನು ನೋಡುವುದು ಒಂದಾದರೆ ನಯಾಗಾರ ನದಿಯ ದಂಡೆಯ ಪಕ್ಕದಲ್ಲಿರುವ ಹಲವಾರು ಉದ್ಯಾನವನಗಳಿಂದ, ಅಬ್ಸರ್ವೇಷನ್ ಗೋಪುರಗಳಿಂದ ಈ ಜಲಪಾತದ ವಿಹಂಗಮ ನೋಟ ನೋಡಬಹುದು.

ನಯಾಗಾರ ಜಲಪಾತ ನೋಡುವ ಜನಪ್ರಿಯ ಸ್ಥಳ ಎಂದರೆ ಈ ಜಲಧಾರೆಯ ಕೆಳಗಡೆ ಇರುವ ಗುಹೆ ಒಂದರಿಂದ. Cave of the Winds ಎಂದು ಕರೆಯುವ ಈ ಗುಹೆಯ ಬಾಗಿಲ

ಮುಂದೆ ನಿಂತರೆ ನಮ್ಮ ತಲೆಗಳನ್ನು ದಾಟಿ ಭೋರ್ಗರೆಯುವ ನೀರಿನ ಪರದೆ ಕೆಳಕ್ಕೆ ಬೀಳುವುದನ್ನು ನೋಡಬಹುದು. ಈ ಜಾಗದಲ್ಲಿ ನಿಂತರೆ ನೀರಿನ ಹನಿಗಳಿಂದ ಸಂಪೂರ್ಣವಾಗಿ ತೊಯ್ಯುವ ಸಂಭವ ಇರುವುದರಿಂದ ಅಲ್ಲಿಗೆ ಹೋಗುವ ಪ್ರತಿಯೊಬ್ಬರಿಗೂ ಹಳದಿ ಬಣ್ಣದ Rain Coat ಒಂದನ್ನು ಪುಕ್ಕಟೆಯಾಗಿ ಕೊಡುತ್ತಾರೆ. ನಯಾಗಾರ ಜಲಪಾತ ನದಿಯಿಂದಲೂ ನೋಡಬಹುದು. Maid of the Mist ಎಂದು ಕರೆಯುವ ದೋಣಿಯಲ್ಲಿ ಕುಳಿತು ನಯಾಗಾರ ನದಿಯ ವಿಹಾರ ಮಾಡುತ್ತಾ ಜಲಪಾತದ ಸವಿಯನ್ನು ಸವಿಯಬಹುದು.

ರಾತ್ರಿ ಹೊತ್ತಿನಲ್ಲಿ ಜಲಪಾತಕ್ಕೆ ಬಣ್ಣ ಬಣ್ಣದ ವಿದ್ಯುತ್ ದೀಪಗಳನ್ನು ಬಿಡಲಾಗುತ್ತದೆ. ಈ ಸಮಯದಲ್ಲಿ ಜಲಪಾತವನ್ನು ನೋಡಿದರೆ ಅಪ್ಸರೆಯರ ಲೋಕದಲ್ಲಿ ಇರುವಂತಹ ಭಾವನೆ ಮೂಡುತ್ತದೆ. ಸುಮಾರು 12 ಸಾವಿರ ವರ್ಷಗಳ ಹಿಂದೆ ನಯಾಗಾರದ ಈ ಜಲಪಾತ ಉಂಟಾಯಿತು ಎಂದು ಹೇಳುತ್ತಾರೆ. ಲೇಕ್ ಈರೀ ಸರೋವರದ ನೀರು ನಯಾಗಾರ ನದಿಗೆ ಬಂದು ಸೇರಿದಾಗ ಜಲಪಾತ ಉಂಟಾಯಿತು ಎನ್ನುತ್ತಾರೆ. ಈ ಜಲಪಾತದಿಂದ ಅಮೇರಿಕ ಮತ್ತು ಕೆನಡಾ ದೇಶಗಳೆರಡೂ ವಿದ್ಯುತ್ತನ್ನು ಉತ್ಪಾದನೆ ಮಾಡುತ್ತವೆ. ಪ್ರತಿ ದಿನ ನಯಾಗಾರ ನೋಡಲು ಅಸಂಖ್ಯಾತ ಯಾತ್ರಿಕರು ಬರುತ್ತಾರೆ. ಹೀಗಾಗಿ ಇಲ್ಲಿ ಪರ್ಯಟಕ ಉದ್ಯಮಕ್ಕೆ ಬೇಕಾದ ಎಲ್ಲ ಸೇವೆಗಳೂ ಲಭ್ಯ - ಹೋಟೆಲ್‌ಗಳು, ಉಪಹಾರಗೃಹಗಳು, ಮನರಂಜನಾ ಗೃಹಗಳು, ಸಾರಿಗೆ ಇತ್ಯಾದಿ.

ನಯಾಗಾರ ದರ್ಶನ ಮಾಡಿದ ನಂತರ ನಾವು ಟೊರಾಂಟೋ ನಗರಕ್ಕೆ ಹೊರಟೆವು. ಟೊರಾಂಟೋ ನಯಾಗಾರಕ್ಕೆ ಬಹಳ ಹತ್ತಿರವಾಗಿರುವ ನಗರ. ಲೇಕ್ ಓಂಟಾರಿಯೋ ಸರೋವರ ಹಂಬರ್ ಹಾಗೂ ಡಾನ್ ನದಿ ತೀರದಲ್ಲಿರುವ ಟೊರಾಂಟೋ ಕೆನಡಾ ದೇಶದ ಪ್ರಮುಖ ನಗರ. ನಮ್ಮಲ್ಲಿರುವ ಮುಂಬೈನಂತೆ ಇದು ಕೆನಡಾದ ವಾಣಿಜ್ಯ ರಾಜಧಾನಿ. ಈ ನಗರದಲ್ಲಿ ಬಂದರು ಕೂಡ ಇರುವುದರಿಂದ ಇಲ್ಲಿಗೆ ಬಹಳ ಪ್ರಾಮುಖ್ಯತೆ ಇದೆ. ಟೊರಾಂಟೋ ನಗರದಲ್ಲಿ ನೋಡಬೇಕಾದ ಅತಿ ಮುಖ್ಯ ಪ್ರೇಕ್ಷಣೀಯ ಸ್ಥಳ ಸಿ.ಎನ್. ಟವರ್. ಒಂದು ಕಾಲಕ್ಕೆ ವಿಶ್ವದ ಅತಿ ದೊಡ್ಡ ಗೋಪುರವಾಗಿದ್ದ ಈ ಕಟ್ಟಡ ನೋಡಲು ನಾವು ಮೊದಲು ಹೊರಟೆವು.

1976 ರಲ್ಲಿ ಕಟ್ಟಲಾದ ಈ ಗೋಪುರ 1815 ಅಡಿ ಎತ್ತರದಲ್ಲಿದೆ. ಈ ಗೋಪುರದ ಮುಖ್ಯ ಉದ್ದೇಶ ಸಂಪರ್ಕ ಹಾಗೂ ವೀಕ್ಷಣೆ. ಗೋಪುರವನ್ನು ನೋಡಲು ನಾವು ಟಿಕೇಟ್‌ಗಳನ್ನು ಪಡೆದು ಗೋಪುರದ ಹೊರಗಡೆ ಇರುವ ಎಕ್ಸ್‌ಪ್ರೆಸ್ ಎಲಿವೇಟರ್ (ಅಂದರೆ ವೇಗವಾಗಿ ಮೇಲೇರುವ ಲಿಫ್ಟ್) ನಲ್ಲಿ ಮೇಲಕ್ಕೆ ಏರಿದೆವು. ಲಿಫ್ಟ್‌ನಿಂದ ಹೊರಬಂದು ಗೋಲಾಕಾರದ ಪ್ರದೇಶದಲ್ಲಿ ಹೊರಗಿನ ದೃಶ್ಯವನ್ನು ನೋಡಲು ರಚಿಸಿರುವ ವೀಕ್ಷಕರ ಗ್ಯಾಲರಿಗೆ ಹೋದೆವು. ಟೊರಾಂಟೋ ನಗರದ ವಿಹಂಗಮ ದೃಶ್ಯ ಇಲ್ಲಿಂದ ಲಭ್ಯ. ವೀಕ್ಷಕರ ಗ್ಯಾಲರಿಯ ಪಕ್ಕದ ಭಾಗದಲ್ಲಿ ಒಂದು ಜಾಗದಲ್ಲಿ ನೆಲಕ್ಕೆ ಗಾಜನ್ನು ಹಾಕಿದ್ದಾರೆ. ಈ ಗಾಜಿನ ಮೇಲೆ ನಿಂತರೆ ನೇರವಾಗಿ ಕೆಳಗೆ ಇರುವ ಭೂಮಿಯನ್ನು ನೋಡಬಹುದು. ಎಷ್ಟೋ ಜನಕ್ಕೆ ಅದರ ಮೇಲಿನಿಂದ ಕೆಳಗೆ ನೋಡಿದರೆ ತಲೆತಿರುಗುವಂತೆ ಆಗುತ್ತದೆ. ಆದರೂ ಮೋಜಿಗಾಗಿ ಬಹಳ ಜನ ಅದರ ಮೇಲೆ ನಿಂತು ಖುಷಿ ಪಡೆಯುತ್ತಿದ್ದರು. ಇಲ್ಲಿಂದ ಒಂದು ಮಹಡಿ ಏರಿದರೆ ತಿರುಗುವ ಉಪಾಹಾರಗೃಹ ಇದೆ. ಅಲ್ಲಿ ಕುಳಿತರೆ ಗೋಲಾಕಾರದ ಗೋಪುರದ ಸುತ್ತಾ ನಿಧಾನವಾಗಿ ಸುತ್ತುವ ಅನುಭವವಾಗುತ್ತದೆ. ಒಂದು ಗಂಟೆಗೆ ಒಂದು ಪೂರ್ತಿ ರೌಂಡ್ ಸುತ್ತಬಹುದು ಎಂದು ಶೇಖರ್ ಹೇಳಿದ.

ಸಿ.ಎನ್. ಟವರ್ ನೋಡಿ ಕೆಳಗಡೆ ಇಳಿದ ಕೂಡಲೇ ಅಲ್ಲೆ ಪಕ್ಕದಲ್ಲಿರುವ Sky Dome ಎನ್ನುವ ಜಾಗಕ್ಕೆ ಹೋದೆವು. ಸ್ಕೈಡೊಂ ಎನ್ನುವುದು ಒಂದು ಸ್ಟೇಡಿಯಂ ಸಮುಚ್ಚಯ. 1989ರಲ್ಲಿ ನಿರ್ಮಿಸಲಾದ ಈ ಸ್ಟೇಡಿಯಂನ ವಿಶೇಷತೆ ಎಂದರೆ ಇದರ ಮೇಲ್ಛಾವಣಿಯನ್ನು ಕೇವಲ 20 ನಿಮಿಷದಲ್ಲಿ ತೆಗೆಯಬಹುದು. ಅಂದರೆ ಮಳೆ - ಬಿಸಿಲು ಇದ್ದಾಗ ಛಾವಣಿಯನ್ನು ಹಾಕಬಹುದು ಇಲ್ಲದಿದ್ದಾಗ ತೆಗೆಯಬಹುದು. ಈ ಸ್ಟೇಡಿಯಂನಲ್ಲಿ 60 ಸಾವಿರ ಜನರು ಒಮ್ಮೆಲೇ ಕುಳಿತು ಫುಟ್‌ಬಾಲ್ ಹಾಗೂ ಬೇಸ್‌ಬಾಲ್ ಆಟಗಳನ್ನು ವೀಕ್ಷಿಸಿಬಹುದು.

ಸ್ಕೈಡೊಂ ಸ್ಟೇಡಿಯಂ ನೋಡಿದ ನಂತರ ನಾವು ಟೊರಾಂಟೋ ವಿಶ್ವವಿದ್ಯಾಲಯಕ್ಕೆ ಹೋದೆವು. ಟೊರಾಂಟೋ ನಗರ ಜನರಿಂದ ಗಿಜಿಗುಡುತ್ತಲೇ ಇದ್ದರೂ ವಿಶ್ವವಿದ್ಯಾಲಯ ಪ್ರದೇಶ ಬಹಳ ಪ್ರಶಾಂತವಾಗಿದೆ. 1827 ರಲ್ಲಿ ಟೊರಾಂಟೋ ವಿಶ್ವವಿದ್ಯಾಲಯ ಸ್ಥಾಪಿತವಾಯಿತಂತೆ. ಟೊರಾಂಟೋದಲ್ಲಿ ಇನ್ನೂ ಎರಡು ವಿಶ್ವವಿದ್ಯಾಲಯಗಳು ಇವೆ ಎಂದು ಶೀಲಾ ಹೇಳಿದಳು.

ವಿಶ್ವವಿದ್ಯಾಲಯ ನೋಡಿದ ಕೂಡಲೇ ಶೇಖರ್ ನಮ್ಮನ್ನು ಟೊರಾಂಟೋದ ವಿಶೇಷತೆ ತೋರಿಸುತ್ತೇನೆಂದು ಗರಾರ್ಡ್ ಸ್ಟ್ರೀಟ್ ಎನ್ನುವ ಜಾಗಕ್ಕೆ ಕರೆದೊಯ್ದ. ಈ ಬೀದಿಯಲ್ಲಿ ನಾವು ನಡೆಯುತ್ತಾ ಹೋದಂತೆ ನಮಗೆ ಭಾರತದಲ್ಲೇ ಇದ್ದೇವೆ ಎನ್ನುವ ಭಾವನೆ ಉಂಟಾಯಿತು. ಪ್ರತಿಯೊಂದು ಅಂಗಡಿಯಲ್ಲೂ ಭಾರತೀಯ ವಸ್ತುಗಳೇ ಇವೆ ಎನಿಸಿತು. ಸೀರೆಗಳು, ಸೆಲ್ವಾರ್ ಸೂಟ್, ಪ್ಯಾಂಟ್ ಬಟ್ಟೆಗಳು, ಚಿನ್ನದ ಆಭರಣಗಳು, ಎಲೆಕ್ಟ್ರಾನಿಕ್ ವಸ್ತುಗಳು, ಊದುಬತ್ತಿ ಹೀಗೆ ಭಾರತೀಯರಿಗೆ ಪ್ರಿಯವಾದ ವಸ್ತುಗಳು ಮಾರಲ್ಪಡುತ್ತವೆ. ಈ ರಸ್ತೆಯಲ್ಲಿ ಹಲವಾರು ಭಾರತೀಯ ರೆಸ್ಟೋರೆಂಟ್‌ಗಳು ಇವೆ. ಪಂಜಾಬಿ ಊಟ ಹಲವಾರು ಉಪಹಾರಗೃಹಗಳಲ್ಲಿ ಲಭ್ಯ. ದಕ್ಷಿಣ ಭಾರತೀಯ ಉಪಹಾರಗೃಹಗಳೂ ಇವೆ (ಇವುಗಳಲ್ಲಿ ಹಲವಾರು ಸಿಂಹಳೀಯರದು). ಈ ರಸ್ತೆಯಲ್ಲಿ ನಾವು ಹಿಂದಿ ಭಾಷೆ ಮಾತನಾಡಿದರೆ ಸಾಕು ಎನಿಸಿತು. ನಾವು ಕೆಲವು ವಸ್ತುಗಳನ್ನು ಖರೀದಿ ಮಾಡಿ ಹೊರ ಬಂದಾಗ ಶೀಲಾ ನಿಮಗೆ ಹಿಂದಿ ಸಿನಿಮಾ ನೋಡಲು ಇಷ್ಟವೇ ಎಂದು ಕೇಳಿದಾಗ ಹೌದು ಎಂದೆವು.

ಟೊರಾಂಟೋ ನಗರದಲ್ಲಿ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರು ಇರುವುದರಿಂದ ಹಲವಾರು ಹಿಂದಿ ಸಿನಿಮಾಗಳು ಭಾರತದ ಜೊತೆ ಜೊತೆಯಲ್ಲಿಯೇ ಇಲ್ಲಿಯೂ ಬಿಡುಗಡೆ ಆಗುತ್ತವೆ. ಅದೇ ವಾರ ಬಿಡುಗಡೆ ಆಗಿದ್ದ ಹಿಂದಿ ಚಿತ್ರ ಒಂದನ್ನು ನೋಡಲು ಚಿತ್ರ ಮಂದಿರಕ್ಕೆ ಹೋದೆವು. ಸುಮಾರು 350 ಸೀಟಿನ ಚಿತ್ರಮಂದಿರದಲ್ಲಿ ಭಾರತೀಯ ಪ್ರೇಕ್ಷಕರು ತುಂಬಿ ತುಳುಕುತ್ತಿದ್ದರು. ಅವರೊಡನೆ ನಾವು ಸಿನಿಮಾ ನೋಡಿದಾಗ ನಮ್ಮ ಊರಿನಲ್ಲೇ ಇದ್ದೇವೆ ಎಂಬ ಭಾವನೆ ಉಂಟಾಯಿತು.

ಟೊರಾಂಟೋ ನಗರದಲ್ಲಿ ಕ್ರಿಕೆಟ್ ಪ್ರೇಮಿಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಭಾರತ ಪಾಕಿಸ್ತಾನ ಕ್ರಿಕೆಟ್ ಪಂದ್ಯಗಳು ಇಲ್ಲಿ ನಡೆಯುತ್ತವೆ ಎಂದು ಶೀಲ ಹೇಳಿದಳು ಟೊರಾಂಟೋ ನಗರದಲ್ಲಿರುವ ಇತರ ಆಕರ್ಷಣೆಗಳಾದ ಮೃಗಾಲಯ, ಕಲಾ ಗ್ಯಾಲರಿ ಇತ್ಯಾದಿಗಳನ್ನು ನೋಡಲು ಸಮಯ ಇಲ್ಲದ್ದರಿಂದ ಅಲ್ಲಿಂದ ಆಟಾವಾಗೆ ವಾಪಸ್ ಹೊರಟುಬಿಟ್ಟೆವು.

37

ಸಂಯುಕ್ತ ಅರಬ್ ಎಮಿರೇಟ್‌ಗಳು

ನಯಾಗಾರ ಜಲಪಾತ ಹಾಗೂ ಟೊರಾಂಟೋ ನೋಡುವುದರೊಂದಿಗೆ ನಮ್ಮ ಕೆನಡಾ ಪ್ರವಾಸ ಮುಗಿಯಿತು. ಲಂಡನ್‌ಗೆ ಹೋಗುವ ವಿಮಾನ ಏರಲು ಮಾಂಟ್ರಿಯಲ್ ವಿಮಾನ ನಿಲ್ದಾಣದಲ್ಲಿ ಶೇಖರ್, ಶೀಲಾ ಅವರಿಂದ ಬೀಳ್ಕೊಳ್ಳುವ ಸಮಯದಲ್ಲಿ ನನ್ನ ಪರ್ಸ್ ಕಳೆದು ಹೋಯಿತು. ಅದೃಷ್ಟವಶಾತ್ ಆ ಪರ್ಸ್‌ನಲ್ಲಿದ್ದ ನನ್ನ ಪಾಸ್‌ಪೋರ್ಟ್, ಹಣ, ವೀಸಾ ಇತ್ಯಾದಿಗಳನ್ನು ನಾನು ನನ್ನ ಕೋಟಿನ ಜೇಬಿನಲ್ಲಿ ಇಟ್ಟುಕೊಂಡು ವಿಮಾನ ನಿಲ್ದಾಣದ ಬೆಂಚ್ ಮೇಲೆ ಆ ದೊಡ್ಡ ಚರ್ಮದ ಪರ್ಸ್ ಇಟ್ಟಿದ್ದೆ. ಶೇಖರ್‌ನನ್ನು ಯಾರೋ ಗೆಳೆಯರು ಮಾತನಾಡಿಸಲು ಬಂದಾಗ ನಾನು ಅವರು ನಿಂತಿದ್ದ ಜಾಗಕ್ಕೆ ಹೋಗಿ ಅವರನ್ನು ಮಾತನಾಡಿಸಿ ಬರುವಷ್ಟರಲ್ಲಿ ಪರ್ಸ್ ಕಾಣೆಯಾಗಿತ್ತು. ಕೂಡಲೇ ನಾನು ಹಾಗೂ ಶೇಖರ್ ವಿಮಾನ ನಿಲ್ದಾಣದ ಪೊಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಟ್ಟೆವು. ಅವರು ಪರ್ಸ್ ಕಳುವಾದ ಬಗ್ಗೆ ತಲೆಗೇ ಹಚ್ಚಿಕೊಳ್ಳದೇ ಇದ್ದದ್ದು ಪೊಲೀಸ್ ಅಧಿಕಾರಿಯಾದ ನನಗೆ ಬೇಸರ ತರಿಸಿತು. ವಿದೇಶಗಳಲ್ಲಿ ಎಷ್ಟೋ ಜನ ಕಳ್ಳರು ಪರ್ಸ್‌ಗಳನ್ನು ಕದ್ದು ಅದರಲ್ಲಿರುವ ಹಣ, ಕ್ರೆಡಿಟ್ ಕಾರ್ಡ್, ಪಾಸ್ ಪೋರ್ಟ್, ಇತ್ಯಾದಿಗಳನ್ನು ಲಪಟಾಯಿಸಿ ಖಾಲಿ ಪರ್ಸ್‌ನ್ನು ಕಸದ ಬುಟ್ಟಿಯಲ್ಲಿ ಎಸೆದು ಬಿಡುತ್ತಾರೆ. ವಿಮಾನ ನಿಲ್ದಾಣದ ಹಲವಾರು ಕಸದ ಬುಟ್ಟಿಗಳನ್ನು ಹುಡುಕಿದರೂ ನನ್ನ ಪರ್ಸ್ ಸಿಕ್ಕಲಿಲ್ಲ. ಅಷ್ಟರಲ್ಲಿ ನಮ್ಮ ವಿಮಾನ ಹೊರಡುವ ಪ್ರಕಟಣೆ ಆಗಿದ್ದರಿಂದ ನಾವು ಹೊರಟು ಬಿಟ್ಟೆವು. ನಮ್ಮ ವಿದೇಶ ಪ್ರವಾಸದಲ್ಲಿ ಇದು ಎರಡನೇ ಕಹಿ ಅನುಭವ. (ಮೊದಲ ಅನುಭವ ಲಂಡನ್‌ನಲ್ಲಿ ಬಿಳಿಯನೊಬ್ಬನು ನಮ್ಮನ್ನು ನೋಡಿ ಉಗುಳಿದ್ದು).

ಲಂಡನ್‌ನಲ್ಲಿ ವಿಮಾನ ಬದಲಿಸಿ ಗಲ್ಫ್ ಏರ್ ವಿಮಾನವನ್ನು ಏರಿ ದುಬಾಯ್ ವಿಮಾನ ನಿಲ್ದಾಣದಲ್ಲಿ ಬಂದು ಇಳಿದಾಗ ರಾತ್ರಿ ಹತ್ತು ಗಂಟೆಯಾಗಿತ್ತು. ಬೇರೆ ದೇಶಗಳಂತೆ ದುಬಾಯ್‌ಗೆ ಹೋಗಲು ಪಾಸ್‌ಪೋರ್ಟ್‌ನ ಮೇಲೆಯೇ, ವೀಸಾ ಇರುವುದಿಲ್ಲ. ವಿಮಾನ ನಿಲ್ದಾಣದಲ್ಲಿ ಇಳಿದ ನಂತರ ವೀಸಾ ಕೊಡುವ ಜಾಗಕ್ಕೆ ಹೋಗಿ ನಮ್ಮ ನಮ್ಮ ವೀಸಾಗಳನ್ನು ಪಡೆದು ಇಮಿಗ್ರೇಷನ್ ಮುಗಿಸಿ ಹೊರಗಡೆ ಬರಬೇಕು. ಇಷ್ಟೆಲ್ಲಾ ಮಾಡಿ ಮುಗಿಸುವಷ್ಟರಲ್ಲಿ ಒಂದು ಗಂಟೆಯು ಕಾಲವಾಯಿತು. ದುಬಾಯ್ ವಿಮಾನ ನಿಲ್ದಾಣದ ಹೊರಗಡೆ ಬಂದಾಗ ನನ್ನ ಸೋದರತ್ತೆಯ

ಮಗಳು ದೀಪಿಕಾ ಗಂಡನೊಡನೆ ಕಾಯುತ್ತಾ ಇದ್ದಳು. ಅವರ ಕಾರಿನಲ್ಲಿ ಕುಳಿತು ಅವರ ಮನೆಗೆ ಹೊರಟೆವು.

ದೀಪಿಕಾ ವಾಸ ಮಾಡುವ ಅಬುಧಾಬಿ ಎನ್ನುವ ಊರು ಸಂಯುಕ್ತ ಅರಬ್ ಎಮಿರೇಟ್‌ಗಳು ಎಂದು ಕರೆಯುವ ಒಂದು ಎಮಿರೇಟ್. ಶಾರ್ಜಾ, ಇತ್ಯಾದಿಗಳು ಇತರ ಎಮಿರೇಟ್‌ಗಳು. ದುಬಾಯ್‌ನಿಂದ ಸುಮಾರು ಎರಡು ನೂರು ಕಿ.ಮೀ. ದೂರದಲ್ಲಿ ಅಬುಧಾಬಿ ಇದೆ. ಅತ್ಯಂತ ವಿಶಾಲವಾದ ಹೆದ್ದಾರಿಯಲ್ಲಿ ನಾವು ಪ್ರಯಾಣ ಮಾಡಿದೆವು. ನಾವು ಬೇರೆ ದೇಶದಲ್ಲಿ ನೋಡಿದ್ದ ಹೆದ್ದಾರಿಗಳಿಗಿಂತ ಇದು ಭಿನ್ನ. ಒಂದು ಕಡೆ ಮರಳುಗಾಡು, ಇನ್ನೊಂದು ಕಡೆ ಸಮುದ್ರ ಹಾಗೂ ಅಂಕುಡೊಂಕಿಲ್ಲದ ನೇರವಾದ ರಸ್ತೆಗಳು. ಎತ್ತ ದೃಷ್ಟಿ ಹಾಯಿಸಿದರೂ ಶೂನ್ಯವೇ ಇದೆ ಎನಿಸಿತು.

ಅಬುಧಾಬಿಗೆ ಹೋಗಿ ದೀಪಿಕಾ ಮನೆಯಲ್ಲಿ ವಿರಮಿಸಿ ಬೆಳಗ್ಗೆ ಎದ್ದಾಗ ಎಂಟು ಗಂಟೆ. ಹೊರಗಡೆ ಬಂದು ನೋಡಿದರೆ ಸೂರ್ಯ ಪ್ರಖರವಾಗಿ ಹೊಳೆಯುತ್ತಿದ್ದ. ಆಗಿನ್ನೂ ಅಕ್ಟೋಬರ್ ತಿಂಗಳಾಗಿದ್ದರೂ ಶೆಖೆ ಬಹಳವಾಗಿತ್ತು. ಪಾಶ್ಚಿಮಾತ್ಯ ದೇಶಗಳಲ್ಲಿ ಅಲ್ಲಿಯವರೆಗೆ ಸುತ್ತಾಡಿದ್ದ ನಮಗೆ ಅಬುಧಾಬಿ ತೀರಾ ವ್ಯತಿರಕ್ತ ಎಂದೆನಿಸಿತು.

ಮನೆಯಲ್ಲಿ ಉಪಾಹಾರ ಆದ ಕೂಡಲೇ ನಿಮ್ಮ ಊರಿನ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸು ಎಂದು ದೀಪಿಕಾಗೆ ಹೇಳಿದೆ. ಅವಳು ನಮ್ಮ ಊರಿಗೆ ಜನರು ಬರುವುದು ದುಡಿಯಲಿಕ್ಕೆ ಅಥವಾ ಶಾಪಿಂಗ್ ಮಾಡಲಿಕ್ಕೆ. ಇಲ್ಲಿ ನೋಡುವಂತಹ ಪ್ರದೇಶಗಳು ಹೆಚ್ಚು ಏನೂ ಇಲ್ಲ. ಬೇಕಾದರೆ ಸಮುದ್ರತೀರಕ್ಕೆ ಹೋಗಿ ಬರೋಣ ಬನ್ನಿ ಎಂದು ಸಮುದ್ರ ತೀರಕ್ಕೆ ಕರೆದೊಯ್ದಳು. ಅಂದು ಭಾನುವಾರವಾಗಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಜನ ಕಂಡುಬರದಿದ್ದರ ಬಗ್ಗೆ ನಾನು ಅಚ್ಚರಿ ವ್ಯಕ್ತ ಪಡಿಸಿದಾಗ ಆ ದೇಶದಲ್ಲಿ ಶುಕ್ರವಾರ ರಜಾ ದಿನ ಎಂದು ತಿಳಿದು ಬಂತು. ಸಮುದ್ರತೀರದಲ್ಲಿ ಸ್ವಲ್ಪ ಹೊತ್ತು ವಿಹರಿಸಿದ ನಂತರ ನಿಮ್ಮ ಊರನ್ನು ಒಂದು ಬಾರಿ ಪ್ರದಕ್ಷಿಣೆ ಮಾಡೋಣ ಎಂದೆ. ಸುಮಾರು ಒಂದು ಗಂಟೆಯ ಕಾಲ ಅವಳ ಕಾರಿನಲ್ಲೇ ಆ ಊರು ಸುತ್ತಾಡಿದೆವು. ಗಗನಚುಂಬಿ ಕಟ್ಟಡಗಳನ್ನು ಬಿಟ್ಟರೆ ಆ ಊರಿನಲ್ಲಿ ಹೆಚ್ಚು ಏನೂ ಇಲ್ಲ ಎನಿಸಿತು. ಅರಬ್ ದೇಶಗಳೇ ಹೀಗೆ. ಪೆಟ್ರೋಲಿಯಂ ಮಾರಿ ಬಂದ ದುಡ್ಡಿನಿಂದ ಭವ್ಯವಾದ ನವೀನ ಕಟ್ಟಡಗಳನ್ನು ಮಾತ್ರ ಕಟ್ಟಿಸಿಕೊಂಡಿದ್ದಾರೆ ಎಂದಳು ದೀಪಿಕಾ.

ಮಧ್ಯಾಹ್ನದ ಊಟ ಮುಗಿಸಿದ ನಂತರ ಕಾರಿನಲ್ಲಿ ದುಬಾಯ್‌ಗೆ ತೆರಳಿದೆವು. ಇತ್ತೀಚಿನ ದಿನಗಳಲ್ಲಿ ದುಬಾಯ್ ಶಾಪಿಂಗ್ ಸ್ವರ್ಗ ಎಂದು ಹೆಸರುವಾಸಿಯಾಗಿದೆ. ಶಾಪಿಂಗ್ ಮಾಡುವ ಮೊದಲು ದಾರಿಯಲ್ಲಿ ಇದ್ದ ದಕ್ಷಣಭಾರತದ ಉಪಾಹಾರಗೃಹ ಒಂದಕ್ಕೆ ಹೋಗಿ ಥಾಲಿ ಊಟ ಮಾಡಿದೆವು. ಸಂಯುಕ್ತ ಅರಬ್ ಎಮಿರೇಟ್‌ಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಕನ್ನಡಿಗರಿದ್ದಾರೆ. ಹೆಚ್ಚಿನ ಜನ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯವರು. ಸರಿಸುಮಾರು ಎಲ್ಲಾ ಹೋಟೆಲ್‌ಗಳಲ್ಲೂ ಕನ್ನಡ ಮಾತನಾಡಬಹುದು. ನಾವು ಊಟ ಮಾಡುತ್ತಾ ಇದ್ದ ಹೋಟೆಲ್‌ನ ಪರಿಚಾರಕನೊಬ್ಬ ಅಲ್ಲಿ ಕನ್ನಡ ದಿನಪತ್ರಿಕೆಗಳು ಸಿಗುತ್ತವೆ, ವಾರಪತ್ರಿಕೆಗಳೂ ಸಿಗುತ್ತವೆ ಎಂದ. ನನ್ನ ಹೆಸರು ಹೇಳಿದಾಗ ನೀವು ಬರೆದ ಲೇಖನಗಳನ್ನೂ ಓದಿದ್ದೇನೆಂದು ಅವನು ಹೇಳಿದಾಗ ನನಗೆ ಆನಂದವಾಯಿತು.

ಊಟ ಮುಗಿಸಿದ ನಂತರ ದುಬಾಯ್‌ನ ಸಮುದ್ರ ಪ್ರದೇಶಕ್ಕೆ ಹೋದೆವು. ನೀರಿನ ಬಳಿ ಇರುವ ಅಲ್ಲಿನ ಕಟ್ಟಡಗಳ ಸಾಲು ನೋಡಿದ ಕೂಡಲೇ ಸ್ವರ್ಣ ಮೊನ್ನೆ ಮೊನ್ನೆ ಟಿ.ವಿ. ಸೀರಿಯಲ್‌ನಲ್ಲಿ ಆ ಕಟ್ಟಡಗಳನ್ನು ನೋಡಿದ್ದರ ಬಗ್ಗೆ ಹೇಳಿದಳು. ಭಾರತದ ಹತ್ತು ಹಲವು ಸಿನಿಮಾಗಳು ಟಿ.ವಿ. ಸೀರಿಯಲ್‌ಗಳು ದುಬಾಯ್‌ನಲ್ಲೇ ಚಿತ್ರಿತವಾಗಿವೆ, ಹೀಗಾಗಿ ಇಲ್ಲಿಯ ಕಟ್ಟಡಗಳು ನಿಮಗೆ ಪರಿಚಿತವಾಗಿವೆ ಎಂದಳು ದೀಪಿಕಾ.

ದುಬಾಯ್‌ನಲ್ಲಿ ಕಡಿಮೆ ಎಂದರೂ 15 ಅತಿ ದೊಡ್ಡ ಶಾಪಿಂಗ್ ಮಾಲ್‌ಗಳು ಇವೆ. ನಾವು ಇದುವರೆಗೆ ಯೂರೋಪ್ ಹಾಗೂ ಅಮೇರಿಕಾಗಳಲ್ಲಿ ನೋಡಿದ ಮಾಲ್‌ಗಳಿಗಿಂತ ಇವು ದೊಡ್ಡವು ಎನಿಸಿತು. ಒಂದೊಂದು ಮಾಲ್‌ನಲ್ಲಿಯೂ 300 ರಿಂದ 400 ಅಂಗಡಿಗಳು ಇವೆ. ಪ್ರತಿಯೊಂದು ಮಾಲ್‌ನಲ್ಲಿಯೂ ಹವಾ ನಿಯಂತ್ರಿತ ವ್ಯವಸ್ಥೆ ಇದ್ದು ಹೊರಗಡೆ ಎಷ್ಟೇ ಸುಡುವ ಬಿಸಿಲು ಇದ್ದರೂ ತಂಪಾದ ವಾತಾವರಣದಲ್ಲಿ ವ್ಯಾಪಾರ ಮಾಡಬಹುದು. ಮಾಲ್‌ಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ವಿದೇಶಿಯರು ವ್ಯಾಪಾರಕ್ಕೆ ಬಂದಿದ್ದರು. ಆಶ್ಚರ್ಯವೆಂದರೆ ಹೆಚ್ಚಿನ ಸಂಖ್ಯೆಯಲ್ಲಿ ರಷ್ಯನ್ ಹೆಣ್ಣುಮಕ್ಕಳು ಕಂಡುಬಂದರು.

ಕೆಲವು ಸಣ್ಣ ಪುಟ್ಟ ವಸ್ತುಗಳನ್ನು ಖರೀದಿಸಿ ಮಾಲ್‌ನಿಂದ ಹೊರಗಡೆ ಬಂದಾಗ ದೀಪಿಕಾ ನಮ್ಮನ್ನು ಗೋಲ್ಡ್‌ಸೂಕ್ ಎಂದು ಕರೆಯುವ ಜಾಗಕ್ಕೆ ಕರೆದೊಯ್ದಳು. ಆ ರಸ್ತೆಯಲ್ಲಿ ಇರುವ ಎಲ್ಲಾ ಅಂಗಡಿಗಳೂ ಚಿನ್ನದ ಆಭರಣಗಳನ್ನು ಮಾರುತ್ತಿದ್ದವು. ನಮ್ಮ ದೇಶದ ಬೀಡಿ ಸಿಗರೇಟ್ ಅಂಗಡಿಗಳಲ್ಲಿ ಪಾನ್ ಮಸಾಲಾ ಪ್ಯಾಕೆಟ್‌ಗಳನ್ನು ಹೇಗೆ ಹೊರಗಡೆ ನೇತು ಹಾಕಿರುತ್ತಾರೋ ಅದೇ ರೀತಿ ಇಲ್ಲಿ ಚಿನ್ನದ ಸರಗಳು, ಬಳೆಗಳು ಇತ್ಯಾದಿಗಳನ್ನು ತೂಗು ಹಾಕಿರುತ್ತಾರೆ. ಎಲ್ಲಿ ನೋಡಿದರೂ ಚಿನ್ನವೇ ಚಿನ್ನ. ನಮ್ಮ ಭಾರತೀಯ ಮೂಲದ ಹಲವು ಅಂಗಡಿಗಳೂ ಇದ್ದವು. ಅಂಗಡಿಯೊಂದಕ್ಕೆ ನಾವು ಹೋದಾಗ ಅಲ್ಲಿನ ಸೇಲ್ಸ್‌ಮನ್ ನಮ್ಮೊಡನೆ ಕನ್ನಡದಲ್ಲೇ ಮಾತನಾಡಿದ. ಅವನು ನಮ್ಮವನೆಂದೇ ನಾವು ಒಂದು ಸಣ್ಣ ನೆಕ್‌ಲೆಸ್‌ನ್ನು ಅವನಿಂದ ಕೊಂಡೆವು. ಆತ ಹುಬ್ಬಳ್ಳಿಯಲ್ಲಿ ಕಲಿತದ್ದು ಎಂದು ತಿಳಿಸಿ ಈಗಾಗಲೇ ದುಬಾಯ್‌ಗೆ ಬಂದು ನೆಲೆಸಿ ಎರಡು ವರ್ಷವಾಯಿತು ಎಂದ. ಭಾರತಕ್ಕಿಂತ ಕಡಿಮೆ ಬೆಲೆಯಲ್ಲಿ ಚಿನ್ನ ಲಭ್ಯವಾಗುವುದರಿಂದ ಹಲವಾರು ಭಾರತೀಯರು ಈ ಮಾರುಕಟ್ಟೆಯಲ್ಲಿ ಚಿನ್ನ ಖರೀದಿಸುತ್ತಾರೆ.

ಚಿನ್ನದ ಮಾರುಕಟ್ಟೆಯಿಂದ ಸ್ವಲ್ಪ ಮುಂದೆ ಹೋದ ಕೂಡಲೇ ಮೂಗಿಗೆ ಘಮ ಘಮ ಪರಿಮಳ ಬಡಿಯಿತು. ಅರಬ್ ದೇಶಗಳು ಸಾಂಬಾರ ಪದಾರ್ಥಗಳಿಗೆ ಹೆಸರುವಾಸಿ. ಒಂದು ಮುಷ್ಟಿಯಷ್ಟು ಕೇಸರಿಯನ್ನು ಕೇವಲ 200 ರೂ.ಗಳ ಬೆಲೆಗೆ ನಾವು ಕೊಂಡದ್ದನ್ನು ಇನ್ನೂ ಮರೆತಿಲ್ಲ.

ಆ ದಿನ ರಾತ್ರಿ ದುಬಾಯ್‌ನಲ್ಲಿ ಇರುವ ಸಂಬಂಧಿಕರ ಮನೆಯಲ್ಲಿ ವಾಸ್ತವ್ಯ ಮಾಡಿದೆವು. ಮಾರನೇ ದಿನ ಬೆಳಗ್ಗೆ ಹತ್ತಿರದಲ್ಲೇ ಇರುವ ಶಾರ್ಜಾಗೆ ಹೋದೆವು. ಇದರ ಉದ್ದೇಶ ಅಲ್ಲಿನ ಹೆಸರಾಂತ ಕ್ರಿಕೆಟ್ ಮೈದಾನವನ್ನು ನೋಡಲು. ಭಾರತ ಪಾಕೀಸ್ತಾನಗಳ ನಡುವೆ ಶುಕ್ರವಾರದ ದಿನ ಒಂದು ದಿನದ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯದ ಫೈನಲ್ ಪಂದ್ಯ ಟೆಲಿವಿಷನ್‌ನಲ್ಲಿ ನೋಡಿ ನೋಡಿ ಈ ಮೈದಾನವನ್ನು ನೋಡಿದ ಕೂಡಲೇ ಯಾವುದೋ ನೋಡಿದಂತಹ ಜಾಗಕ್ಕೇ ಬಂದಂತೆ ಎನಿಸಿತು. ಆಶ್ಚರ್ಯವೆಂದರೆ ಆ ಮರುಭೂಮಿಯಲ್ಲಿಯೂ ಹಚ್ಚ ಹಸಿರು ಹುಲ್ಲು ಬೆಳೆಸಿ ಕ್ರಿಕೆಟ್ ಮೈದಾನ ಮಾಡಿದ್ದಾರೆ.

ಸಂಯುಕ್ತ ಅರಬ್ ಎಮಿರೇಟ್‌ಗಳಲ್ಲಿ ಪರ್ಯಟಕರಿಗಾಗಿಯೇ ಹಲವಾರು ವಿಶೇಷ ಉತ್ಸವಗಳನ್ನು ಏರ್ಪಡಿಸುತ್ತಾರೆ. ನಾವು ಅಲ್ಲಿ ಹೋದಾಗ ಯಾವುದೇ ಉತ್ಸವ ಇರಲಿಲ್ಲ. ಮರಳುಗಾಡಿಗೆ ಜೀಪಿನಲ್ಲಿ ಹೋಗಿ ಮರುಭೂಮಿಯಲ್ಲಿ ಆನಂದ ಸವಿಯುವಂತೆ ದೀಪಿಕಾ ಒತ್ತಾಯಿಸಿದರೂ ಸಮಯದ ಅಭಾವದಿಂದ ಅಲ್ಲಿಗೆ ಹೋಗದೆ ಅಂದೇ ರಾತ್ರಿ ದುಬೈನಿಂದ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ಗೆ ಹೊರಟೆವು.



ಕೇಪ್‌ಟೌನ್

ದುಬಾಯ್ ನಿಂದ ಆಗಸಕ್ಕೆ ಏರಿದ ನಮ್ಮ ವಿಮಾನ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ಇಳಿದಾಗ ಬೆಳಗಿನ ಏಳು ಗಂಟೆಯಾಗಿತ್ತು. ನಾವು ಜೋಹಾನ್ಸ್‌ಬರ್ಗ್‌ನಲ್ಲಿ ಕೇಪ್‌ಟೌನಿಗಾಗಿ ವಿಮಾನ ಬದಲಿಸಬೇಕಾಗಿತ್ತು. ನಮ್ಮ ಮುಂದಿನ ವಿಮಾನ ಹೊರಡಲು ಇನ್ನು ಎರಡು ಗಂಟೆಗಳು ಇದ್ದುದರಿಂದ ವಿಮಾನ ನಿಲ್ದಾಣದಲ್ಲೇ ಪ್ರಾತಃವಿಧಿಗಳನ್ನು ತೀರಿಸಿಕೊಂಡೆವು.

ನಾವು ಅಲ್ಲಿಯವರೆಗೆ ನೋಡಿದ ವಿದೇಶೀ ವಿಮಾನ ನಿಲ್ದಾಣಗಳಲ್ಲಿ ಜೋಹಾನ್ಸ್‌ಬರ್ಗ್ ವಿಮಾನ ನಿಲ್ದಾಣದಲ್ಲೇ ಜನದಟ್ಟಣೆ ಕಡಿಮೆ ಎನಿಸಿತು. ದಕ್ಷಿಣ ಆಫ್ರಿಕಾ ದೇಶವು ವರ್ಣ ಭೇದ ನೀತಿಯನ್ನು ಅನುಸರಿಸುತ್ತಿದ್ದುದರಿಂದ ಭಾರತವನ್ನೂ ಸೇರಿ ಹಲವಾರು ದೇಶಗಳು ದಕ್ಷಿಣ ಆಫ್ರಿಕಾಗೆ ಹೋಗಲು ಅನುಮತಿ ನೀಡುತ್ತಿರಲಿಲ್ಲ. ಆ ದೇಶದಲ್ಲಿ ನೆಲ್ಸನ್ ಮಂಡೇಲಾ ನೇತೃತ್ವದ ಸರ್ಕಾರ ಬಂದ ನಂತರ ವಿದೇಶೀ ಪ್ರವಾಸಿಗರು ಅಲ್ಲಿಗೆ ಹೋಗಲು ಅನುಕೂಲವಾಗಿದೆ. ಆದರೂ ದಕ್ಷಿಣ ಆಫ್ರಿಕಾಗೆ ಹೋಗಲು ಸುಲಭವಾಗಿ ವೀಸಾ ದೊರೆಯುವುದಿಲ್ಲ. ಸರ್ಕಾರಿ ಅಧಿಕಾರಿಯಾದ ನಾನೇ ವೀಸಾ ಪಡೆಯಲು ಸಾಕಷ್ಟು ಪ್ರಯಾಸ ಪಡಬೇಕಾಯಿತು.

ದಕ್ಷಿಣ ಆಫ್ರಿಕಾಗೆ ಹೋಗಲು ನನಗೆ ಇರಾದೆ ಏಕೆ ಇತ್ತೆಂದರೆ ಆ ದೇಶದಲ್ಲೇ ಗಾಂಧೀಜಿಯವರಿಗೆ ನಾಗರೀಕ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ಬಗ್ಗೆ ಆಸಕ್ತಿ ಚಿಗುರಿದ್ದು. ಬಿಳಿಯನೊಬ್ಬ ಗಾಂಧೀಜಿಯನ್ನು ರೈಲು ಡಬ್ಬಿಯಿಂದ ಹೊರಗೆ ತಳ್ಳಿದ ಪ್ರಸಂಗ ನನ್ನ ಮನಸ್ಸಿನಲ್ಲಿ ಇನ್ನೂ ಮಾಸದೇ ಉಳಿದಿದೆ. ಆಫ್ರಿಕಾ ಖಂಡಕ್ಕೆ ಕಪ್ಪು ಖಂಡ ಎಂದು ಕರೆಯುತ್ತಾ ಇದ್ದುದರಿಂದ ದಕ್ಷಿಣ ಆಫ್ರಿಕಾ ದೇಶ ಹೇಗಿದೆ ಎಂದು ನೋಡುವ ಉತ್ಸುಕತೆ ಇತ್ತು.

ಕೇಪ್‌ಟೌನ್‌ಗೆ ಹೋಗಲು ವಿಮಾನ ತಯಾರಾದಾಗ ನಾವುಗಳು ಆ ವಿಮಾನವನ್ನು ಏರಿ ಎರಡು ಗಂಟೆಗಳ ಪ್ರಯಾಣದ ನಂತರ ಕೇಪ್‌ಟೌನ್‌ನಲ್ಲಿ ಇಳಿದೆವು. ದಕ್ಷಿಣ ಆಫ್ರಿಕಾದ ಎರಡನೇ ರಾಜಧಾನಿ ಕೇಪ್‌ಟೌನಾದರೂ ಈ ದೇಶದಲ್ಲಿ ಜೋಹಾನ್ಸ್‌ಬರ್ಗ್ ನಗರವೇ ವಾಣಿಜ್ಯ ರಾಜಧಾನಿ. ರಾಷ್ಟ್ರದ ರಾಜಧಾನಿ ಪ್ರಿಟೋರಿಯಾ. ಕೇಪ್‌ಟೌನ್ ವಿಮಾನ ನಿಲ್ದಾಣದಲ್ಲಿ ಇಳಿವ ಕೂಡಲೇ ಈ ನಿಲ್ದಾಣ ಎಷ್ಟು ಚಿಕ್ಕದಾಗಿದೆ ಎಂಬ ಉದ್ಗಾರ ನನ್ನ ಬಾಯಿಂದ ಹೊರ ಬಂದಿತು. ನಮ್ಮ ಹುಬ್ಬಳ್ಳಿಯ ವಿಮಾನ ನಿಲ್ದಾಣಕ್ಕಿಂತ ಸ್ವಲ್ಪ ದೊಡ್ಡದಾಗಿದೆ ಕೇಪ್‌ಟೌನ್ ವಿಮಾನ ನಿಲ್ದಾಣ.

ನಿಲ್ದಾಣದಿಂದ ಹೊರಬಂದ ಕೂಡಲೇ ನಾವು ರೂಂ ಕಾದಿರಿಸಿದ್ದ ಹೋಟೆಲ್‌ನ ಟ್ಯಾಕ್ಸಿ ನಮಗಾಗಿ ಹೊರಗಡೆ ಕಾಯುತ್ತಾ ಇತ್ತು. ಆ ಟ್ಯಾಕ್ಸಿಯಲ್ಲಿ ಕುಳಿತು ನಗರದತ್ತ ಹೊರಟೆವು. ಕೇಪ್‌ಟೌನ್ ನಗರ ವಿಮಾನ ನಿಲ್ದಾಣದಿಂದ ಸಾಕಷ್ಟು ದೂರದಲ್ಲಿದೆ. ಕಿಟಕಿಯಿಂದ ಹೊರಗಿರುವ ದೃಶ್ಯವನ್ನು ನೋಡುತ್ತಾ ಇದ್ದಾಗ ಅಲ್ಲೊಂದು ಇಲ್ಲೊಂದರಂತೆ ಫ್ಯಾಕ್ಟರಿಗಳು ಕಂಡುಬಂದವು. ಕೇಪ್‌ಟೌನ್ ನಗರ ಪ್ರವೇಶ ಮಾಡುತ್ತಲೇ ನಮಗೆ ಮೊದಲು ಕಂಡು ಬಂದಿದ್ದು ಗ್ರೂಟ್ ಶೂರ್ ಆಸ್ಪತ್ರೆ. ನನಗೆ ತಟ್ಟನೆ ನೆನಪಾಯಿತು. ಅದೇ ಆಸ್ಪತ್ರೆಯಲ್ಲೇ ಡಾ॥ ಕ್ರಿಶ್ಚಿಯನ್ ಬರ್ನಾರ್ಡ್ ಅವರು ವಿಶ್ವದ ಪ್ರಪ್ರಥಮ ಹೃದಯ ಕಸಿ ಮಾಡಿದ್ದು ಎಂದು. ಆಸ್ಪತ್ರೆ ದಾಟಿ ಸುಮಾರು ಒಂದು ಕಿ.ಮೀ. ಹೋದ ಕೂಡಲೇ ನಾವು ಇಳಿದುಕೊಳ್ಳಬೇಕಾದ ಹೋಟೆಲ್ ಬಂದಿತು.

ರೂಂನಲ್ಲಿ ಲಗೇಜ್ ಇಟ್ಟು ಸ್ನಾನ ಮಾಡಿ ಹೋಟೆಲ್‌ನ ರಿಸೆಪ್ಷನ್ ಕೌಂಟರಿನಲ್ಲಿ ನಿಮ್ಮ ಊರಿನಲ್ಲಿ ನೋಡಬೇಕಾದ ಜಾಗಗಳ ಬಗ್ಗೆ ಮಾಹಿತಿ ಕೊಡಿ ಎಂದಾಗ ಅವರು ಹಲವಾರು ಪುಸ್ತಕಗಳನ್ನು ನನಗೆ ನೀಡಿದರು. ನಮ್ಮ ಹೋಟೆಲಿನ ಹತ್ತಿರದಲ್ಲೆ ಇರುವ ಪ್ರದೇಶವನ್ನು ನೋಡಲು ಹೊರಟೆವು.

ಕೇಪ್‌ಟೌನ್ ನಗರದಲ್ಲಿ ನೋಡಬೇಕಾದ ಹಲವಾರು ಜಾಗಗಳಲ್ಲಿ ಮುಖ್ಯವಾದದ್ದು ಗುಡ್ ಹೋಪ್ ಅರಮನೆ. 1666 ರಲ್ಲಿ ಡಚ್ಚರು ಈ ಅರಮನೆ ಕಟ್ಟಿ ಕೇಪ್ ಟೌನ್ ಅನ್ನು ತಮ್ಮ ಖಾಯಂ ತಂಗುದಾಣವನ್ನಾಗಿ ಮಾಡಿಕೊಂಡರು. ಸಧ್ಯಕ್ಕೆ ಈ ಅರಮನೆ ದಕ್ಷಿಣ ಆಫ್ರಿಕಾದ ಸೈನ್ಯದ ಮ್ಯೂಸಿಯಂ ಆಗಿದೆ. ಅರಮನೆಯ ಮುಂದುಗಡೆ ದೊಡ್ಡ ಪೆರೇಡ್ ಮೈದಾನವಿದ್ದು ಅದರ ಇನ್ನೊಂದು ಬದಿಯಲ್ಲಿ ನಗರ ಪಾಲಿಕೆಯ ಕಛೇರಿಗಳಿವೆ. ನಗರದ ಅತಿ ಹಳೆಯ ಪ್ರದೇಶವಾಗಿರುವ ಈ ಜಾಗವೇ ನಗರದ ಮಧ್ಯ ಭಾಗವಾಗಿದ್ದು ಇಲ್ಲಿ ಹಳೆಯ ಹಾಗೂ ನವೀನ ಕಟ್ಟಡಗಳು ಒಂದಕ್ಕೊಂದರ ಪಕ್ಕದಲ್ಲೇ ಹೆಗಲಿಗೆ ಹೆಗಲು ತಾಗಿಕೊಂಡು ನಿಂತಿವೆ.

ಒಂದು ಫರ್ಲಾಂಗ್ ಮುಂದೆ ಹೋದರೆ ಕಾಣಸಿಗುವುದೇ ಕಂಪನಿ ಗಾರ್ಡನ್. ತಮ್ಮ ಸಮುದ್ರ ಪಯಣಕ್ಕೆ ಬೇಕಾದ ತರಕಾರಿ ಹಾಗೂ ಹಣ್ಣುಗಳನ್ನು ಬೆಳೆಯಲು ಯೂರೋಪಿಯನ್ನರು ಪ್ರಾರಂಭಿಸಿದ ಈ ಉದ್ಯಾನವನದಲ್ಲಿ ಇಂದಿಗೂ ತಹರೇವಾರಿ ಗಿಡಮರಗಳನ್ನು ನೋಡಬಹುದು. ಉದ್ಯಾನದ ಸುತ್ತಮುತ್ತಲೂ ಹಲವಾರು ಪ್ರಮುಖ ಕಟ್ಟಡಗಳಿವೆ. ಮೊದಲಿಗೆ ಬರುವುದು "ಕೆಥೆಡ್ರೆಲ್" ದಕ್ಷಿಣ ಆಫ್ರಿಕಾದ ಮೊದಲ ಚರ್ಚು. ಅದರ ಪಕ್ಕದಲ್ಲಿರುವುದೇ ಪಾರ್ಲಿಮೆಂಟ್ ಭವನ. ಅದರ ಬದಿಯಲ್ಲಿ ರಾಷ್ಟ್ರಾಧ್ಯಕ್ಷರ ನಿವಾಸ. ನೆಲ್ಸನ್ ಮಂಡೇಲಾ ಈ ನಿವಾಸವನ್ನು ಅಧಿಕೃತ ಕಾರ್ಯಕ್ರಮಗಳಿಗಾಗಿ ಮಾತ್ರ ಉಪಯೋಗಿಸುತ್ತಲಿದ್ದು ಅವರು ತಮ್ಮ ಸ್ವಂತ ನಿವಾಸದಲ್ಲಿ ವಾಸಿಸುತ್ತಾರಂತೆ. ಆಶ್ಚರ್ಯವೆಂದರೆ ಅಧ್ಯಕ್ಷರ ನಿವಾಸ ಕಾಯಲು ಒಬ್ಬನೇ ಒಬ್ಬ ಪೊಲೀಸನೂ ಇರಲಿಲ್ಲ!

ಅಧ್ಯಕ್ಷರ ಭವನದ ಬದಿಯಲ್ಲಿ ದಕ್ಷಿಣ ಆಫ್ರಿಕಾದ ನ್ಯಾಷನಲ್ ಕಲಾ ಗ್ಯಾಲರಿ ಇದೆ. ಅದರ ಇನ್ನೊಂದು ಪಕ್ಕ ರಾಷ್ಟ್ರೀಯ ಸಂಗ್ರಹಾಲಯ ಇದೆ. ಕಂಪನಿ ಗಾರ್ಡನ್ ಸುತ್ತಮುತ್ತಲೂ ಇರುವುದು ಈ ನಗರದ ವ್ಯಾಪಾರೀ ಕೇಂದ್ರ. ಕಛೇರಿಗಳಲ್ಲದೆ ಈ ಪ್ರದೇಶದಲ್ಲಿರುವ ಹಲವಾರು ಅಂಗಡಿಗಳು ಬಟ್ಟೆ ಬರೆಯಿಂದ ಚಿನ್ನ ವಜ್ರಗಳವರೆಗೆ ತರಹೇವಾರಿ ವಸ್ತುಗಳ ಮಾರಾಟ ನಡೆಸುತ್ತವೆ. ಇವೆಲ್ಲವನ್ನೂ ನೋಡುವಷ್ಟರಲ್ಲಿ ಕತ್ತಲಾಯಿತು.

ಕೇಪ್‌ಟೌನ್‌ನಲ್ಲಿ ನೋಡಬೇಕಾದ ಅತಿ ಮುಖ್ಯ ಜಾಗ ಎಂದರೆ ಟೇಬಲ್ ಪರ್ವತ. 1100 ಮೀಟರ್ ಎತ್ತರದಲ್ಲಿ ಕೇಪ್‌ಟೌನ್ ನಗರದ ಕಾವಲುಗಾರನಂತೆ ನಿಂತಿರುವ ಈ ಪರ್ವತವನ್ನು ಯಾವ ಪರ್ಯಟಕನೂ ನೋಡಲು ಮರೆಯುವುದಿಲ್ಲ. ಹೀಗಾಗಿ ಮಾರನೇ ದಿನ ಬೆಳಗ್ಗೆ ಎದ್ದ ಕೂಡಲೇ ನಾವು ಈ ಪರ್ವತ ದರ್ಶನ ಮಾಡಲು ಹೊರಟೆವು. ಪರ್ವತದ ಅರ್ಧ ಭಾಗದವರೆಗೆ ಕಾರಿನಲ್ಲಿ ಹೋಗಬಹುದು. ಪರ್ವತದ ತುದಿಯನ್ನು ಮುಟ್ಟಲು ಕೇಬಲ್ ಕಾರ್ ಅಳವಡಿಸಿದ್ದಾರೆ. ಈ ಕೇಬಲ್ ಕಾರಿನಲ್ಲಿ ಟಿಕೇಟ್ ಖರೀದಿಸಿ ಪರ್ವತದ ಮೇಲ್ಭಾಗ ಏರಿದಾಗ ಆದ ಅನುಭವವನ್ನು ವರ್ಣಿಸಲು ಸಾಧ್ಯವಿಲ್ಲ. ಪರ್ವತದ ಕೆಳ ಭಾಗದಲ್ಲಿ 25 ಲಕ್ಷ ಜನ ಸಂಖ್ಯೆಯ ಕೇಪ್‌ಟೌನ್ ನಗರದ ವಿಹಂಗಮ ನೋಟ ಒಂದು ಕಡೆ ಕಂಡರೆ, ಹಚ್ಚ ಹಸುರು ಬಣ್ಣದಿಂದ ಕಂಗೊಳಿಸುವ ವಿಶಾಲವಾದ ಅಟ್ಲಾಂಟಿಕ್ ಸಾಗರ ಇನ್ನೊಂದೆಡೆ ಕಾಣಬರುತ್ತದೆ. ಈ ಪರ್ವತದ ಹಲವಾರು ಜಾಗಗಳಿಗೆ ಚಾರಣಿಗರು ಹೋಗಲು ಟ್ರೆಕ್ಕಿಂಗ್ ರೂಟ್‌ಗಳನ್ನು ಮಾಡಲಾಗಿದೆ.

ಟೇಬಲ್ ಪರ್ವತ ನೋಡಿದ ಮೇಲೆ ಗುಡ್‌ಹೋಪ್ ಭೂಶಿರಕ್ಕೆ ಹೋದೆವು. ಭಾರತವನ್ನು ಹುಡುಕಲು ಹೊರಟ ಯೂರೋಪಿಯನ್ ನಾವಿಕರು ಸಮುದ್ರ ಪ್ರಯಾಣದಿಂದ ಬಳಲಿದಾಗ ಅವರಿಗೆ ದಕ್ಷಿಣ ಆಫ್ರಿಕಾದ ತುಟ್ಟ ತುದಿಯಲ್ಲಿರುವ ಗುಡ್‌ಹೋಪ್ ಭೂಶಿರ ವಿಶ್ರಾಂತಿ ತಾಣವಾಯಿತು. 15ನೇ ಶತಮಾನದಲ್ಲಿ ಯೂರೋಪಿಯನ್ ನಾವಿಕ ಗುಡ್‌ಹೋಪ್ ಭೂಶಿರವನ್ನು ತಂಗುದಾಣವನ್ನಾಗಿ ಮಾಡಿಕೊಂಡು ದಕ್ಷಿಣ ಆಫ್ರಿಕಾದಲ್ಲಿ ಬಂದು ಇಳಿದಾಗ ಕೇಪ್‌ಟೌನ್‌ನಲ್ಲಿ ಎರಡು ರೀತಿಯ ಆದಿವಾಸಿ ಜನಾಂಗಗಳಿದ್ದವು. ಖೋಯ್ - ಖೋಯ್ ಹಾಗೂ ಸ್ಯಾನ್ ಎಂದು ಕರೆಯುತ್ತಿದ್ದ ಈ ಆದಿವಾಸಿಗಳನ್ನು ಯೂರೋಪಿನ್ನರು ಓಡಿಸಿಬಿಟ್ಟರು. ಆ ನಂತರ ಏಷ್ಯಾ ಖಂಡದಿಂದ ಜೀತದ ಆಳುಗಳನ್ನು ಕರೆತಂದು ಕಾಲ ಕ್ರಮೇಣ ದಕ್ಷಿಣ ಆಫ್ರಿಕಾವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡುಬಿಟ್ಟರು. ಪರದೇಶದಿಂದ ಬಂದಂತಹ ಜೀತದ ಆಳುಗಳು ಬೇರೆ ಬೇರೆಯಾದ ಧರ್ಮಗಳಿಗೆ ಸೇರಿದವರಾಗಿದ್ದರು. ಹೀಗಾಗಿ ಇಂದಿಗೂ ದಕ್ಷಿಣ ಆಫ್ರಿಕಾದಲ್ಲಿ ಬಿಳಿ ಕ್ರಿಶ್ಚಿಯನ್ನರಲ್ಲದೆ, ಭಾರತೀಯ ಮೂಲದವರು (ಹೆಚ್ಚಿನ ಜನ ಗುಜರಾತಿಗಳು) ಮುಸಲ್ಮಾನರು, ಯಹೂದಿಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ.

ಸುಮಾರು 55 ಕಿ.ಮೀ. ಪ್ರಯಾಣದ ನಂತರ ಗುಡ್‌ಹೋಪ್ ಭೂಶಿರ ತಲುಪಿದೆವು. ಅಲ್ಲಿಗೆ ಹೋದಾಗ ಕನ್ಯಾಕುಮಾರಿಗೆ ಹೋದ ಅನುಭವವೇ ಆಯಿತು. ಭೂಶಿರದ ಮೇಲುಗಡೆ ಇರುವ ಲೈಟ್‌ಹೌಸ್ ಬೆಟ್ಟದಿಂದ ಸಮುದ್ರದ ವಿಹಂಗಮ ನೋಟ ನೋಡಬಹುದು. ಎಲ್ಲರೂ ಹೇಳುವಂತೆ ಗುಡ್‌ಹೋಪ್ ಭೂಶಿರದಲ್ಲಿ ಅಟ್ಲಾಂಟಿಕ್ ಹಾಗೂ ಹಿಂದೂ ಮಹಾಸಾಗರಗಳ ಮಿಲನವಿಲ್ಲ! ಇಲ್ಲಿಂದ ಕೇವಲ ಅಟ್ಲಾಂಟಿಕ್ ಸಾಗರವನ್ನು ಮಾತ್ರ ನೋಡಬಹುದು. ಎರಡೂ ಸಮುದ್ರಗಳು ಸೇರುವ ಜಾಗ ಬೇರೆಡೆ ಇದೆ ಎನ್ನುತ್ತಾರೆ ಸ್ಥಳೀಯರು. ಗುಡ್‌ಹೋಪ್ ಮುಂದೆ ನಿಂತು ಫೋಟೋ ತೆಗೆಸಿಕೊಳ್ಳುವಾಗ ಹಲವಾರು ಉಷ್ಟ್ರ ಪಕ್ಷಿಗಳು ಕಂಡವು.

ಗುಡ್‌ಹೋಪ್ ಭೂಶಿರ ಪ್ರದೇಶವನ್ನು ರಾಷ್ಟ್ರೀಯ ಉದ್ಯಾವನವನ್ನಾಗಿ ಪರಿವರ್ತಿಸಲಾಗಿದೆ. ಇಲ್ಲಿ ಸಾವಿರಾರು ಉಷ್ಟ್ರಪಕ್ಷಿ (Ostrich) ಗಳನ್ನು ನೋಡಬಹುದು. ಉದ್ದ ಕತ್ತಿನ ಈ ಪಕ್ಷಿಗಳು ಮರಿಗಳೊಂದಿಗೆ ಬಳಕುತ್ತಾ ನಡೆಯುವುದನ್ನು ನೋಡುವುದೇ ಚಂದ. ದಕ್ಷಿಣ ಆಫ್ರಿಕಾದಲ್ಲಿ ಉಷ್ಟ್ರಪಕ್ಷಿಗಳನ್ನು ಬೆಳೆಸುವ ಹಲವಾರು ಫಾರ್ಮ್‌ಗಳಿವೆಯಂತೆ. ಈ ಫಾರ್ಮ್‌ಗಳಲ್ಲಿ ಮಕ್ಕಳು

ಉಷ್ಟ್ರಪಕ್ಷಿಗಳ ಸವಾರಿ ಸಹಾ ಮಾಡಬಹುದು! ಈ ಪ್ರದೇಶದಲ್ಲಿ ಹಲವಾರು ಕೋತಿಗಳಿವೆ. ಬಬೂನ್ ಎಂದು ಕರೆಯಲಾಗುವ ಈ ಕೋತಿಗಳು ನಮ್ಮ ಕೈಯಲ್ಲಿ ಆಹಾರ ಕಂಡರೆ ನಮ್ಮ ಬಳಿ ಬಂದು ಹೆದರಿಸಿ ಆಹಾರ ಕಸಿದುಕೊಳ್ಳುತ್ತವೆ.

ಹೋಟೆಲ್ಲಿಗೆ ವಾಪಸ್ಸಾದಾಗ ಅಲ್ಲಿನ ಒಂದು ರೆಸ್ಟೋರೆಂಟ್‌ನಲ್ಲಿ ವಿಶೇಷ ಪಾರ್ಟಿ ಏರ್ಪಾಟು ಮಾಡಿದೆ ಎಂದು ತಿಳಿಸಿ ನಮಗೆ ಅಲ್ಲಿಗೆ ಹೋಗಲು ಆಹ್ವಾನವಿತ್ತರು. ನಾವು ಡೈನಿಂಗ್ ಹಾಲಿಗೆ ಹೋಗಲು ಲಿಫ್ಟ್ ಬಳಿ ಬಂದಾಗ ಇಬ್ಬರು ಯುವತಿಯರು ಒಂದು ಚಿರತೆಯನ್ನು ಹಿಡಿದುಕೊಂಡು ಲಿಫ್ಟ್‌ನ ಬಾಗಿಲ ಮುಂದೆ ಇದ್ದರು. ಹೋಟೆಲ್‌ನಲ್ಲಿ ಚಿರತೆ ನೋಡಿ ನಮಗೆ ಬಹಳ ಆಶ್ಚರ್ಯವಾಯಿತು. ನಾವು ಭೋಜನ ಶಾಲೆಗೆ ಹೋದಾಗ ಆ ಯುವತಿಯರು ಚಿರತೆಯನ್ನು ಒಂದು ಟೇಬಲ್ ಮೇಲೆ ಕೂರಿಸಿ ಅಲ್ಲಿದ್ದ ಜನರಿಗೆ ಅದನ್ನು ಮುಟ್ಟಲು ಹೇಳುತ್ತಿದ್ದರು. ಜನರು ಅದನ್ನು ಮುಟ್ಟುತ್ತಿದ್ದಂತೆ ಇಬ್ಬರು ಛಾಯಾಗ್ರಾಹಕರು ಫೋಟೋ ತೆಗೆಯುತ್ತಿದ್ದರು. ನಾನೂ ಧೈರ್ಯ ಮಾಡಿ ಮಲಗಿದ್ದ ಚಿರತೆಯನ್ನು ಮುಟ್ಟಿ ಫೋಟೋ ತೆಗೆಸಿಕೊಂಡೆ. ಭೋಜನ ಮುಗಿಯುವ ವೇಳೆಗೆ ತೆಗಿದಿದ್ದ ಫೋಟೋಗಳನ್ನು ಅಲ್ಲೇ ಮಾರಾಟ ಮಾಡುತ್ತಿದ್ದರು. ಫೋಟೋ ಮಾರಾಟದಿಂದಲೇ ಸಾಕಷ್ಟು ಹಣ ಗಳಿಸಿದರು. ಉದರ ನಿಮಿತ್ತಂ ಬಹುಕೃತ ವೇಷಂ ಎಂದುಕೊಂಡು ಕೋಣೆಗೆ ವಾಪಸ್ ಆಗಿ ಪವಡಿಸಿದೆವು.

39

ಕೇಪ್ ಟೌನಿನ ಮರೆಯಲಾಗದ ಅನುಭವಗಳು

ಮಾರನೇ ದಿನ ಬೆಳಗ್ಗೆ ಎದ್ದಾಗ ಇನ್ನೂ ಮಸುಕಾಗಿತ್ತು. ನಾನು ನನ್ನ ಗಡಿಯಾರವನ್ನು ಕೇಪ್‌ಟೌನ್ ವೇಳೆಗೆ ಹೊಂದಿಸಿರಲಿಲ್ಲ ಎಂದು ಕಾಣುತ್ತದೆ. ಗಡಿಯಾರವನ್ನು ನೋಡಿದಾಗ ಐದು ಗಂಟೆ ತೋರಿಸುತ್ತಿತ್ತು. ಬೇಗ ಬೇಗನೆ ಎದ್ದು ಜಾಗಿಂಗ್ ಶೂ ಧರಿಸಿ ವಾಕಿಂಗ್ ಮಾಡಲು ಹೊರಟುಬಿಟ್ಟೆ. ಸಮುದ್ರ ಪ್ರದೇಶದಲ್ಲಿ ವಾಕಿಂಗ್ ಮಾಡುವುದು ನನಗೆ ಬಹಳ ಇಷ್ಟವಾದ್ದರಿಂದ ಅತ್ತ ಹೆಜ್ಜೆ ಹಾಕಿದೆ. ಸಮುದ್ರತೀರದ ಪಕ್ಕದ ರಸ್ತೆಯಲ್ಲಿ ನಡೆಯುತ್ತಿದ್ದಾಗ ಏನಪ್ಪಾ ಇಷ್ಟು ಹೊತ್ತಾದರೂ ಜನಗಳ ಸುಳಿವೇ ಇಲ್ಲ ಎಂದುಕೊಂಡೆ. ಆ ಊರಿನ ಜನ ವಾಕಿಂಗ್ ಮಾಡುವುದಿಲ್ಲವೇನೋ ಎಂದುಕೊಂಡು ಮುಖ್ಯ ರಸ್ತೆಯಿಂದ ಸಮುದ್ರತೀರಕ್ಕೆ ಹೋಗಿ ಸಮುದ್ರತೀರದಲ್ಲಿ ನಡೆಯುತ್ತಾ ಹೊರಟೆ. ಸ್ವಲ್ಪ ದೂರ ನಡೆದಾಗ ಎದುರುಗಡೆ ಮೂರು ಜನ ಧಡೂತಿ ಆಸಾಮಿಗಳು ಮರವೊಂದರ ಕೆಳಗೆ ನಿಂತು ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದಾರೆ ಎನಿಸಿತು. ನನ್ನ ಪೊಲೀಸ್ ತರಬೇತಿ ಎದುರಿಗೆ ಕಾಣುತ್ತಿರುವವರು ನನ್ನನ್ನು ಹಲ್ಲೆ ಮಾಡಲು ನಿಂತಿದ್ದಾರೆ ಎಂದು ಊಹಿಸಲು ಪ್ರೇರೇಪಿಸಿತು.

ಈ ರೀತಿ ಅನಿಸಿಕೆ ಬರಲು ಕಾರಣವೂ ಇಲ್ಲದೆ ಇರಲಿಲ್ಲ. ದಕ್ಷಿಣ ಆಫ್ರಿಕಾ ದೇಶದಲ್ಲಿ ಒಂದು ಸೈಕಲ್ ಕದಿಯಬೇಕಾದರೂ ಸೈಕಲ್ ಸವಾರನನ್ನೇ ಕೊಲೆ ಮಾಡಿ ಬಿಡುತ್ತಾರಂತೆ. ಈ ದೇಶದಲ್ಲಿ ಬಡತನ ಹಾಗೂ ನಿರುದ್ಯೋಗ ತುಂಬಾ ಇರುವುದರಿಂದ ಅಪರಾಧಗಳು ತುಂಬಾ ಜಾಸ್ತಿ ಎಂದು ತಿಳಿದಿತ್ತು. ನಮ್ಮ ದೇಶದಂತೆಯೇ ಕೇಪ್‌ಟೌನಿನಲ್ಲೂ ಬೀದಿಯ ತೊಟ್ಟಿಗಳಿಂದ ಆಹಾರ ಪದಾರ್ಥಗಳನ್ನು ಆಯ್ದುಕೊಳ್ಳಲು ನಾಯಿಗಳು ಹಾಗೂ ಇತರ ಪ್ರಾಣಿಗಳೊಡನೆ ಸೆಣಸಾಡಿ ಆಹಾರ ಸಿಕ್ಕ ಕೂಡಲೇ ಗಬ ಗಬ ತಿನ್ನುತ್ತಿದ್ದ ಕರಿಯ ಜನರನ್ನು ನಾನು ಹಿಂದಿನ ದಿನವೇ ನೋಡಿದ್ದೆ. ರಾತ್ರಿಯಾದ ಕೂಡಲೇ ಕಂಠಪೂರ್ತಿ ಕುಡಿದು ಸಾರ್ವಜನಿಕ ಸ್ಥಳಗಳಲ್ಲಿ ಎಚ್ಚರ ತಪ್ಪಿ ಬಿದ್ದಿರುತ್ತಿದ್ದ ಜನರನ್ನೂ ನೋಡಿದ್ದೆ. ಹೀಗಾಗಿ ನನ್ನ ಎದುರಿಗೆ ಕಂಡವರು ಕಳ್ಳರೇ ಎಂದು ನನಗೆ ಖಾತ್ರಿಯಾಗಿತ್ತು. ಕೂಡಲೇ ನಾನು ಸಮುದ್ರತೀರದ ಪಕ್ಕದಲ್ಲಿರುವ ರಸ್ತೆಯತ್ತ ಬೇಗ ಬೇಗ ಹೆಜ್ಜೆ ಹಾಕಿದೆ. ಆ ಮೂರೂ ಜನ ಬೇರೆ ಬೇರೆಯಾಗಿ ಬೇರೆ ಬೇರೆ ದಿಕ್ಕುಗಳಿಂದ ನನ್ನ ಹಿಂದೆಯೇ ಬರತೊಡಗಿದರು. ಅವರು ಖಂಡಿತಾ ನನ್ನನ್ನು ಹಲ್ಲೆ ಮಾಡುತ್ತಾರೆ ಎಂದು ಖಾತ್ರಿಯಾದಾಗ ನಾನು ವೇಗವಾಗಿ ಓಡಲು ಪ್ರಾರಂಭಿಸಿದೆ. ಅವರೂ ಓಡುತ್ತಾ ಹಿಂಬಾಲಿಸಿದರು. ಅಷ್ಟರಲ್ಲಿ ನಾನು ಒಂದು ರಸ್ತೆ ದಾಟಿ ಇನ್ನೊಂದು ಮುಖ್ಯ ರಸ್ತೆಗೆ ಬಂದಾಗ ಎದುರುಗಡೆ ಕೆಂಪು ದೀಪ ಇದ್ದ

ಪೊಲೀಸ್ ಕಾರ್ ಕಂಡಿತು. ನಾನು ಜೋರಾಗಿ ಕೈ ಬೀಸಿ ಪೊಲೀಸ್ ಕಾರನ್ನು ನಿಲ್ಲಿಸಿದೆ. ನನ್ನ ಎದುರು ಪೊಲೀಸ್ ಕಾರ್ ನಿಂತ ಕೂಡಲೇ ನನ್ನ ಹಿಂದೆ ಬರುತ್ತಿದ್ದ ಮೂವರು ಕರಿಯರು ಕಾಲಿಗೆ ಬುದ್ಧಿ ಹೇಳಿದರು. ಪೊಲೀಸ್ ಕಾರಿನಲ್ಲಿ ಇದ್ದ ಅಧಿಕಾರಿಗೆ ಇಂಗ್ಲೀಷ್‌ನಲ್ಲಿ ನಡೆದ ಘಟನೆ ವಿವರಿಸಿದಾಗ ಆತ ನಾನೇ ಅಪರಾಧಿ ಎನ್ನುವಂತೆ ನನ್ನನ್ನು ಶಿರದಿಂದ ಪಾದದವರೆಗೆ ದುರುಗುಟ್ಟಿಕೊಂಡು ನೋಡಿದ. ಆಮೇಲೆ ಏನೂ ಮಾತನಾಡದೇ ಪೊಲೀಸ್ ಕಾರನ್ನು ವೇಗವಾಗಿ ನಡೆಸಿಕೊಂಡು ಹೊರಟೇ ಬಿಟ್ಟ!

ಈ ಘಟನೆಯಿಂದ ವಿಚಲಿತನಾದ ನಾನು ಬಡಬಡನೆ ಹೋಟೆಲ್‌ನತ್ತ ಹೆಜ್ಜೆ ಹಾಕಿದೆ. ರಿಸೆಪ್ಷನ್ ಕೌಂಟರ್ ಬಳಿ ಬಂದಾಗ ಆ ಕೌಂಟರ್‌ನಲ್ಲಿದ್ದ ವ್ಯಕ್ತಿಯೂ ನನ್ನನ್ನು ವಿಚಿತ್ರವಾಗಿ ನೋಡಿದ. ಬೆಳಗಿನ ಕಾಫೀ ಸಿಗಬಹುದೇ ಎಂದು ಕೇಳಿದೆ. ಇನ್ನೂ ಬೆಳಗ್ಗೆ ಆಗಿಲ್ಲವಲ್ಲಾ ಎಂದ. ಈಗ ವೇಳೆ ಎಷ್ಟು ಎಂದು ಕೇಳಿದಾಗ ಬೆಳಗಿನ ನಾಲ್ಕು ಘಂಟೆ ಆಗಲು ಇನ್ನೂ ಹತ್ತು ನಿಮಿಷ ಇದೆ ಎಂದ. ಹಾಗಾದರೆ ನಾನು ರಾತ್ರಿ 2-30 ಗಂಟೆಗೆ ವಾಕಿಂಗ್ ಮಾಡಲು ಹೋಗಿದ್ದೇನಲ್ಲಾ ಎಂದುಕೊಂಡು ನನಗೇ ನಗು ಬಂತು. ಕೂಡಲೇ ನನ್ನ ಗಡಿಯಾರವನ್ನು ದಕ್ಷಿಣ ಆಫ್ರಿಕಾದ ವೇಳೆಗೆ ಬದಲಿಸಿಕೊಂಡೆ. ನನ್ನ ಹೆಂಡತಿಗೆ ಆದ ಘಟನೆ ಹೇಳಿದಾಗ ಆಕೆ ನಾವು ದಕ್ಷಿಣ ಆಫ್ರಿಕಾದಲ್ಲಿ ಇರುವವರೆಗೂ ಬೆಳಗಿನ ವಾಕಿಂಗ್ ಮಾಡಬಾರದೆಂದು ನಿರ್ಬಂಧ ಹೇರಿದಳು.

ಸ್ನಾನ ಉಪಾಹಾರವಾದ ನಂತರ ನಾವುಗಳು ಕೇಪ್‌ಟೌನ್‌ನ ಹೆಸರಾಂತ ವಾಟರ್ ಫ್ರಂಟ್ ಪ್ರದೇಶವನ್ನು ನೋಡ ಹೊರಟೆವು. ಯೂರೋಪಿಯನ್ನರು ಉಪಯೋಗಿಸುತ್ತಿದ್ದ ಹಳೆಯ ಬಂದರು ಪ್ರದೇಶವನ್ನು ಈಗ ಮನೋರಂಜನಾ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ. ಬಂದರಿನ ಹಳೆಯ ಉಗ್ರಾಣಗಳನ್ನು ನವೀನ ಮಾರಾಟ ಮಳಿಗೆ ಸಂಕೀರ್ಣ (ಮಾಲ್) ಗಳನ್ನಾಗಿ ಮಾಡಲಾಗಿದೆ. ಯೂರೋಪಿನಲ್ಲಿರುವಂತಹ ಹಲವಾರು ಪ್ರಸಿದ್ಧ ತಯಾರಿಕಾ ಕಂಪನಿಗಳ ಶೋರೂಮುಗಳು ಈ ಮಾಲ್‌ಗಳಲ್ಲಿವೆ. ಇವುಗಳ ಒಳಗೆ ಹೋದರೆ ನಾವು ಅಮೇರಿಕಾ ಅಥವಾ ಯೂರೋಪಿನಲ್ಲಿರುವ ಅನುಭವವೇ ಆಗುತ್ತದೆ! ಇಲ್ಲಿ ಇರುವ ಅಕ್ವೇರಿಯಂನಲ್ಲಿ ಈ ಪ್ರದೇಶದ ಕಡಲಲ್ಲಿ ಸಿಗುವಂತಹ ಎಲ್ಲ ಪ್ರಾಣಿಗಳನ್ನೂ ನೋಡಬಹುದು.

ವಾಟರ್ ಫ್ರಂಟ್‌ನಲ್ಲಿ ನಿಂತರೆ ಮುಂದೆ ಒಂದು ಸಣ್ಣ ದ್ವೀಪ ಕಾಣುತ್ತದೆ. ಭೂಮಿಯಿಂದ ಮೂರು ಕಿಲೋಮೀಟರ್ ದೂರದಲ್ಲಿದೆ. ಇದೇ ದ್ವೀಪದ ಜೈಲಿನಲ್ಲಿ ಬಿಳಿಯರು ನೆಲ್ಸನ್ ಮಂಡೇಲಾರನ್ನು ಇಪ್ಪತ್ತಕ್ಕೂ ಹೆಚ್ಚು ವರ್ಷ ಬಂಧಿಯನ್ನಾಗಿ ಮಾಡಿದ್ದರು. ಮಂಡೇಲಾ ಅಲ್ಲದೆ ಇತರ ವರ್ಣಭೇದ ವಿರೋಧಿಗಳನ್ನೂ ಬಂಧಿಸಿ ಅವರಿಂದ ದೊಡ್ಡ ದೊಡ್ಡ ಬಂಡೆಗಳನ್ನು ಒಡೆಸುತ್ತಿದ್ದರಂತೆ. ರಾಬಿನ್ ಐಲಾಂಡ್ ಎಂದು ಕರೆಯುವ ಈ ದ್ವೀಪಕ್ಕೆ ಹೋಗಲು ದೋಣಿಯಲ್ಲಿ ಇಪ್ಪತ್ತು ನಿಮಿಷ ಸಾಕು. ವೇಳೆಯ ಅಭಾವದಿಂದ ನಾವಲ್ಲಿಗೆ ಹೋಗಲಿಲ್ಲ.

ಕೇಪ್‌ಟೌನ್ ತನ್ನ ಸಂತೆಗಳಿಗೆ ತುಂಬಾ ಹೆಸರುವಾಸಿ. ರಸ್ತೆಯ ಬದಿಯ ಈ ವ್ಯಾಪಾರೀ ಕೇಂದ್ರಗಳು ತುಂಬಾ ಜನಾನುರಾಗಿ ಕೂಡ. ವಾರದ ಒಂದು ದಿನ ಒಂದು ಪ್ರದೇಶದಲ್ಲಿ ಟೆಂಟ್‌ಗಳ ಅಂಗಡಿಗಳು ತಲೆ ಎತ್ತುತ್ತವೆ. ಭಾನುವಾರ ಗ್ರೀನ್ ಮಾರ್ಕೆಟ್ ಸೋಮವಾರ ಪೆರೇಡ್ ಗ್ರೌಂಡ್, ಮಂಗಳವಾರ ವಾಟರ್ ಫ್ರಂಟ್ ಇತ್ಯಾದಿ. ನಿಮಗೆ ಯಾವ ವಸ್ತು ಬೇಕೋ ಹೇಳಿ - ಮರದಿಂದ ಮಾಡಿದ ಜಿರಾಫೆ ಬೇಕೇ, ಮುಖವಾಡಗಳು ಬೇಕೇ, ಬಟ್ಟೆಬರೆಗಳು, ಚಿನ್ನದ ಸರ ಏನು ಬೇಕೋ

ಎಲ್ಲಾ ಸಿಗುತ್ತವೆ. ಆದರೆ ಇಲ್ಲಿ ಚೌಕಾಶಿ ಮಾಡಬೇಕು. ಎಚ್ಚರ ತಪ್ಪಿದಲ್ಲಿ ಮೋಸ ಹೋಗಬಹುದು. ಆದರೆ ಕಡಿಮೆ ಬೆಲೆಗೆ ಹಲವಾರು ಉತ್ತಮ ವಸ್ತುಗಳು ಕೊಳ್ಳಬಹುದು. ನಾವು ಆಫ್ರಿಕಾದ ವಿಶೇಷ ವಸ್ತುಗಳನ್ನು ಖರೀದಿಸಿದೆವು.

ಕೇಪ್‌ಟೌನ್ ಸಮುದ್ರತೀರದಲ್ಲಿ ಇರುವುದರಿಂದ ಅಲ್ಲಿಯ ಬೀಚ್‌ಗಳು ಸಾಕಷ್ಟು ಹೆಸರುವಾಸಿ. ಮೈಲುಗಟ್ಟಲೆ ಮುತ್ತಿನಂತೆ ಪ್ರಜ್ವಲಿಸುವ ಬಿಳಿ ಮರಳು ಹೊಂದಿರುವ ಕೇಪ್‌ಟೌನ್ ಕಡಲತೀರಗಳು ತುಂಬಾ ಪ್ರಖ್ಯಾತಿ. ಇಲ್ಲಿಯ ಸಮುದ್ರದ ವಿಶೇಷತೆ ಎಂದರೆ ಅಚ್ಚನೀಲಿ ಬಣ್ಣದ ನೀರು. ನೋಡಿದ ಕೂಡಲೇ ಸಮುದ್ರದಲ್ಲಿ ಇಳಿಯಲು ಮನಸ್ಸಾಗುತ್ತದೆ. ಕೇಪ್‌ಟೌನ್‌ನಲ್ಲಿ ತರಹೇವಾರಿ ಬೀಚ್‌ಗಳು ಇವೆ. ಮೀನು ಹಿಡಿಯುವವರಿಗೆ ಬೇರೆ ಬೀಚ್, ಡೈವ್ ಮಾಡುವವರಿಗೆ ಬೇರೆ ಬೀಚ್, ಸಮುದ್ರ ಕ್ರೀಡೆಗಳಿಗೆ ಅಂದರೆ ಬೀಚ್ ವಾಲಿಬಾಲ್‌ಗೆ ಮೀಸಲಾದ ಬೇರೆ ಬೀಚ್ ಇತ್ಯಾದಿ. ರಜಾದಿನಗಳಲ್ಲಂತೂ ಕೇಪ್‌ಟೌನಿನಲ್ಲಿ ಎಲ್ಲರೂ ಬೀಚಿಗೆ ಹೋಗುತ್ತಾರೆ ಎನಿಸುತ್ತದೆ.

ಎರಡು - ಮೂರು ಬೀಚ್ ನೋಡಿದ ನಂತರ ನಾವು ಕೇಪ್‌ಟೌನ್‌ನಲ್ಲಿ ಭಾರತೀಯ ದೂತಾವಾಸದಲ್ಲಿ ಕೆಲಸ ಮಾಡುತ್ತಿರುವ ಪರಿಚಯದ ಅಧಿಕಾರಿಯ ಮನೆಗೆ ಊಟಕ್ಕೆ ಹೋದೆವು. ನರ್ಮದಾ ಬಚಾವ್ ಆಂದೋಲನ ನಡೆಸುತ್ತಿದ್ದ ಹೆಸರಾಂತ ಮೇಧಾ ಪಾಟಕರ್ ಅವರೂ ಅಲ್ಲಿಗೆ ಊಟಕ್ಕೆ ಬಂದಿದ್ದರು. ಅವರೊಡನೆ ಮಾತನಾಡಿ ಅವರ ಕೆಲಸದ ಬಗ್ಗೆ ವಿವರಗಳನ್ನು ಪಡೆದೆವು. ಅಲ್ಲೇ ಇನ್ನೊಂದು ವಿಷಯ ತಿಳಿಯಿತು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಸಂಜಾತರು ಸಾಕಷ್ಟು ಇರುವುದರಿಂದ ಈ ದೇಶದ ಇಬ್ಬರು ಮಂತ್ರಿಗಳೂ ಭಾರತೀಯ ಸಂಜಾತರೇ ಎಂದು. ನಮ್ಮ ಊರು ವಜ್ರಕ್ಕೆ ಹೆಸರುವಾಸಿ ವಜ್ರ ಖರೀದಿಸಿ ಎಂದು ನಮ್ಮ ಗೆಳೆಯರು ಹೇಳಿದರು. ಮಾರನೇ ದಿನ ವಜ್ರದ ಅಂಗಡಿಯೊಂದಕ್ಕೆ ಹೋದೆವು. ಬಹಳ ಕಡಿಮೆ ಬೆಲೆಯಿಂದ ಬಹಳ ಹೆಚ್ಚಿನ ಬೆಲೆಯವರೆಗೆ ವಜ್ರಗಳು ಇದ್ದವು. ನಿಜವಾದ ವಜ್ರವೋ ಜಿರ್‌ಕೋನ ವಜ್ರವೋ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲದೆ ಇದ್ದುದರಿಂದ ವಜ್ರ ಖರೀದಿಯಲ್ಲಿ ಮೋಸ ಹೋಗುವುದು ಬೇಡ ಎಂದು ಹೋಟೆಲ್‌ಗೆ ವಾಪಸ್ಸಾದೆವು.

ಕೇಪ್‌ಟೌನ್‌ನಲ್ಲಿ ಮರೆಯಲಾಗದ ಇನ್ನೊಂದು ಅನುಭವ ಆಯಿತು. ಸಾರಿಗೆ ವ್ಯವಸ್ಥೆಯ ಬಗ್ಗೆ ನಡೆಯುತ್ತಿದ್ದ ಸಮ್ಮೇಳನ ನೋಡಲು ನಾನು ಹೋದೆ. ಆ ಸಮ್ಮೇಳನಕ್ಕೆ ಉದ್ಘಾಟಕರಾಗಿ ಕೇಪ್‌ಟೌನಿನ ಮೇಯರ್‌ರನ್ನು ಕರೆದಿದ್ದರು. ಸಮ್ಮೇಳನ ಪ್ರಾರಂಭವಾಗುವ 15 ನಿಮಿಷದ ಮುಂಚೆ ತನ್ನ ಕಾರಿನಲ್ಲಿ ಕೊರಳಿಗೆ ಬಿರುದು ಬಾವಲಿಗಳನ್ನೂ ಮೈಮೇಲೆ ಮೇಯರ್‌ರ ಗೌನನ್ನು ಧರಿಸಿದ್ದ ವ್ಯಕ್ತಿಯೊಬ್ಬರು ಬಂದರು. ಬಾಗಿಲಲ್ಲಿ ಸೆಕ್ಯೂರಿಟಿ ಅಧಿಕಾರಿ ಅವರನ್ನು ತಡೆದು ಅವರಿಂದ ಆಮಂತ್ರಣ ಪತ್ರ ಕೇಳಿದರು. ಈ ಸಭೆಯ ಮುಖ್ಯ ಅತಿಥಿ ನಾನೇ, ನಾನು ಈ ಊರಿನ ಮೇಯರ್ ಎಂದು ಆ ವ್ಯಕ್ತಿ ಹೇಳಿದರೂ ಭದ್ರತಾ ಸಿಬ್ಬಂದಿ ನೀವು ಮೇಯರ್ ಎಂದು ನನಗೆ ಗೊತ್ತು ಆದರೆ ನಿಮ್ಮ ಬಳಿಯಲ್ಲಿ ಒಳಗೆ ಹೋಗಲು ಆಮಂತ್ರಣ ಪತ್ರಿಕೆ ಇಲ್ಲದೆ ಇರುವುದರಿಂದ ನಾನು ನಿಮ್ಮನ್ನು ಒಳಗಡೆ ಬಿಡುವುದಿಲ್ಲ ಎಂದ. ಮುಂದೇನಾಗುತ್ತದೆ ಎಂದು ನಾನು ಅಲ್ಲೇ ನಿಂತು ನೋಡುತ್ತಿದ್ದೆ. ಮೇಯರ್ ಸಾಹೇಬರು ಬಾಗಿಲಿನ ಹೊರಗಿನ ಮೆಟ್ಟಿಲಿನ ಮೇಲೇ ನಿಂತಿದ್ದರು. ಐದು ನಿಮಿಷದ ತರುವಾಯ ಕಾರ್ಯಕ್ರಮದ ಸಂಘಟಕರು ಬಾಗಿಲಿಗೆ ಬಂದು ಹೊರಗಡೆ ಕಾಯುತ್ತಿದ್ದ ಮೇಯರ್

ಅವರನ್ನು ಎದುರುಗೊಂಡು ಅವರ ಕೋಟಿಗೆ ಬ್ಯಾಡ್ಜ್ ಹಚ್ಚಿದ ನಂತರವೇ ಅವರಿಗೆ ಒಳ ಹೋಗಲು ಅನುವು ಮಾಡಿಕೊಟ್ಟರು. ಕಾರ್ಯಕ್ರಮಕ್ಕೆ ಬೇಗ ಬಂದಿದ್ದೇ ತಪ್ಪಾಯಿತು ಎಂದು ಮೇಯರ್ ಗೊಣಗುಟ್ಟುತ್ತಾ ಇದ್ದದ್ದು ಕೇಳಿತು!

ಅದೇ ದಿನ ಸಾಯಂಕಾಲ ನಾನು ಕೇಪ್‌ಟೌನಿನ ಪೊಲೀಸ್ ಕಮಿಷನರಿಗೆ ಫೋನ್ ಮಾಡಿ ಅವರ ಕಛೇರಿಯನ್ನು ನೋಡಬೇಕೆಂಬ ಆಸೆ ವ್ಯಕ್ತಪಡಿಸಿದೆ. ನಾನಿದ್ದ ಹೋಟೆಲ್ಲಿಗೆ ತಮ್ಮ ವಾಹನ ಕಳಿಸಿ ತಮ್ಮ ಕಛೇರಿಗೆ ಬರಮಾಡಿಕೊಂಡರು. ಅವರ ಕಛೇರಿಯಲ್ಲಿ ಇರುವ ನಿಯಂತ್ರಣ ಕೋಣೆ ಲಂಡನ್ ಪೊಲೀಸ್ ಕಂಟ್ರೋಲ್ ರೂಂನಷ್ಟೇ ನವೀನವಾಗಿತ್ತು. ಕಂಪ್ಯೂಟರ್ ಮೂಲಕ ವಾಹನ ನಿಯಂತ್ರಣವನ್ನು ಮಾಡುತ್ತಾರೆ. ಯಾವುದಾದರೂ ವಾಹನ ಕಳುವಾಗಿದೆ ಎಂಬ ಸುದ್ದಿ ಬಂದರೆ ಕ್ಷಣಾರ್ಧದಲ್ಲಿ ಆ ವಾಹನದ ಮಾಲೀಕತ್ವದ ವಿವರಗಳನ್ನು ಹೊಯ್ಸಳ ಮಾದರಿಯ ಕಾವಲು ವಾಹನಗಳಿಗೆ ತಿಳಿಸುತ್ತಾರೆ. ಈ ಕಾವಲು ವಾಹನಗಳು ಸಂಶಯ ಬಂದ ಕಾರುಗಳನ್ನು ನಿಲ್ಲಿಸಿ ಅವುಗಳ ಚಾಲಕರಿಗೆ ವಿವರಗಳನ್ನು ಕೇಳುತ್ತಾರೆ. ಚಾಲಕ ನೀಡಿದ ವಿವರ ಸರಿ ಇಲ್ಲದಿದ್ದರೆ ಕೂಡಲೇ ಅವನನ್ನು ಬಂಧಿಸುತ್ತಾರೆ. ಕೇಪ್‌ಟೌನ್ ಪೊಲೀಸರ ಶ್ವಾನದಳವನ್ನೂ ನೋಡಿದೆ. ಆಶ್ಚರ್ಯವೆಂದರೆ ಈ ಊರಿನ ಜನರು ಪೊಲೀಸರಿಗೆ ತಮ್ಮ ನಾಯಿಗಳನ್ನು ಪುಕ್ಕಟೆಯಾಗಿ ಕೊಟ್ಟುಬಿಡುತ್ತಾರೆ. ಅವುಗಳಿಗೆ ತರಬೇತಿ ನೀಡಿ ಶ್ವಾನದಳಕ್ಕೆ ನೇಮಕ ಮಾಡಿಕೊಳ್ಳಲಾಗುತ್ತದೆಯಂತೆ!

ದಕ್ಷಿಣಾ ಆಫ್ರಿಕಾದ ಪೊಲೀಸರ ಬಗ್ಗೆ ಮಾಹಿತಿ ಪಡೆದು ಹೋಟೆಲ್‌ಗೆ ಹಿಂತಿರುಗಿ ಜೋಹಾನ್ಸ್‌ಬರ್ಗ್‌ಗೆ ಪ್ರಯಾಣ ಬೆಳೆಸಿದೆವು.

40

ಜೋಹಾನ್ಸ್‌ಬರ್ಗ್ ಮತ್ತು ಸನ್ ಸಿಟಿ

ಕೇಪ್‌ಟೌನ್ ಪ್ರವಾಸ ಮುಗಿಸಿದ ನಾವು ಮತ್ತೊಮ್ಮೆ ವಿಮಾನದಲ್ಲಿ ಕುಳಿತು ಜೋಹಾನ್ಸ್‌ಬರ್ಗ್‌ಗೆ ಹೊರಟೆವು. ಜೋಹಾನ್ಸ್‌ಬರ್ಗ್ ಆಫ್ರಿಕಾ ಖಂಡದ ಅತಿ ದೊಡ್ಡ ನಗರ 1886 ರಲ್ಲಿ ಈ ಪ್ರದೇಶದಲ್ಲಿ ಆಕಸ್ಮಾತ್ ದೊರಕಿದ ಚಿನ್ನದಿಂದಾಗಿ ಪರದೇಶಗಳಿಂದ ಹಲವಾರು ಜನರು ಚಿನ್ನದ ಗಣಿಗಾರಿಕೆಗೆ ಇಲ್ಲಿ ವಲಸೆ ಬಂದ್ದದ್ದರಿಂದ, ಈ ಊರು ಕ್ರಮೇಣ ಬೆಳೆಯಿತು. ಸದ್ಯ ಇದು ದಕ್ಷಿಣ ಆಫ್ರಿಕಾದ ವಾಣಿಜ್ಯ ರಾಜಧಾನಿ ಎಂದೇ ಪರಿಗಣಿಸಲ್ಪಟ್ಟಿದೆ. ಜೋಹಾನ್ಸ್‌ಬರ್ಗ್‌ನಲ್ಲಿ ಪ್ರವಾಸಿ ತಾಣಗಳು ಏನೂ ಇಲ್ಲ. ಬಹಳ ದೊಡ್ಡ ವಾಣಿಜ್ಯ ನಗರವಾಗಿರುವುದರಿಂದ ಮುಂಬೈನಂತೆಯೇ ಇದೂ ಒಂದು ಕಾಂಕ್ರೀಟ್ ಅರಣ್ಯವಾಗಿದೆ. ಈ ನಗರದಲ್ಲಿ ನೋಡಬೇಕಾದ ಮುಖ್ಯ ಜಾಗಗಳು ಟೌನ್ ಹಾಲ್, ಪಬ್ಲಿಕ್ ಲೈಬ್ರರಿ ಮತ್ತು ಎರಡು ರಂಗ ಮಂದಿರಗಳು, ಈ ಊರಿನ ಅತಿ ಪ್ರಮುಖ ಕಟ್ಟಡ ಎಂದರೆ 760 ಅಡಿ ಎತ್ತರದ ಟೆಲಿ ಕಮ್ಯುನಿಕೇಷನ್ ಟವರ್. ಜೋಹಾನ್ಸ್‌ಬರ್ಗ್‌ನಲ್ಲಿ ವಾಸಿಸುವ ಅರ್ಧದಷ್ಟು ಜನ ಬಿಳಿಯರಾದರೆ ಇನ್ನರ್ಧ ಕರಿಯರು. ಈ ನಗರದ ಜನಸಂಖ್ಯೆ ಸುಮಾರು 70 ಲಕ್ಷ. ಹಲವಾರು ಭಾರತೀಯ ಸಂಜಾತರು ಇಲ್ಲಿದ್ದಾರೆ.

ಪರ್ಯಟಕರಿಗೆ ಜೋಹಾನ್ಸ್‌ಬರ್ಗ್ ನಗರದ ಬಳಿ ಎರಡು ವಿಶೇಷ ಆಕರ್ಷಣೆಗಳಿವೆ. ಅದರಲ್ಲಿ ಮೊದಲನೆಯದು ಗೋಲ್ಡ್ ರೀಫ್ ಸಿಟಿ ಎನ್ನುವ ಜಾಗ. ಅಮೇರಿಕಾದಲ್ಲಿ ಡಿಸ್ನಿ ಲ್ಯಾಂಡ್ ಹಾಗೂ ಸೀ ವರ್ಲ್ಡ್ ರೀತಿಯ ಥೀಮ್ ಪಾರ್ಕ್‌ಗಳು ಹೇಗಿವೆಯೋ ಅಂತಹವೆ ಥೀಮ್ ಪಾರ್ಕ್ ಗೋಲ್ಡ್ ರೀಫ್ ಸಿಟಿ. ಈ ಪಾರ್ಕನ್ನು ಹಳೆಯದಾಗಿ ಮುಚ್ಚಲ್ಪಟ್ಟ ಚಿನ್ನದ ಗಣಿ ಒಂದರ ಸುತ್ತಲೂ ನಿರ್ಮಿಸಲಾಗಿದೆ. ಗೋಲ್ಡ್ ರೀಫ್ ಸಿಟಿಯ ಮುಖ್ಯ ಆಕರ್ಷಣೆಯೇ ಈ ಮುಚ್ಚಿದ ಚಿನ್ನದ ಗಣಿ. ಪರ್ಯಟಕರನ್ನು ಗಣಿ ಒಳಗಡೆ ಕರೆದುಕೊಂಡು ಹೋಗಿ ಹಿಂದಿನ ಕಾಲದಲ್ಲಿ ಯಾವ ರೀತಿ ಚಿನ್ನವನ್ನು ತೆಗೆಯುತ್ತಿದ್ದರು ಎನ್ನುವುದನ್ನು ತೋರಿಸುತ್ತಾರೆ. ಈ ಗಣಿಯನ್ನು ನೋಡಿದ ನಂತರ ನಮ್ಮ ಕೆ.ಜಿ.ಎಫ್. ಚಿನ್ನದ ಗಣಿಗಳ ಮುಂದೆ ಈ ಗಣಿ ಏನೂ ಇಲ್ಲ ಅನಿಸಿತು.

ಗಣಿಯನ್ನು ನೋಡಿ ಬರುವ ಜಾಗದಲ್ಲಿ ಚಿನ್ನದ ವಸ್ತುಗಳನ್ನು ಮಾರುವ ಅಂಗಡಿಗಳಿವೆ. ಅಲ್ಲಿ ತರಹೇವಾರಿ ಚಿನ್ನದ ಸೋಪಿನೇರ್‌ಗಳನ್ನು ಖರೀದಿಸಬಹುದು. ಗೋಲ್ಡ್ ರೀಫ್ ಸಿಟಿಯನ್ನು

ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ. ಚಿನ್ನದ ಗಣಿ ಹಾಗೂ ಆ ಗಣಿಗೆ ಸಂಬಂಧಪಟ್ಟ ಜಾಗಗಳನ್ನು ಮ್ಯೂಸಿಯಂ ಆಗಿ ಪರಿವರ್ತಿಸಿದ್ದಾರೆ. ಗಣಿಯ ಮಾಲೀಕನ ವಿಶಾಲ ಮನೆ. ಆಗಿನ ಕಾಲದಲ್ಲಿ ಗಣಿ ಕಾರ್ಮಿಕರು ಇರುತ್ತಿದ್ದ ಮನೆಗಳು ಅವರ ವೇಷ ಭೂಷಣಗಳು ಅವರು ಉಪಯೋಗಿಸುತ್ತಿದ್ದ ಉಪಕರಣಗಳನ್ನು ಮ್ಯೂಸಿಯಂ ಪ್ರದೇಶದಲ್ಲಿ ನೋಡಬಹುದು. ಗೋಲ್ಡ್ ರೀಫ್ ಸಿಟಿಯ ಎರಡನೇ ಭಾಗವನ್ನು ಮನರಂಜನಾ ಭಾಗ ಎಂದು ಕರೆಯಬಹುದು. ಈ ಮನರಂಜನಾ ಭಾಗದಲ್ಲಿ ತರಹೇವಾರಿ ಮನರಂಜನೆಗಳು ಇವೆ. ಡಿಸ್ನಿ ಲ್ಯಾಂಡ್‌ನಲ್ಲಾಗಲೀ ದೆಹಲಿಯ ಅಪ್ಪುಘರ್‌ನಲ್ಲಾಗಲೀ ಇರುವಂತಹ ಹಲವಾರು ಮನರಂಜನಾ ರೈಡ್‌ಗಳು, ಮನರಂಜನಾ ಪ್ರದರ್ಶನಗಳು ಇವೆ. ನಾಲ್ಕು ವಿವಿಧ ಬಗೆಯ ರಂಗ ಮಂಟಪಗಳಲ್ಲಿ ನಾಟಕಗಳು, ನೃತ್ಯಗಳು ನಡೆಯುತ್ತವೆ. ಸರ್ಕಸ್ ಪ್ರದರ್ಶನ, ಮ್ಯಾಜಿಕ್ ಶೋ ಇತ್ಯಾದಿಗಳು ಈ ಮನರಂಜನಾ ಜಾಗದಲ್ಲಿ ಪ್ರದರ್ಶಿತವಾಗುತ್ತವೆ.

ಗೋಲ್ಡ್ ರೀಫ್ ಸಿಟಿಯ ಮೂರನೇ ಪ್ರದೇಶವೆಂದರೆ ಅಂಗಡಿಗಳು. ಕ್ಯಾಂಡಿ ಎಂದರೆ ಪೆಪ್ಪರ್‌ಮೆಂಟ್‌ಗಳಿಂದ ಹಿಡಿದು ವಜ್ರ ವೈಢೂರ್ಯಗಳು, ವಿಶೇಷ ಪರಿಮಳಗಳು, ಗಾಜಿನ ವಸ್ತುಗಳು, ಕಲಾಕೃತಿಗಳು ಇತ್ಯಾದಿಗಳನ್ನು ಇವುಗಳಲ್ಲಿ ಮಾರಲಾಗುತ್ತದೆ.

ನಾಲ್ಕನೇ ಭಾಗ ಎಂದರೆ ಉಪಾಹಾರ ಗೃಹಗಳು. ಸುಮಾರು 25 ತಿಂಡಿ ತಿನಿಸುಗಳ ಅಂಗಡಿಗಳು, ರೆಸ್ಟೋರೆಂಟ್‌ಗಳು, ಪಬ್‌ಗಳು ಇಲ್ಲಿವೆ. ವಾಸಿಸಲು ಅನುಕೂಲವಾಗುವಂತಹ ಹೋಟೆಲ್‌ಗಳೂ ಸಮ್ಮೇಳನ ಗೃಹಗಳು ಇವೆ. ಗೋಲ್ಡ್ ರೀಫ್ ಸಿಟಿಯಲ್ಲಿ ಲಗ್ನಗಳ ಪಾರ್ಟಿಗಳು ನಡೆಯುತ್ತವೆ. ಸಾಮಾನ್ಯವಾಗಿ ಈ ಮನರಂಜನಾ ಕೇಂದ್ರವನ್ನು ನೋಡಲು ಒಂದು ದಿನ ಪೂರ್ತಿ ಬೇಕು. ನಾವು ಅದೇ ನಿಯಮದಂತೆ ಪೂರ್ತಿ ದಿನ ಗೋಲ್ಡ್ ರೀಫ್ ಸಿಟಿ ಆಕರ್ಷಣೆಗಳನ್ನು ನೋಡಿ ನಮ್ಮ ಹೋಟೆಲ್‌ಗೆ ವಾಪಸ್ಸಾದೆವು.

ಮಾರನೇ ದಿನ ನಾವು ಒಂದು ಟೂರಿಸ್ಟ್ ಬಸ್‌ನಲ್ಲಿ ವಿಶ್ವ ವಿಖ್ಯಾತ ಸನ್ ಸಿಟಿಗೆ ಹೊರಟೆವು. ಸನ್ ಸಿಟಿಯೇ ಸುಷ್ಮಿತಾ ಸೇನ್ ಹಾಗೂ ಐಶ್ವರ್ಯಾ ರೈ ವಿಶ್ವ ಸುಂದರಿ ಕಿರೀಟವನ್ನು ಧರಿಸಿದ ಜಾಗ. ಅಮೇರಿಕಾದ ಲಾಸ್ ವೇಗಾಸ್ ಹೇಗಿದೆಯೋ ಅದೇ ರೀತಿ ದಕ್ಷಿಣ ಆಫ್ರಿಕಾದಲ್ಲಿರುವ ಮನರಂಜನಾ ನಗರ ಸನ್ ಸಿಟಿ.

ಜೋಹಾನ್ಸ್ ಬರ್ಗ್‌ನಿಂದ ಮೂರು ಗಂಟೆಗಳ ಬಸ್ ಪ್ರಯಾಣದ ನಂತರ ಸನ್ ಸಿಟಿ ಬಾಗಿಲನ್ನು ತಲುಪಿದೆವು. ಸನ್ ಸಿಟಿ ಬಾಗಿಲಲ್ಲಿ ಈ ಪ್ರದೇಶ ಹೇಗೆ ರೂಪಿತವಾಯಿತು ಎಂದು ಒಂದು ಫಲಕ ತಿಳಿಸುತ್ತದೆ. ಪಾಶ್ಚಿಮಾತ್ಯ ನಾಗರೀಕತೆ ಉದಯಿಸುವ ಹಲವಾರು ಶತಮಾನಗಳ ಮೊದಲೇ ದಕ್ಷಿಣ ಆಫ್ರಿಕಾದ ಬುಡಕಟ್ಟು ಜನಾಂಗವೊಂದು ಒಂದು ಅತಿ ದೊಡ್ಡ ತಣ್ಣಗಾಗಿದ್ದ ಜ್ವಾಲಾಮುಖಿಯ ತಟ್ಟೆಯ ಮೇಲೆ ನಗರವನ್ನು ಕಟ್ಟಿ ವಾಸ ಮಾಡುತ್ತಿದ್ದರಂತೆ ಒಂದು ಬಾರಿ ದೊಡ್ಡ ಭೂಕಂಪವಾಗಿ ಆ ಪಟ್ಟಣ ನಾಶವಾಯಿತಂತೆ. 20ನೇ ಶತಮಾನದಲ್ಲಿ ನಾಶವಾದ ಆ ಪಟ್ಟಣವನ್ನು ಹುಡುಕಿ ತೆಗೆದು ಅದು ಇದ್ದಂತಹ ಜಾಗದಲ್ಲಿ ವಿಲಾಸೀ ತಾಣವನ್ನು ಕಟ್ಟಲಾಯಿತಂತೆ. ಈ ವಿಲಾಸಿ ತಾಣವೇ ಸನ್ ಸಿಟಿ ಎನ್ನುತ್ತಾರೆ. ಇದನ್ನು ನಾನು ನಂಬಲಿಲ್ಲ.

ಸನ್ ಸಿಟಿ ನಾಲ್ಕು ಪ್ರಮುಖ ಹೋಟೆಲ್‌ಗಳ ಸುತ್ತಲೂ ಕೇಂದ್ರೀಕೃತವಾಗಿದೆ. ಸನ್ ಸಿಟಿ ಹೋಟೆಲ್, ಸನ್ ಸಿಟಿ ಕಬಾನ, ಕ್ಯಾಸ್ಕೇಟ್ಸ್ ಹೋಟೆಲ್ ಮತ್ತು ಪ್ಯಾಲೇಸ್ ಆಫ್ ದ ಲಾಸ್ಟ್ ಸಿಟಿ ಎನ್ನುವವೇ ಆ ನಾಲ್ಕೂ ಹೋಟೆಲ್‌ಗಳು. ಇವುಗಳಲ್ಲಿ ಪ್ಯಾಲೇಸ್ ಆಫ್ ದ ಲಾಸ್ಟ್ ಸಿಟಿ

ಹೋಟೆಲ್ ಅತಿ ಭವ್ಯವಾದುದು. ಅಲ್ಲದೆ ಇದೇ ಹೋಟೆಲ್‌ನಲ್ಲಿಯೇ ವಿಶ್ವ ಸುಂದರಿ ಸ್ಪರ್ಧೆಗಳು ನಡೆದದ್ದು. 25 ಹೆಕ್ಟೇರ್ ಅರಣ್ಯ ಪ್ರದೇಶದ ಮುಂದೆ ಇರುವ ಈ ಹೋಟೆಲ್ ವಿಶ್ವದ ಅತಿ ವಿಲಾಸೀ ಹೋಟೆಲ್‌ಗಳಲ್ಲಿ ಒಂದು ಎಂದು ಹೆಸರುವಾಸಿ ಆಗಿದೆ. ಈ ಹೋಟೆಲ್‌ನ ಎರಡು ಭಾಗದಲ್ಲಿರುವ ಮೆಟ್ಟಿಲುಗಳು ಕಣಿವೆಯೊಂದಕ್ಕೆ ನಮ್ಮನ್ನು ಕರೆದೊಯ್ಯುತ್ತವೆ. ಈ ಕಣಿವೆಯಲ್ಲಿ ಕೃತಕ ಜಲಾಶಯ ನಿರ್ಮಿಸಿ ನಾವು ಸಮುದ್ರದಲ್ಲಿ ಇದ್ದೇವೆ ಎನ್ನುವ ಅನುಭವವನ್ನುಂಟು ಮಾಡುತ್ತಾರೆ. ಬಿಳಿ ಮರಳಿನ ಬೀಚ್‌ನಲ್ಲಿ ಪಾಮ್ ಗಿಡಗಳು ಇವೆ. ನೀರಿನಲ್ಲಿ ಹಲವಾರು ಜಲಕ್ರೀಡೆಗಳನ್ನು ಆಡಬಹುದು. ಇಲ್ಲಿಯ ವಿಶೇಷತೆ ಎಂದರೆ ನೀರಿನಲ್ಲಿ ಸರ್ಫ್ ಮಾಡಲು ಎರಡು ಮೀಟರ್ ಎತ್ತರದ ಅಲೆಗಳನ್ನು ಕೃತಕವಾಗಿ ಸೃಷ್ಟಿಸಿರುವುದು. (ಸರ್ಫ್ ಎಂದರೆ ಒಂದು ಹಲಗೆಯ ಸಹಾಯದಿಂದ ಅಲೆಗಳ ಜತೆ ಜತೆ ಮೇಲೇರಿ ಕೆಳಗೆ ಬರುವುದು).

ಕಣಿವೆಯನ್ನು ದಾಟಿದರೆ ಒಂದು ಸೇತುವೆ ಬರುತ್ತದೆ. ಆ ಸೇತುವೆ ದಾಟಿದಾಗ ನಾವು ತಪ್ಪಿ ಈಜಿಪ್ಟ್‌ಗೆ ಬಂದಿದ್ದೇವೆ ಎಂದು ಎನಿಸುತ್ತದೆ. ಏಕೆಂದರೆ ಅಲ್ಲಿನ ಕಟ್ಟಡಗಳು ಹಿಂದಿನ ಕಾಲದ ಕೋಟೆ ಕೊತ್ತಲಗಳನ್ನೇ ಹೋಲುತ್ತವೆ. ಈ ಪ್ರದೇಶಕ್ಕೆ ನಾವು ಹೊರಟಾಗ ಒಮ್ಮೆ ಢಮಾರ್ ಎಂಬ ಶಬ್ದವಾಗಿ ನಾವು ನಿಂತಿದ್ದ ನೆಲವೇ ಅದುರಿತು. ಭೂಕಂಪವಾಯಿತು ಎಂದು ಹೆದರಿಕೊಂಡು ನಮ್ಮ ಮುಖ ಬಿಳಿಚಿಕೊಂಡಾಗ ಅಲ್ಲಿನ ಜನ ಹೇಳಿದರು ಪ್ರತಿ ಘಂಟೆಗೂ ಅಲ್ಲಿ ಬಾಂಬನ್ನು ಸಿಡಿಸಿ ಜನರಿಗೆ ಭೂಕಂಪದ ಅನುಭವ ಉಂಟು ಮಾಡುತ್ತಾರಂತೆ. ಅಲ್ಲಿ ಒಂದು ಕಲ್ಲಿನ ಸಿಂಹ ಇದೆ. ಅದರ ಬಾಯಿಂದ ಬೆಂಕಿ ಉಗುಳುವಂತೆ ಮಾಡಿದ್ದಾರೆ.

ಹಳೆ ಈಜಿಪ್ಟನ್ನು ಹೋಲುವ ಈ ಜಾಗವನ್ನು ನೋಡಿ ಇನ್ನೊಂದು ಸೇತುವೆ ಬಳಸಿ ಮುಂದೆ ಹೋದರೆ ಅಲ್ಲಿ ಒಂದು ಭಾರೀ ಮನರಂಜನಾ ಕೇಂದ್ರ ಇದೆ. ಈ ಮನರಂಜನಾ ಕೇಂದ್ರದಲ್ಲಿ ತರಹೇವಾರಿ ಆಟಗಳಿದ್ದು ಅವುಗಳಲ್ಲಿ ಪ್ರಾಮುಖ್ಯವಾದುದು ಜೂಜಾಟದ ಕ್ಯಾಸಿನೋಗಳು. ಅವನ್ನು ನೋಡಿದಾಗ ಲಾಸ್ ವೇಗಾಸ್ ನೆನಪಿಗೆ ಬಂತು. ಈ ಮನರಂಜನಾ ಕೇಂದ್ರದಲ್ಲಿ 8-10 ಸಿನಿಮಾ ಮಂದಿರಗಳು ಇದ್ದು ಅಲ್ಲಿ ದಿನದ 24 ಗಂಟೆಗಳೂ ಸಿನಿಮಾ ತೋರಿಸುತ್ತಾರಂತೆ. ಹೌಸೀ ಆಟ ಆಡಲೆಂದೇ ವಿಶಾಲವಾದ ಹಜಾರವಿದೆ. ಡಿಸ್ಕೊ ಡ್ಯಾನ್ಸ್‌ಗಳಿವೆ ಹಾಗೂ ಕ್ಯಾಬರೆ ನೃತ್ಯ ಕೂಡಾ ಇಲ್ಲಿದೆ. ಇವು ಯಾವೂ ಬೇಡದೆ ಹೋದರೆ ವಿಡಿಯೋ ಪಾರ್ಲರ್‌ಗೆ ಹೋಗಿ ನಮಗೆ ಇಷ್ಟವಾದ ಆಟಗಳನ್ನು ಆಡಬಹುದು. ಮನರಂಜನಾ ಕೇಂದ್ರದಲ್ಲಿ ತರಹೇವಾರಿ ಅಂಗಡಿಗಳು ಇವೆ. ವಿಶ್ವವಿಖ್ಯಾತ ಬ್ರಾಂಡ್‌ಗಳ ಬಟ್ಟೆಬರೆಗಳು ಇಲ್ಲಿ ದೊರೆಯುತ್ತವೆ, ಆದರೆ ದುಬಾರಿ.

ಮನರಂಜನಾ ಕೇಂದ್ರದಿಂದ ಹೊರ ಬಂದ ಕೂಡಲೇ ಒಂದು ಮಾನೋ ರೈಲ್ (ಎತ್ತರದ ಸಿಮೆಂಟ್ ಕಂಬಗಳ ಮೇಲೆ ಹಾದು ಹೋಗುವ ರೈಲು) ಕಂಡಿತು. ಅದಕ್ಕೆ Elevated Rail ಎಂದು ಕರೆಯುತ್ತಾರೆ. (ಸ್ವಲ್ಪ ದಿನಗಳ ನಂತರ ಇಂತಹಾ ರೈಲು ಬೆಂಗಳೂರಿನಲ್ಲೂ ಬರಲಿದೆ) ಸನ್ ಸಿಟಿಯಲ್ಲಿ ಇಂತಹ ಎರಡು ರೈಲುಗಳಿವೆ. ಈ ರೈಲಿನ ಮೇಲೆ ಕುಳಿತರೆ ಇಡೀ ಸನ್ ಸಿಟಿ ಸುತ್ತಬಹುದು. ಮೂರು ಸ್ಟೇಷನ್ ಆದ ನಂತರ ದೂರದಲ್ಲಿ ಒಂದು ದೊಡ್ಡ ಸರೋವರ ಕಂಡಿತು. ರೈಲಿನಿಂದ ಇಳಿದು ಸರೋವರದ ಬಳಿ ಹೋದೆವು. ಈ ಸರೋವರದಲ್ಲಿ ತರಹೇವಾರಿ ಜಲಕ್ರೀಡೆಗಳು ಇವೆ. ಬೋಟ್ ಪ್ರವಾಸ, ನೀರ ಮೇಲೆ ಹೋಗುವ ಸ್ಕೂಟರ್ ಪ್ರವಾಸ,

ಡೈವಿಂಗ್ ಮಾಡುವುದು ಹಾಯಿ ದೋಣಿಗಳಲ್ಲಿ ಹೋಗುವುದು ಇತ್ಯಾದಿಗಳಿವೆ. ಅಲ್ಲಿಂದ ಸ್ವಲ್ಪ ಮುಂದೆ ಹೋದರೆ ಒಂದು ದೊಡ್ಡ ಮೊಸಳೆಯ ಪಾರ್ಕ್ ಇದೆ. ಹಲವಾರು ಮೊಸಳೆಗಳು ಅಲ್ಲಿವೆ.

ಸನ್ ಸಿಟಿಯಲ್ಲಿ ಹಲವಾರು ಕ್ರೀಡೆಗಳನ್ನು ಆಡಲು ಅವಕಾಶವಿದೆ. ಅಲ್ಲಿ 12 ಟೆನ್ನೀಸ್ ಕೋರ್ಟ್‌ಗಳು, 2 ಗಾಲ್ಫ್ ಕೋರ್ಟ್‌ಗಳು, ಜಿಮ್ನಾಸಿಯಂಗಳು, ವಾಲಿಬಾಲ್, ಶಟಲ್ ಬ್ಯಾಂಡ್ಮಿಂಟನ್ ಮೈದಾನಗಳು ಇವೆ. ಅಲ್ಲಿಗೆ ಬಂದ ಜನರು ಕನಿಷ್ಟ ಒಂದು ವಾರ ಹಾಯಾಗಿ ಅಲ್ಲಿದ್ದು ರಜೆ ದಿನಗಳನ್ನು ಅನುಭವಿಸಲಿ ಎನ್ನುವುದೇ ಇದರ ಉದ್ದೇಶ ಎಂದು ಕಾಣುತ್ತದೆ. ಆದರೆ ಅಲ್ಲಿಯ ಹೋಟೆಲ್‌ಗಳೆಲ್ಲ ತೀರಾ ದುಬಾರಿ. ಸನ್ ಸಿಟಿಯ ಮುಖ್ಯ ಜಾಗಗಳನ್ನು ನೋಡಿದ ನಾವು ಮತ್ತೆ ಬಂದ ಬಸ್‌ನಲ್ಲಿ ಜೋಹಾನ್ಸ್‌ಬರ್ಗ್‌ಗೆ ವಾಪಸ್ಸಾದೆವು.

ಜೋಹಾನ್ಸ್‌ಬರ್ಗ್‌ನ ಹತ್ತಿರವೇ ಇರುವ ಇನ್ನೊಂದು ಊರು ಡರ್ಬನ್. ಮಹಾತ್ಮ ಗಾಂಧಿಯವರು ಇದ್ದ ಈ ಊರನ್ನು ನೋಡಬೇಕೆಂದು ನನಗೆ ಬಹಳ ಆಸೆ ಇದ್ದಿತಾದರೂ ಸಮಯದ ಅಭಾವದಿಂದ ಅಲ್ಲಿಗೆ ಹೋಗಲು ಆಗದೆ ಜೋಹಾನ್ಸ್‌ಬರ್ಗ್‌ನಿಂದ ಆಸ್ಟ್ರೇಲಿಯಾದ ಸಿಡ್ನಿಗೆ ಹೊರಟುಬಿಟ್ಟೆವು.

41

ಆಸ್ಟ್ರೇಲಿಯಾದ ವಾಣಿಜ್ಯ ರಾಜಧಾನಿ ಸಿಡ್ನಿ

ಜೋಹಾನ್ಸ್‌ಬರ್ಗ್‌ನಿಂದ ನಾವು ಸಿಂಗಪುರದ ಮೂಲಕ ಆಸ್ಟ್ರೇಲಿಯಾ ದೇಶದ ವಾಣಿಜ್ಯ ರಾಜಧಾನಿ ಸಿಡ್ನಿ ತಲುಪಿದಾಗ ಇನ್ನೂ ಬೆಳಕಾಗಿರಲಿಲ್ಲ. ವಿಮಾನ ಸಿಡ್ನಿಯಲ್ಲಿ ಇಳಿಯುವ ಮುಂಚೆಯೇ ವಿಮಾನದ ಒಳಗಿನ ಟಿ.ವಿ. ಪರದೆಯ ಮೇಲೆ ಸಿಡ್ನಿ ಏರ್‌ಪೋರ್ಟ್‌ನ ದೃಶ್ಯಗಳನ್ನು ತೋರಿಸಿ ನಾವು ಮಾಡಬೇಕಾದ ಕಾರ್ಯಗಳ ಅಂದರೆ Immigration, Customs ಬಗ್ಗೆ ಮಾಹಿತಿ ನೀಡುತ್ತಿದ್ದರು.

ಆಸ್ಟ್ರೇಲಿಯಾ ದೇಶಕ್ಕೆ ತಿಂಡಿ ತಿನಿಸುಗಳು, ಸಸ್ಯಗಳನ್ನು ತರುವ ಹಾಗೇ ಇಲ್ಲ. ಮರದ ವಸ್ತುಗಳನ್ನು ಕೊಂಡೊಯ್ಯಲು ನಿರ್ಬಂಧ. ಏನೇ ಆದರೂ ಅಂತಹ ವಸ್ತುಗಳನ್ನು ಒಳಗೆ ಬಿಡುವುದಿಲ್ಲ. ನಿಷೇಧಿತ ವಸ್ತುಗಳನ್ನು ತಂದಿದ್ದರೆ ಅವುಗಳನ್ನು ವಿಮಾನ ನಿಲ್ದಾಣದಲ್ಲೇ ಇಟ್ಟಿರುವ ದೊಡ್ಡ ದೊಡ್ಡ ಕಸದ ಡ್ರಂಗಳಲ್ಲಿ ಎಸೆಯಲು ತಾಕೀತು ಮಾಡುತ್ತಾರೆ. ಅವನ್ನು ಎಸೆಯದೆ ಕಸ್ಟಮ್ಸ್ ಕಣ್ಣು ತಪ್ಪಿಸಿ ಒಳಗೆ ಒಯ್ಯುವ ಪ್ರಯತ್ನ ಮಾಡಿದರೆ ಹೆಚ್ಚಿನ ದಂಡ ತೆರಬೇಕಾಗುತ್ತದೆ. ನಾವು ನಮ್ಮ ಬಳಿಯಲ್ಲಿ ಅಂತಹ ವಸ್ತುಗಳನ್ನು ಹೊಂದಿರದಿದ್ದರಿಂದ ಇಮಿಗ್ರೇಷನ್ ಕಸ್ಟಮ್ಸ್ ಮುಗಿಸಿ ಸುಸೂತ್ರವಾಗಿ ಹೊರ ಬಂದೆವು.

ವಿಮಾನ ನಿಲ್ದಾಣದಿಂದ ಬಸ್ ಹಿಡಿದು ನಗರದ ಮಧ್ಯ ಭಾಗದಲ್ಲಿರುವ ಮೊದಲೇ ಕಾದಿರಿಸಿದ ಹೋಟೆಲ್‌ಗೆ ಸಾಮಾನುಗಳನ್ನು ಹೊಂದಿಸಿಟ್ಟು, ಸ್ನಾನ ಮಾಡಿ ಹೊರಗೆ ಬಂದಾಗ ಬೇಸಿಗೆ ಸಮಯದಲ್ಲಿ ಬೆಂಗಳೂರು ಹೇಗಿರುತ್ತದೋ ಆ ರೀತಿ ಸುಡು ಬಿಸಿಲು. ಇದೇನಪ್ಪಾ ನವೆಂಬರ್ - ಡಿಸೆಂಬರ್ ತಿಂಗಳುಗಳಲ್ಲೂ ಈ ರೀತಿ ಎಂದು ಯೋಚಿಸಿದಾಗ ತಟ್ಟನೆ ಹೊಳೆಯಿತು. ದಕ್ಷಿಣ ಆಫ್ರಿಕಾದಂತೆ ಆಸ್ಟ್ರೇಲಿಯಾ ಕೂಡ ಭೂಮಿಯ ಕೆಳ ಗೋಳಾರ್ಧದಲ್ಲಿ ಇರುವುದರಿಂದ ನಮ್ಮಲ್ಲಿ ಬೇಸಿಗೆ ಇದ್ದಾಗ ಆಸ್ಟ್ರೇಲಿಯಾದಲ್ಲಿ ಛಳಿಗಾಲ ಇರುತ್ತದೆ ಹಾಗೂ ನಮ್ಮಲ್ಲಿ ಛಳಿ ಇದ್ದಾಗ ಅಲ್ಲಿ ಬೇಸಿಗೆ ಇರುತ್ತದೆ.

ನಮ್ಮ ಹೋಟೆಲ್‌ನಿಂದ ನಡೆದೇ ನಾವು ಸಿಡ್ನಿ ಬಂದರಿನತ್ತ ಹೊರಟೆವು. ಸಿಡ್ನಿಯ ಪ್ರಮುಖ ಆಕರ್ಷಣೆ ಅಲ್ಲಿಯ ಬಂದರು. ಈ ಊರಿನ ಸರಿಸುಮಾರು ಎಲ್ಲ ಪ್ರೇಕ್ಷಣೀಯ ಸ್ಥಳಗಳೂ ಬಂದರಿನ ಸುತ್ತಮುತ್ತಲಲ್ಲೇ ಇವೆ. ಸಿಡ್ನಿ ಬಂದರಿನ ಅತಿ ಮುಖ್ಯ ಆಕರ್ಷಣೆ ಎಂದರೆ ಸಿಡ್ನಿ

ಒಪೇರಾ ಹೌಸ್. ದೆಹಲಿಯ ಬಹಾಯ್ ದೇಗುಲವನ್ನು ಹೋಲುವ ಈ ಕಟ್ಟಡ ಅರಳುತ್ತಿರುವ ಕಮಲ ಪುಷ್ಪದ ರೂಪದಲ್ಲಿದೆ. ಇದನ್ನು ಕಟ್ಟಬೇಕಾದರೆ ಒಂದು ಅಂತರಾಷ್ಟ್ರೀಯ ಸ್ಪರ್ಧೆ ಏರ್ಪಡಿಸಿ, ಸ್ಪರ್ಧೆಯಲ್ಲಿ ವಿಜೇತರಾದ ಡೇನಿಶ್ ವಾಸ್ತುಶಿಲ್ಪಿಗೆ ಕಟ್ಟಡದ ನಿರ್ಮಾಣದ ಕೆಲಸ ಒಪ್ಪಿಸಲಾಯಿತಂತೆ. ಈ ಕಟ್ಟಡ ಕಟ್ಟಲು ಹದಿನಾರು ವರ್ಷ ಬೇಕಾಯಿತಂತೆ. (1956-1971) ಇದಕ್ಕೆ ಬೇಕಾದ ವೆಚ್ಚಕ್ಕಾಗಿ ಲಾಟರಿಯೊಂದನ್ನು ಏರ್ಪಡಿಸಲಾಯಿತಂತೆ. ಇಂದಿಗೂ ಈ ಕಟ್ಟಡದಲ್ಲಿ ಪ್ರತಿ ವಾರವೂ ಹೆಸರಾಂತ ಸಂಗೀತಗಾರರಿಂದ ಕಛೇರಿಗಳು, ನೃತ್ಯರೂಪಕಗಳು ಇತ್ಯಾದಿ ನಡೆಯುತ್ತವೆ. ಇದು ವಿಶ್ವದ ಅತಿ ದೊಡ್ಡ ಸಾಂಸ್ಕೃತಿಕ ಕಟ್ಟಡಗಳಲ್ಲಿ ಒಂದು. ಈ ಕಟ್ಟಡವನ್ನು ಒಂದು ಸುತ್ತು ಹಾಕಿ ಒಳಗೆ ಕೂಡ ನೋಡಿ ಬಂದೆವು. ಈ ಕಟ್ಟಡ ಎಷ್ಟು ಹೆಸರುವಾಸಿ ಎಂದರೆ ಭಾರತ ಎಂದರೆ ತಾಜ್‌ಮಹಲ್ ಹೇಗೆ ಕಣ್ಣ ಮುಂದೆ ಬರುತ್ತದೋ ಹಾಗೆಯೇ ಸಿಡ್ನಿ ಎಂದರೆ ಅಪೇರಾ ಹೌಸ್ ಎದುರಾಗುತ್ತದೆ.

ಅಪೇರಾ ಹೌಸ್ ಮುಂದುಗಡೆ ಕಾಣುವ ಕಬ್ಬಿಣದ ಸೇತುವೆ ಕೂಡಾ ತುಂಬಾ ಹೆಸರುವಾಸಿ. ಸಿಡ್ನಿ ನಗರದ ಪಶ್ಚಿಮ ಭಾಗಕ್ಕೆ ಸಂಪರ್ಕ ಕಲ್ಪಿಸುವ ಈ ಸೇತುವೆ 1932ರಲ್ಲಿ ಕಟ್ಟಲ್ಪಟ್ಟಾಗ ಆಗಿನ ಕಾಲದಲ್ಲಿ ವಿಶ್ವದಲ್ಲೇ ಅತಿದೊಡ್ಡ ಸೇತುವೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಈ ಸೇತುವೆ ಹಾರ್ಬರ್ ಬ್ರಿಡ್ಜ್ ಎಂದು ಹೆಸರುವಾಸಿಯಾಗಿದೆ. ಅಪೇರಾ ಹೌಸ್‌ಗೆ ಹೊಂದಿಕೊಂಡಿರುವ ಡಾರ್ಲಿಂಗ್ ಹಾರ್ಬರ್ ಹಾಗೂ ಕಾಕಲ್ ಬೇ ಪ್ರದೇಶಗಳಲ್ಲೇ ಸಿಡ್ನಿ ನಗರದ ಪ್ರಮುಖ ಆಕರ್ಷಣೆಗಳಿವೆ. ಡಾರ್ಲಿಂಗ್ ಬಂದರಿನಲ್ಲಿ ಆಸ್ಟ್ರೇಲಿಯಾದ ಅತಿ ದೊಡ್ಡ ಥೀಮ್ ಪಾರ್ಕ್ (ಡಿಸ್ನಿ ಲ್ಯಾಂಡ್ ಮಾದರಿ) ಸೇಗಾ ವರ್ಲ್ಡ್ ಎನ್ನುವ ಆಕರ್ಷಣೆ ಅಲ್ಲದೆ ದೊಡ್ಡ ಪರದೆಯ ಮೇಲೆ ಚಿತ್ರಗಳನ್ನು ತೋರಿಸುವ ಐ ಮ್ಯಾಕ್ಸ್ ಥಿಯೇಟರ್ ಇದೆ. ಆಸ್ಟ್ರೇಲಿಯಾದ ಹೊರಾಂಗಣ ಅಕ್ವೇರಿಯಂ ಕೂಡ ಇಲ್ಲೇ ಇದ್ದು ಈ ಅಕ್ವೇರಿಯಂನಲ್ಲಿ ಆಸ್ಟ್ರೇಲಿಯಾದ ಸಮುದ್ರದಲ್ಲಿ ಕಾಣಬರುವ ತರಹೇವಾರಿ ಸಮುದ್ರ ಜಂತುಗಳ ದೊಡ್ಡ ಸಂಗ್ರಹ ಇದೆ. ನಾವು ಸ್ಯಾನ್‌ಡಿಯಾಗೋದಲ್ಲಿ ಹೋಗಿದ್ದ ಸೀ ವರ್ಲ್ಡ್ ನೆನಪಿಗೆ ಬಂತು. ಇತರ ಹತ್ತಿರದಲ್ಲೇ ಹೆಸರುವಾಸಿಯಾದ ಚೈನೀಸ್ ಗಾರ್ಡನ್ ಹಾಗೂ ರಾಷ್ಟ್ರೀಯ ಮಾರಿಟೈಮ್ ಮ್ಯೂಸಿಯಮ್ ಇದೆ. ಆಸ್ಟ್ರೇಲಿಯಾದ ಅತಿ ದೊಡ್ಡ ಕ್ಯಾಸಿನೋ "ಸ್ಟಾರ್ ಸಿಟಿ" ಬಂದರು ಪ್ರದೇಶದಲ್ಲಿ ಇದ್ದು, ತರಹೇವಾರು ಜೂಜಾಟಗಳನ್ನು ಈ ಕ್ಯಾಸಿನೋದಲ್ಲಿ ಆಡಬಹುದು. ಕ್ಯಾಸಿನೋ ಒಳಗಡೆ ಹೋದಾಗ ನಾವು ಲಾಸ್ ವೇಗಾಸ್‌ನ ಕ್ಯಾಸಿನೋಗೆ ಹೋದಂತಹ ಅನುಭವವೇ ಆಯಿತು. ಅದೃಷ್ಟ ಪರೀಕ್ಷೆಗೆಂದು ಸುಮಾರು ಹತ್ತು ಡಾಲರ್ ಜೂಜಿನ ಮಿಷನ್‌ನಲ್ಲಿ ಹಾಕಿದೆವು. ದುರಾದೃಷ್ಟವಶಾತ್ ಒಂದೇ ಒಂದು ಡಾಲರ್ ಕೂಡಾ ಗೆಲ್ಲಲಿಲ್ಲ. ಬೇಜಾರಾಗಿ ಕ್ಯಾಸಿನೋದಿಂದ ಹೊರ ಬಂದೆವು. ಅಷ್ಟರಲ್ಲಿ ಸಂಜೆಯಾಗಿತ್ತು. ಡಾರ್ಲಿಂಗ್ ಹಾರ್ಬರ್‌ನ ಸುತ್ತಲೂ ಜನರು ವಿಹರಿಸಲು ಬಂದಿದ್ದರು. ಮಕ್ಕಳು ಸ್ಕೇಟಿಂಗ್ ಚಕ್ರಗಳನ್ನು ಬೂಟಿಗೆ ಹಾಕಿಕೊಂಡು ಅತ್ತಿಂದಿತ್ತ ಓಡಾಡುತ್ತಾ ಇದ್ದರು. ಕೆಲವೆಡೆ ಕೆಲವು ಭಿಕ್ಷುಕರು ಮ್ಯಾಜಿಕ್ ಶೋ ಮಾಡುತ್ತಿದ್ದರೆ, ಇನ್ನು ಕೆಲವರು ಸಂಗೀತ ಹೇಳಿ ಜನ ರಂಜನೆ ಮಾಡುತ್ತಿದ್ದರು. ಯಾವುದೋ ಒಂದು ಮೇಳಕ್ಕೆ ಬಂದಂತೆ ಅನಿಸಿತು.

ಕತ್ತಲಾದ ನಂತರ ನಾವು ನಮ್ಮ ಹೋಟೆಲ್‌ಗೆ ವಾಪಸ್ಸಾಗಿ ಭಾರತೀಯ ರೆಸ್ಟೋರೆಂಟ್ ಒಂದಕ್ಕೆ ಊಟಕ್ಕೆ ಹೋದೆವು. ಸಿಡ್ನಿಯಲ್ಲಿ ಸಹಸ್ರಗಟ್ಟಲೆ ಭಾರತೀಯರು ಇದ್ದಾರೆ. ಕೆಲವೊಂದು ಬಡಾವಣೆಗಳಲ್ಲಂತೂ ಕೇವಲ ಭಾರತೀಯರೇ ವಾಸವಾಗಿದ್ದಾರೆ. ಇಲ್ಲಿಯ ರೇಡಿಯೋ ಸ್ಟೇಷನ್ ನಲ್ಲಿಯೂ ವಾರಕ್ಕೆ ಒಂದು ಬಾರಿ ಕನ್ನಡ ಕಾರ್ಯಕ್ರಮವನ್ನು ಬಿತ್ತರಿಸುತ್ತಾರೆಂದು ತಿಳಿದು ಬಂತು.

ಮಾರನೇ ದಿನ ಬೆಳಗ್ಗೆ ಎದ್ದು ಸಿಡ್ನಿ ನಗರದ ಪ್ರದಕ್ಷಿಣೆ ಹಾಕುವ ಬಸ್‌ನಲ್ಲಿ ಹೊರಟೆವು. ಈ ಬಸ್ ನಗರದ ಹತ್ತು ಹಲವು ಆಕರ್ಷಣೆಗಳನ್ನು ತೋರಿಸುತ್ತದೆ. ನಮಗೆ ಬೇಕಾದ ಜಾಗದಲ್ಲಿ ಇಳಿದು ನಮಗಿಷ್ಟ ಬಂದಷ್ಟು ಹೊತ್ತು ಸುತ್ತಾಡಿ ಮುಂದಿನ ಬಸ್ ಹತ್ತಬಹುದು. ಬಸ್‌ನಲ್ಲಿ ಕುಳಿತು ಮೊದಲು ನಾವು ನೋಡಿದ್ದು ರಾಯಲ್ ಬಟಾನಿಕಲ್ ಗಾರ್ಡನ್. ಇದು ನಗರದ ಮಧ್ಯ ಭಾಗದಲ್ಲಿ ಇದ್ದು, ಸಮುದ್ರ ತೀರದಲ್ಲಿ ಇರುವುದರಿಂದ ಹಲವಾರು ಸಿಡ್ನಿ ನಾಗರೀಕರು ಇಲ್ಲಿಗೆ ವಾಯು ವಿಹಾರಕ್ಕೆ ಪ್ರತಿ ದಿನ ಬಂದು ಆಹ್ಲಾದಿಸುತ್ತಾರೆ. ಸಿಡ್ನಿಯಲ್ಲಿ ನಾನು ನೋಡಿದ ವಿಶೇಷ ಎಂದರೆ ಮಧ್ಯಾಹ್ನದ ಊಟದ ಸಮಯದಲ್ಲಿ ಹಲವಾರು ಜನ ಉದ್ಯಾನವನಗಳಿಗೆ ಬಂದು ವ್ಯಾಯಾಮ ಮಾಡುತ್ತಾರೆ. ಸಣ್ಣ ಮಕ್ಕಳಿಂದ ಹಿಡಿದು 70-75 ವರ್ಷದ ವೃದ್ದರು ನಿಯಮಿತ ವ್ಯಾಯಾಮ ಮಾಡುವುದು ನೋಡಿ ನಮಗೆ ಆಶ್ಚರ್ಯವಾಯಿತು.

1878ರ ಜನವರಿ 26 ರಂದು ಬ್ರಿಟೀಷರು ಆಸ್ಟ್ರೇಲಿಯಾಗೆ ಮೊದಲ ಬಾರಿ ಕಾಲಿಟ್ಟದ್ದು ಈ ಉದ್ಯಾವನದ ಬಳಿಯೇ. ಅವರು ತಮ್ಮ ದೇಶದಿಂದ ಗಡೀಪಾರು ಮಾಡಿದ ಕೈದಿಗಳಿಗಾಗಿ ನಮ್ಮಲ್ಲಿನ ಅಂಡಮಾನ್ ದ್ವೀಪದಂತೆ ಆಸ್ಟ್ರೇಲಿಯಾ ದ್ವೀಪವನ್ನು ಆರಿಸಿಕೊಂಡು ಹಡಗುಗಟ್ಟಲೆ ಕೈದಿಗಳನ್ನು ಸಿಡ್ನಿ ಬಂದರಿನಲ್ಲಿಳಿಸಿ ಆಸ್ಟ್ರೇಲಿಯಾವನ್ನು ತಮ್ಮ ವಸಾಹತು ಮಾಡಿಕೊಂಡುಬಿಟ್ಟರು.

ಉದ್ಯಾನವನದ ಪಕ್ಕದಲ್ಲಿ ಶಾಸನ ಸಭಾ ಭವನ (ಹಳೆಯದು) ಇದೆ. ಈ ಭವನದ ಒಳಗಡೆ ಒಂದು ಸುತ್ತು ಹಾಕಿ ಹೊರಗೆ ಬಂದು ಅಲ್ಲಿಯೇ ಪಕ್ಕದಲ್ಲಿರುವ ಲಲಿತ ಕಲೆಗಳ ಮ್ಯೂಸಿಯಂಗೆ ಹೋದೆವು. ಆಸ್ಟ್ರೇಲಿಯಾದ ಮೂಲ ನಿವಾಸಿಗಳು (Aborigines) ರಚಿಸಿದ ಕಲಾಕೃತಿಗಳನ್ನು ವೀಕ್ಷಿಸಿ ದಂಗಾದೆವು.


ಇದಾದ ನಂತರ ನಮ್ಮ ಬಸ್ ಸಹಸ್ರಮಾನದ ಒಲಂಪಿಕ್ ಕ್ರೀಡೆಗಳು ನಡೆಯಬೇಕಿದ್ದ ಒಲಂಪಿಕ್ ಪಾರ್ಕ್‌ಗೆ ನಮ್ಮನ್ನು ಕರೆದೊಯ್ಯಿತು. ಹೋಮ್ ಬುಷ್ ಬೇ ಒಲಂಪಿಕ್ ಪಾರ್ಕ್‌ನಲ್ಲಿ ಈಗಾಗಲೇ ಸ್ಟೇಡಿಯಂ ಆಸ್ಟ್ರೇಲಿಯಾ ಎಂಬ ಹೆಸರಿನ ಅತಿ ದೊಡ್ಡ ಸ್ಟೇಡಿಯಂ ಕಟ್ಟಲಾಗಿದ್ದು ಇದರ ಉಪಯೋಗ ಕೂಡ ಮಾಡುತ್ತಿದ್ದರು. ಒಂದು ತಪ್ಪಲೆಯ ಆಕಾರದಲ್ಲಿರುವ ಈ ಸ್ಟೇಡಿಯಂನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರು ಕೂಡಬಹುದಾಗಿದೆ. ಈ ಸ್ಟೇಡಿಯಂ ಒಳಗೆ ಕ್ರೀಡೆಗಳ ಪ್ರಾರಂಭ ಹಾಗೂ ಮುಕ್ತಾಯ ಸಮಾರಂಭಗಳು ನಡೆಯುತ್ತವೆ ಎಂದರು. ಈ ಸ್ಟೇಡಿಯಂ ಮುಂಭಾಗದಲ್ಲಿ ಇರುವ ಸೂಪರ್ ಡೋಮ್‌ನಲ್ಲಿ ಬ್ಯಾಸ್ಕೆಟ್ ಬಾಲ್ ಕ್ರೀಡೆಗಳು ನಡೆಯುತ್ತವೆ. ಅಥ್ಲೆಟಿಕ್ ಕ್ರೀಡೆಗಳಿಗೆ ಎರಡು ಬೇರೆ ಬೇರೆ ಸ್ಟೇಡಿಯಂ ನಿರ್ಮಿಸಲಾಗಿದೆ. ಇದರಲ್ಲಿ ಒಂದು ಸ್ಟೇಡಿಯಂ ಕ್ರೀಡಾಪಟುಗಳ ತಯಾರಿ ಹಾಗೂ Warm Up ಗೆ ಮೀಸಲಾಗಿದೆ. ಕ್ರೀಡಾಪಟುಗಳಿಗೆ ವಾಸಕ್ಕೆಂದು ಒಲಂಪಿಕ್ ಗ್ರಾಮ ತಯಾರಾಗಿತ್ತು. ಕ್ರೀಡಾಂಗಣದ ಬಳಿ ಅತಿ ದೊಡ್ಡದಾದ ಅಂತರರಾಷ್ಟ್ರೀಯ ಹೋಟೆಲ್ ಒಂದನ್ನು ಕಟ್ಟಲಾಗುತ್ತಿತ್ತು. ಅಂತರರಾಷ್ಟ್ರೀಯ ಮಟ್ಟದ ಈಜುಕೊಳ ಕಟ್ಟಲಾಗಿತ್ತು. ಈ ಈಜುಕೊಳದಲ್ಲಿ ಹಲವಾರು ರಾಷ್ಟ್ರೀಯ ಸ್ಪರ್ಧೆಗಳು ನಡೆದಿವೆ. ಟೆನ್ನಿಸ್ ಆಟಕ್ಕೆಂದು 16 ಕೋರ್ಟ್‌ಗಳಿರುವ ಟೆನ್ನಿಸ್ ಸೆಂಟರ್ ಕಟ್ಟಲಾಗಿದೆ ಸಿಡ್ನಿ ನಗರದ ಮಧ್ಯ ಭಾಗದಿಂದ ಒಲಂಪಿಕ್ ಪಾರ್ಕಿಗೆ ಹೋಗಲು ವಿಶೇಷ ರೈಲು ಮಾರ್ಗ ಹಾಕಲಾಗುತ್ತಿತ್ತು. ಕ್ರೀಡಾಂಗಣದಲ್ಲಿ ಒಂದು ಹೊಸ ರೈಲ್ವೆ ಸ್ಟೇಷನ್ ಕಟ್ಟಲಾಗಿದೆ.

ನಾವು ಸಿಡ್ನಿಗೆ ಹೋದಾಗ ಒಲಂಪಿಕ್ ಕ್ರೀಡೆಗಳು ನಡೆಯಲು ಇನ್ನೂ 5-6 ತಿಂಗಳು ಬಾಕಿ ಇದ್ದರೂ ಸಮರೋಪಾದಿಯಲ್ಲಿ ಕಟ್ಟಡಗಳ ನಿರ್ಮಾಣ ಮಾಡುತ್ತಿದ್ದರು. ಒಲಂಪಿಕ್ ಕ್ರೀಡೆಗಳು ಪ್ರಾರಂಭವಾಗುವ ಮೊದಲೇ ಆ ಕ್ರೀಡಾ ಸಮುಚ್ಚಯವನ್ನು ನೋಡಿ ನಾವೇ ಒಲಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸಿದ್ದೇವೇನೋ ಎನ್ನುವ ಭಾವನೆ ಬಂದಿತು.

ಅದೇ ದಿನ ರಾತ್ರಿ ನಾವು ಸಿಡ್ನಿಯ ಪ್ರಮುಖ ಆಕರ್ಷಣೆ ಕಿಂಗ್ಸ್ ಕ್ರಾಸ್‌ಗೆ ಹೋದೆವು. ಮತ್ತೊಮ್ಮೆ ಪ್ಯಾರಿಸ್‌ಗೆ ಬಂದ ಅನುಭವವಾಯಿತು. ಏಕೆಂದರೆ ಈ ರಸ್ತೆ ರಾತ್ರಿ ಚಟುವಟಿಕೆಗಳಿಗೆ ತುಂಬಾ ಹೆಸರುವಾಸಿ.

ಸಿಡ್ನಿ ನಗರದ ಒಂದು ಭಾಗದಲ್ಲಿ ವೆಸ್ಟ್ ಪಾಯಿಂಟ್ ಮಾಲ್ ಎಂಬ ಬಹು ದೊಡ್ಡ ವಾಣಿಜ್ಯ ಸಂಕೀರ್ಣ ಇದೆ. ನಾವು ಇದುವರೆಗೆ ನೋಡಿದ ಮಾಲ್‌ಗಳಿಗಿಂತ ಕಡಿಮೆ ಬೆಲೆಯಲ್ಲಿ (ದುಬಾಯ್ ಹೊರತುಪಡಿಸಿ) ಇಲ್ಲಿ ವಸ್ತುಗಳು ಲಭ್ಯ. ಆಸ್ಟ್ರೇಲಿಯಾ ದೇಶ ಹವಳಕ್ಕೆ ತುಂಬಾ ಹೆಸರುವಾಸಿ. ಅಲ್ಲಿ ಬಹಳ ಕಡಿಮೆ ಬೆಲೆಗೆ ಹವಳ ದೊರೆಯುತ್ತದೆ.

ಮಾರನೇ ದಿನ ಬೆಳಿಗ್ಗೆ ಶಾಪಿಂಗ್ ಮಾಡಲು ಕ್ವೀನ್ ವಿಕ್ಟೋರಿಯಾ ಬಿಲ್ಡಿಂಗ್‌ಗೆ ಹೋದೆವು. ಈ ಕಟ್ಟಡದಲ್ಲೂ ತರಹೇವಾರಿ ವಸ್ತುಗಳು ಲಭ್ಯ. ಕೆಲವು ಸಣ್ಣ ಪುಟ್ಟ ವಸ್ತುಗಳನ್ನು ಖರೀದಿಸಿ ಅದೇ ರಾತ್ರಿ ಬಸ್ಸಿನಲ್ಲಿ ಕುಳಿತು ಗೋಲ್ಡ್ ಕೋಸ್ಟ್‌ಗೆ ಹೊರಟೆವು.



ಗೋಲ್ಡ್ ಕೋಸ್ಟ್ - ಬ್ರಿಸ್ ಬೇನ್

ಸಿಡ್ನಿಯಿಂದ ರಾತ್ರಿ ಹೊರಡುವ ಲಕ್ಸುರಿ ಬಸ್‌ನಲ್ಲಿ ಕುಳಿತ ನಾವು ಬೆಳಗ್ಗೆ ಏಳುವಷ್ಟರಲ್ಲಿ ನಮ್ಮ ಬಸ್ ಸರ್‌ಫರ್ಸ್ ಪ್ಯಾರಡೈಸ್ ಎನ್ನುವ ಜಾಗಕ್ಕೆ ಬಂದು ಮುಟ್ಟಿತ್ತು. "ನಾವು ಗೋಲ್ಡ್ ಕೋಸ್ಟ್ ತಲುಪಿದ್ದೇವೆ ಇಲ್ಲೆ ಇಳಿಯಿರಿ" ಎಂದ ನಮ್ಮ ಡ್ರೈವರ್. ಬಸ್‌ನಿಂದ ಇಳಿದು ಬಸ್‌ಸ್ಟಾಂಡ್‌ನ ಹತ್ತಿರದಲ್ಲೆ ಇದ್ದ ಮೋಟೆಲ್ (Motel) ಒಂದರಲ್ಲಿ ರೂಂ ಪಡೆದೆವು. ಸ್ನಾನ ಆದ ಕೂಡಲೇ ಮೋಟೆಲ್‌ನ ಮಾಲೀಕನಿಂದ ಗೋಲ್ಡ್ ಕೋಸ್ಟ್ ಬಗ್ಗೆ ವಿವರವಾದ ಮಾಹಿತಿ ಪಡೆದೆವು.

1770 ರಲ್ಲಿ ಆಸ್ಟ್ರೇಲಿಯಾದ ಪೂರ್ವ ಭಾಗದ ತೀರದಲ್ಲಿ ಸಮುದ್ರಯಾನ ಮಾಡುತ್ತಿದ್ದ ಕ್ಯಾಪ್ಟನ್ ಕುಕ್ ಗೋಲ್ಡ್ ಕೋಸ್ಟ್ ಜಾಗವನ್ನು ಕಂಡುಹಿಡಿದನಂತೆ. ಆ ನಂತರ 1842ರಲ್ಲಿ ನೆಡ್ಡಿ ಹಾರ್ಪರ್ ಎನ್ನುವ ಬಡಗಿ ಮರಗಳನ್ನು ಹುಡುಕಿಕೊಂಡು ಈ ಪ್ರದೇಶಕ್ಕೆ ಬಂದಾಗ ಅಲ್ಲಿಯೇ ಇದ್ದ ಸುಂದರ ಸಮುದ್ರ ತೀರವನ್ನು ನೋಡಿ ಮನಸೋತು ಈ ಜಾಗ ಸುಂದರ ಪ್ರವಾಸಿ ತಾಣ ಆಗುವುದರಲ್ಲಿ ಸಂಶಯವಿಲ್ಲ ಎಂದುಕೊಂಡು ಅಲ್ಲೆ ವಾಸ ಮಾಡತೊಡಗಿದನಂತೆ. ಸುಮಾರು 50 ಕಿ.ಮೀ. ಗಳಷ್ಟು ಉದ್ದವಿರುವ ಚಿನ್ನದ ಬಣ್ಣದ ಮರಳು ಇರುವ ಪ್ರಶಾಂತ ಕಡಲು ತೀರ ಪ್ರದೇಶವಾದ್ದರಿಂದ ಈ ಊರಿಗೆ ಗೋಲ್ಡ್ ಕೋಸ್ಟ್ ಎನ್ನುವ ಹೆಸರು ಬಂತಂತೆ. 1888 ರಲ್ಲಿ ಇಲ್ಲಿಯ ಮುಖ್ಯ ಬೀಚ್‌ನಲ್ಲಿ ಒಂದು ಹೋಟೆಲ್ ಕಟ್ಟಿದ ನಂತರ ಅಲ್ಲಿಗೆ ಆಸ್ಟ್ರೇಲಿಯಾ ಹಾಗೂ ವಿದೇಶಿ ಪ್ರವಾಸಿಗರು ಬರತೊಡಗಿ ಕಾಲಕ್ರಮೇಣ ಈ ಜಾಗ ಒಂದು ಪ್ರಾಮುಖ್ಯ ವಿಹಾರಿ ತಾಣವಾಗಿ ಮಾರ್ಪಾಟಾಯಿತಂತೆ. ಸಮುದ್ರ ತೀರದ ರಜಾ ವಿರಾಮ ಬಯಸಿ ಬರುವ ಜನಕ್ಕೆ ಗೋಲ್ಡ್ ಕೋಸ್ಟ್ ವಿವಿಧ ರೀತಿಯ ಆಕರ್ಷಣೆಗಳನ್ನೂ ಒದಗಿಸುತ್ತದೆ ಎಂದು ಮೋಟೆಲ್ ಮಾಲೀಕ ಹೇಳಿದ.

ನಾವು ಮೋಟೆಲ್‌ನಿಂದ ಹೊರ ಬಂದು ಕಾಲು ಕಿ.ಮೀ. ಹೋದ ಕೂಡಲೇ ಸಮುದ್ರತೀರ ಕಂಡಿತು. ಸೀದಾ ಬೀಚ್‌ಗೇ ಹೋದೆವು. ನಮ್ಮಂತೆ ನೂರಾರು ಜನ ಅಲ್ಲಿ ನೆರೆದಿದ್ದು ಸಮುದ್ರ ತೀರದಲ್ಲಿ ಹಲವಾರು ಕ್ರೀಡೆಗಳಲ್ಲಿ ತೊಡಗಿದ್ದರು. ಕೆಲವರು ಈಜಾಡುತ್ತಾ ಇದ್ದರೆ, ಕೆಲವರು ಬೀಚ್ ವಾಲಿಬಾಲ್ ಆಡುತ್ತಿದ್ದರು. ಕೆಲವರು ಸಮುದ್ರದಲ್ಲಿ ಸ್ಕೂಟರ್‌ಗಳನ್ನು ಓಡಿಸುತ್ತಾ ಇದ್ದರು. ಕೆಲವರು ಸರ್ಫ್ ಮಾಡುತ್ತಾ ಇದ್ದರು. ಸುಮಾರು ಮುಕ್ಕಾಲು ಗಂಟೆ ಸಮುದ್ರ ತೀರದಲ್ಲಿ ವಿಹರಿಸಿದ ನಂತರ ಸರ್‌ಫರ್ಸ್ ಪ್ಯಾರಡೈಸ್ ಕೇಂದ್ರ ಸ್ಥಳಕ್ಕೆ ಬಂದೆವು. ಈ ಕೇಂದ್ರ ಭಾಗದಲ್ಲಿ ಬಹಳಷ್ಟು

ವಾಣಿಜ್ಯ ಸಂಕೀರ್ಣಗಳು ಇವೆ. ತರಹೇವಾರಿ ತಿಂಡಿ ತಿನಿಸುಗಳನ್ನು ಮಾರುವ ಹೋಟೆಲ್‌ಗಳಲ್ಲದೆ ದೊಡ್ಡ ದೊಡ್ಡ ಶಾಪಿಂಗ್ ಮಾಲ್‌ಗಳಿವೆ. ಒಳಾಂಗಣ ಕ್ರೀಡೆಗಳನ್ನು ಆಡುವ ಸಮುಚ್ಚಯವಿದೆ. ಬಟ್ಟೆ - ಬರೆಗಳು, ಶೂಗಳು ಮತ್ತಿತರ ಫ್ಯಾಷನ್ ಸಾಮಗ್ರಿಗಳ ಅಂಗಡಿಗಳೂ ಇವೆ. ಸಿನಿಮಾ ಮಂದಿರಗಳಿವೆ. ಪ್ರವಾಸಿಗರನ್ನು ಆಕರ್ಷಿಸುವ ಎಲ್ಲ ರೀತಿಯ ಚಟುವಟಿಕೆಗಳೂ ಇಲ್ಲಿ ಲಭ್ಯ.

ಇಲ್ಲಿ ಸುತ್ತುವಷ್ಟರಲ್ಲಿ ಕತ್ತಲಾಗಿದ್ದೇ ಗೊತ್ತಾಗಲಿಲ್ಲ. ನಮ್ಮ ಮೋಟೆಲ್‌ಗೆ ವಾಪಸ್ ಹೋಗುವಾಗ ದಾರಿಯಲ್ಲಿ ಪಲಾವ್ ವಾಸನೆ ಮೂಗಿಗೆ ಬಡಿಯಿತು. ಎಲ್ಲಿಂದ ಈ ಘಮ ಬರುತ್ತಿದೆ ಎಂದು ತಿರುಗಿದರೆ ಅಲ್ಲಿ ಒಂದು ಇಂಡಿಯನ್ ರೆಸ್ಟೋರೆಂಟ್ ಕಂಡಿತು. ನೇರವಾಗಿ ಒಳಗೆ ನುಗ್ಗಿ ವೆಜಿಟೆಬಲ್ ಪಲಾವ್ ಜತೆ ಗಟ್ಟಿ ಮೊಸರಲ್ಲದೆ ವಡೆ - ಸಾಂಬಾರ್ ಕೂಡಾ ತಿಂದೆವು. ಆ ಹೋಟೆಲ್ ನಡೆಸುತ್ತಿರುವ ಮಹಿಳೆ ಪಾಕಿಸ್ತಾನಿ ಎಂದು ತಿಳಿದು ಆಶ್ಚರ್ಯವಾಯಿತು. ಗೋಲ್ಡ್ ಕೋಸ್ಟ್ ಏಕೆ. ಇಡೀ ಆಸ್ಟ್ರೇಲಿಯಾದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರು ಹಾಗೂ ಪಾಕಿಗಳು ಇದ್ದಾರೆ.

ಮಾರನೇ ದಿನ ಹತ್ತಿರದಲ್ಲೇ ಇರುವ ಮೂವಿ ವರ್ಲ್ಡ್ ಎನ್ನುವ ಥೀಮ್ ಪಾರ್ಕ್‌ಗೆ ಹೋದೆವು. ವಾರ್ನರ್ ಬ್ರದರ್ಸ್ ಸಂಸ್ಥೆ ನಿರ್ಮಿಸಿರುವ ಈ ಥೀಮ್ ಪಾರ್ಕ್ ನಾವು ಈಗಾಗಲೇ ನೋಡಿದ್ದ ಯೂನಿವರ್ಸಲ್ ಸ್ಟುಡಿಯೋ ಹಾಗೆ ಇದೆ. ಇಲ್ಲಿ ಹಲವಾರು ಸಾಹಸಿ ರೈಡ್‌ಗಳಲ್ಲದೆ, ಸಂಗೀತ, ನೃತ್ಯ, ನಾಟಕ ಇತ್ಯಾದಿ ಮನರಂಜನಾ ಕಾರ್ಯಕ್ರಮಗಳೂ ಇವೆ. ವಾರ್ನರ್ ಬ್ರದರ್ಸ್ ಸಂಸ್ಥೆ ತಯಾರಿಸಿರುವ ಸಿನಿಮಾಗಳ ಬಗ್ಗೆ ಪರಿಚಯವೂ ಆಗುತ್ತದೆ. ಈ ಥೀಮ್ ಪಾರ್ಕ್ ನೋಡಲು ಇಡೀ ದಿನವೇ ಹಿಡಿಯಿತು. ರಾತ್ರಿ ಸುಸ್ತಾಗಿ ಮೋಟೆಲ್‌ಗೆ ಹಿಂದಿರುಗಿದೆವು.

ಗೋಲ್ಡ್ ಕೋಸ್ಟ್‌ನಲ್ಲಿ ಮೂವಿ ವರ್ಲ್ಡ್ ಅಲ್ಲದೆ ಎರಡು ಇತರ ಭಾರೀ ಥೀಮ್ ಪಾರ್ಕ್‌ಗಳು ಇವೆ. ಸೀ ವರ್ಲ್ಡ್ ಎಂದು ಕರೆಯುವ ಪಾರ್ಕ್ ನಾವು ಸ್ಯಾಂಡಿಯಾಗೋನಲ್ಲಿ ನೋಡಿದಂತಹ ಮನರಂಜನಾ ಸ್ಥಳ. ವೆಟ್ ಅಂಡ್ ವೈಲ್ಡ್ ವಾಟರ್ ವರ್ಲ್ಡ್ ಎಂದು ಕರೆಯುವ ಇನ್ನೊಂದು ಥೀಮ್ ಪಾರ್ಕ್‌ನಲ್ಲಿ ನೂರಾರು ಸಾಹಸಿ ಜಲಕ್ರೀಡೆಗಳು ಇವೆ. ಇವೆರಡೂ ಪಾರ್ಕ್‌ಗಳನ್ನು ನೋಡಲು ಎರಡು ದಿನ ಬೇಕಾದ್ದರಿಂದ ನಾವು ಅವುಗಳನ್ನು ನೋಡಲು ಹೋಗಲಿಲ್ಲ.

ಹದಿನೆಂಟು ರಾಷ್ಟ್ರಗಳಲ್ಲಿ ಪ್ರವಾಸ ಮಾಡಿರುವ ನನಗೆ ಗೋಲ್ಡ್ ಕೋಸ್ಟ್‌ನಂತಹ ಉತ್ತಮ ಸಮುದ್ರ ತೀರದ ಪ್ರವಾಸೀ ತಾಣ ಬೇರೆ ಎಲ್ಲೂ ಇಲ್ಲ ಎನಿಸಿತು. ಬಹುಶಃ ಜನ ಅಮೇರಿಕಾದ ಫ್ಲಾರಿಡಾ ಸಮುದ್ರ ತೀರವನ್ನು ಮೆಚ್ಚಿಕೊಳ್ಳುತ್ತಾರೆ. ಆದರೆ ಗೋಲ್ಡ್ ಕೋಸ್ಟ್‌ನ ವಿಶೇಷತೆ ಅಲ್ಲಿನ ಸಮುದ್ರ ತೀರದ ಉದ್ದ, ಅಲ್ಲಿ ಇರುವ ಎಲ್ಲಾ ಬಡ್ಜೆಟ್‌ಗೂ ನಿಲುಕುವ ಹೋಟೆಲ್‌ಗಳು, ಅಲ್ಲಿನ ಸಮಶೀತೋಷ್ಣ ಹವೆ, ಎಲ್ಲಕ್ಕಿಂತ ಹೆಚ್ಚಾಗಿ ಹತ್ತಿರದಲ್ಲೇ ಇರುವ ಹಲವಾರು ಪ್ರವಾಸಿ ಆಕರ್ಷಣೆಗಳು. ಸಮುದ್ರ ತೀರದ ಬಳಿ ಹತ್ತು ದಿನಗಳ ರಜೆ ಕಳೆಯಬೇಕೆಂದು ಅನಿಸಿದರೆ ಆ ಹತ್ತೂ ದಿನಗಳಲ್ಲಿ ಪ್ರತಿ ದಿನವೂ ಒಂದೇ ಜಾಗವನ್ನು ನೋಡದೆ ಕಳೆಯಲ್ಪಡದ ಊರು ಹಾಗೂ ಅತಿ ಕಡಿಮೆ ವೆಚ್ಚದಲ್ಲಿ ರಜೆ ಅನುಭವಿಸಬಹುದಾದ ಊರು ಗೋಲ್ಡ್ ಕೋಸ್ಟ್ ಎಂದು ನನ್ನ ಸ್ಪಷ್ಟ ಅಭಿಪ್ರಾಯ.

ಮೂರು ದಿನ ಗೋಲ್ಡ್ ಕೋಸ್ಟ್‌ನಲ್ಲಿ ವಿಶ್ರಾಂತಿ ನಂತರ ನಾಲ್ಕನೇ ದಿನ ಬೆಳಗ್ಗೆ ಹತ್ತಿರದಲ್ಲೇ ಇರುವ ಬ್ರಿಸ್‌ಬೇನ್‌ಗೆ ಒಂದೂವರೆ ಗಂಟೆ ಬಸ್ ಪ್ರಯಾಣದ ನಂತರ ತಲುಪಿದೆವು. ಈ

ಊರಿನಲ್ಲಿ ಕಣ್ಣಿಗೆ ಎದ್ದು ಕಾಣಿಸುವುದು ಅಲ್ಲಿಯ ಬಸ್ ನಿಲ್ದಾಣ. ಮೂರು ಮಹಡಿಯ ಎತ್ತರದ ಕಟ್ಟಡದ ಸಮುಚ್ಚಯದ ಮೇಲೆ ಬಸ್ ನಿಲ್ದಾಣ ಇದೆ. ಅಂದರೆ ಮೂರನೇ ಮಹಡಿಯ ಒಳಗಡೆ ಬಸ್‌ಗಳು ನಿಲ್ಲುವ ಹಾಗೂ ಹೊರಡುವ ಜಾಗ. ಮೊದಲ ಎರಡು ಮಹಡಿಗಳಲ್ಲಿ ವಾಣಿಜ್ಯ ಸಂಕೀರ್ಣಗಳು ಇವೆ. ನಾನು ಇಂತಹ ಬಸ್ ನಿಲ್ದಾಣವನ್ನು ಎಲ್ಲೂ ನೋಡಿರಲಿಲ್ಲ.

ಬಸ್ ನಿಲ್ದಾಣದಿಂದ ಹೊರ ಬಂದ ಕೂಡಲೇ ರಸ್ತೆಯ ಒಂದು ಬದಿಯಲ್ಲಿ ಬ್ರಿಸ್‌ಬೇನ್ ನಗರ ಪ್ರದಕ್ಷಿಣೆ ಬಸ್ಸಿಗೆ ಟಿಕೆಟ್ ನೀಡುವ ಬೂತ್ ಕಾಣಿಸಿತು. ನಾವು ಅಲ್ಲಿಗೆ ಹೋಗಿ ಒಂದು ಇಡೀ ದಿನ ಬ್ರಿಸ್‌ಬೇನ್ ಆಕರ್ಷಣೆಗಳನ್ನು ತೋರಿಸುವಂತಹ ಗೈಡ್ ಇರುವ ಬಸ್ಸಿಗೆ ಟಿಕೇಟ್ ಪಡೆದೆವು. ಐದೇ ನಿಮಿಷಗಳ ನಂತರ ಟ್ರಾಮ್‌ನಂತೆ ಕಾಣಿಸುವ ಬಸ್ ಬಂತು.

ನಾವು ಬಸ್ಸನ್ನೇರಿದ ಕೂಡಲೇ ನಮ್ಮ ಮಾರ್ಗದರ್ಶಿ ಹೇಳಿದ್ದು 1825 ರಲ್ಲಿ ಯೂರೋಪಿಯನ್ನರು ಬ್ರಿಸ್‌ಬೇನ್‌ಗೆ ಮೊದಲು ಬಂದು, ಸಿಡ್ನಿಯಂತೆಯೇ ಇಲ್ಲಿಯೂ ಖೈದಿಗಳ ಕಾಲೋನಿಯನ್ನು ನಿರ್ಮಿಸಿದರು. ಮೊದಲಿಗೆ ಬ್ರಿಸ್‌ಬೇನ್ ನ್ಯೂ ಸೌತ್ ವೇಲ್ಸ್ ಪ್ರಾಂತ್ಯಕ್ಕೆ ರಾಜಧಾನಿ ಆಯಿತು. ರಾಜಧಾನಿಯಾದ ನಂತರ ಬ್ರಿಸ್‌ಬೇನ್ ಸರ್ವತೋಮುಖ ಬೆಳವಣಿಗೆ ಕಂಡಿತು. ಆದ್ದರಿಂದಲೇ ಇಂದಿಗೂ ಬ್ರಿಸ್‌ಬೇನ್‌ನಲ್ಲಿ ಹಳೆಯ ಹಾಗೂ ನವೀನ ಮಾದರಿಯ ಕಟ್ಟಡಗಳು ಭುಜಕ್ಕೆ ಭುಜ ತಾಕಿಸಿಕೊಂಡಿಯೇ ಇವೆ ಎಂದು. ಈಗ ಇದು ಕ್ವೀನ್ಸ್‌ಲ್ಯಾಂಡ್‌ನ ರಾಜಧಾನಿ.

ಬ್ರಿಸ್‌ಬೇನ್ ನದಿ ತೀರದಲ್ಲಿರುವ ಪಟ್ಟಣ. ನಮ್ಮ ಬಸ್ ಮೊದಲು ನಿಂತಿದ್ದು ಈ ಪಟ್ಟಣದ ಮುಖ್ಯ ಜಾಗವಾದ ಬಟಾನಿಕಲ್ ಗಾರ್ಡನ್‌ನಲ್ಲಿ. 1885 ರಲ್ಲಿ ಇಲ್ಲಿನ ಖೈದಿಗಳ ಭೋಜನಕ್ಕೆಂದು ಹುಟ್ಟು ಹಾಕಿದ್ದ ಈ ತೋಟ ಸುಂದರ ತೋಟ. ವಿಶಾಲವಾದ ಈ ತೋಟದಲ್ಲಿ ವಿಹಾರ ಮಾಡುವುದೇ ಒಂದು ಆನಂದದಾಯಕ ಚಟುವಟಿಕೆ. ಈ ತೋಟದಲ್ಲಿರುವ ಬ್ಯಾಂಡ್ ಸ್ಟಾಂಡ್‌ನಲ್ಲಿ ಇಲ್ಲಿಯ ಜನ ಮದುವೆ ಮಾಡಿಕೊಳ್ಳುವುದು ಫ್ಯಾಷನ್ ಆಗಿದೆಯಂತೆ. ತೋಟದ ಪಕ್ಕದಲ್ಲಿ ಕ್ವೀನ್ಸ್ ಲ್ಯಾಂಡ್ ತಾಂತ್ರಿಕ ವಿಶ್ವವಿದ್ಯಾಲಯ ಇದೆ. ಹಲವಾರು ಭಾರತೀಯರೂ ಕಲಿಯುತ್ತಿರುವ ಈ ವಿಶ್ವವಿದ್ಯಾಲಯವನ್ನು ಒಂದು ಸುತ್ತು ಹಾಕಿ ಅದರ ಪಕ್ಕದಲ್ಲೆ ಇರುವ ಹಳೆ ಸರ್ಕಾರಿ ಭವನ ಹಾಗೂ ಪಾರ್ಲಿಮೆಂಟ್ ಭವನವನ್ನು ನೋಡಿದೆವು. ಇದಾದ ನಂತರ ನದಿ ತೀರಕ್ಕೆ ಬಂದು ಬ್ರಿಸ್‌ಬೇನ್ ನದಿಯ ವಿಹಾರವನ್ನು ಮಾಡಿದೆವು. ಅಲ್ಲಿಂದ ಮುಂದೆ ನಗರದ ಮಧ್ಯ ಭಾಗಕ್ಕೆ ಬಂದು ಅಲ್ಲಿನ Anzac Memorial ನೋಡಿದೆವು. ವಿಶ್ವ ಮಹಾ ಯುದ್ಧದಲ್ಲಿ ಮರಣ ಹೊಂದಿದವರ ಸ್ಮರಣಾರ್ಥ ಈ ಸ್ಮಾರಕವನ್ನು ಕಟ್ಟಲಾಗಿದೆ. ಈ ಸ್ಮಾರಕದ ಬಳಿಯೇ ಸೆಂಟ್ ಥಾಮಸ್ ಚರ್ಚ್ ಇದೆ. ಇದನ್ನು ನೋಡಿದ ನಂತರ ಹತ್ತಿರದಲ್ಲೇ ಇದ್ದ Gabba ಕ್ರಿಕೆಟ್ ಮೈದಾನಕ್ಕೆ ಹೋದೆವು. ಭಾರತೀಯರು ಆಸ್ಟ್ರೇಲಿಯಾ ಪ್ರವಾಸ ಮಾಡಿದಾಗ ಆಡುವ ಕ್ರಿಕೆಟ್ ಮೈದಾನ ನೋಡಿದೆವಲ್ಲಾ ಎನ್ನುವ ಖುಷಿಯಾಯಿತು.

ಬ್ರಿಸ್‌ಬೇನ್ ಪಟ್ಟಣ ಸಿಡ್ನಿಯಂತೆ ಸದಾ ಚಟುವಟಿಕೆಯಿಂದ ಕೂಡಿರುವ ಲವಲವಿಕೆ ಹೊಂದಿಲ್ಲ. ಇಲ್ಲಿಯ ಜನ ಆರಾಮಾಗಿರುತ್ತಾರೆ. ಸಿಡ್ನಿ ಮುಂಬಯಿಯಂತೆ ಇದ್ದರೆ ಬ್ರಿಸ್‌ಬೇನ್ ಕಲ್ಕತ್ತಾ ನಗರದಂತಿದೆ. ಇಲ್ಲಿನ ವಿಶೇಷತೆಯೆಂದರೆ ಚರಿತ್ರೆಯನ್ನು ಮರೆಯದೆ ಇರುವುದು.

ಬ್ರಿಸ್‌ಬೇನ್ ಪ್ರವಾಸ ಮುಗಿದ ನಂತರ ರಾತ್ರಿ ಲಕ್ಸುರಿ ಬಸ್ಸಿನಲ್ಲಿ ಸಿಡ್ನಿಗೆ ವಾಪಸ್ಸಾದೆವು.

43

ಕ್ಯಾನ್‌ಬೆರಾ ಹಾಗೂ ನೀಲಿ ಪರ್ವತಗಳು

ಸಿಡ್ನಿ ನಗರದ ಹೊರ ವಲಯದಲ್ಲೇ ಇರುವ ಪರ್ವತ ಶ್ರೇಣಿಯನ್ನು ಬ್ಲೂ ಮೌಂಟನ್ ಅಥವಾ ನೀಲೀ ಪರ್ವತಗಳು ಎಂದು ಕರೆಯುತ್ತಾರೆ. ಈ ಪರ್ವತ ಶ್ರೇಣಿಯ ಅರಣ್ಯಗಳು, ಗುಹೆಗಳು, ಪರ್ವತಗಳು ಹಾಗೂ ಜಲಧಾರೆಗಳು, ನೀಲಿ ಬಣ್ಣದ ಪರ್ವತಗಳು ಇಲ್ಲಿನ ಪ್ರಮುಖ ಆಕರ್ಷಣೆ.

ಅಮೇರಿಕಾದ ಗ್ರಾಂಡ್ ಕೆನ್ಯಾನ್ ನೆನಪಿಗೆ ತರುವ ನೀಲಿ ಪರ್ವತಗಳು ನಯನ ಮನೋಹರವಾಗಿವೆ. ಈ ಪರ್ವತಶ್ರೇಣಿಯ 'ಮೂರು ಸೋದರಿಯರು' ಎಂದೇ ಹೆಸರಾಗಿರುವ ಮೂರು ಬೆಟ್ಟಗಳು ಬಹಳ ಖ್ಯಾತಿ ಹೊಂದಿದ್ದು ಇಲ್ಲಿಗೆ ಬಂದರೆಲ್ಲರೂ ಈ ಬೆಟ್ಟಗಳನ್ನು ನೋಡೇ ನೋಡುತ್ತಾರೆ. ನಾವು ವ್ಯೂ ಪಾಯಿಂಟ್ ಒಂದರಿಂದ ಈ ಬೆಟ್ಟಗಳನ್ನು ನೋಡಿ ಅಲ್ಲಿಂದ ಮುಂದೆ ಕಟುಂಬ ಎನ್ನುವ ಜಾಗಕ್ಕೆ ಹೊರಟೆವು. ಈ ಕಟುಂಬ ಪುರಾತನ ಕಾಲದ ಗಣಿಗಳಿಗೆ ಹೆಸರುವಾಸಿ. ಬೆಟ್ಟದ ಮೇಲಿಂದ ಗಣಿಗಳ ಬಾಗಿಲಿಗೆ ಹೋಗಲು ರೈಲು ಮಾರ್ಗವನ್ನು ಮಾಡಿದ್ದಾರೆ. ಈ ರೈಲು ಮಾರ್ಗ 'ವಿಶ್ವದ ಅತಿ ಕಡಿದಾದ ರೈಲು ಮಾರ್ಗ' ಎಂದು ಹೆಸರುವಾಸಿಯಾಗಿದೆ. ಏಕೆಂದರೆ ಸುಮಾರು 90 ಡಿಗ್ರಿ ಕೋನದಿಂದ ರೈಲು ಮೇಲಿಂದ ಕೆಳಗೆ ಇಳಿಯುತ್ತದೆ. ನಾವು ಕೆಳಗೆ ಬೀಳದಿರಲೆಂದು ಎದೆಗೆ ಮತ್ತು ಸೊಂಟಕ್ಕೆ ಬೆಲ್ಟ್ ಕಟ್ಟುತ್ತಾರೆ. ಇದೇ ಒಂದು ರೋಮಾಂಚಕಾರಿ ಅನುಭವ. ಗಣಿಗಳ ಬಾಗಿಲಲ್ಲಿ ಇಳಿದು ಗಣಿಗಳ ಒಳಗೆ ಪ್ರವೇಶ ಮಾಡಿದೆವು. ಈ ಗಣಿಗಳು ಸುಣ್ಣದ ಕಲ್ಲಿನ ಗಣಿಗಳಾಗಿದ್ದು ಕತ್ತಲಲ್ಲಿ ಹೋಗುವುದೇ ಒಂದು ವಿಶಿಷ್ಟ ಅನುಭವ ಜೋಹಾನ್ಸ್ ಬರ್ಗ್‌ನ ಚಿನ್ನದ ಗಣಿಗೆ ಹೋದಂತೆಯೇ ಆಯಿತು.

ನಾವು ಇತರೆ ಪ್ರಯಾಣಿಕರಂತೆ ಸುಮಾರು ಎರಡು ಕಿ.ಮೀ.ವರೆಗೆ ಚಾರಣ ಮಾಡಿ ವಾಪಸ್ ಬಂದು "ಸ್ಕೈವೇ" ಎಂದು ಕರೆಯಲಾಗುವ ಕೇಬಲ್ ಕಾರಿನಲ್ಲಿ ಕುಳಿತೆವು. ಈ ರೋಪ್ ವೇ ಕಟುಂಬ ಪರ್ವತದಿಂದ ಇನ್ನೊಂದು ಪರ್ವತಕ್ಕೆ ತಂತಿಯ ಮೂಲಕ ಸಂಪರ್ಕ ಕಲ್ಪಿಸಿಕೊಡುತ್ತದೆ. ರೋಪ್ ವೇನಲ್ಲಿ ಕುಳಿತು ಎರಡು ಬೆಟ್ಟಗಳ ಮಧ್ಯೆ ಇರುವ ಕೊಳ್ಳದಲ್ಲಿ ಕಾಣುವ ದೃಶ್ಯಾವಳಿ ನೋಡುವುದು ಆಹ್ಲಾದದಾಯಕ. ಕೇಬಲ್ ಕಾರ್ ಪ್ರಯಾಣ ಮುಗಿಸಿ ವಾಪಸ್ ಬಂದು ಊಟ ಮಾಡುವಾಗ ಆ ಜಾಗದ ಸವಿಸ್ತಾರ ಮಾಹಿತಿ ಪಡೆದವು. ಬ್ಲೂ

ಮೌಂಟನ್ ಅರಣ್ಯ ಪ್ರದೇಶದಲ್ಲಿ ಹಲವಾರು ಪಶುಪಕ್ಷಿಗಳು ಇವೆ. ಹಲವಾರು ನಯನಮನೋಹರ ಜಲಪಾತಗಳಿವೆ.

ಮಾರನೇ ದಿನ ಬೆಳಿಗ್ಗೆ ಟೂರಿಸ್ಟ್ ಬಸ್‌ನಲ್ಲಿ ಆಸ್ಟ್ರೇಲಿಯಾದ ರಾಜಧಾನಿ ಕ್ಯಾನ್‌ಬೆರಾಗೆ ಹೊರಟೆವು. ಸಿಡ್ನಿಯಿಂದ ಕ್ಯಾನ್‌ಬೆರಾಗೆ ಹೋಗುವ ಹೆದ್ದಾರಿಯನ್ನು ರಿಮೆಂಬ್ರೆನ್ಸ್ ರಸ್ತೆ ಎಂದು ಕರೆಯಲಾಗುತ್ತದೆ. ಈ ರಸ್ತೆ ವಿಶ್ವ ಮಹಾಯುದ್ಧದಲ್ಲಿ ಮಡಿದ ಆಸ್ಟ್ರೇಲಿಯನ್ನರ ಸ್ಮಾರಕವಾಗಿ ನಿರ್ಮಿತವಾಗಿದೆ. ರಸ್ತೆಯ ಉದ್ದಕ್ಕೂ ನೀಲಗಿರಿ ಮರಗಳು ಕಂಡು ಬಂದವು. ಈ ಮರಗಳು ಅಂಟಿನಂತಹ ದ್ರವವನ್ನು ಸುರಿಸುತ್ತವೆ. ಈ ಮರಗಳ ಮೇಲೆ ಆಸ್ಟ್ರೇಲಿಯಾದ ಹೆಸರಾಂತ ಕೋಲಾ ಕರಡಿಗಳು ವಾಸಿಸುತ್ತವೆ. ಈ ಕರಡಿಗಳು ದಿನದ ಹದಿನಾರು ಗಂಟೆ ಕಾಲ ನಿದ್ದೆ ಮಾಡಿ ಉಳಿದ ಎಂಟು ಗಂಟೆ ಊಟ ಮಾಡುತ್ತವೆಯಂತೆ. ಕೋಲಾ ಕರಡಿಗಳು ಪುಟ್ಟದಾಗಿ ನೋಡಲು ತುಂಬಾ ಮುದ್ದಾಗಿ, ಎತ್ತಿ ಅಪ್ಪಿಕೊಳ್ಳೋಣ ಎಂದೆನಿಸುವಂತಿವೆ.

ಎರಡು ಗಂಟೆಗಳ ಪ್ರಯಾಣದ ನಂತರ ಕ್ಯಾನ್‌ಬೆರಾ ತಲುಪಿದೆವು. ಮೊಲಾಂಗ್ ಲೊ ಎನ್ನುವ ನದಿ ತೀರದಲ್ಲಿ ಕಟ್ಟಿರುವ ಈ ಪಟ್ಟಣವನ್ನು ರಾಷ್ಟ್ರದ ರಾಜಧಾನಿ ಮಾಡಬೇಕು ಎನ್ನುವ ಉದ್ದೇಶದಿಂದಲೇ ಕಟ್ಟಲಾಯಿತಂತೆ. ಈ ನಗರದ ವಿನ್ಯಾಸವನ್ನು ರಚಿಸಲು ಅಂತಾರಾಷ್ಟ್ರೀಯ ಸ್ಪರ್ಧೆ ಏರ್ಪಡಿಸಿದಾಗ, ಅಮೇರಿಕನ್ ವಾಸ್ತುಶಿಲ್ಪಿ ಬರ್ಲಿ ಗ್ರಿಫಿನ್ ಎನ್ನುವವನು ಸ್ಪರ್ಧೆಯಲ್ಲಿ ವಿಜೇತನಾದನಂತೆ. ಆತ ಈ ನಗರವನ್ನು ವಿನ್ಯಾಸ ಮಾಡುವಾಗ ಮೂರು ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟಿದ್ದನಂತೆ. ವಿಶಾಲವಾದ ರಸ್ತೆಗಳು, ಸುತ್ತಮುತ್ತಲಿರುವ ಬೆಟ್ಟಗುಡ್ಡಗಳು ಹಾಗೂ ಪರ್ವತಗಳಿಗೆ ತಕ್ಕ ಹಾಗೆ ವಿನ್ಯಾಸ ಹಾಗೂ ಮಾನವ ನಿರ್ಮಿತ ಸರೋವರ. ನಮ್ಮ ದೇಶದ ಚಂಡೀಗಢದಂತೆಯೇ ಅತ್ಯಂತ ಸೃಜನಶೀಲತೆಯಿಂದ ರೂಪಿಸಲಾಗಿರುವ ಕ್ಯಾನ್‌ಬೆರಾ ತುಂಬಾ ಸುಂದರವಾಗಿದೆ. ಬಸ್‌ನಿಂದ ಇಳಿದ ಕೂಡಲೇ ನಾವು ಬರ್ಲಿ ಗ್ರಿಫಿನ್ ಸರೋವರದ ಮುಂದೆ ನಿಂತು ಆ ಸರೋವರದ ಮಧ್ಯದಲ್ಲಿರುವ ಸುಮಾರು 460 ಅಡಿ ಎತ್ತರ ನೀರು ಚಿಮ್ಮಿಸುವ ಕ್ಯಾಪ್ಟನ್ ಕುಕ್ ವಾಟರ್ ಜೆಟ್ ನೋಡಿ ಚಕಿತರಾದೆವು. ಸರೋವರದ ಒಂದು ಬದಿಯಲ್ಲಿ ಆಸ್ಟ್ರೇಲಿಯಾದ ಉಚ್ಚ ನ್ಯಾಯಾಲಯ ಹಾಗೂ ರಾಷ್ಟ್ರೀಯ ಗ್ರಂಥಾಲಯ ಇದೆ. ಹತ್ತಿರದಲ್ಲೇ ರಾಷ್ಟ್ರೀಯ ಕಲಾ ಗ್ಯಾಲರಿ ಇದ್ದು, ಈ ಕಲಾ ಗ್ಯಾಲರಿಯಲ್ಲಿ ಆಸ್ಟ್ರೇಲಿಯಾದ ಮೂಲ ನಿವಾಸಿಗಳ ಅದ್ಭುತ ಕರಕುಶಲ ವಸ್ತುಗಳ ಪ್ರದರ್ಶನಗಳು ಇವೆ. ಈ ಗ್ಯಾಲರಿಯಲ್ಲಿ ನಮ್ಮ ದೇಶದ ಗಂಗಾ ನದಿಯ ವಿಶಿಷ್ಟ ವರ್ಣ ಛಾಯಾಚಿತ್ರಗಳಿವೆ. ಒಂದು ಇಡೀ ಕೊಠಡಿಯನ್ನೇ ಭಾರತೀಯ ಕಲೆಗಳಿಗಾಗಿ ಮೀಸಲಿಡಲಾಗಿದೆ.

ಕಲಾ ಗ್ಯಾಲರಿಯನ್ನು ನೋಡಿ ಮುಗಿಸಿದ ನಂತರ ನಾವು ಹೊಸ ಪಾರ್ಲಿಮೆಂಟ್ ಭವನಕ್ಕೆ ಹೋದೆವು. ಕ್ಯಾನ್‌ಬೆರಾನಲ್ಲಿ ಎರಡು ಪಾರ್ಲಿಮೆಂಟ್ ಭವನಗಳಿವೆ. ಮೊದಲ ಭವನವನ್ನು ಕೇವಲ 50 ವರ್ಷಗಳು ಬಾಳು ರೂಪಿಸಲಾಗಿತ್ತಂತೆ. ಶಾಶ್ವತವಾಗಿ ಇರಬೇಕಾದಂತಹ ಎರಡನೇ ಪಾರ್ಲಿಮೆಂಟ್ ಭವನ ರೂಪಿಸಿದ ನಂತರವೂ ಮೊದಲನೇ ಭವನ ನಶಿಸಿಲ್ಲ. ಹೊಸ ಪಾರ್ಲಿಮೆಂಟ್ ಭವನದ ಒಳಗಡೆ ಓಡಾಡಿದೆವು. ಕೆನಡಾದ ಪಾರ್ಲಿಮೆಂಟ್ ಭವನಕ್ಕೂ, ವಿಶ್ವಸಂಸ್ಥೆಯ ಕಟ್ಟಡಗಳ ಒಳ ನೋಟಕ್ಕೂ ಹಾಗೂ ಇಲ್ಲಿಯ ಭವನಕ್ಕೂ ಹೆಚ್ಚು ವ್ಯತ್ಯಾಸಗಳು ಕಂಡುಬರಲಿಲ್ಲ. ಹೊಸ ಪಾರ್ಲಿಮೆಂಟ್ ಭವನದ ವಿಶೇಷತೆ ಎಂದರೆ ಭವನದ ಅಡಿಪಾಯಕ್ಕಾಗಿ ತೆಗೆದ ಮಣ್ಣನ್ನು ಅಲ್ಲಿಯೇ ಬಿಟ್ಟು ಕೃತಕ ಗುಡ್ಡ ಸೃಷ್ಟಿಸಿರುವುದು!

ನಂತರ ಕ್ಯಾನ್‌ಬೆರಾದ ರಾಜತಾಂತ್ರಿಕ ವಲಯಕ್ಕೆ ಹೋದೆವು. ಅಲ್ಲಿನ ರಾಯಭಾರಿ ಕಚೇರಿಗಳು ವಿಶೇಷ ವಾಸ್ತುಶಿಲ್ಪದಿಂದ ಕಂಗೊಳಿಸುತ್ತವೆ. ನನಗಲ್ಲಿ ದೆಹಲಿಯ ಚಾಣುಕ್ಯಪುರಿಗೆ ಬಂದಂತೆ ಅನಿಸಿತು. ಅಲ್ಲಿಯ ಕಟ್ಟಡಗಳನ್ನು ನೋಡಿ ಮತ್ತೆ ನಾವು ನಗರ ಮಧ್ಯಭಾಗಕ್ಕೆ ಬಂದೆವು.

ಅಲ್ಲಿಂದ ಮುಂದೆ ಆಸ್ಟ್ರೇಲಿಯಾದ ಮುಖ್ಯ ಸ್ಮಾರಕಗಳಿರುವ ಗುಡ್ಡವೊಂದಕ್ಕೆ ಹೋದೆವು. ಈ ಗುಡ್ಡದಲ್ಲಿ ಆಸ್ಟ್ರೇಲಿಯಾದ ಯುದ್ಧ ಸ್ಮಾರಕವಲ್ಲದೆ ಭೂ ಸೇನೆ, ನೌಕಾ ಸೇನೆ, ವಾಯು ಸೇನೆಗಳ ಹುತಾತ್ಮರ ಸ್ಮಾರಕಗಳು, ಕೊರಿಯನ್ ಯುದ್ಧ ಹಾಗೂ ವಿಯಟ್ನಾಂ ಯುದ್ಧಗಳಲ್ಲಿ ಮಡಿದವರಿಗೆಂದೇ ಬೇರೆ ಬೇರೆ ಸ್ಮಾರಕಗಳನ್ನೂ ನಿಲ್ಲಿಸಿದ್ದಾರೆ. ಆಸ್ಟ್ರೇಲಿಯಾದ ಮುಖ್ಯ ಸ್ಮಾರಕದ ಪಕ್ಕದಲ್ಲಿ ಒಂದು ಮ್ಯೂಸಿಯಂ ಇದೆ. ಈ ಮ್ಯೂಸಿಯಂನಲ್ಲಿ ಆಸ್ಟ್ರೇಲಿಯಾ ಸೈನಿಕರು ವಿವಿಧ ಜಾಗಗಳಲ್ಲಿ ಪಾಲ್ಗೊಂಡ ಯುದ್ಧಗಳ ಬಗ್ಗೆ ಮಾಹಿತಿಯಷ್ಟೆ ಅಲ್ಲದೆ ಸೈನಿಕರು ಉಪಯೋಗಿಸುತ್ತಿದ್ದ ಶಸ್ತ್ರಾಸ್ತ್ರಗಳು, ಬಟ್ಟೆಬರೆಗಳು ಇತ್ಯಾದಿಗಳನ್ನೂ ಪ್ರದರ್ಶಿಸಿದ್ದಾರೆ. ಮ್ಯೂಸಿಯಂ ಬಳಿ ಸದಾಕಾಲವೂ ಬೆಳಗುವ ಜ್ಯೋತಿ ಇದೆ, ನಮ್ಮ ಇಂಡಿಯಾ ಗೇಟಿನಲ್ಲಿರುವಂತೆ.

ಅಲ್ಲಿಂದ ಮುಂದೆ ಕ್ಯಾನ್‌ಬೆರಾ ನಗರದ ಅತಿ ಎತ್ತರದ ಗುಡ್ಡಕ್ಕೆ ಹೋದೆವು. ನಾವು ಹೋಗುವ ಹಾದಿಯಲ್ಲಿ ನೂರಾರು ಕಾಂಗರೂಗಳು ಕಂಡವು. ಈ ಪ್ರಾಣಿಗಳು ನಿರ್ಭೀತಿಯಿಂದ ಜಿಗಿಯುತ್ತ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಓಡುತ್ತಿದ್ದವು.

ಕ್ಯಾನ್‌ಬೆರಾ ನಗರ ಸುತ್ತಿದ ನಂತರ ನನಗೆ ಅನಿಸಿದ್ದು ಈ ನಗರದಲ್ಲಿ ಜನಜೀವನವೇ ಇಲ್ಲ ಎಂದು. ನಯನ ಮನೋಹರವಾದ ಅಂದ ಚೆಂದದ ನೂರಾರು ಕಟ್ಟಡಗಳು ಇದ್ದರೂ ಊರಿನಲ್ಲಿ ಜನಸಂದಣಿಯೇ ಇಲ್ಲದೆ ಅದೊಂದು ನಿರ್ಜೀವ ನಗರ ಎನಿಸಿತು. ಲವಲವಿಕೆಯಿಲ್ಲದ ಸುಂದರ ರಾಜಧಾನಿ ಕ್ಯಾನ್‌ಬೆರಾ ಎನ್ನುವ ಭಾವನೆಯಿಂದ ಅದೇ ರಾತ್ರಿಯೇ ಸಿಡ್ನಿಗೆ ಮರಳಿದೆವು.

44 ಸಿಂಗಪುರ

ಸಿಡ್ನಿಯಿಂದ ಹೊರಟ ನಾವು ಭಾರತಕ್ಕೆ ಬರುವ ಮುನ್ನ ಸಿಂಗಪುರ್‌ನಲ್ಲಿ ಇಳಿದು ವಿಮಾನ ಬದಲಾಯಿಸಬೇಕಾಗಿತ್ತು. ಭಾರತದ ಬಹಳಷ್ಟು ಜನ ಪರ್ಯಟಕರು ಸಿಂಗಪುರ್‌ಗೆ ಹೋಗುವುದರಿಂದ ನಾವೂ ಈ ಊರಿನ ವಿಶೇಷತೆ ನೋಡಬೇಕೆಂದು ಮನಸ್ಸಾಯಿತು. ಹೀಗಾಗಿ ಸಿಂಗಪುರ್‌ನಲ್ಲಿ ಎರಡು ದಿನಗಳ ಕಾಲ ವಾಸ್ತವ್ಯ ಮಾಡಲು ನಿರ್ಧರಿಸದೆವು.

ಸಿಂಗಪುರ್ ಒಂದು ಪಟ್ಟಣವೂ ಹೌದು, ಒಂದು ರಾಜ್ಯವೂ ಹೌದು, ಹಾಗೂ ಒಂದು ದೇಶವೂ ಹೌದು. ಇದು ಒಂದು ದೊಡ್ಡ ನಡುಗಡ್ಡೆ ಆಗಿದ್ದು ಸುತ್ತಮುತ್ತಲೂ ಇರುವ ಸುಮಾರು 50 ಪುಟ್ಟ ನಡುಗಡ್ಡೆಗಳು ಸೇರಿಕೊಂಡು ದೇಶವಾಗಿದೆ. ಈ ದೇಶವು ವಲಸೆಗಾರರ ದೇಶ. ಮೊಟ್ಟಮೊದಲಿಗೆ ಇಲ್ಲಿಗೆ ಮಲಯ ಪ್ರಾಂತದ ಜನ ಬಂದರಂತೆ. ಆನಂತರ ಚೀಣಿಯರು 19ನೇ ಶತಮಾನದಲ್ಲಿ ಇಲ್ಲಿಗೆ ಬಂದು ಅವರ ನಂತರ ದಕ್ಷಿಣ ಭಾರತೀಯರು ಬಂದು ನೆಲಸಿದರು. ಹೀಗಾಗಿ ಈ ದೇಶ ಹಲವಾರು ಕೋಮುಗಳು, ಭಾಷೆಗಳು, ಆಚಾರ-ವಿಚಾರಗಳ ಸಮನ್ವಯತೆಗೆ ಹೆಸರಾಗಿದೆ. ಸಿಂಗಪುರ್‌ನಲ್ಲಿ ನಾಲ್ಕು ಅಧಿಕೃತ ಭಾಷೆಗಳಿವೆ. ಅವುಗಳಲ್ಲಿ ತಮಿಳೂ ಸಹಾ ಒಂದು ಎಂದು ತಿಳಿದು ಆಶ್ಚರ್ಯವಾಯಿತು.

ಸಿಂಗಪುರ್ ವಿಮಾನ ನಿಲ್ದಾಣದಲ್ಲಿ ಇಳಿದ ನಾವು ಹೋಟೆಲ್ ಒಂದಕ್ಕೆ ಹೋಗಿ ವಿಶ್ರಾಂತಿ ಪಡೆದು ಊರು ನೋಡಲು ಹೊರಟೆವು. ಸಿಂಗಪೂರ್‌ನ ಅತಿ ಜನಪ್ರಿಯ ಪ್ರವಾಸಿ ತಾಣವೆಂದರೆ ಸೆಂಟೋಸಾ ನಡುಗಡ್ಡೆಗಳು. ಇಲ್ಲಿಗೆ ಎರಡು ರೀತಿಯಲ್ಲಿ ಹೋಗಬಹುದು - ರಸ್ತೆಯ ಮೂಲಕ ಅಥವಾ ಕೇಬಲ್ ಕಾರ್ ಮೂಲಕ. ನಾವು ಎರಡನೆಯ ವಿಧವನ್ನು ಆರಿಸಿಕೊಂಡು ನಗರದ ವರ್ಲ್ಡ್ ಟ್ರೇಡ್ ಸೆಂಟರ್‌ಗೆ ಹೋಗಿ ಅಲ್ಲಿ ಟಿಕೇಟ್‌ಗಳನ್ನು ಖರೀದಿಸಿ ಲಿಫ್ಟ್ ಮೂಲಕ ಮೇಲೆ ಏರಿ ಕೇಬಲ್ ಕಾರ್ ನಿಲ್ದಾಣ ತಲುಪಿದೆವು. ಇಲ್ಲಿ ಕೇಬಲ್ ಕಾರ್‌ನಲ್ಲಿ ಕುಳಿತು ಮೌಂಟ್ ಫೇಬರ್ ಪಾರ್ಕಿಗೆ ಹೋದೆವು. ಈ ಉದ್ಯಾನವನ 117 ಮೀಟರ್ ಎತ್ತರದ ಗುಡ್ಡದ ಮೇಲಿದ್ದು, ಇಲ್ಲಿಂದ ಸಿಂಗಪುರ್ ನಗರದ ವಿಹಂಗಮ ನೋಟ ಲಭ್ಯ. ಉದ್ಯಾನದಲ್ಲಿ ಸಲ್ಪ ಹೊತ್ತು ಅಡ್ಡಾಡಿ ಮತ್ತೆ ಕೇಬಲ್ ಕಾರ್‌ನಲ್ಲಿ ಕುಳಿತು ಸೆಂಟೋಸಾಗೆ ತೆರಳಿದೆವು. ಸಮುದ್ರದ ಮೇಲೆ ನಮ್ಮ ಕಾರ್ ಹಾದು ಹೋಗುವಾಗ ಈ ನಗರದ ಹೆಸರುವಾಸಿ ಬಂದರು ಪ್ರದೇಶ ಕಂಡಿತು. ಬಂದರಿನಲ್ಲಿ

ಒಂದು ಭಾರೀ ವಿಲಾಸೀ ಹಡಗು ನಿಂತಿತ್ತು. ಇಂತಹಾ ಹಡಗುಗಳಲ್ಲಿ ಕುಳಿತು ಏಳೆಂಟು ದಿನಗಳ ಕಾಲ ಪ್ರವಾಸ ಮಾಡಬಹುದು ಹಡಗನ್ನು ನೋಡಿದ ಕೂಡಲೇ ನನ್ನ ಶ್ರೀಮತಿ ಇದೇ ಹಡಗನ್ನೇ ಕಹೋನಾ ಪ್ಯಾರ್ ಹೈ ಸಿನಿಮಾದಲ್ಲಿ ನೋಡಿದೆವು ಎಂದು ನೆನಪು ಮಾಡಿಕೊಂಡಳು.

ಆಗಸದಲ್ಲಿ ಹಾಕಿದ ತಂತಿಗಳ ಮೂಲಕ ಸಾಗಿದ ನಮ್ಮ ಕೇಬಲ್ ಕಾರ್ ಸೆಂಟೋಸಾ ಕೇಬಲ್ ಕಾರ್ ನಿಲ್ದಾಣದಲ್ಲಿ ನಿಂತ ಕೂಡಲೇ ನಮಗೆ ಪ್ರವಾಸೀ ಗೈಡ್‌ಗಳು ಎದುರಾಗಿ ಈ ನಡುಗಡ್ಡೆ ತೋರಿಸಲು ಕರೆದೊಯ್ದರು. ಸೆಂಟೋಸಾ ನಡುಗಡ್ಡೆಯಲ್ಲಿ ಹತ್ತು ವಿವಿಧ ಆಕರ್ಷಣೆಗಳು ಇವೆ. ಸೆಂಟೋಸಾ ಅಂಡರ್ ವಾಟರ್ ವರ್ಲ್ಡ್ ಇವುಗಳಲ್ಲಿ ಮುಖ್ಯವಾದದ್ದು. ಏಷ್ಯಾ ಖಂಡದಲ್ಲೇ ಸಮುದ್ರ ಜೀವಿಗಳನ್ನು ಇಟ್ಟಿರುವ ಅತಿ ದೊಡ್ಡದಾದ ಪ್ರದೇಶವಿದು. ಇಲ್ಲಿ ಸುಮಾರು ಎರಡೂವರೆ ಸಾವಿರ ತರಹದ ಮೀನುಗಳು ಶಾರ್ಕ್‌ಗಳು ಹಾಗೂ ಮತ್ತಿತರ ಸಮುದ್ರ ಜೀವಿಗಳು ಇವೆ. ಇವುಗಳನ್ನು ನೋಡಲು ನಾವುಗಳು ಗಾಜಿನ ಸುರಂಗ ಒಂದರಲ್ಲಿ ಹೋಗಬೇಕು. ನಮ್ಮ ಸುತ್ತಲೂ ಪ್ರಾಣಿಗಳು ಸ್ವಾಭಾವಿಕವಾಗಿ ಓಡಾಡಿಕೊಂಡಿದ್ದು ನಮ್ಮನ್ನು ಮುಟ್ಟುವಂತೆಯೇ ಬರುತ್ತವೆ. ಅಮೇರಿಕಾದ ಸ್ಯಾಂಡಿಯಾಗೋದಲ್ಲಿ ನಾವು ನೋಡಿದ ಥೀಮ್ ಪಾರ್ಕ್ ನೆನಪಿಗೆ ಬಂತು.

ಇದನ್ನು ನೋಡಿ ಹೊರಬಂದ ಕೂಡಲೇ ನಮ್ಮ ಗೈಡ್ ನಮ್ಮನ್ನು ಆರ್ಕಿಡ್ ಪುಷ್ಪಗಳ ಉದ್ಯಾನಕ್ಕೆ ಕರೆದೊಯ್ದ ಈ ಪುಷ್ಪೋದ್ಯಾನದಲ್ಲಿ ವಿಶ್ವದ ಹಲವಾರು ಭಾಗಗಳಿಂದ ತರಿಸಿರುವ ಆರ್ಕಿಡ್ ಸಸ್ಯಗಳಿವೆ. ಅಲ್ಲಿಂದ ಮುಂದೆ ಚಿಟ್ಟೆಗಳ ಉದ್ಯಾನಕ್ಕೆ ಹೋಗಿ ಬಣ್ಣ ಬಣ್ಣದ ಚಿಟ್ಟೆಗಳನ್ನು ನೋಡಿ ಆನಂದಿಸಿದೆವು. ಅಲ್ಲಿಂದ ಮುಂದೆ ಮಕ್ಕಳು ಆಡುವಂತಹ ಫ್ಯಾಂಟಸಿ ಐಲೆಂಡ್ ಹಾಗೂ ವಾಲ್ಕೆನೋ ಲ್ಯಾಂಡ್ ನೋಡಿದೆವು. ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೋಗಲು ಎಲಿವೇಟೆಡ್ ರೈಲಿನ ಸಂಪರ್ಕವಿದೆ. ಸೆಂಟೋಸಾದಲ್ಲಿನ ಮುಖ್ಯ ಆಕರ್ಷಣೆ ಸಿಂಗಪೂರ್ ಮೆರ್‌ಲಯನ್. 1964ರಲ್ಲಿ ಈ ಸಿಂಹದ ಪ್ರತಿಮೆಯನ್ನು ಕಟ್ಟಲಾಯಿತಂತೆ. 23 ಮೀಟರ್ ಎತ್ತರದ ಗುಡ್ಡದ ಮೇಲೆ ಇರುವ ಈ ವಿಗ್ರಹದ ಎತ್ತರ 37 ಮೀಟರ್. ಸಿಂಹದ ತಲೆಯ ಮೇಲೆ ಹೋಗಲು ಲಿಫ್ಟ್ ವ್ಯವಸ್ಥೆ ಇದೆ.

ಸೆಂಟೋಸಾದಲ್ಲಿ ಇವಲ್ಲದೆ ಇನ್ನೂ ಹಲವು ಹತ್ತು ಆಕರ್ಷಣೆಗಳಿವೆ. ಇವೆಲ್ಲವನ್ನೂ ನೋಡಬೇಕಾದರೆ ಕಡಿಮೆ ಎಂದರೆ ಎರಡು ದಿನಗಳು ಬೇಕು. ಆಗಲೇ ಕತ್ತಲಾಗುತ್ತಲಿದ್ದರಿಂದ ನಾವು ಸೆಂಟೋಸಾದಿಂದ ಕೇಬಲ್ ಕಾರ್ ಮೂಲಕ ಸಿಂಗಪುರ್‌ಗೆ ವಾಪಸ್ಸಾದೆವು. ಸೆಂಟೋಸಾ ನಡುಗಡ್ಡೆ ನಾವು ದಕ್ಷಿಣ ಆಫ್ರಿಕಾದಲ್ಲಿ ನೋಡಿದ್ದ ಸನ್ ಸಿಟಿ ಹಾಗೆಯೇ ಇದೆ ಎಂದೆನಿಸಿತು.

ಹೋಟೆಲ್‌ಗೆ ಹೋಗಿ ಸ್ವಲ್ಪ ವಿಶ್ರಾಂತಿ ಪಡೆದು ಆ ಊರಿನ ಹೆಸರಾಂತ ಆರ್ಚರ್ಡ್ ಬೀದಿಗೆ ಹೋದೆವು. ನಾವು ಮತ್ತೆ ನ್ಯೂಯಾರ್ಕಿಗೆ ಬಂದಿದ್ದೇವೆ ಎನ್ನುವಂತೆ ಭಾಸವಾಯಿತು. ವಿಶ್ವದ ಸರಿ ಸುಮಾರು ಎಲ್ಲಾ ಪ್ರಾಮುಖ್ಯ ಗ್ರಾಹಕ ಬ್ರಾಂಡ್‌ಗಳ ಅಂಗಡಿಗಳ ಸಾಲೇ ಇಲ್ಲಿದೆ. ಬಣ್ಣ ಬಣ್ಣಗಳ ದೀಪಗಳ ಬೆಳಕಿನಲ್ಲಿ ಒಂದಕ್ಕಿಂತ ಒಂದು ಅಂಗಡಿ ಚೆನ್ನಾಗಿ ಕಾಣುತ್ತವೆ. ಆದರೆ ಇಲ್ಲಿ ಬೆಲೆಗಳು ಸ್ವಲ್ಪ ದುಬಾರಿ ಎಂದೆನಿಸಿತು.

ಮಾರನೇ ದಿನ ಬೆಳಗ್ಗೆ ಎದ್ದು ಮಾಮೂಲಿನಂತೆ ವಾಕಿಂಗ್ ಹೋದಾಗ ಒಂದು ಜಾಗದಲ್ಲಿ ಘಮ ಘಮ ಸಾಂಬಾರ್ ವಾಸನೆ ಮೂಗಿಗೆ ಬಡಿಯಿತು. ಅಲ್ಲಿ ಹಲವಾರು ದಕ್ಷಿಣ ಭಾರತೀಯ

ಉಪಹಾರ ಗೃಹಗಳು ಇದ್ದು ಇಡ್ಲಿ, ವಡೆ, ಸಾಂಬಾರ್ ಮತ್ತಿತರ ದಕ್ಷಿಣ ಭಾರತೀಯ ತಿಂಡಿ ತಿನಿಸುಗಳನ್ನು ಸವಿಯಬಹುದು. ಫುಟ್ ಪಾತಿನಲ್ಲಿ ತಮಿಳು ಪತ್ರಿಕೆಗಳು, ಮಲ್ಲಿಗೆ ಹೂವಿನ ಸರಗಳನ್ನೂ ಮಾರುತ್ತಿದ್ದರು. ಸಿಂಗಪುರಿನ ಶೇ 6 ರಷ್ಟು ಜನ ತಮಿಳರು ಎಂದು ತಟ್ಟನೆ ಹೊಳೆಯಿತು. ಹೋಟೆಲ್‌ಗೆ ವಾಪಸ್ಸಾಗಿ ನಾವಿಬ್ಬರೂ ಆ ಊರಿನ ತಮಿಳರ ಪ್ರದೇಶಕ್ಕೆ ಬಂದೆವು. ಅಲ್ಲಿ ತಮಿಳರು ಬಹಳ ದೊಡ್ಡ ಗುಡಿಯೊಂದನ್ನು ಕಟ್ಟಿಕೊಂಡಿದ್ದಾರೆ. ಇದನ್ನು ನೋಡಿದ ನಂತರ ಸಿಂಗಪುರ್‌ನ ಇತರ ಬಡಾವಣೆಗಳನ್ನೂ ನೋಡಿದೆವು. ಒಂದು ಬಡಾವಣೆಯಲ್ಲಿ ಅರಬ್ ದೇಶದ ಜನ ಇದ್ದು ರತ್ನ ಕಂಬಳಿ ಇತ್ಯಾದಿ ವಸ್ತುಗಳನ್ನು ಮಾರುತ್ತಿದ್ದರು. ಇನ್ನೊಂದು ಬಡಾವಣೆಯಲ್ಲಿ ಚೀಣೀಯರದ್ದೇ ಕಾರುಬಾರು. ಬಹಳ ಅಗ್ಗದ ದರದಲ್ಲಿ ಬಟ್ಟೆಗಳು, ಚಪ್ಪಲಿಗಳು ಇಲ್ಲಿ ಲಭ್ಯ. ಸಿಂಗಪುರ್ ಕಂಪ್ಯೂಟರ್ ಉಪಕರಣಗಳಿಗೆ ಹೆಸರುವಾಸಿ ಎಂದು ತಿಳಿದಿದ್ದ ನಾನು ಕಂಪ್ಯೂಟರ್ ಕೊಳ್ಳಲು ಹೊರಟೆ. ಐದು ಮಹಡಿಗಳಿರುವ ಒಂದು ಭಾರೀ ಸೂಪರ್ ಮಾರ್ಕೆಟ್‌ನಲ್ಲಿ ಕಂಪ್ಯೂಟರ್‌ಗಳಿಗೆ ಸಂಬಂಧಿಸಿದ ಯಾವ ವಸ್ತು ಬೇಕಾದರೂ ದೊರೆಯುತ್ತದೆ.

ಆ ದಿನ ಸಂಜೆ ನಮ್ಮ ಪರಿಚಯಸ್ತ ಜನಗಳ ಮನೆಗೆ ಹೋದೆವು. ಸಿಂಗಪುರ್‌ನಲ್ಲಿ ಜುರಾಂಗ್ ಪಕ್ಷಿಗಳ ಉದ್ಯಾನ ಹೆಸರುವಾಸಿಯಾಗಿದೆ, ಅದನ್ನು ನೋಡಿ ಎಂದು ಹೇಳಿದರು. ನಮಗೆ ಭಾರತಕ್ಕೆ ಮರಳಿ ಹೋಗಲು ಮನಸ್ಸಾದ್ದರಿಂದ ಅಲ್ಲಿಗೆ ಹೋಗದೇ ವಿಮಾನ ನಿಲ್ದಾಣಕ್ಕೆ ಹೋಗಿ ಏರ್ ಇಂಡಿಯಾ ವಿಮಾನ ಹಿಡಿದೆವು. ವಿಮಾನದಲ್ಲಿ ಆಸೀನನಾಗಿ ನಮ್ಮ ದೇಶದ ವೃತ್ತ ಪತ್ರಿಕೆ ನೋಡಿದಾಗ ಅತ್ಯಂತ ಖುಷಿಯಾಯಿತು. "ನಾವು ಊರು ಬಿಟ್ಟು ಸುಮಾರು ನಾಲ್ಕು ತಿಂಗಳಾಯಿತು, ಹದಿನೇಳು ದೇಶ ಸುತ್ತಿದೆವು, ನಿಮಗೆ ಏನು ಇಷ್ಟವಾಯಿತು" ಎಂದು ನನ್ನ ಪತ್ನಿ ಕೇಳಿದಾಗ, ನನ್ನ ಮನಸ್ಸು ಯೋಚನಾ ಲಹರಿಯಲ್ಲಿ ಮುಳುಗಿತು.

ನಾವು ನೋಡಿದ ಪ್ರತಿಯೊಂದು ದೇಶವೂ ಒಂದಕ್ಕಿಂತ ಒಂದು ವಿಭಿನ್ನ. ಆದರೆ ಕೆಲವೊಂದು ಆಚಾರ-ವಿಚಾರಗಳು ಸಾಮಾನ್ಯ. ಉದಾಹರಣೆಗೆ - ಎಲ್ಲೆಡೆಯಲ್ಲಿಯೂ ವೇಳೆಗೆ ಬಹಳ ಪ್ರಾಶಸ್ತ್ಯ ನೀಡುತ್ತಾರೆ. ಸ್ವಚ್ಛತೆಗೆ ತುಂಬಾ ಗಮನ ಕೊಡುತ್ತಾರೆ. ಸಾರ್ವಜನಿಕ ಸಂಪರ್ಕ ವ್ಯವಸ್ಥೆ ನಮಗಿಂತ ತುಂಬಾ ಅಗ್ಗ ಹಾಗೂ ಉತ್ತಮ. ವಿದೇಶಗಳಲ್ಲಿ ತಮ್ಮ ತಮ್ಮ ದೇಶದ ಪುರಾತನ ಸಂಸ್ಕೃತಿಯ ಪ್ರತೀಕಗಳನ್ನು ತುಂಬಾ ಜೋಪಾನವಾಗಿ ಕಾಪಾಡುತ್ತಾರೆ. ಪುರಾತನ ಸ್ಮಾರಕಗಳನ್ನು ಪಾಳು ಬೀಳಲು ಬಿಡದೆ ಅವನ್ನು ಸಂರಕ್ಷಿಸುತ್ತಾರೆ. ಪ್ರವಾಸಿಗರು ಪುರಾತನ ಸ್ಮಾರಕಗಳನ್ನು ನೋಡಬೇಕಾದರೆ ಬಹಳ ಬೆಲೆ ತೆರಬೇಕು. ನಮ್ಮಲ್ಲಿ ಹಂಪೆಯಂತಹ ಜಾಗ ನೋಡಲೂ ಶುಲ್ಕ ತೀರಾ ಕಡಿಮೆ. ಇತಿಹಾಸಕ್ಕೆ ನಿಜಕ್ಕೂ ಅವರು ಗೌರವ ಕೊಡುತ್ತಾರೆ. ನಮ್ಮಂತೆ ಕಲ್ಲುಗಳಿಂದ ಸ್ಮಾರಕಗಳಲ್ಲಿ ಸಮ್ಮ ಹೆಸರುಗಳನ್ನು ಕೆತ್ತಿ ಹಾಳು ಮಾಡುವುದಿಲ್ಲ.

ಬೇರೆ ದೇಶಗಳಲ್ಲಿ ಜನಸಂಖ್ಯೆ ವಿರಳವಾಗಿರುವುದರಿಂದ ಕೈ ಕೆಲಸಕ್ಕೆ ಹೆಚ್ಚಿನ ಹಣ ಲಭ್ಯ. ಎಲ್ಲ ದೇಶಗಳಲ್ಲೂ ಮಹಿಳೆಯರು ಪುರುಷರಿಗೆ ಸಮಾನರಾಗಿರುವುದನ್ನು ನೋಡಿದರೂ ಹಲವಾರು ಕಡೆಗಳಲ್ಲಿ ವರ್ಣ ಬೇಧದ ಅನುಭವವೂ ಆಯಿತು. ನಮ್ಮಂತೆ ವಿದೇಶಗಳಲ್ಲಿ ಭಿಕ್ಷುಕರನ್ನು ನೋಡದಿದ್ದರೂ ಅಲ್ಲಿಯೇ ಬೇರೆ ತರಹದ ಭಿಕ್ಷಾಟನೆ ನೋಡಿ ಮೋಜೆನಿಸಿತು. ದಕ್ಷಿಣ ಆಫ್ರಿಕಾದಲ್ಲಿ ನಮ್ಮಂತೆಯೇ ಕಸದ ತೊಟ್ಟಿಗಳಿಂದ ಆಹಾರ ಪದಾರ್ಥಗಳನ್ನು ಹೆಕ್ಕಿ ತಿನ್ನುವ ಜನರನ್ನು ನೋಡಿ ಮನಸ್ಸು ಕರಗಿತು. ಹಲವಾರು ವಿದೇಶಿಯರಲ್ಲಿ ಕಂಡು ಬರುವ ವಿನೋದ ಪ್ರಜ್ಞೆ ನಮ್ಮಲ್ಲಿಲ್ಲವಲ್ಲಾ

ಎನಿಸಿತು. ಹಗಲು ಚೆನ್ನಾಗಿ ದುಡಿದು, ರಾತ್ರಿ ಹಾಡಿ ಕುಣಿದು ಮೋಜು ಮಾಡಿ, ಜೀವನದ ಸಂಪೂರ್ಣ ಸ್ವಾದ ಅನುಭವಿಸುವ ಜನರನ್ನು ನೋಡಿ ನಾವೇಕೆ ಹೀಗಾಗಲಿಲ್ಲಾ ಎಂದೂ ಎನಿಸಿತು.

ಇಷ್ಟೆಲ್ಲ ಸುತ್ತಾಡಿದ ನಂತರ ನನ್ನ ಮನಸ್ಸಿನಲ್ಲಿ ಪದೇ ಪದೇ ಮೂಡಿದ ಭಾವನೆ ಎಂದರೆ "ಮೇರಾ ಭಾರತ್ ಮಹಾನ್" ಎಂದು. ನಮ್ಮಲ್ಲಿರುವ ನೂರಾರು ಪ್ರವಾಸೀ ತಾಣಗಳು ವಿದೇಶದ ಜಾಗಗಳಿಗಿಂತ ಸುಂದರವಾಗಿದ್ದರೂ ನಾವು ಹಿತ್ತಲ ಗಿಡ ಮದ್ದಲ್ಲ ಎಂದು ಭಾವಿಸುತ್ತೇವಲ್ಲಾ ಎಂದು ಬೇಜಾರಾಯಿತು. ಏನೇ ಆದರೂ ಈ ಸುದೀರ್ಘ ವಿಶ್ವ ಪರ್ಯಟನೆಯಿಂದ ಸಿಕ್ಕ ಅನುಭವ ಅವಿಸ್ಮರಣೀಯ ಹಾಗೂ ಅನನ್ಯ. ಕೋಶ ಓದಿದ್ದಕ್ಕಿಂತಲೂ ದೇಶ ನೋಡಿದ ಅನುಭವವೇ ಅಜರಾಮರ ಎನಿಸಿತು.



ಹಿರಿಯ ಪೊಲೀಸ್ ಅಧಿಕಾರಿ ಡಿ. ವಿ. ಗುರುಪ್ರಸಾದ್ ಕನ್ನಡ ಓದುಗರಿಗೆ ಸಾಕಷ್ಟು ಪರಿಚಯ ಇರುವವರು. ಹೆಚ್ಚಾಗಿ ಪೊಲೀಸ್ ವಿಷಯಗಳಿಗೇ ತಮ್ಮ ಬರವಣಿಗೆಯನ್ನು ಕೇಂದ್ರೀಕರಿಸಿದ್ದರೂ ಪ್ರವಾಸ ಲೇಖನ ಹಾಗೂ ಹಾಸ್ಯ ಲೇಖನಗಳನ್ನು ಬರೆಯುವುದನ್ನು ಬಿಟ್ಟಿಲ್ಲ, ಕನ್ನಡದಲ್ಲಿ ಎಂಟು ಹಾಗೂ ಇಂಗ್ಲಿಷಿನಲ್ಲಿ ನಾಲ್ಕು ಪುಸ್ತಕಗಳನ್ನು ಈಗಾಗಲೇ ಪ್ರಕಟಿಸಿದ್ದಾರೆ. ''ವಿಶ್ವಪರ್ಯಟಕನ ದಿನಚರಿ'' ಗುರುಪ್ರಸಾದರ ಮೊದಲ ಪ್ರವಾಸ ಕಥನ. ''ಕರ್ಮವೀರ'' ವಾರಪತ್ರಿಕೆಯಲ್ಲಿ ನಲವತ್ತೆರಡು ವಾರಗಳು ಧಾರಾವಾಹಿಯಾಗಿ ಮೂಡಿಬಂದ ಈ ಲೇಖನಗಳು ತುಂಬಾ ಜನಪ್ರಿಯವಾದವು. ಗುರುಪ್ರಸಾದರದು ವಿಶಿಷ್ಟ ಶೈಲಿ. ತೀರಾ ಸರಳವಾದ ಆಡುಭಾಷೆಯಲ್ಲಿ ಬರೆಯುವ ಅವರ ಲೇಖನಗಳು ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುತ್ತವೆ.

ಡಿ. ವಿ. ಗುರುಪ್ರಸಾದರ ಈ ಹದಿಮೂರನೆಯ ಕೃತಿ ಕನ್ನಡದಲ್ಲಿ ವಿರಳವಾಗಿರುವ ಪ್ರವಾಸ ಸಾಹಿತ್ಯಕ್ಕೆ ಒಂದು ಉತ್ತಮ ಕೊಡುಗೆ.

ಸಪ್ನ ಬುಕ್ ಹೌಸ್
ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ
ಬೆಂಗಳೂರು - 560 009, ದೂರವಾಣಿ : 2266088

ISBN: 81-280-0017-9

ಬೆಲೆ ರೂ. 75/-